ಸೋಮವಾರ, ನವೆಂಬರ್ 1, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹಬ್ಬಕ್ಕೆ ತಯಾರಿ
ದೀಪಾವಳಿ ಹಬ್ಬದ ನಿಮಿತ್ತ ನವದೆಹಲಿಯಲ್ಲಿ ಭಾನುವಾರ ಹೂವಿನ ಮಾರುಕಟ್ಟೆಯೊಂದರಲ್ಲಿ ಹೂ ಮಾರಾಟಗಾರನೊಬ್ಬ ಗುಲಾಬಿ ಹೂಗುಚ್ಛಗಳನ್ನು ತಲೆಮೇಲೆ ಹೊತ್ತು ಸಾಗಿದ್ದು ಹೀಗೆ



4ನೇ ತರಗತಿಯಿಂದಲೇ ಹ್ಯಾಕಿಂಗ್ ತರಬೇತಿ • ಡಾರ್ಕ್‌ನೆಟ್ ಮೂಲಕ ಬಿಟ್ ಕಾಯಿನ್ ಮಾಹಿತಿ

ಬಾಲ್ಯದಲ್ಲೇ 'ಬ್ಲ್ಯಾಕ್‌ಹ್ಯಾಟ್' ಹ್ಯಾಕರ್ಸ್ ತಂಡ ಸೇರಿದ್ದ!

ಸಂತೋಷ ಜಿಗಳಿಕೊಪ್ಪ


ಶ್ರೀಕೃಷ್ಣ

ಪ್ರಜಾವಾಣಿ ವಿಶೇಷ

ಬೆಂಗಳೂರು: ಲೆಕ್ಕ ಪರಿಶೋಧಕರ (ಸಿ.ಎ) ಮಗನಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26), ಬಾಲ್ಯದಿಂದಲೇ ತಂತ್ರಜ್ಞಾನದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ. 4ನೇ ತರಗತಿಯಲ್ಲಿ ಇರುವಾಗಲೇ, ಅಂತರರಾಷ್ಟ್ರೀಯ ಹ್ಯಾಕರ್ಸ್‌ಗಳು ಕಟ್ಟಿಕೊಂಡಿದ್ದ 'ಬ್ಲ್ಯಾಕ್‌ಹ್ಯಾಟ್' ತಂಡಕ್ಕೆ ಸೇರಿಕೊಂಡಿದ್ದ. ಅದೇ ತಂಡದಲ್ಲಿ ತರಬೇತಿ ಪಡೆದು ಅಂತರರಾಷ್ಟ್ರೀಯ ಹ್ಯಾಕರ್ ಆಗಿ ಬೆಳೆದ.

ಬಿಟ್ ಕಾಯಿನ್ ಹಗರಣದ ಪ್ರಮುಖ ಸೂತ್ರದಾರ ಎನ್ನಲಾದ ಶ್ರೀಕೃಷ್ಣನ ಬಾಲ್ಯ ಹಾಗೂ ಬದುಕಿನ ಬಗ್ಗೆಯೂ ಸಿಸಿಬಿ ಪೊಲೀಸರು ದೋಷಾರೋಪ ಪಟ್ಟಿಯಲ್ಲಿ ವಿವರಿಸಿದ್ದಾರೆ.

'ಬೆಂಗಳೂರಿನ ಜಯನಗರ ನಿವಾಸಿ ಶ್ರೀಕೃಷ್ಣ, ಗೋಪಾಲ್ ರಮೇಶ್ ಹಾಗೂ ಕೌಶಲ್ಯಾ ದಂಪತಿ ಪುತ್ರ. ಕಮಲಾ ಗಾರ್ಡನ್‌ನ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ್ದ ಆತ, ಕುಮಾರನ್ಸ್ ಶಾಲೆಯಲ್ಲಿ (ಸಿಬಿಎಸ್‌ಇ) ಎಸ್ಸೆಸ್ಸೆಲ್ಸಿ ಮುಗಿಸಿದ್ದ. 4ನೇ ತರಗತಿ ಇರುವಾಗಲೇ ಆತನಿಗೆ ಕಂಪ್ಯೂಟರ್ ಹಾಗೂ ತಂತ್ರಜ್ಞಾನದ ಬಗ್ಗೆ ಆಸಕ್ತಿ ಬೆಳೆದಿತ್ತು. ವೆಬ್ ತಂತ್ರಜ್ಞಾನ, ಜಾವಾ, ರಿವರ್ಸ್ ಎಂಜಿನಿಯರಿಂಗ್ ಹಾಗೂ ಗೇಮ್ ಸೃಷ್ಟಿ ಇತರೆ ಮಾಹಿತಿ ತಿಳಿದುಕೊಂಡಿದ್ದ' ಎಂಬ ಮಾಹಿತಿ ಆರೋಪ ಪಟ್ಟಿಯಲ್ಲಿದೆ.

'ಹ್ಯಾಕರ್ ಆಗಬೇಕೆಂದು ಬಾಲ್ಯದಲ್ಲೇ ತೀರ್ಮಾನಿಸಿದ್ದ ಶ್ರೀಕೃಷ್ಣ, ಇಂಟರ್‌ನೆಟ್ ರೆಲೇ ಚಾಟ್ (ಐಆರ್‌ಎಸ್) ಪ್ರೋಗ್ರಾಮ್ ಮೂಲಕ ಪರಿಣಿತ ಹ್ಯಾಕರ್‌ಗಳ ಸಂಪರ್ಕ ಸಾಧಿಸಿದ್ದ. ಅಂತರರಾಷ್ಟ್ರೀಯ ಹ್ಯಾಕರ್‌ಗಳು ಕಟ್ಟಿಕೊಂಡಿದ್ದ 'ಬ್ಲ್ಯಾಕ್‌ಹ್ಯಾಟ್' ತಂಡಕ್ಕೆ ಸದಸ್ಯನಾಗಿ ಸೇರಿದ್ದ. 4ನೇ ತರಗತಿಯಿಂದ 10ನೇ ತರಗತಿಯವರೆಗೂ ಆತ ತಂಡದಲ್ಲಿದ್ದ. ಸ್ಕ್ರಿಫ್ಟ್ ಕಿಡ್ಡೈ, ಡಾಟಾ ಬೇಸಸ್, ಎಸ್‌ಕ್ಯೂಎಲ್ ಇಂಜೆಕ್ಷನ್, ರಿಮೋಟ್ ಆ್ಯಕ್ಸಸ್, ಸೋರ್ಸ್ ಕೋಡ್ ವಿಶ್ಲೇಷಣೆ ಹಾಗೂ ಇತರೆ ತಾಂತ್ರಿಕ ಜ್ಞಾನದಲ್ಲಿ ಪರಿಣಿತಿ ಪಡೆದಿದ್ದ.'

'8ನೇ ತರಗತಿಯಲ್ಲಿರುವಾಗಲೇ ಶ್ರೀಕೃಷ್ಣ, ಐಆರ್‌ಸಿಯ 'ಬ್ಲ್ಯಾಕ್‌ಹ್ಯಾಟ್' ತಂಡದ ಅಡ್ಮಿನಿಸ್ಟ್ರೇಟರ್ ಆಗಿ ಬಡ್ತಿ ಪಡೆದಿದ್ದ. 'ರೋಸ್ / ಬಿಗ್‌ಬಾಸ್' ನಿಗೂಢ ಹೆಸರಿನ ಮೂಲಕ ತಂಡವನ್ನು ಮುನ್ನಡೆಸುತ್ತಿದ್ದ. ಸದಸ್ಯರಲ್ಲಿ ವೈಮನಸ್ಸು ಉಂಟಾಗಿದ್ದರಿಂದ, 'ಬ್ಲ್ಯಾಕ್‌ಹ್ಯಾಟ್' ತಂಡ ಎರಡು ಭಾಗವಾಗಿತ್ತು. ಅದಾದ ನಂತರ, ಪ್ರತ್ಯೇಕ ತಂಡದ ಮೂಲಕ ಆರೋಪಿ ಹ್ಯಾಂಕಿಂಗ್ ಮುಂದುವರಿಸಿದ್ದ' ಎಂಬ ಸಂಗತಿ ಪಟ್ಟಿಯಲ್ಲಿದೆ.

'ಆಸ್ಟ್ರೇಲಿಯಾದ ಸ್ನೇಹಿತ ಶಾನೆ ಡುಫೈ ಜೊತೆ ಸೇರಿ 'ಪೇಪಾಲ್' ಹಣ ವರ್ಗಾವಣೆ ಜಾಲತಾಣದ ಖಾತೆಯೊಂದನ್ನು ಹ್ಯಾಕ್ ಮಾಡಿದ್ದ. ಅದುವೇ ಆತನ ಮೊದಲ ಹ್ಯಾಂಕಿಂಗ್. ನಂತರ, ಗೇಮಿಂಗ್ ಆ್ಯಪ್‌ಗಳನ್ನು ಹ್ಯಾಕ್ ಮಾಡಿ ಹಣ ಕದ್ದು, ಪೇಪಾಲ್ ಖಾತೆಗೆ ವರ್ಗಾವಣೆ ಮಾಡಿಕೊಳ್ಳುತ್ತಿದ್ದ.'

'ವಿ.ವಿ ಪುರದ ಕಾಲೇಜಿನಲ್ಲಿ ಪಿಯುಸಿ ಕಲಿಯುತ್ತಿದ್ದಾಗಲೂ ಆರೋಪಿ ಕೃತ್ಯ ಮುಂದುವರಿಸಿದ್ದ. ಅಲ್ಲಿಯೇ ಆತ, ಧೂಮಪಾನ ಹಾಗೂ ಮದ್ಯಪಾನ ಮಾಡಲಾರಂಭಿಸಿದ್ದ. ಜೊತೆಯಲ್ಲಿ, ಡ್ರಗ್ಸ್ ಸಹ ತೆಗೆದುಕೊಳ್ಳಲಾರಂಭಿಸಿದ್ದ. ತನ್ನ ವ್ಯಸನಗಳಿಗಾಗಿ ಹಣ ಹೊಂದಿಸಲು, ಹೆಚ್ಚೆಚ್ಚು ಹ್ಯಾಂಕಿಂಗ್ ಮಾಡಲಾರಂಭಿಸಿದ. ಇದೇ ಸಂದರ್ಭದಲ್ಲೇ 'ಡಾರ್ಕ್‌ನೆಟ್' ಮೂಲಕ ಬಿಟ್ ಕಾಯಿನ್ ವ್ಯವಹಾರದ ಬಗ್ಗೆ ತಿಳಿದುಕೊಂಡಿದ್ದ. ಹಣ ವಿನಿಮಯ ಏಜೆನ್ಸಿಗಳ ಜಾಲತಣಗಳನ್ನೇ ಹ್ಯಾಕ್ ಮಾಡಿ ಅಪಾರ ಪ್ರಮಾಣದ ಬಿಟ್ ಕಾಯಿನ್ ದೋಚಲಾರಂಭಿಸಿದ್ದ' ಎಂಬ ಮಾಹಿತಿಯನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ಬಿಟ್ ಕಾಯಿನ್ ಯಾರಿಗೆಷ್ಟು ಪಾಲು'



'17ನೇ ವಯಸ್ಸಿನಲ್ಲೇ ಹಿಮಾಲಯಕ್ಕೆ ಹೋಗಿದ್ದ'

'ವ್ಯಸನಗಳಿಂದ ಮಾನಸಿಕವಾಗಿ ನೊಂದಿದ್ದ ಶ್ರೀಕೃಷ್ಣ, 17ನೇ ವಯಸ್ಸಿನಲ್ಲೇ ಮನೆ ತೊರೆದು ಸ್ನೇಹಿತನ ಜೊತೆ ಹಿಮಾಲಯದ ಬದರಿನಾಥ ಕ್ಷೇತ್ರಕ್ಕೆ ಹೋಗಿದ್ದ. ಮಗ ನಾಪತ್ತೆಯಾದ ಬಗ್ಗೆ ಪೋಷಕರು, ಸಿದ್ದಾಪುರ ಹಾಗೂ ತಿಲಕನಗರ ಠಾಣೆಗೆ ದೂರು ನೀಡಿದ್ದರು. ಎಫ್‌ಐಆರ್ ಸಹ ದಾಖಲಾಗಿತ್ತು' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ತನಿಖೆ ನಡೆಸಿದ್ದ ತಿಲಕನಗರ ಪೊಲೀಸರು, ಶ್ರೀಕೃಷ್ಣನನ್ನು ಪತ್ತೆ ಮಾಡಿ ಬೆಂಗಳೂರಿಗೆ ಕರೆತಂದು ಪೋಷಕರಿಗೆ ಒಪ್ಪಿಸಿದ್ದರು. ಪಿಯುಸಿ ಮುಗಿದ ಕೂಡಲೇ ಶ್ರೀಕೃಷ್ಣನನ್ನು ಹೆಚ್ಚಿನ ವ್ಯಾಸಂಗಕ್ಕಾಗಿ ನೆದರ್‌ಲೆಂಡ್ಸ್‌ಗೆ ಕಳುಹಿಸಲಾಗಿತ್ತು. ಇಟಲಿ, ಇಸ್ರೇಲ್, ಸ್ವಿಟ್ಜರ್‌ಲೆಂಡ್, ಫ್ರಾನ್ಸ್, ಜರ್ಮನಿ, ಸ್ವೀಡನ್ ಹಾಗೂ ಇತರೆ ದೇಶಗಳ ಹ್ಯಾಕರ್‌ಗಳ ಜೊತೆ ಸಂಪರ್ಕ ಇಟ್ಟುಕೊಂಡು ಹ್ಯಾಂಕಿಂಗ್ ಕೆಲಸ ಮುಂದುವರಿಸಿದ್ದ. ಬಿಟ್ ಕಾಯಿನ್ ದಂಧೆ ಆರಂಭಿಸಿದ್ದ' ಎಂಬ ಸಂಗತಿ ಪಟ್ಟಿಯಲ್ಲಿದೆ.

'ಶಾಲೆ ಜಾಲತಾಣವನ್ನೇ ಹ್ಯಾಕ್ ಮಾಡಿದ್ದ'

'ಶ್ರೀಕೃಷ್ಣ ಕಲಿಯುತ್ತಿದ್ದ ಶಾಲೆಯ ವಿದ್ಯಾರ್ಥಿಗಳ ಹಾಜರಾತಿ ಹಾಗೂ ಪರೀಕ್ಷೆ ಫಲಿತಾಂಶ ಪ್ರಕಟಿಸಲು ಜಾಲತಾಣ (ಪ್ಯುಪಿಲ್‌ಪಾಡ್) ಅಭಿವೃದ್ಧಿಪಡಿಸಲಾಗಿತ್ತು. ಅದೇ ಜಾಲತಾಣವನ್ನು ಹ್ಯಾಕ್ ಮಾಡಿದ್ದ ಆರೋಪಿ, ತರಗತಿಗೆ ಗೈರಾಗುತ್ತಿದ್ದ ಸಹಪಾಠಿಗಳಿಗೆ ಹಾಜರಾತಿ ಕೊಡಿಸಿದ್ದ. ಕೆಲವರಿಗೆ ಹೆಚ್ಚಿನ ಅಂಕಗಳನ್ನು ನಮೂದಿಸಿದ್ದ. ಹ್ಯಾಕ್ ಸಂಗತಿ ಯಾರಿಗೂ ಗೊತ್ತಾಗಿರಲಿಲ್ಲ' ಎಂಬ ಮಾಹಿತಿಯನ್ನೂ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಸುದ್ದಿ 2 ನಿಮಿಷ

ಮತ್ತೆ ಟಿಎಂಸಿಗೆ ಮರಳಿದ ಬಿಜೆಪಿಯ ರಾಜೀವ್ ಬ್ಯಾನರ್ಜಿ

ಅಗರ್ತಲಾ, ತ್ರಿಪುರ (ಪಿಟಿಐ): ಅಗರ್ತಲಾದಲ್ಲಿ ಭಾನುವಾರ ನಡೆದ ಪಕ್ಷದ ಸಮಾವೇಶದಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರ ಸಮ್ಮುಖದಲ್ಲಿ ಪಶ್ಚಿಮ ಬಂಗಾಳದ ಬಿಜೆಪಿ ನಾಯಕ ರಾಜೀವ್ ಬ್ಯಾನರ್ಜಿ ಟಿಎಂಸಿಗೆ ಮರಳಿದರು.

ಮಮತಾ ಅವರು ಟಿಎಂಸಿ ತೊರೆಯದಂತೆ ಕೇಳಿಕೊಂಡರೂ ವಿಧಾನಸಭೆ ಚುನಾವಣೆಗೆ ಮುನ್ನ ಬಿಜೆಪಿಗೆ ಸೇರಿದ್ದಕ್ಕೆ 'ಪಶ್ಚಾತ್ತಾಪ'ವಿದೆ ಎಂದು ಅವರು ಹೇಳಿದರು. ರಾಜೀವ್ ಅವರು ಮಮತಾ ಬ್ಯಾನರ್ಜಿ ಸಂಪುಟದಲ್ಲಿ ಸಚಿವರಾಗಿದ್ದರು.

ಈಚೆಗೆ ಅಷ್ಟೇ ರಾಜೀವ್ ಅವರನ್ನು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿತ್ತು. ಅವರು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಹೌರಾ ಜಿಲ್ಲೆಯ ಡೊಮ್ಜೂರ್‌ನಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದರು.

'ಬಿಜೆಪಿಯ ದ್ವೇಷ ರಾಜಕಾರಣ ಮತ್ತು ವಿಭಜಕ ಸಿದ್ಧಾಂತವನ್ನು ನಾನು ಒಪ್ಪಿಕೊಳ್ಳಲಾರೆ. ಅವರ ಜನ ವಿರೋಧಿ ನೀತಿಗಳನ್ನು ನಾನು ಒಪ್ಪಲು ಸಾಧ್ಯವಿಲ್ಲ' ಎಂದು ಹೇಳಿದರು.

'ತಪ್ಪು ತಿಳಿವಳಿಕೆಯಿಂದ ನಾನು ಟಿಎಂಸಿ ತೊರೆದಿದ್ದೆ. ಚುನಾವಣೆಗೂ ಮುನ್ನ ಬಿಜೆಪಿಯ ಮಾತುಗಳಿಗೆ ಮರುಳಾಗಿದ್ದೆ. ಈಗ ಅವರ ಭರವಸೆಗಳೆಲ್ಲಾ ಸುಳ್ಳಾಗಿವೆ. ಮಮತಾ ಬ್ಯಾನರ್ಜಿ ಮತ್ತು ಅಭಿಷೇಕ್ ಬ್ಯಾನರ್ಜಿ ನಾಯಕತ್ವದಲ್ಲಿ ಕೆಲಸ ಮಾಡುತ್ತೇನೆ' ಎಂದರು.



ಕೇಂದ್ರ ಸಚಿವ ಮಿಶ್ರಾ ವಾಹನದ ಮೇಲೆ ಮೊಟ್ಟೆಗಳ ತೂರಾಟ

ಭುವನೇಶ್ವರ (ಪಿಟಿಐ): ಇಲ್ಲಿನ ಬಿಜು ಪಟ್ನಾಯಕ್ ವಿಮಾನ ನಿಲ್ದಾಣದ ಹೊರಗೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ವಾಹನದ ಮೇಲೆ ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾ (ಎನ್‌ಎಸ್‌ಯುಐ) ಕಾರ್ಯಕರ್ತರು ಭಾನುವಾರ ಮೊಟ್ಟೆಗಳನ್ನು ಎಸೆದಿದ್ದಾರೆ.

ಸಚಿವರ ಪುತ್ರ ಆರೋಪಿಯಾಗಿರುವ ಲಖಿಂಪುರ–ಖೇರಿ ಹಿಂಸಾಚಾರ ಪ್ರಕರಣ ಖಂಡಿಸಿ ಎನ್‌ಎಸ್‌ಯುಐ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದರು.

ಕಟಕ್ ಬಳಿಯ ಮುಂಡಲಿಯಲ್ಲಿರುವ ಸಿಐಎಸ್‌ಎಫ್ ಆವರಣದಲ್ಲಿನ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ತೆರಳುತ್ತಿದ್ದರು. ಸಚಿವರ ಒಡಿಶಾ ಭೇಟಿಯನ್ನು ಪ್ರತಿಭಟಿಸುವುದಾಗಿ ಎನ್‌ಎಸ್‌ಯುಐ ಈ ಹಿಂದೆ ಹೇಳಿತ್ತು.

ವಿದ್ಯಾರ್ಥಿ ಘಟಕದ ಕಾರ್ಯಕರ್ತರು ಕೇಂದ್ರ ಸಚಿವರಿಗೆ ಕಪ್ಪು ಬಾವುಟ ಪ್ರದರ್ಶಿಸಿದರು. ಈ ವೇಳೆ ಪೊಲೀಸರು ಎನ್‌ಎಸ್‌ಯುವಿ ಘಟಕದ ಕೆಲ ಕಾರ್ಯಕರ್ತರನ್ನು ಬಂಧಿಸಿದ್ದಾರೆ.

ಭಾರತೀಯ ಲಸಿಕೆಗೆ ಮಾನ್ಯತೆ ದೊರೆತರೆ ತಯಾರಿಕೆಗೆ ಸಿದ್ಧ: ಜಿ20 ಶೃಂಗಸಭೆಯಲ್ಲಿ ಪ್ರಧಾನಿ ಪ್ರತಿಪಾದನೆ

'ವಿಶ್ವಕ್ಕಾಗಿ ಭಾರತದಿಂದ 500 ಕೋಟಿ ಡೋಸ್ ಲಸಿಕೆ'

ರೋಮ್ (ಪಿಟಿಐ): 'ಭಾರತವು ಮುಂದಿನ ವರ್ಷ ವಿಶ್ವಕ್ಕಾಗಿ 500 ಕೋಟಿ ಕೋವಿಡ್ ಲಸಿಕೆಯ ಡೋಸ್‌ಗಳನ್ನು ತಯಾರಿಸಲು ಸಿದ್ಧವಾಗಿದೆ. ಕೋವಿಡ್ ವಿರುದ್ಧ ಜಗತ್ತಿನ ಹೋರಾಟಕ್ಕೆ ಭಾರತವು ಈ ರೀತಿ ನೆರವು ನೀಡಲಿದೆ. ಆದರೆ ಇದಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆಯು ಭಾರತದ ಲಸಿಕೆಗೆ ಅನುಮೋದನೆ ನೀಡುವುದು ಅತ್ಯಗತ್ಯ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಜಿ20 ಶೃಂಗಸಭೆಯಲ್ಲಿ ಹೇಳಿದ್ದಾರೆ.

ಭಾರತ್ ಬಯೊಟೆಕ್ ಅಭಿವೃದ್ಧಿಪಡಿಸಿ ತಯಾರಿಸುತ್ತಿರುವ ಕೋವ್ಯಾಕ್ಸಿನ್ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆ ಇನ್ನೂ ಮಾನ್ಯತೆ ನೀಡಿಲ್ಲ. ಮಾನ್ಯತೆ ನೀಡುವ ಬಗ್ಗೆ ಸಂಸ್ಥೆಯು ಇದೇ ನವೆಂಬರ್ 3ರಂದು ಸಭೆ ನಡೆಸಲಿದೆ. ಈ ಸಭೆಗೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವ ಆರೋಗ್ಯ ಸಂಸ್ಥೆಯ ಮೇಲೆ ಒತ್ತಡ ಹೇರಲು ಈ ಹೇಳಿಕೆ ನೀಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದ ಮೋದಿ ಅವರು, 'ಕೋವಿಡ್ ಕಾರಣದಿಂದ ಅಂತರರಾಷ್ಟ್ರೀಯ ಪ್ರಯಾಣದ ಮೇಲೆ ನಿರ್ಬಂಧವಿದೆ. ಪ್ರಯಾಣ ನಿರ್ಬಂಧ ಮತ್ತು ಲಸಿಕೆಗೆ ಮಾನ್ಯತೆ ನೀಡದೇ ಇರುವುದು ಇಂದಿನ ದೊಡ್ಡ ಸಮಸ್ಯೆಯಾಗಿದೆ. ಎಲ್ಲಾ ದೇಶಗಳು ಪರಸ್ಪರರ ಲಸಿಕೆಗಳನ್ನು ಮಾನ್ಯ ಮಾಡುವ ಒಂದು ಜಾಗತಿಕ ಮಟ್ಟದ ವ್ಯವಸ್ಥೆಯನ್ನು ರೂಪಿಸಬೇಕು' ಎಂದು ಪ್ರತಿಪಾದಿಸಿದ್ದಾರೆ.

'ಭಾರತವು ಈಗಾಗಲೇ 100 ಕೋಟಿ ಡೋಸ್‌ಗಳಷ್ಟು ಲಸಿಕೆ ನೀಡಿದೆ. ಭಾರತದ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆಯ ಮಾನ್ಯತೆ ದೊರೆತರೆ, ಮುಂದಿನ ವರ್ಷ ನಾವು ಜಗತ್ತಿಗಾಗಿ 500 ಕೋಟಿ ಡೋಸ್‌ಗಳನ್ನು ತಯಾರಿಸಲು ಸಿದ್ಧರಿದ್ದೇವೆ' ಎಂದು ಅವರು ಹೇಳಿದ್ದಾರೆ.

'ಈ ಲಸಿಕೆಗೆ ಮಾನ್ಯತೆ ದೊರೆತು, 500 ಕೋಟಿ ಡೋಸ್ ತಯಾರಿಸಿದರೆ ಅದರಿಂದ ಭಾರತೀಯರಿಗೂ ಅನುಕೂಲವಾಗಲಿದೆ. ಜತೆಗೆ ವಿಶ್ವದ ಬೇರೆ ದೇಶಗಳಿಗೂ ಅನುಕೂಲವಾಗಲಿದೆ. ಇದು ಕಾರ್ಯರೂಪಕ್ಕೆ ಬಂದರೆ ವಿಶ್ವದಲ್ಲಿ, ಅದರಲ್ಲೂ ಮುಖ್ಯವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಇರುವ ಲಸಿಕೆ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಲಿದೆ' ಎಂದು ಮೋದಿ ಅವರು ಹೇಳಿದ್ದಾರೆ.


ವಿಶ್ವ ವಿಖ್ಯಾತ ಟ್ರೇವಿ ಕಾರಂಜಿಗೆ ಪ್ರಧಾನಿ ನರೇಂದ್ರ ಮೋದಿ ಸೇರಿ ಜಿ20 ದೇಶಗಳ ನಾಯಕರು ನಾಣ್ಯ ಎಸೆದರು ಎಪಿ ಚಿತ್ರ

'ಒಂದು ವಿಶ್ವ, ಒಂದು ಆರೋಗ್ಯ'

ಭವಿಷ್ಯದಲ್ಲಿ ಕೋವಿಡ್‌ನಂತಹ ಸಾಂಕ್ರಾಮಿಕದ ವಿರುದ್ಧ ಹೋರಾಡಲು 'ಒಂದು ವಿಶ್ವ, ಒಂದು ಆರೋಗ್ಯ ವ್ಯವಸ್ಥೆ'ಯ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದ್ದಾರೆ.

'ಭವಿಷ್ಯದಲ್ಲಿ ಇಂತಹ ಪರಿಸ್ಥಿತಿಯನ್ನು ಎದುರಿಸಲು ಸಂಶೋಧನೆ, ಅಭಿವೃದ್ಧಿಯಲ್ಲಿ ಜಾಗತಿಕ ಮಟ್ಟದ ಸಹಕಾರದ ಅಗತ್ಯವಿದೆ. ಇಂತಹ ಒಂದು ವ್ಯವಸ್ಥೆಯನ್ನು ನಾವು ರೂಪಿಸಬೇಕಿದೆ. ಈ ಮೂಲಕ ಜಾಗತಿಕ ಸೋಂಕುಮಾರಿಗಳಿಗೆ, ಜಾಗತಿಕವಾದ ಪರಿಹಾರವನ್ನು ಕಂಡುಕೊಳ್ಳಬಹುದು' ಎಂದು ಮೋದಿ ಪ್ರತಿಪಾದಿಸಿದ್ದಾರೆ.

ಕೋವಿಡ್ ವಿರುದ್ಧದ ಹೋರಾಟದ ವೇಳೆ ಜಾಗತಿಕ ಮಟ್ಟದ ಪೂರೈಕೆ ವ್ಯವಸ್ಥೆಯಲ್ಲಿ ಭಾರಿ ವ್ಯತ್ಯಯವಾಗಿತ್ತು. ಇದು ಭಾರಿ ತೊಡಕಾಗಿತ್ತು. ಭಾರತವು ಇಂತಹ ಸವಾಲುಗಳನ್ನು ಎದುರಿಸಿಯೂ, ವಿಶ್ವಕ್ಕೆ ಔಷಧವನ್ನು ಪೂರೈಸಿದೆ. ಭವಿಷ್ಯದಲ್ಲಿ ಇಂತಹ ಸಮಸ್ಯೆ ಬರದ ಹಾಗೆ ನೋಡಿಕೊಳ್ಳಬೇಕು. ಇದಕ್ಕಾಗಿ ಒಂದು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕು' ಎಂದು ಅವರು ಕರೆ ನೀಡಿದ್ದಾರೆ.

'ಯಾವುದೇ ಸವಾಲು ಎದುರಿಸಬಲ್ಲ ದೇಶ'

ಕೇವಡಿಯಾ (ಗುಜರಾತ್): ಭಾರತವು ಯಾವುದೇ ಬಾಹ್ಯ ಹಾಗೂ ಆಂತರಿಕ ಸವಾಲನ್ನು ಎದುರಿಸಲು ಸಮರ್ಥವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜಯಂತ್ಯುತ್ಸವವಾದ 'ರಾಷ್ಟ್ರೀಯ ಏಕತಾ ದಿನ'ದ ಅಂಗವಾಗಿ ವಿಡಿಯೊ ಸಂದೇಶ ನೀಡಿದ ಅವರು, ಕೋವಿಡ್ –19ನಂಥ ಸಾಂಕ್ರಾಮಿಕದ ಬಿಕ್ಕಟ್ಟಿನ ಸಂದರ್ಭದಲ್ಲಿನ ಸಾಮುದಾಯಿಕವಾಗಿ ಶ್ರಮವು ದೇಶವನ್ನು ಎತ್ತರಕ್ಕೆ ಕರೆದೊಯ್ದಿದೆ ಎಂದರು.

'ಏಕ ಭಾರತ, ಶ್ರೇಷ್ಠ ಭಾರತ'ಕ್ಕಾಗಿ ಜೀವ ಮುಡಿಪಾಗಿಟ್ಟ ಸರ್ದಾರ್ ವಲ್ಲಭಭಾಯಿ ಪಟೇಲರನ್ನು ದೇಶವು ಸ್ಮರಿಸುತ್ತದೆ. ಅವರು ದೇಶದ ಇತಿಹಾಸದಲ್ಲಿ ಮಾತ್ರವಲ್ಲ; ದೇಶದ ಜನರ ಹೃದಯದಲ್ಲಿ ಇದ್ದಾರೆ. ಭಾರತವು ಯಾವಾಗಲೂ ಸದೃಢವಾಗಿರಬೇಕು, ಎಲ್ಲರನ್ನೂ ಒಳಗೊಳ್ಳಬೇಕು, ಸಂವೇದನಾಶೀಲ ಹಾಗೂ ಜಾಗೃತವಾಗಿರಬೇಕು, ವಿನಮ್ರ, ಅಭಿವೃದ್ಧಿ ಹೊಂದಿದ ದೇಶವಾಗಬೇಕು ಎಂಬುದು ಅವರ ಬಯಕೆಯಾಗಿತ್ತು. ಅವರಿಂದ ಸ್ಫೂರ್ತಿ ಪಡೆದ ದೇಶವು, ಈಗ ಯಾವುದೇ ಸವಾಲು ಎದುರಿಸಬಲ್ಲ ಸಮರ್ಥ ದೇಶವಾಗಿದೆ ಎಂದರು.

ಒಗ್ಗಟ್ಟಿಲ್ಲದೇ ಹೋದಲ್ಲಿ ಅದು ಹಲವು ಹೊಸ ಸಮಸ್ಯೆಗಳಿಗೆ ದಾರಿಯಾಗುತ್ತದೆ. ಹೀಗಾಗಿ, ದೇಶದ ಜನತೆ ಒಗ್ಗಟ್ಟು ಕಾಪಾಡಿಕೊಳ್ಳಬೇಕು. ಆಗ ಮಾತ್ರ, ಭಾರತ ತನ್ನ ಗುರಿ ಸಾಧಿಸಲು ಸಾಧ್ಯ ಎಂದು ಮೋದಿ ಹೇಳಿದರು.

ಐತಿಹಾಸಿಕ ಟ್ರೇವಿ ಕಾರಂಜಿಗೆ ಭೇಟಿ

ರೋಮ್: ಜಿ–20 ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಆಗಮಿಸಿರುವ ಪ್ರಧಾನಿ ನರೇಂದ್ರ ಮೋದಿ, ಇತರ ಜಾಗತಿಕ ನಾಯಕರೊಂದಿಗೆ ಭಾನುವಾರ ಇಲ್ಲಿನ ಪ್ರಸಿದ್ಧ ಟ್ರೇವಿ ಕಾರಂಜಿಗೆ ಭೇಟಿ ನೀಡಿದರು.

ಜಗತ್ತಿನ ಪ್ರಮುಖ ಕಾರಂಜಿ ಹಾಗೂ ಪ್ರವಾಸಿಗರನ್ನು ಸೆಳೆಯುವ ತಾಣವಾದ ಈ ಐತಿಹಾಸಿಕ ಕಾರಂಜಿಯು ಬರೂಕ್ ಕಲಾಕುಸುರಿಯ ಸ್ಮಾರಕವಾಗಿ, ಜಗತ್ತಿನ ಹಲವಾರು ಚಿತ್ರನಿರ್ಮಾಪಕರನ್ನು ಆಕರ್ಷಿಸಿದೆ.

'ಜಿ–20 ನಾಯಕರ ನಿಯೋಗವು ಜಗತ್ತಿನ ಸುಂದರ ಕಾರಂಜಿ ಹಾಗೂ ನಾಣ್ಯ ಎಸೆಯುವ ಸಂಪ್ರದಾಯಕ್ಕೆ ಹೆಸರಾದ ಟ್ರೇವಿ ಕಾರಂಜಿಗೆ ಭೇಟಿ ನೀಡಿತು' ಎಂದು ಜಿ–20 ಇಟಲಿ ಭಾನುವಾರ ಟ್ವೀಟ್ ಮಾಡಿದೆ.

ನಿಯೋಗದ ಸದಸ್ಯರು ಕೂಡ, ತಮ್ಮ ಭುಜದ ಮೇಲಿಂದ ಕಾರಂಜಿಗೆ ನಾಣ್ಯವನ್ನು ಎಸೆದ ವಿಡಿಯೊವನ್ನು ಅದು ಬಿಡುಗಡೆ ಮಾಡಿದೆ.

ಕಾರಂಜಿಗೆ ಬೆನ್ನು ಮಾಡಿ ನಿಂತು, ಭುಜದ ಮೇಲಿಂದ ನಾಣ್ಯವನ್ನು ಕಾರಂಜಿಯ ನೀರಿಗೆ ಬೀಳುವಂತೆ ಎಸೆದರೆ, ಅವರು ಮತ್ತೆ ರೋಮ್‌ಗೆ ಭೇಟಿ ನೀಡುತ್ತಾರೆ ಎಂಬುದು ನಂಬಿಕೆ.

ಸಿಒಪಿ26 ಹವಾಮಾನ ಶೃಂಗಸಭೆಯ ಸಂದರ್ಭದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರನ್ನು ಭೇಟಿ ಮಾಡಿ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

ಪಾಕ್ ವಾಯುಪ್ರದೇಶದ ಮೇಲೆ ಹಾರಿದ ಪ್ರಧಾನಿ ವಿಮಾನ

ಇಸ್ಲಾಮಾಬಾದ್: ಜಿ–20 ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಶುಕ್ರವಾರ ಇಟಲಿಗೆ ಪ್ರಯಾಣಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿದ್ದ ವಿಮಾನವು, ಪಾಕಿಸ್ತಾನದ ವಾಯುಪ್ರದೇಶದ ಮೇಲೆ ಹಾದುಹೋಗಿದೆ. ಅಲ್ಲಿಂದ ವಾಪಸ್ಸಾಗುವಾಗಲೂ, ಇಸ್ಲಾಮಾಬಾದ್‌ನ ಔಪಚಾರಿಕ ಅನುಮತಿ ಮೇರೆಗೆ ಮತ್ತೆ ಈ ಪ್ರದೇಶವನ್ನು ಬಳಸಿಕೊಳ್ಳಲಿದೆ ಎಂದು ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಪ್ರಧಾನಿ ಮೋದಿ ಪ್ರಯಾಣಿಸಿದ ವಿಮಾನವು, ಬಹವಾಲ್ಪುರದಿಂದ ಪಾಕಿಸ್ತಾನ ವಾಯುಪ್ರದೇಶವನ್ನು ಪ್ರವೇಶಿಸಿತು. ತರ್ಬತ್, ಪಂಜಗುರ್ ಮೂಲಕ ಇರಾಕ್ ಮತ್ತು ಟರ್ಕಿ ಮಾರ್ಗವಾಗಿ ಇಟಲಿ ತಲುಪಿದೆ ಎಂದು ವರದಿ ಹೇಳಿದೆ.

ನಾಗರಿಕ ವಿಮಾನಯಾನ ಪ್ರಾಧಿಕಾರದ ಮೂಲಗಳ ಪ್ರಕಾರ, ಭಾರತದ ಅಧಿಕಾರಿಗಳು, ಪ್ರಧಾನಿ ಪ್ರಯಾಣಿಸುವ ವಿಮಾನ ಹಾರಾಟಕ್ಕೆ ಪಾಕಿಸ್ತಾನದ ವಾಯುಪ್ರದೇಶ ಬಳಸಿಕೊಳ್ಳಲು ಪಾಕಿಸ್ತಾನದ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಮನವಿ ಮಾಡಿದ್ದರು. ಆ ಮನವಿಗೆ ಪಾಕಿಸ್ತಾನ ಸಮ್ಮತಿಸಿದೆ ಎಂದು ತಿಳಿದುಬಂದಿದೆ.

ರಾಜ್ಯದ 11 ಪೊಲೀಸರಿಗೆ ಕೇಂದ್ರದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣಗಳನ್ನು ಭೇದಿಸಲು ಯಶಸ್ವಿ ಕಾರ್ಯಾಚರಣೆ ನಡೆಸಿದ್ದ ರಾಜ್ಯದ 11 ಪೊಲೀಸರಿಗೆ ಕೇಂದ್ರ ಗೃಹ ಸಚಿವಾಲಯದ 2021ನೇ ಸಾಲಿನ ವಿಶೇಷ ಕಾರ್ಯಾಚರಣೆ ಪದಕ ಲಭಿಸಿದೆ.

'ಪೊಲೀಸರ ಸಾಧನೆ ಪರಿಗಣಿಸಿ ಪದಕಕ್ಕೆ ಆಯ್ಕೆ ಮಾಡಲಾಗಿದೆ' ಎಂದು ಹೇಳಿ ಕೇಂದ್ರ ಗೃಹ ಇಲಾಖೆ ಭಾನುವಾರ ಆದೇಶ ಹೊರಡಿಸಿದೆ.

ಪದಕ ಪಡೆದವರು: ಐಪಿಎಸ್ ಅಧಿಕಾರಿ ಕೆ. ಸಂತೋಷ್ ಕುಮಾರ್ ಬಾಬು, ಇನ್‌ಸ್ಪೆಕ್ಟರ್‌ಗಳಾದ ಜಿ.ಬಾಲರಾಜು, ಪಿ.ಶಿವಕುಮಾರ್, ಎಚ್.ವಿ. ಸುದರ್ಶನ್, ಮಹೇಶ್ ಪ್ರಸಾದ್, ಎಸ್.ಆರ್. ಶ್ರೀಧರ್, ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ಎಂ. ಶೌಕತ್ ಅಲಿ, ಹೆಡ್ ಕಾನ್‌ಸ್ಟೆಬಲ್‌ಗಳಾದ ಪಿ. ಸೋಮಶೇಖರ್, ಕೆ. ಫಕ್ರುದ್ದೀನ್, ಕೃಷ್ಣಾದೇವಿ ಗೌಡ, ಕಾನ್‌ಸ್ಟೆಬಲ್ ಅಕ್ಬರ್ ಯಡ್ರಾಮಿ.


ಜಿ. ಬಾಲರಾಜು


ಕೆ.ಸಂತೋಷ್

2020: ಪ್ರತಿದಿನ 31 ಮಕ್ಕಳ ಆತ್ಮಹತ್ಯೆ

ನವದೆಹಲಿ: ಕಳೆದ ವರ್ಷ ದೇಶದಲ್ಲಿ ಪ್ರತಿದಿನ ಸರಾಸರಿ 31 ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಆಘಾತಕಾರಿ ಮಾಹಿತಿಯನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಸಂಸ್ಥೆ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತವೆ.

'2020ರಲ್ಲಿ 11,396 ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2019ರಲ್ಲಿ ಆತ್ಮಹತ್ಯೆ ಮಾಡಿಕೊಂಡ ಮಕ್ಕಳ ಸಂಖ್ಯೆಗೆ (9,613) ಹೋಲಿಸಿದರೆ, ಇಂಥ ಸಾವಿನ ಪ್ರಮಾಣದಲ್ಲಿ ಶೇ 18ರಷ್ಟು ಹೆಚ್ಚಳ ಕಂಡುಬಂದಂತಾಗಿದೆ. ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ (9,413) ಆತ್ಮಹತ್ಯೆ ಮಾಡಿಕೊಂಡ ಮಕ್ಕಳ ಸಂಖ್ಯೆಯಲ್ಲಿ ಶೇ 21ರಷ್ಟು ಹೆಚ್ಚಳ ಕಂಡುಬಂದಿದೆ ಎಂಬ ಕಳವಳಕಾರಿ ಮಾಹಿತಿ ಈ ಅಂಕಿ–ಅಂಶಗಳಿಂದ ಗೊತ್ತಾಗುತ್ತದೆ.

'ಕಳೆದ ವರ್ಷ ಬಾಧಿಸಿದ ಕೋವಿಡ್–19 ಪಿಡುಗು ಇಂತಹ ವಿದ್ಯಮಾನಕ್ಕೆ ಕಾರಣ. ಕೋವಿಡ್‌ನಿಂದಾಗಿ ಮಕ್ಕಳು ಮಾನಸಿಕವಾಗಿ ಹೆಚ್ಚು ಆಘಾತ ಅನುಭವಿಸಿದರು. ಈ ಆಘಾತವೇ ಅವರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾಗಿರುವ ಸಾಧ್ಯತೆಗಳು ಹೆಚ್ಚು' ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

4,006 ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳಲು ಕೌಟುಂಬಿಕ ಸಮಸ್ಯೆಗಳು ಕಾರಣವಾಗಿದ್ದರೆ, ಪ್ರೇಮ ವೈಫಲ್ಯ ಹಾಗೂ ಅನಾರೋಗ್ಯ ಕಾರಣಗಳಿಂದಾಗಿ ಆತ್ಮಹತ್ಯೆ ಮಾಡಿಕೊಂಡ ಮಕ್ಕಳ ಸಂಖ್ಯೆ ಕ್ರಮವಾಗಿ 1,337 ಹಾಗೂ 1,327 ಎಂದು ಎನ್‌ಸಿಆರ್‌ಬಿ ವರದಿ ಹೇಳುತ್ತದೆ.

'ಕೋವಿಡ್ ಪಿಡುಗು ಹಾಗೂ ಈ ಕಾರಣದಿಂದ ಶಾಲೆಗಳು ಮುಚ್ಚಿದವು. ಮನೆಯ ಹಿರಿಯರಲ್ಲಿ ಸಾಮಾಜಿಕವಾಗಿ ಪ್ರತ್ಯೇಕಗೊಂಡ ಭಾವನೆ ಹಾಗೂ ಆತಂಕ ಮನೆ ಮಾಡಿದವು. ಇವು ಸಹ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಿದವು' ಎಂದು 'ಚೈಲ್ಡ್ ಪ್ರೊಟೆಕ್ಷನ್–ಸೇವ್ ದಿ ಚಿಲ್ರನ್' ಸಂಸ್ಥೆಯ ಉಪನಿರ್ದೇಶಕ ಪ್ರಭಾತ್‌ಕುಮಾರ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಡಾ.ಮನಮೋಹನ್ ಸಿಂಗ್ ಆಸ್ಪತ್ರೆಯಿಂದ ಮನೆಗೆ

ನವದೆಹಲಿ (ಪಿಟಿಐ): ಜ್ವರದಿಂದಾಗಿ ಇಲ್ಲಿನ ಏಮ್ಸ್‌ಗೆ ಚಿಕಿತ್ಸೆಗೆ ದಾಖಲಾಗಿದ್ದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಭಾನುವಾರ ಮನೆಗೆ ತೆರಳಿದರು ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಅವರು ಅಕ್ಟೋಬರ್ 13ರಂದು ಆಸ್ಪತ್ರೆಗೆ ದಾಖಲಾಗಿದ್ದರು. 89 ವರ್ಷದ ಕಾಂಗ್ರೆಸ್‌ನ ಹಿರಿಯ ಮುಖಂಡರನ್ನು ಆಸ್ಪತ್ರೆಯಲ್ಲಿ ಡಾ.ನಿತೀಶ್ ನಾಯ್ಕ್ ಅವರ ನೇತೃತ್ವದ ಹೃದ್ರೋಗ ತಜ್ಞರ ತಂಡ ತಪಾಸಣೆ ನಡೆಸಿತು.

ಡ್ರಗ್ಸ್ ಪ್ರಕರಣ: ಸಿಬಿಐ ತನಿಖೆ ಕೋರಿ ಅರ್ಜಿ

ನವದೆಹಲಿ(ಪಿಟಿಐ): ಮುಂಬೈ ಕ್ರೂಸ್ ಹಡಗಿನ ಡ್ರಗ್ಸ್ ಪ್ರಕರಣದಲ್ಲಿ ಮಾದಕ ದ್ರವ್ಯ ನಿಯಂತ್ರಣ ಬ್ಯೂರೊ (ಎನ್‌ಸಿಬಿ) ನಡೆಸುತ್ತಿರುವ ತನಿಖೆಯಲ್ಲಿ ಹಸ್ತಕ್ಷೇಪ ನಡೆದಿದ್ದು, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ವಕೀಲ ಎಂ.ಎಲ್ ಶರ್ಮಾ ಎಂಬುವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಡ್ರಗ್ಸ್ ಪ್ರಕರಣದಲ್ಲಿನ ಎಲ್ಲ ಸಾಕ್ಷಿಗಳಿಗೆ ರಕ್ಷಣೆ ಒದಗಿಸಬೇಕೆಂದೂ ಕೋರಲಾಗಿದೆ. ಕಾನೂನು ಆಯೋಗದ ವಿವಿಧ ವರದಿಗಳಲ್ಲಿ ಶಿಫಾರಸು ಮಾಡಿದಂತೆ ರಾಷ್ಟ್ರೀಯ ಸಾಕ್ಷಿ ರಕ್ಷಣೆ ಯೋಜನೆಯನ್ನು ರೂಪಿಸಲು ಕೇಂದ್ರ ಗೃಹ ಸಚಿವಾಲಯಕ್ಕೆ ನಿರ್ದೇಶನ ನೀಡಬೇಕೆಂದೂ ನ್ಯಾಯಾಲಯಕ್ಕೆ ಕೋರಲಾಗಿದೆ.

ಮುನ್‌ಮುನ್ ಬಿಡುಗಡೆ

ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪತ್ತೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲಾಗಿದ್ದ ರೂಪದರ್ಶಿ ಮುನ್‌ಮುನ್ ಧಮೇಚಾ ಮತ್ತು ಅರ್ಬಾಜ್ ಮರ್ಚಂಟ್ ಅವರನ್ನು ಜಾಮೀನು ದೊರೆತ ಮೂರು ದಿನದ ನಂತರ ಇಲ್ಲಿನ ಜೈಲಿನಿಂದ ಭಾನುವಾರ ಬಿಡುಗಡೆ ಮಾಡಲಾಗಿದೆ.

ಪಟೇಲ್ ಜನ್ಮದಿನ: ಬಿಜೆಪಿ–ಕಾಂಗ್ರೆಸ್ ಕದನ

ನವದೆಹಲಿ: ಕೇಂದ್ರ ಸರ್ಕಾರ ಸರ್ದಾರ್ ವಲ್ಲಭಭಾಯ್ ಪಟೇಲ್ ಜಯಂತಿಯನ್ನು 'ರಾಷ್ಟ್ರೀಯ ಏಕತಾ ದಿವಸ'ವನ್ನಾಗಿ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಬಿರುಸಿನ ವಾಗ್ಯುದ್ಧ ನಡೆದಿದೆ. ಪ್ರಜಾಪ್ರಭುತ್ವವನ್ನು ಉಳಿಸುವುದೇ ಪಟೇಲ್‌ಗೆ ನೀಡುವ ಗೌರವ ಎಂದು ಕಾಂಗ್ರೆಸ್ ಹೇಳಿದೆ.

ಸ್ವಾತಂತ್ರ್ಯ ಬಂದ ನಂತರ ಸರ್ದಾರ್ ಪಟೇಲ್ ಅವರ ಸಾಧನೆಗಳಿಗೆ ಸರಿಯಾದ ಮನ್ನಣೆ ಸಿಗಲಿಲ್ಲ ಎಂದು ಕೇಂದ್ರ ಸಚಿವ ಅಮಿತ್ ಶಾ ಹೇಳಿದ್ದರು. ದೋಣಿಯಲ್ಲಿ ಕುಳಿತಿರುವ ಪ್ರತಿಯೊಬ್ಬರೂ ಅದರ ಕಡೆಗೆ ಗಮನ ನೀಡಬೇಕು. ನಾವು ಒಟ್ಟಾಗಿದ್ದರೆ ಮಾತ್ರ ಮುಂದುವರಿಯಲು ಸಾಧ್ಯ. ಆಗ ಮಾತ್ರ ದೇಶ ಅದರ ಗುರಿಗಳನ್ನು ತಲುಪುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು.

ಇದೆಲ್ಲದರ ಕುರಿತು ಕಾಂಗ್ರೆಸ್ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. 'ಭಾರತವನ್ನು ಒಗ್ಗೂಡಿಸುವ ಹೋರಾಟದಲ್ಲಿ, ದ್ವೇಷವನ್ನು ಪ್ರೀತಿಯಿಂದ ಗೆಲ್ಲುವ ಹೋರಾಟದಲ್ಲಿ, ನಮ್ಮ ರೈತರನ್ನು, ನಮ್ಮ ಜನರನ್ನು ಮತ್ತು ನಮ್ಮ ರಾಷ್ಟ್ರವನ್ನು ರಕ್ಷಿಸುವ ಹೋರಾಟದಲ್ಲಿ ನಾವು ಭಾರತ ರತ್ನ ಸರ್ದಾರ್ ವಲ್ಲಭಭಾಯಿ ಪಟೇಲ್‌ರನ್ನು ಇಂದು, ಎಂದೆಂದೂ ಸ್ಮರಿಸುತ್ತೇವೆ' ಎಂದು ಕಾಂಗ್ರೆಸ್ ಹೇಳಿದೆ.

'ಪ್ರಜಾಪ್ರಭುತ್ವದ ಸ್ತಂಭಗಳೇ ದುರ್ಬಲವಾಗುತ್ತಿರುವ ಈ ಸಮಯದಲ್ಲಿ ನಾವು ಸರ್ದಾರ್ ಪಟೇಲ್ ಅವರ ಕೊಡುಗೆಯನ್ನು ಸ್ಮರಿಸಬೇಕು. ಈ ಸ್ತಂಭಗಳನ್ನು ನಿರ್ಮಿಸಿದ ಕಾಂಗ್ರೆಸ್ ನಾಯಕರಲ್ಲಿ ಸರ್ದಾರ್ ಪಟೇಲ್ ಅವರ ಧ್ವನಿಯೂ ಪ್ರಮುಖವಾಗಿತ್ತು. ಪ್ರಜಾಪ್ರಭುತ್ವವನ್ನು ಕಾಪಾಡುವುದೇ ಸರ್ದಾರ್ ಪಟೇಲ್ ಅವರಿಗೆ ನೀಡಬಹುದಾದ ಗೌರವ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ಈ ಕುರಿತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರ ಕೂಡಾ ಪ್ರತಿಕ್ರಿಯೆ ನೀಡಿದ್ದಾರೆ. 'ರೈತರ ಮೇಲೆ ನಡೆಯುವ ದಬ್ಬಾಳಿಕೆ ವಿರುದ್ಧ ನ್ಯಾಯಕ್ಕಾಗಿ ಕಲ್ಲಿನಂತೆ ನಿಲ್ಲಲು ನಮಗೆ ಸರ್ದಾರ್ ಪಟೇಲ್ ಅವರ ಹೋರಾಟಗಳು ಸ್ಫೂರ್ತಿ ನೀಡುತ್ತವೆ. ಬರ್ದೋಲಿ ಸತ್ಯಾಗ್ರಹದ ವೇಳೆ ರೈತರ ಹಕ್ಕುಗಳು ಮತ್ತು ಆತ್ಮಗೌರವಕ್ಕಾಗಿ ದನಿ ಎತ್ತಿದ್ದರು' ಎಂದಿದ್ದಾರೆ.


ಧಾರವಾಡ ಸೃಜನಾ ರಂಗಮಂದಿರದಲ್ಲಿ ಭಾರತೀಯ ಸಂಗೀತ ವಿದ್ಯಾಲಯದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ವೃಂದಾವನ ಸಂಗೀತ ಕಾರ್ಯಕ್ರಮದಲ್ಲಿ ಪಂ.ರಾಕೇಶ ಚೌರಾಸಿಯಾ ಕೊಳಲು ವಾದನ ಪ್ರಸ್ತುತಪಡಿಸಿದರು. ಪಂ.ರವೀಂದ್ರ ಯಾವಗಲ್ ತಬಲಾ ಸಾಥ್ ನೀಡಿದರು ಪ್ರಜಾವಾಣಿ ಚಿತ್ರ

ಮತ್ತಿಬ್ಬರನ್ನು ಬಂಧಿಸಿದ ಎನ್‌ಐಎ

ಶ್ರೀನಗರ: ಭಯೋತ್ಪಾದನಾ ದಾಳಿಗೆ ಸಂಚು ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಮತ್ತಿಬ್ಬರು ಆರೋಪಿಗಳನ್ನು ಬಂಧಿಸಿದೆ.

ಜಮ್ಮು ಮತ್ತು ಕಾಶ್ಮೀರದ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ದಾಳಿ ನಡೆಸಿದ ಎನ್‌ಐಎ ಶನಿವಾರ ಇಶ್ಫಾಕ್ ವಾನಿ ಮತ್ತು ಉಮರ್ ಭಟ್ ಎಂಬುವರನ್ನು ಬಂಧಿಸಿದೆ. 'ಜಮ್ಮು ಮತ್ತು ಕಾಶ್ಮೀರ ಹಾಗೂ ಇತರ ಪ್ರಮುಖ ನಗರಗಳಲ್ಲಿ ಎಲ್‌ಇಟಿ ಜೆಇಎಂ, ಎಚ್‌ಎಂ, ಅಲ್ ಬದ್ರ ಮತ್ತು ಅವುಗಳ ಅಂಗಸಂಸ್ಥೆಗಳು ಭಯೋತ್ಪಾದನಾ ದಾಳಿಗೆ ಸಂಚು ರೂಪಿಸಿದ್ದವು' ಎಂದು ಎನ್‌ಐಎ ವಕ್ತಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಎನ್‌ಐಎ 25 ಆರೋಪಿಗಳನ್ನು ಬಂಧಿಸಲಾಗಿದೆ.

ಅಪರಾಧ ಕಾನೂನು ಅನ್ವಯಕ್ಕೆ ಅನುಮಾನವಷ್ಟೇ ಸಾಲದು: ಸುಪ್ರೀಂ

ಸತ್ಯಾಂಶ ಪರಿಶೀಲನೆ ಕೋರ್ಟ್‌ನ ಹೊಣೆ

ಅಪರಾಧ ಕಾನೂನು ಅನ್ವಯಿಸಲು ಕಾನೂನು ಉಲ್ಲಂಘಿಸಲಾಗಿದೆ ಎಂಬ ಅನುಮಾನ ಸಾಲದು, ಸತ್ಯಾಂಶಗಳನ್ನು ನ್ಯಾಯಾಧೀಶರು ಪರಿಶೀಲಿಸಬೇಕು ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಅಪರಾಧ ಕಾನೂನುಗಳನ್ನು ಅನ್ವಯಿಸುವ ಮೊದಲು, ಪ್ರಕರಣದ ವಾಸ್ತವ ಅಂಶಗಳನ್ನು ನ್ಯಾಯಾಧೀಶರು ಸರಿಯಾಗಿ ಪರಿಶೀಲನೆಗೆ ಒಳಪಡಿಸಬೇಕು. ಕಾನೂನು ಉಲ್ಲಂಘನೆಯಾಗಿದೆ ಎಂಬ ಅನುಮಾನವಷ್ಟೇ ಇದ್ದರೆ ಸಾಲದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಆರೋಪಗಳನ್ನು ಯಾವ ನೆಲೆಯಲ್ಲಿ ಮಾಡಲಾಗಿದೆ ಎಂಬುದನ್ನು ಪರಿಶೀಲನೆಗೆ ಒಳಪಡಿಸುವುದು ನ್ಯಾಯಾಧೀಶರ ಕರ್ತವ್ಯವಾಗಿದೆ. ಆರೋಪಿಯ ವಿಚಾರಣೆ ನಡೆಸಲು ತಕ್ಕಷ್ಟು ಸಾಕ್ಷ್ಯಗಳು ಇವೆಯೇ ಎಂಬುದನ್ನು ಅವರು ಪರಿಶೀಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಆರ್.ಎಸ್. ರೆಡ್ಡಿ ಮತ್ತು ಸಂಜೀವ್ ಖನ್ನಾ ಅವರಿದ್ದ ಪೀಠವು ಹೇಳಿದೆ.

ಕಂಪನಿಯೊಂದರ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಅಧಿಕಾರಿಯು ಅಪರಾಧ ಕೃತ್ಯದಲ್ಲಿ ಶಾಮೀಲಾಗಿದ್ದರೆ ಅಥವಾ ಅದಕ್ಕೆ ಸಮ್ಮತಿ ಸೂಚಿಸಿದ್ದರೆ, ಅಪರಾಧ ಕೃತ್ಯಕ್ಕೆ ಅವರನ್ನು 'ಹೊಣೆಗಾರ'ರನ್ನಾಗಿ (ಉದ್ಯೋಗಿಯ ಕೃತ್ಯಕ್ಕೆ ಉದ್ಯೋಗದಾತನನ್ನು ಹೊಣೆಗಾರನನ್ನಾಗಿ ಮಾಡುವ ಅವಕಾಶ) ಮಾಡಬಹುದು ಎಂದು ಪೀಠವು ಹೇಳಿದೆ.

'ಜವಾಬ್ದಾರಿಯಿಂದ ನಡೆದುಕೊಳ್ಳುವುದು, ಸತ್ಯಾಂಶ ಏನು ಎಂಬುದನ್ನು ದೃಢಪಡಿಸಿಕೊಳ್ಳುವುದು ನ್ಯಾಯಾಧೀಶರ ಕರ್ತವ್ಯ. ಕಾನೂನಿನ ಅಂಶಗಳನ್ನು ಸರಿಯಾಗಿ ಗ್ರಹಿಸದೆ, ಕಾನೂನನ್ನು ಅನ್ವಯಿಸುವುದರಿಂದ ಯಾವ ತಪ್ಪೂ ಮಾಡದ ವ್ಯಕ್ತಿಗಳು ಅನಗತ್ಯ ಸಂಕಷ್ಟಕ್ಕೆ ಒಳಗಾಗಬೇಕಾಗಬಹುದು' ಎಂದು ಪೀಠವು ವಿವರಿಸಿದೆ.

ನ್ಯಾಯಾಧೀಶರು ಯಾಂತ್ರಿಕವಾಗಿ ನೋಟಿಸ್ ಜಾರಿ ಮಾಡಬಾರದು ಎಂದೂ ಪೀಠವು ಹೇಳಿದೆ.

ಡೇಲ್ ಡಿಸೋಜಾ ಎಂಬವರು, ಮಧ್ಯ ಪ್ರದೇಶ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ವಿಚಾರಣೆ ನಡೆಸಿತು.

ಎಸ್‌ಬಿಐನ ಎಟಿಎಂ ಘಟಕಗಳ ನಿರ್ವಹಣೆ ಮತ್ತು ರಿಪೇರಿ ಗುತ್ತಿಗೆಯನ್ನು ಎನ್‌ಸಿಆರ್ ಕಾರ್ಪೊರೇಷನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಪಡೆದುಕೊಂಡಿತ್ತು. ಈ ಗುತ್ತಿಗೆಯನ್ನು ಆ ಕಂಪನಿಯು, ರೈಟರ್ ಸೇಫ್‌ಗಾರ್ಡ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉಪಗುತ್ತಿಗೆ ನೀಡಿತ್ತು.

'ರೈಟರ್ ಕಂಪನಿಯು ಈ ಗುತ್ತಿಗೆ ನಿರ್ವಹಣೆ ವೇಳೆ ಕನಿಷ್ಠ ವೇತನ ಕಾಯ್ದೆ ಮತ್ತು ಕನಿಷ್ಠ ವೇತನ ನಿಯಮಗಳನ್ನು ಉಲ್ಲಂಘಿಸಿದೆ' ಎಂದು ಮಧ್ಯಪ್ರದೇಶದ ಕಾರ್ಮಿಕ ಕಾನೂನು ಜಾರಿ ಅಧಿಕಾರಿಯು ರೈಟರ್ ಕಂಪನಿಗೆ ನೋಟಿಸ್ ಜಾರಿ ಮಾಡಿದ್ದರು. ಈ ನೋಟಿಸ್ ಜಾರಿ ಮಾಡಿದ ದಿನವೇ, ರೈಟರ್ ಕಂಪನಿಯ ನಿರ್ದೇಶಕರ ಡೇಲ್ ಡಿಸೋಜಾ ವಿರುದ್ಧ ಮಧ್ಯಪ್ರದೇಶದ ಸಾಗರ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು.

ವಿಚಾರಣೆಗೆ ಹಾಜರಾಗುವಂತೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಡಿಸೋಜಾ ಅವರಿಗೆ ನೋಟಿಸ್ ಜಾರಿ ಮಾಡಿತ್ತು. ಈ ನೋಟಿಸ್ ವಿರುದ್ಧ ವಿರುದ್ಧ ಡಿಸೋಜಾ ಅವರು ಮಧ್ಯಪ್ರದೇಶ ಹೈಕೋರ್ಟ್ ಮೆಟ್ಟಿಲೇರಿದ್ದರು. ತಮ್ಮ ವಿರುದ್ಧದ ಪ್ರಕರಣವನ್ನು ರದ್ದುಪಡಿಸಬೇಕು ಎಂದು ಕೋರಿದ್ದರು. ಆದರೆ ಅವರ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತ್ತು. ಹೈಕೋರ್ಟ್‌ನ ಆದೇಶದ ವಿರುದ್ಧ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.


ಸೋಮವಾರ, ನವೆಂಬರ್ 1, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚುನಾವಣಾ ರ್‍ಯಾಲಿ

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಉತ್ತರಪ್ರದೇಶದ ಗೋರಖ್‌ಪುರದಲ್ಲಿ ಭಾನುವಾರ ನಡೆದ 'ಕಾಂಗ್ರೆಸ್ ಪ್ರತಿಜ್ಞಾ ರ್‍ಯಾಲಿ'ಯನ್ನು ಉದ್ದೇಶಿಸಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಮಾತನಾಡಿದರು





ಪ್ರಜಾವಾಣಿ

ಅಪ್ಪು ಇನ್ನು ಬರೀ ನೆನಪು

ಸೋಮವಾರ • ನವೆಂಬರ್ 1, 2021



ಕಂಠೀರವ ಬಳಿ ಅಭಿಮಾನಿಗಳ ಸಾಗರ • ಅಪ್ಪುವನ್ನು ನೆನೆದು ತಾಳ್ಮೆ ಸಹನೆ ತೋರಿದ ಅಭಿಮಾನಿಗಳು

ಯೋಗವು ಒಮ್ಮೆ ಬರುವುದು ನಮಗೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾತಿನ ತುಂಬ, ಮನಸ್ಸಿನ ತುಂಬ, ಎದೆಯ ತುಂಬ ಪ್ರೀತಿ ಹೊತ್ತು ನೆಚ್ಚಿನ ಅಪ್ಪುವಿನ ಅಂತಿಮ ದರ್ಶನ ಪಡೆಯಲು ಕಂಠೀರವ ಸ್ಟುಡಿಯೊ ಬಳಿ ಅಭಿಮಾನಿಗಳ ಸಾಗರವೇ ಭಾನುವಾರ ನಸುಕಿನಲ್ಲೇ ಜಮಾಯಿಸಿತ್ತು.

ಅಹಿತಕರ ಘಟನೆಗಳನ್ನು ತಡೆಯುವ ಉದ್ದೇಶದಿಂದ ಮೆರವಣಿಗೆ ಇಲ್ಲದೇ ಪುನೀತ್ ಅವರ ಪಾರ್ಥಿವ ಶರೀರವನ್ನು ಕಂಠೀರವ ಸ್ಟುಡಿಯೊಗೆ ತರಲಾಗಿತ್ತು. ಇದು ಸರ್ಕಾರ ಹಾಗೂ ಕುಟುಂಬ ಸದಸ್ಯರ ನಿರ್ಣಯವಾಗಿತ್ತು. ಈ ನಿರ್ಧಾರ ಅಭಿಮಾನಿಗಳಲ್ಲಿ ಆಕ್ರೋಶ ತರಿಸಿದರೂ, ಅಪ್ಪುವನ್ನು ನೆನೆದು ಅದನ್ನು ತಣ್ಣಗಾಗಿಸಿದ್ದರು. ಕಂಠೀರವ ಸ್ಟುಡಿಯೊ ಹೊರಗಡೆ ನೆರೆದಿದ್ದ ಸಾವಿರಾರು ಅಭಿಮಾನಿಗಳ ಅಪ್ಪು..ಅಪ್ಪು.. ಎಂಬ ಜೈಕಾರವೇ ಇದಕ್ಕೆ ಸಾಕ್ಷಿಯಾಗಿತ್ತು. ಒಮ್ಮೆಯಾದರೂ ಇದನ್ನು ಕೇಳಿ ಅಪ್ಪು ಎದ್ದು ಬರಬಾರದೇ ಎನ್ನುವ ಆಸೆ ಅಷ್ಟೂ ಜನರಲ್ಲಿತ್ತು.

ಬೇರೆ ದಾರಿಯಿಲ್ಲದೇ ಸ್ಟುಡಿಯೊ ಹೊರಗಡೆ ಅಳವಡಿಸಿದ್ದ ಬೃಹತ್ ಎಲ್ಇಡಿ ಪರದೆಗಳಲ್ಲಿ ಅಪ್ಪುವಿನ ಅಂತ್ಯಕ್ರಿಯೆಯನ್ನು ನೋಡಿ ಒಬ್ಬರಿಗೊಬ್ಬರು ಸಮಾಧಾನ ಮಾಡಿಕೊಂಡರು.

ಅದೆಷ್ಟೋ ಅಭಿಮಾನಿಗಳು ಕೊನೆಯ ದರ್ಶನವೂ ಸಿಗಲಿಲ್ಲವಲ್ಲ ಎಂದು ಕಣ್ಣೀರು ಹಾಕಿದರು. ಮೆರವಣಿಗೆಯಲ್ಲಿ ಅಪ್ಪುವಿನ ಮುಖವನ್ನು ಕೊನೆಯ ಬಾರಿ ಒಮ್ಮೆ ನೋಡಬಹುದು ಎಂದು ಆಗಮಿಸಿದ್ದ ಅಭಿಮಾನಿಗಳ ನಿರಾಸೆಯ ಅಳಲನ್ನೂ ಕೇಳಲು ಕಿವಿಯಿಲ್ಲದಾಗಿತ್ತು. ಕುಟುಂಬಸ್ಥರು ಇವತ್ತೇ ಹಾಲು ತುಪ್ಪ ಬಿಡಬಹುದು, ನಂತರ ಸಮಾಧಿ ದರ್ಶನಕ್ಕೆ ಅವಕಾಶ ನೀಡಬಹುದು ಎಂದು ನೂರಾರು ಅಭಿಮಾನಿಗಳು ದೂರದ ಊರಿನಿಂದಲೂ ಭಾನುವಾರ ಬೆಳಗ್ಗೆ ಬೆಂಗಳೂರಿಗೆ ಆಗಮಿಸಿದ್ದರು. 'ಮಂಗಳವಾರದವರೆಗೂ ಯಾರನ್ನೂ ಬಿಡುವುದಿಲ್ಲ' ಎಂದು ಪೊಲೀಸರು ಗದರಿದರೆ, ಅಪ್ಪು ಪಾರ್ಥಿವ ಶರೀರವನ್ನೇನೋ ನೋಡಲು ಆಗಿಲ್ಲ ಸಮಾಧಿ ನೋಡಾಕ್ಕಾದ್ರೂ ಬಿಡಿ ಎಂದು ಗೋಗರೆದರು. ಈಗ ಸಿಗದ ಯೋಗ ಮುಂದಿನ ದಿನಗಳಲ್ಲಾದರೂ ಸಿಗಲಿ ಎಂದು ಆಶಿಸಿದರು.

ಅಪ್ಪು ಸಂಪಾದಿಸಿದ್ದ ಆಸ್ತಿ ಕಂಠೀರವ ಸ್ಟುಡಿಯೊ ಹೊರಭಾಗದಲ್ಲಿ ಭಾನುವಾರ ಸಂಜೆಯವರೆಗೂ ಜಮಾಯಿಸುತ್ತಿತ್ತು. ಕೆಲ ಕಾಲ ಗೊರಗುಂಟೆಪಾಳ್ಯ–ನಾಯಂಡಹಳ್ಳಿ ಸಂಪರ್ಕಿಸುವ ಹೊರವರ್ತುಲ ರಸ್ತೆಯಲ್ಲಿ ಸಂಚಾರ ನಿರ್ಬಂಧಿಸಲಾಗಿತ್ತು. ತಮ್ಮ ಅಭಿಮಾನವನ್ನು ಪ್ರದರ್ಶಿಸಿದ ಅಭಿಮಾನಿಗಳು ಪುನೀತ್ ಕಟೌಟ್‌ಗೆ ಹಾಲಿನ ಅಭಿಷೇಕವನ್ನೇ ಮಾಡಿ ಜೈಕಾರ ಹಾಕಿದರು. ಎದೆಯ ಮೇಲೆ ಪುನೀತ್ ಟ್ಯಾಟೂ ಹಾಕಿಸಿಕೊಂಡಿದ್ದ ವ್ಯಕ್ತಿ ಅದನ್ನು ಅಪ್ಪುಗೆಯಿಂದ ಪ್ರದರ್ಶಿಸಿದಾಗ ನೆರೆದಿದ್ದ ಅಭಿಮಾನಿಗಳು ಆತನ ಎದೆಗೇ ಹಾಲಿನ ಅಭಿಷೇಕ ಮಾಡಿ ತಮ್ಮ ಪ್ರೀತಿಯನ್ನು ಪ್ರದರ್ಶಿಸಿದರು.



ಬೆಂಗಳೂರಿನ ಕಂಠೀರವ ಸ್ಟುಡಿಯೊ ಆವರಣದಲ್ಲಿ ಭಾನುವಾರ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಅಂತಿಮ ವಿಧಿ ವಿಧಾನ ನೆರವೇರಿಸುವ ಸಂದರ್ಭದಲ್ಲಿ ಭಾವುಕರಾದ ಪತ್ನಿ ಅಶ್ವಿನಿ ಹಾಗೂ ಹಿರಿಯ ಪುತ್ರಿ ಧೃತಿ ಮತ್ತು ಕಿರಿಯ ಪುತ್ರಿ ವಂದಿತಾ –ಪ್ರಜಾವಾಣಿ ಚಿತ್ರ/ ರಂಜು ಪಿ.

60-70 ವರ್ಷದಲ್ಲಿ ಮಾಡಬೇಕಿದ್ದ ಹೆಸರನ್ನು ಅಪ್ಪು 46 ವರ್ಷದೊಳಗೆ ಮಾಡಿ ನೆನಪಾಗಿ ಉಳಿದುಬಿಟ್ಟ. ಅಪ್ಪುವಿಗೆ ನಾವು ಹಾಲು–ತುಪ್ಪ ಬಿಟ್ಟ ಕೂಡಲೇ ಅಭಿಮಾನಿಗಳಿಗೂ ಸಮಾಧಿ ದರ್ಶನಕ್ಕೆ ಅವಕಾಶ ನೀಡುತ್ತೇವೆ.

ರಾಘವೇಂದ್ರ ರಾಜ್‌ಕುಮಾರ್, ನಟ

ಸರ್ಕಾರಕ್ಕೆ ಶಿವರಾಜ್‌ಕುಮಾರ್ ಕೃತಜ್ಞತೆ

'ಸರ್ಕಾರ, ಪೊಲೀಸ್ ಸಿಬ್ಬಂದಿ ಎಲ್ಲ ವ್ಯವಸ್ಥೆಯನ್ನು ಚೆನ್ನಾಗಿ ಮಾಡಿದ್ದರು. ಮುಖ್ಯಮಂತ್ರಿ ಬೊಮ್ಮಾಯಿಯವರಿಗೆ ಧನ್ಯವಾದ. ನಮ್ಮ ಕುಟುಂಬದ ಮೇಲೆ ಇಷ್ಟೊಂದು ಅಭಿಮಾನ ಇಟ್ಟು ಅಚ್ಚುಕಟ್ಟಿನ ವ್ಯವಸ್ಥೆಯನ್ನು ಸರ್ಕಾರ ಮಾಡಿತ್ತು. ಅಪ್ಪಾಜಿ ನಿಧನರಾಗಿದ್ದ ಸಂದರ್ಭದಲ್ಲಿ ಬಹಳ ಕಷ್ಟವಾಗಿತ್ತು. ನಿಮ್ಮ ಅಪ್ಪುವನ್ನು ನೀವು ನೋಡದೆ ಮತ್ತಿನ್ಯಾರು ನೋಡಬೇಕು. ಖಂಡಿತವಾಗಿಯೂ ಹಾಲು–ತುಪ್ಪ ಆದ ಕೂಡಲೇ ಸಮಾಧಿ ದರ್ಶನಕ್ಕೆ ಸಾರ್ವಜನಿಕರಿಗೆ ಅವಕಾಶ ನೀಡುವ ಬಗ್ಗೆ ಮುಖ್ಯಮಂತ್ರಿಯವರ ಜೊತೆ ಮಾತನಾಡುತ್ತೇನೆ. ಅಭಿಮಾನಿಗಳ ಪ್ರೀತಿ ವಿಶ್ವಾಸಕ್ಕೆ ಎಷ್ಟೇ ಬೆಲೆ ಕಟ್ಟಿದರೂ ಕಡಿಮೆಯೇ. ನಿಮ್ಮ ಪ್ರೀತಿಗೆ ನಾವು ಚಿರಋಣಿ' ಎಂದು ಹೇಳಿದರು

ದೊಡ್ಡ ಮನೆಯ ದೊಡ್ಡ ಗುಣ

ನಟ ಶಿವರಾಜ್ ಕುಮಾರ್ ಸರ್ಕಾರಕ್ಕೆ ಹಾಗೂ ವೈಯಕ್ತಿಕವಾಗಿ ಮುಖ್ಯಮಂತ್ರಿ ಅವರಿಗೆ ಕೃತಜ್ಞತೆ ಸಲ್ಲಿಸಿದ ಕುರಿತು ಮಾತನಾಡಿದ ಸಿ.ಎಂ ಬಸವರಾಜ ಬೊಮ್ಮಾಯಿ ಅವರು, 'ಇಂಥ ಘಟನೆಗಳು ಜರುಗಿದಾಗ ಶಾಂತಿ ಸುವ್ಯವಸ್ಥೆ ಕಾಪಾಡುವುದು, ವ್ಯವಸ್ಥಿತವಾಗಿ ಜನರಿಗೆ ಅನುಕೂಲ ಕಲ್ಪಿಸುವುದು, ಸುಸೂತ್ರವಾಗಿ ಎಲ್ಲವನ್ನೂ ನಡೆಸಿಕೊಡುವುದು ಸರ್ಕಾರದ ಕರ್ತವ್ಯ . ಆ ಜವಾಬ್ದಾರಿಯನ್ನು ನಿರ್ವಹಿಸಿದ್ದೇವೆ ಎಂದರು. ಸರ್ಕಾರಕ್ಕೆ ಅವರ ಕೃತಜ್ಞಾಪೂರ್ವಕ ಮಾತುಗಳು ದೊಡ್ಡ ಮನೆಯ ದೊಡ್ಡ ಗುಣ' ಎಂದರು.

ಮೌನವೇ ಮಾತಾದಾಗ!

ಪುನೀತ್ ಅಂತ್ಯಸಂಸ್ಕಾರದ ಸಂದರ್ಭದಲ್ಲಿ ಚಿತ್ರರಂಗದ ದಂಡೇ ಅಪ್ಪುವಿನ ಬಳಿಯಲ್ಲಿತ್ತು. ಆದರೆ ಪುನೀತ್ ನಗು ಮಾತ್ರ ಅವರ ಮುಂದಿರಲಿಲ್ಲ. ಕುಟುಂಬದ ಸದಸ್ಯರೇ ಆದ ವಿಜಯರಾಘವೇಂದ್ರ ಹಾಗೂ ಶ್ರೀಮುರುಳಿ ಶುಕ್ರವಾರದಿಂದಲೂ ಅಪ್ಪುವಿನ ಜೊತೆಗೇ ಹೆಜ್ಜೆ ಹಾಕಿದ್ದರು. ನಟರಾದ ರವಿಚಂದ್ರನ್, ಸುದೀಪ್, ಉಪೇಂದ್ರ, ಜಗ್ಗೇಶ್, ಯಶ್, ಅಭಿಷೇಕ್ ಅಂಬರೀಷ್, ಡಾಲಿ ಧನಂಜಯ್, ಗಣೇಶ್ ಇನ್ನೂ ಈ ಆಘಾತದಿಂದ ಹೊರಬಂದಂತಿರಲಿಲ್ಲ. ನಟಿಯರಾದ ಉಮಾಶ್ರೀ, ಶ್ರುತಿ, ರಚಿತಾ ರಾಮ್, ರಶ್ಮಿಕಾ ಮಂದಣ್ಣ, ಸುಧಾರಾಣಿ, ಅನು ಪ್ರಭಾಕರ್ ಎಲ್ಲರೂ ಕಣ್ಣೀರ ಕಡಲಲ್ಲಿ ಮುಳುಗಿದ್ದರು.



ಪುನೀತ್ ರಾಜ್‌ಕುಮಾರ್ ಜೊತೆ ಸುದೀಪ್

'ನಮ್ಮ ನಕ್ಷತ್ರ ಇಂದು ಗಗನದ ಪಾಲಾಗಿದೆ'

ಪುನೀತ್ ರಾಜ್‌ಕುಮಾರ್ ಜೊತೆಗೆ ಬಾಲ್ಯದಲ್ಲಿ ಒಟ್ಟಿಗೇ ಆಟವಾಡಿದ್ದ ಸಿಹಿನೆನಪುಗಳಿಂದ ಹಿಡಿದು ಚಿತ್ರರಂಗದಲ್ಲಿ ಜೊತೆಯಾಗಿ ಕಾರ್ಯನಿರ್ವಹಿಸಿದ ಅನುಭವದ ಕುರಿತು ನಟ ಸುದೀಪ್ ಶನಿವಾರ ಭಾವುಕರಾಗಿ ಪತ್ರದ ಮುಖೇನ ತಮ್ಮ ನೋವು ಹಂಚಿಕೊಂಡಿದ್ದರು.

ಭಾನುವಾರ ಅಂತ್ಯಕ್ರಿಯೆಯ ಬಳಿಕ ಮತ್ತೆ ನೆಚ್ಚಿನ ಅಪ್ಪುವನ್ನು ನೆನಪಿಸಿಕೊಂಡು ಟ್ವೀಟ್ ಮಾಡಿದ್ದಾರೆ ಸುದೀಪ್. ಸುದೀಪ್ ಭಾವನಾತ್ಮಕ ನುಡಿ ಹೀಗಿದೆ...

'ಎಲ್ಲವೂ ಮುಗಿಯಿತು. ಮತ್ತೆ ಸಾಮಾನ್ಯ ಬದುಕಿಗೆ ಮರಳಲು ಹಲವು ದಿನಗಳೇ ಬೇಕು. ನೀವು ಅಗಲಿರುವುದು ಕೇವಲ ನಷ್ಟವಷ್ಟೇ ಅಲ್ಲ, ಇಡೀ ಚಿತ್ರರಂಗಕ್ಕೆ ಆದ ಆಘಾತವಿದು. ಇದರಿಂದ ಹೊರಬರಲೇಬೇಕು. ಈ ದಿನ ನಮ್ಮ ಜೀವನದ ಅತ್ಯಂತ ಸುಂದರವಾದ ಒಂದು ಅಧ್ಯಾಯ ಅಂತ್ಯಗೊಂಡಿದೆ' ಎಂದಿದ್ದಾರೆ.

'ಅಂತ್ಯಕ್ರಿಯೆಯಲ್ಲಿ ಕುಳಿತಿರುವಾಗ, ಧೃತಿ ಹಾಗೂ ವಂದಿತಾ ಅವರ ಸಂಕಟ, ದುಃಖ ಹಾಗೂ ಮನಃಸ್ಥಿತಿಯ ಬಗ್ಗೆ ಯೋಚಿಸುತ್ತಿದ್ದೆ. ಅಲ್ಲಿ ನೆರೆದಿದ್ದ ಎಲ್ಲ ಹಿರಿಯರ ಸಂಕಟವನ್ನು ಯೋಚಿಸಿದಾಗ ಒಂದು ಕ್ಷಣ ಮನಸ್ಸಿನೊಳಗೆ ಯೋಚನೆಗಳ ಸರಮಾಲೆಯೇ ಹರಿಯಿತು. ಅಪ್ಪು ಯಾವತ್ತೂ ಬಹಳ ಪ್ರೀತಿಸಲ್ಪಡುತ್ತಿದ್ದ ವ್ಯಕ್ತಿಯಾಗಿದ್ದ. ಭಾನುವಾರ ಮುಂಜಾನೆ ಅಪ್ಪುವನ್ನು ಅವರ ಅಪ್ಪ–ಅಮ್ಮನ ಪಕ್ಕದಲ್ಲೇ ಸಮಾಧಿ ಮಾಡಿದ ಬಳಿಕ ನಾನಲ್ಲಿಂದ ಹೊರಟಾಗ ನನ್ನ ಮನಸ್ಸಲ್ಲಿ ಮೂಡಿದ ವಿಚಾರ ಇಷ್ಟೇ. 'ಪುನೀತ್ ರಾಜಗಾಂಭೀರ್ಯದಲ್ಲೇ ಜನಿಸಿ, ಹಾಗೆಯೇ ಬೆಳೆದು, ಅದೇ ರೀತಿ ಬದುಕಿ ಇದೀಗ ಹಾಗೆಯೇ ಹೊರಟಿದ್ದಾರೆ'.

'ನಮ್ಮ ನಕ್ಷತ್ರ ಇಂದು ಆಕಾಶದ ಪಾಲಾಗಿದೆ. ರಾತ್ರಿ ಆಕಾಶ ನೋಡುವಾಗ ಎಂದಿನಂತೆ ನೀವು ಹೊಳೆಯುತ್ತೀರಿ, ಇತರೆ ನಕ್ಷತ್ರಗಳಿಗಿಂತ ದುಪ್ಪಟ್ಟಾಗಿ'.

ಪೂರ್ವ ನಿಗದಿಯಂತೆ ನಡೆಯದ ಮೆರವಣಿಗೆ; ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ

ಅಭಿಮಾನಿಗಳಿಲ್ಲದೆ ಸಾಗಿದ ಅಂತಿಮ ಯಾತ್ರೆ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಡಣದಲ್ಲಿನ್ನೂ ಸೂರ್ಯ ಉದಯಿಸಿರಲಿಲ್ಲ. ಹೊರಗೆಲ್ಲಾ ಕಗ್ಗತ್ತಲು ಆವರಿಸಿದ್ದರಿಂದ ಹಕ್ಕಿಗಳೂ ಗಾಢ ನಿದ್ರೆಯಲ್ಲೇ ಇದ್ದವು. ಹೀಗಿದ್ದರೂ ಕಂಠೀರವ ಕ್ರೀಡಾಂಗಣದ ಸುತ್ತಲೂ ನೆರೆದಿದ್ದ ಅಭಿಮಾನಿಗಳ ಕಲರವ ಕಡಿಮೆಯಾಗಿರಲೇ ಇಲ್ಲ.

ದೂರದೂರುಗಳಿಂದ ಬಂದಿದ್ದ ಸಾವಿರಾರು ಮಂದಿ ನಡುರಾತ್ರಿಯಲ್ಲೂ ಸರತಿ ಸಾಲಿನಲ್ಲಿ ಸಾಗಿ ಪ್ರೀತಿಯ ಅಪ್ಪುವಿನ ಪಾರ್ಥಿವ ಶರೀರ ಕಂಡು 'ಪುನೀತ'ರಾಗುತ್ತಿದ್ದರು. ಬೆಳಿಗ್ಗೆ 5.30 ರಿಂದ 6.30ರ ವೇಳೆಗೆ ಪಾರ್ಥಿವ ಶರೀರದ ಅಂತಿಮ ಯಾತ್ರೆ ಶುರುವಾಗಲಿದ್ದು, ಅಲ್ಲಿಯವರೆಗೂ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರವೇ ಘೋಷಿಸಿದ್ದರು. ಹೀಗಾಗಿ ಅಭಿಮಾನಿಗಳು ತಂಡೋಪತಂಡವಾಗಿ ಕ್ರೀಡಾಂಗಣದತ್ತ ಧಾವಿಸುತ್ತಿದ್ದರು. ಹಾಗೆ ಬಂದ ಕೆಲವರಿಗೆ ನಿರಾಸೆಯೂ ಕಾಡಿತು. ಏಕೆಂದರೆ ಬೆಳಿಗ್ಗೆ 3.50ಕ್ಕೆ ಕ್ರೀಡಾಂಗಣದ ನಾಲ್ಕೂ ದ್ವಾರಗಳನ್ನೂ ಮುಚ್ಚಿ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಯಿತು.

ಮುಖ್ಯಮಂತ್ರಿಯವರು 4.35ಕ್ಕೆ ಕ್ರೀಡಾಂಗಣದಲ್ಲಿ ನಿರ್ಮಿಸಲಾಗಿದ್ದ ಶೆಡ್ ಬಳಿ ಬಂದು ಪಾರ್ಥಿವ ಶರೀರದ ದರ್ಶನ ಪಡೆದರು. ಬಳಿಕ ಗೀತಾ ಶಿವರಾಜ್‌ಕುಮಾರ್, ಪುನೀತ್ ಪತ್ನಿ ಅಶ್ವಿನಿ, ಪುತ್ರಿಯರಾದ ಧೃತಿ ಮತ್ತು ವಂದಿತಾ ಅವರು ಪಾರ್ಥಿವ ಶರೀರಕ್ಕೆ ನಮಿಸಿದರು. ಈ ವೇಳೆ ಅವರೆಲ್ಲಾ ಗದ್ಗದಿತರಾದರು. ನಂತರ ಪಾರ್ಥಿವ ಶರೀರವಿದ್ದ ಗಾಜಿನ ಪೆಟ್ಟಿಗೆಯನ್ನು ಹೂವುಗಳಿಂದ ಅಲಂಕರಿಸಲಾಗಿದ್ದ ತೆರೆದ ವಾಹನದಲ್ಲಿ ಇರಿಸಲಾಯಿತು. ಆಗ ನೆರೆದಿದ್ದವರ ಆಕ್ರಂದನ ಮುಗಿಲು ಮುಟ್ಟಿತು. ಅಪ್ಪು.. ಅಪ್ಪು.. ಅಪ್ಪು.. ಪವರ್ ಸ್ಟಾರ್‌ಗೆ ಜೈ.. ಹೀಗೆ ಹಲವು ಜಯಘೋಷಗಳು ಮಾರ್ದನಿಸಿದವು.

ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅವರ ಪತ್ನಿ ಮಂಗಳಾ, ಪುತ್ರರಾದ ವಿನಯ್ ಹಾಗೂ ಯುವ ರಾಜ್‌ಕುಮಾರ್ ಅವರು ವಾಹನವೇರಿ ಕುಳಿತರು. ಸುರಪುರ ಶಾಸಕ ರಾಜುಗೌಡ ಹಾಗೂ ಪುನೀತ್ ಗೆಳೆಯರು ವಾಹನದಲ್ಲಿದ್ದರು.

ಪೊಲೀಸರ ಸರ್ಪಗಾವಲಿನಲ್ಲಿ ಬೆಳಿಗ್ಗೆ 5ಕ್ಕೆ ಕಂಠೀರವ ಕ್ರೀಡಾಂಗಣದಿಂದ ವಾಹನ ಹೊರಡುತ್ತಿದ್ದಂತೆ ಅಲ್ಲಿ ನೆರೆದಿದ್ದ ಅಭಿಮಾನಿಗಳು ಅದರ ಹಿಂದೆ ಓಡುತ್ತಿದ್ದ ದೃಶ್ಯ ಕಂಡುಬಂತು. ಅಂತಿಮ ಯಾತ್ರೆ ಹೊರಟ ಮಾರ್ಗದ ಕೆಲ ಜಾಗಗಳಲ್ಲಿ ಅಭಿಮಾನಿಗಳು ಕಾದು ಕುಳಿತಿದ್ದರು. ಅವರು ದೂರದಿಂದಲೇ ಪುನೀತ್ ಪಾರ್ಥಿವ ಶರೀರ ಕಣ್ತುಂಬಿಕೊಂಡರು. ಬೆಳಿಗ್ಗೆ 5.50ಕ್ಕೆ ವಾಹನ ಕಂಠೀರವ ಸ್ಟುಡಿಯೊ ತಲುಪಿತ್ತು.

ಬೆಳಗು ಹರಿದ ಬಳಿಕ ಅಂತಿಮ ಯಾತ್ರೆ ಆರಂಭಿಸಿದರೆ ಜನದಟ್ಟಣೆ ಉಂಟಾಗಬಹುದು. ಅವರನ್ನು ನಿಯಂತ್ರಿಸುವುದೂ ಸವಾಲಾಗಿ ಪರಿಣಮಿಸಬಹುದು ಎಂಬುದನ್ನು ಅರಿತಿದ್ದ ಮುಖ್ಯಮಂತ್ರಿಯವರು, ರಾಜ್ ಕುಟುಂಬದ ಸದಸ್ಯರ ಜೊತೆ ಚರ್ಚಿಸಿದ ನಂತರ ನಿಗದಿತ ಅವಧಿಗೆ ಮುನ್ನವೇ ಅಂತಿಮ ಯಾತ್ರೆ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದರು.

ಡಾ.ರಾಜ್‌ಕುಮಾರ್ ಅವರ ಅಂತಿಮ ಯಾತ್ರೆಯ ವೇಳೆ ಹಲವು ಅಹಿತಕರ ಘಟನೆಗಳು ನಡೆದಿದ್ದವು. ಆ ಕಹಿ ಘಟನೆಗಳು ಮರುಕಳಿಸಬಾರದು ಎಂಬ ಕಾರಣದಿಂದ ಯಾತ್ರೆಯ ಸಮಯವನ್ನು ಬದಲಾಯಿಸಲಾಯಿತು ಎಂದು ಸರ್ಕಾರದ ಮೂಲಗಳು ತಿಳಿಸಿವೆ.



ಎದೆಯ ಮೇಲೆ ಪುನೀತ್ ಟ್ಯಾಟೂ ಹಾಕಿಸಿಕೊಂಡಿದ್ದ ವ್ಯಕ್ತಿ ಅದನ್ನು ಪ್ರದರ್ಶಿಸಿದಾಗ ಬೆಂಗಳೂರಿನ ಕಂಠೀರವ ಸ್ಟುಡಿಯೊ ಬಳಿ ಭಾನುವಾರ ನೆರೆದಿದ್ದ ಅಭಿಮಾನಿಗಳು ಆತನ ಎದೆಗೇ ಹಾಲಿನ ಅಭಿಷೇಕ ಮಾಡಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

'ರಾಜಕುಮಾರ'ನ ಹಣೆಗೆ ಮುತ್ತಿಟ್ಟ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾವುಕತೆಯಿಂದ ಪುನೀತ್ ರಾಜ್‌ಕುಮಾರ್ ಅವರ ಪಾರ್ಥಿವ ಶರೀರವನ್ನು ಬಾರದ ಲೋಕಕ್ಕೆ ಬೀಳ್ಕೊಟ್ಟರು.

ಕಂಠೀರವ ಕ್ರೀಡಾಂಗಣದಲ್ಲಿ ಇಡಲಾಗಿದ್ದ ಪುನೀತ್ ಮೃತದೇಹವಿದ್ದ ಗಾಜಿನ ಪೆಟ್ಟಿಗೆ ಬಳಿ ಬರುವ ಮುನ್ನ ತಾವು ಹಾಕಿಕೊಂಡಿದ್ದ ಚಪ್ಪಲಿಗಳನ್ನು ದೂರದಲ್ಲೇ ಕಳಚಿದ ಅವರು ನಂತರ ತದೇಕಚಿತ್ತದಿಂದ ಅಪ್ಪುವಿನ ಮೊಗವನ್ನು ನೋಡಿ ಕೈಮುಗಿದರು.

ಅಲ್ಲೆ ನಿಂತಿದ್ದ ಶಾಸಕ ರಾಜುಗೌಡಗೆ ಶವಪೆಟ್ಟಿಗೆ ತೆರೆಯುವಂತೆ ಸೂಚಿಸಿದ ಅವರು ಪುನೀತ್ ಹಣೆಗೆ ಎರಡು ಬಾರಿ ಮುತ್ತಿಟ್ಟರು. ಬಲಗೈಯಿಂದ ತಲೆಯನ್ನು ನೇವರಿಸಿದರು. ಎರಡೂ ಕೈಗಳಿಂದ ಎದೆಯನ್ನು ಸ್ಪರ್ಶಿಸಿದರು. ಬಳಿಕ ಮತ್ತೆ ತಲೆ ನೇವರಿಸಿದರು. ಎರಡೂ ಕೈಗಳಿಂದ ಕೆನ್ನೆಯನ್ನು ಸವರುವ ವೇಳೆ ಗದ್ಗದಿತರಾದರು. ಅವರಿಗೆ ಅರಿವಿಲ್ಲದ ಹಾಗೆಯೇ ಕಣ್ಣುಗಳು ಹನಿಗೂಡಿದ್ದವು. ಬಳಿಕ ಕೈಜೋಡಿಸಿ ಮತ್ತೊಮ್ಮೆ ಪಾರ್ಥಿವ ಶರೀರಕ್ಕೆ ನಮಿಸಿದರು.

ಅಲ್ಲಿಂದ ನೇರವಾಗಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಬಳಿ ಹೋಗಿ ಅವರಿಗೆ ಧೈರ್ಯ ಹೇಳಿದರು. ಆ ದೃಶ್ಯ ನೋಡುಗರ ಕಣ್ಣುಗಳನ್ನು ತೇವಗೊಳಿಸುವಂತಿತ್ತು.



ಪುನೀತ್ ಹಣೆಗೆ ಮುತ್ತಿಟ್ಟ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

'ಅಧಿಕಾರಿಗಳ ಕಾರ್ಯ ಅಭಿನಂದನೆಗೆ ಅರ್ಹ'

'ಪುನೀತ್ ರಾಜ್‌ಕುಮಾರ್ ಪಾರ್ಥಿವ ಶರೀರದ ಅಂತಿಮ ದರ್ಶನ ಮತ್ತು ಅಂತ್ಯಸಂಸ್ಕಾರದ ಸಂದರ್ಭದಲ್ಲಿ ಪೊಲೀಸ್ ಇಲಾಖೆ, ಬಿಬಿಎಂಪಿ, ಕಂದಾಯ ಇಲಾಖೆ ಅಧಿಕಾರಿಗಳ ಕಾರ್ಯ ಅಭಿನಂದನೆಗೆ ಅರ್ಹ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಸಾರ್ವಜನಿಕರಿಗೆ ಮೂರು ದಿನ ಪುನೀತ್ ಪಾರ್ಥಿವ ಶರೀರದ ದರ್ಶನ ವ್ಯವಸ್ಥೆಯನ್ನು ಶ್ರಮ ಮತ್ತು ಶ್ರದ್ಧೆಯಿಂದ ಸರ್ಕಾರ ಮಾಡಿದೆ' ಎಂದರು.

'ಲಕ್ಷಾಂತರ ಸಂಖ್ಯೆಯಲ್ಲಿ ಅಭಿಮಾನಿಗಳು ಬಂದರೂ ಅನಾನುಕೂಲ ಆಗದಂತೆ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ. ಶಿವ ರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಸೇರಿದಂತೆ ರಾಜ್‌ಕುಮಾರ್ ಕುಟುಂಬದ ಸದಸ್ಯರೂ ಬಹಳಷ್ಟು ಸಹಕಾರ ನೀಡಿದ್ದಾರೆ. ಈ ಸಂದರ್ಭದಲ್ಲಿ ಜನತೆ ನಾಡಿನ ಸಂಸ್ಕೃತಿಯಂತೆ ನಡೆದುಕೊಂಡಿದ್ದಾರೆ' ಎಂದರು.

25 ಲಕ್ಷ ಜನರಿಂದ ಅಂತಿಮ ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುನೀತ್ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ರಾಜ್ಯದ ವಿವಿಧ ಮೂಲೆಗಳಿಂದ 25 ಲಕ್ಷಕ್ಕಿಂತಲೂ ಅಧಿಕ ಮಂದಿ ನಗರಕ್ಕೆ ಬಂದಿದ್ದರು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

'ಹೀಗಿದ್ದರೂ ನಗರದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಲಾಗಿದೆ. ಪೊಲೀಸ್ ಸಿಬ್ಬಂದಿಯ ಪರಿಶ್ರಮದಿಂದ ಶಾಂತಿ, ಸುವ್ಯವಸ್ಥೆ ಕಾಪಾಡಲು ಸಾಧ್ಯವಾಯಿತು' ಎಂದು ಹೇಳಿದ್ದಾರೆ.

ಆತ್ಮಹತ್ಯೆಗೆ ಮುಂದಾಗಬೇಡಿ: ಶಿವಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪ್ಪು ಇಲ್ಲ ಎಂದೆನ್ನಲು ಕಷ್ಟವಾಗುತ್ತದೆ. ನೋವಾಗುತ್ತದೆ. ಏಕೆಂದರೆ ಚಿಕ್ಕವನು. ಸಣ್ಣ ವಯಸ್ಸು. ಅದೆಷ್ಟು ಬೇಗ ಭಗವಂತನಿಗೆ ಆತ ಇಷ್ಟವಾಗಿಬಿಟ್ಟ ಎಂದರೆ ನಮಗದು ನೋವು ಕೊಡುತ್ತದೆ. ಅಭಿಮಾನಿ ದೇವರುಗಳಿಗೆ ನೋವು ಕೊಡುತ್ತದೆ. ನಮಗಿಂತ ಹೆಚ್ಚಾಗಿ ಅಭಿಮಾನಿಗಳಿಗೆ ನೋವಾಗಿದೆ. ಹೀಗೆಂದು ಆತ್ಮಹತ್ಯೆಯಂಥ ನಿರ್ಧಾರ ತೆಗೆದುಕೊಳ್ಳಬೇಡಿ' ಎಂದು ನಟ ಶಿವರಾಜ್‌ಕುಮಾರ್ ಮನವಿ ಮಾಡಿದರು.

ಪುನೀತ್ ಅಕಾಲಿಕ ನಿಧನದಿಂದಾಗಿ ತೀವ್ರ ಆಘಾತಕ್ಕೆ ಒಳಗಾಗಿದ್ದ ಶಿವರಾಜ್‌ಕುಮಾರ್ ಮೌನಕ್ಕೆ ಶರಣಾಗಿದ್ದರು. ಅಂತ್ಯಕ್ರಿಯೆ ಬಳಿಕ ಸದಾಶಿವನಗರದಲ್ಲಿರುವ ಪುನೀತ್ ನಿವಾಸದ ಬಳಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಪ್ಪು ನನ್ನಲ್ಲಿದ್ದಾನೆ, ರಾಘುವಿನಲ್ಲಿದ್ದಾನೆ. ಅದಕ್ಕಿಂತ ಹೆಚ್ಚಾಗಿ ಅಭಿಮಾನಿಗಳ ಹೃದಯದಲ್ಲಿದ್ದಾನೆ. ದಯವಿಟ್ಟು ಆತ್ಮಹತ್ಯೆಯಂತಹ ನಿರ್ಧಾರ ಕೈಗೊಳ್ಳಬೇಡಿ. ನಿಮಗೂ ಕುಟುಂಬವಿದೆ. ಅಪ್ಪು ಇಂತಹ ನಿರ್ಧಾರಗಳನ್ನು ಇಷ್ಟಪಡುತ್ತಿಲ್ಲ. ಅಂಥ ನಿರ್ಧಾರ ಮಾಡಬೇಡಿ. ದಯವಿಟ್ಟು ನಿಮ್ಮ ಕುಟುಂಬಗಳನ್ನು ನೀವು ನೋಡಿಕೊಳ್ಳಿ. ಏಕೆಂದರೆ ಅಗತ್ಯ ಕುಟುಂಬಕ್ಕೆ ಇರುತ್ತದೆ. ಇದನ್ನು ಕಳೆದುಕೊಳ್ಳಬೇಡಿ. ನಾವೆಲ್ಲರೂ ಇಲ್ಲವೇ. ನೋವನ್ನು ನುಂಗಿಕೊಂಡು ಸಾಗಬೇಕು' ಎಂದು ಹೇಳಿದರು.

'ಕಂಠೀರವ ಸ್ಟೇಡಿಯಂನಲ್ಲಿ ಅಭಿಮಾನಿಗಳು ಕುಟುಂಬ ಸಮೇತರಾಗಿ ಬಂದು ಅಪ್ಪು ಅಪ್ಪು ಎಂದು ಕರೆದು ಅತ್ತಾಗ ನನಗೂ ನೋವಾಗಿತ್ತು. ಈ ನೋವು ನೋಡಿದಾಗ ಅವಸರವಾಗಿ ದೇವರು ಕರೆದುಕೊಂಡುಬಿಟ್ಟನೇ ಎಂದೆನಿಸಿಬಿಡುತ್ತದೆ. ಇದನ್ನು ಜೀರ್ಣಿಸಿಕೊಳ್ಳಲು ಆಗುವುದಿಲ್ಲ. ಇಲ್ಲೇ ಎಲ್ಲೋ ಹೊರಗೆ ಹೋಗಿದ್ದಾನೆ, ಊರಿಗೆ ಹೋಗಿದ್ದಾನೆ, ಬರಬಹುದೇನೋ ಎಂಬ ಭಾವನೆ. ನಾನು ಅವನಿಗಿಂತ 13 ವರ್ಷ ದೊಡ್ಡವನು. ಅವನನ್ನು ಮಗುವಾಗಿರುವಾಗಲಿಂದ ನೋಡಿದ್ದೇನೆ. ನನ್ನ ಮಗುವನ್ನೇ ಕಳೆದುಕೊಂಡಂತೆ ಅನಿಸುತ್ತಿದೆ. ಅಪ್ಪು ಕುಟುಂಬದ ಜೊತೆ ನಾವೆಲ್ಲರೂ ಇದ್ದೇವೆ. ಅವನ ಆಸೆ, ಆಕಾಂಕ್ಷೆಗಳನ್ನು ಈಡೇರಿಸಲು ನಾವು ಪ್ರಯತ್ನ ಮಾಡುತ್ತೇವೆ' ಎಂದು ಹೇಳಿದರು.

ಜಿಮ್, ಫಿಟ್ನೆಸ್ ಕೇಂದ್ರಗಳಿಗೆ ಮಾರ್ಗಸೂಚಿ ಅಗತ್ಯ: ಸುಧಾಕರ್

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಜಿಮ್ ಮತ್ತು ಫಿಟ್ನೆಸ್ ಕೇಂದ್ರಗಳಿಗೆ ಯಾವ ರೀತಿಯಲ್ಲಿ ಮಾರ್ಗಸೂಚಿ ಅಗತ್ಯವಾಗಿದೆ ಎನ್ನುವ ಬಗ್ಗೆ ಪ್ರಸಿದ್ಧ ಕಾರ್ಡಿಯಾಲಜಿಸ್ಟ್‌ಗಳಿಂದ ಮಾಹಿತಿ ಪಡೆಯುತ್ತಿದ್ದೇನೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ತಾಲ್ಲೂಕಿನ ರಂಗಸ್ಥಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಮ್ ಮತ್ತು ಫಿಟ್ನೆಸ್ ಕೇಂದ್ರಗಳಲ್ಲಿ ಯಾವ ಸಲಕರಣೆಗಳು ಇರಬೇಕು, ದೈಹಿಕ ಕಸರತ್ತಿಗೆ ಬಂದಾಗ ಆರೋಗ್ಯದಲ್ಲಿ ಏರುಪೇರಾದರೆ ಯಾವ ರೀತಿಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಬೇಕು, ಆಸ್ಪತ್ರೆಗೆ ದಾಖಲಾಗುವವರೆಗೆ ಯಾವ ಕ್ರಮಗಳನ್ನು ಅನುಸರಿಸಬೇಕು ಎನ್ನುವ ಬಗ್ಗೆ ತರಬೇತುದಾರರಿಗೆ ಮಾಹಿತಿ ಅಗತ್ಯವಿದೆ. ಈ ಎಲ್ಲ ದೃಷ್ಟಿಯಿಂದ ಜಿಮ್ ಮತ್ತು ಫಿಟ್ನೆಸ್ ಕೇಂದ್ರಗಳಿಗೆ ಮಾರ್ಗಸೂಚಿ ಅಗತ್ಯವಿದೆ ಎಂದು ಹೇಳಿದರು.

ಪುನೀತ್ ರಾಜ್‌ಕುಮಾರ್ ಅವರ ಸಾವಿನ ನಂತರ ಬಹಳಷ್ಟು ಮಂದಿ ಜಿಮ್ ಮಾಡಬಹುದಾ ಎಂದು ನನ್ನ ಪ್ರಶ್ನಿಸಿದ್ದಾರೆ. ಯಾವುದೋ ಒಂದು ಎರಡು ಪ್ರಕರಣಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಜಿಮ್ ಮಾಡುವುದೇ ತಪ್ಪು ಎನ್ನುವುದು ಸರಿಯಲ್ಲ ಎಂದು ಹೇಳಿದರು.

ಜಿಮ್ ಮತ್ತು ಫಿಟ್ನೆಸ್ ಕೇಂದ್ರಗಳಲ್ಲಿ ಅನುರಿಸಬೇಕಾದ ಮಾರ್ಗಸೂಚಿ ಮತ್ತಿತರ ವಿಚಾರಗಳ ಬಗ್ಗೆ ಪ್ರಸಿದ್ಧ ಹೃದ್ರೋಗ ತಜ್ಞರಾದ ಡಾ.ಸಿ.ಎನ್. ಮಂಜುನಾಥ್, ಡಾ.ದೇವಿಪ್ರಸಾದ್ ಶೆಟ್ಟಿ, ಡಾ.ವಿವೇಕ್ ಜವಳಿ, ಅಮೆರಿಕದ ಡಾ.ರಂಗಧಾಮ್ ಅವರನ್ನು ಸಂಪರ್ಕಿಸಿ ಮಾಹಿತಿ ಪಡೆದಿದ್ದೇನೆ. ಅವರು ಟಿಪ್ಪಣಿಗಳನ್ನು ನೀಡಿದ್ದಾರೆ ಎಂದು ಅವರು ಹೇಳಿದರು.

ಆರೋಗ್ಯ ವಿಚಾರಿಸಿದ ಆರಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುನೀತ್ ಪಾರ್ಥಿವ ಶರೀರದ ಅಂತಿಮ ದರ್ಶನದ ವೇಳೆ ಉಂಟಾದ ನೂಕುನುಗ್ಗಲಿನಲ್ಲಿ ಸಿಲುಕಿ ಕಾಲು ಮುರಿತಕ್ಕೆ ಒಳಗಾದ ಮಡಿವಾಳ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಗಣೇಶ್ ನಾಯಕ್ ಅವರ ಆರೋಗ್ಯವನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ವಿಚಾರಿಸಿದರು.

ಗಣೇಶ್ ಅವರು ಚಿಕಿತ್ಸಾ ವೆಚ್ಚವನ್ನು ಇಲಾಖೆಯಿಂದ ಭರಿಸುವ ಮತ್ತು ಉನ್ನತ ಚಿಕಿತ್ಸೆ ಬೇಕಿದ್ದರೆ ಅದನ್ನೂ ಒದಗಿಸುವ ಭರವಸೆ ನೀಡಿದರು.

ಪುನೀತ್ ನಿಧನದ ಕೊರಗು: ಸಾವು



ಕೆ.ಎಂ.ರಾಜು

ಕೆರಗೋಡು (ಮಂಡ್ಯ): ನಟ ಪುನೀತ್ ರಾಜ್‌ಕುಮಾರ್ ನಿಧನದ ಕೊರಗಲ್ಲಿ ಡಾ.ರಾಜ್ ಕುಟುಂಬದ ಅಭಿಮಾನಿಯೊಬ್ಬರು ಆಹಾರ ತ್ಯಜಿಸಿ ಅಸ್ವಸ್ಥಗೊಂಡು ಕೆರಗೋಡು ಗ್ರಾಮದಲ್ಲಿ ಶನಿವಾರ ಮಧ್ಯರಾತ್ರಿ ಮೃತರಾದರು.

ಗ್ರಾಮದ ಕೆ.ಎಂ.ರಾಜು (50) ಮೃತ ವ್ಯಕ್ತಿ. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಅವರು ಗ್ರಾಮದಲ್ಲಿ ಡಾ.ರಾಜ್‌ಕುಮಾರ್ ಹೆಸರಿನ ಹೋಟೆಲ್ ನಡೆಸುತ್ತಿದ್ದರು. ಶನಿವಾರ ಮೊಬೈಲ್ ಮಾರಿ ಬೆಂಗಳೂರಿನಲ್ಲಿ ಅಂತಿಮ ದರ್ಶನ ಮಾಡಿ ಬರುವೆ ಎಂದು ಹೇಳಿ ಮಂಡ್ಯಕ್ಕೆ ಹೋಗಿದ್ದಾಗ ಸಿಲ್ವರ್ ಜುಬಿಲಿ ಪಾರ್ಕ್ ಎದುರು ಅಸ್ವಸ್ಥರಾಗಿ ಬಿದ್ದಿದ್ದರು. ಇದನ್ನು ತಿಳಿದ ಕೆರಗೋಡು ಗ್ರಾಮದ ಯುವಕರು ಉಪಚರಿಸಿ ಮನೆಗೆ ಬಿಟ್ಟಿದ್ದರು. ವೈದ್ಯರು ಚಿಕಿತ್ಸೆ ನೀಡಿದ್ದರು. ಚಿಕಿತ್ಸೆಗೆ ಸ್ಪಂದಿಸಿಲ್ಲ.

ಹೃದಯಾಘಾತ: ಅಭಿಮಾನಿ ಸಾವು



ಶ್ರೀಕಾಂತ ಅಷ್ಠಗಿ

ಕಲಬುರಗಿ: ನಟ ಪುನೀತ್ ರಾಜ್‌ಕುಮಾರ್ ಅವರ ಸಾವಿನ ದೃಶ್ಯವನ್ನು ಟಿವಿಯಲ್ಲಿ ಇಡೀ ದಿನ ನೋಡಿದ್ದ ಅವರ ಅಭಿಮಾನಿ, ಸುಂದರ ನಗರದ ನಿವಾಸಿ ಶ್ರೀಕಾಂತ ಅಷ್ಠಗಿ (32) ಹೃದಯಾಘಾತದಿಂದ ಶನಿವಾರ ಮೃತಪಟ್ಟಿದ್ದಾರೆ. ಅವರಿಗೆ 11 ತಿಂಗಳ ಹಿಂದೆಯಷ್ಟೇ ಮದುವೆಯಾಗಿತ್ತು.


'ಶುಕ್ರವಾರ ನನ್ನ ಮಗ ಶ್ರೀಕಾಂತ ಟಿವಿಯಲ್ಲಿ ಪುನೀತ್ ಸಾವಿಗೀಡಾದ ಸುದ್ದಿಗಳನ್ನು ನೋಡುತ್ತಿರುವುದನ್ನು ಗಮನಿಸಿ ಚಾನೆಲ್ ಬದಲಿಸಿ ಕ್ರಿಕೆಟ್ ಹಚ್ಚಿದ್ದೆ. ನಾನು ಹೊರಗೆ ಹೋದ ಬಳಿಕ ಮತ್ತೆ ಚಾನೆಲ್ ಬದಲಾಯಿಸಿ, ಸಾವಿನ ದೃಶ್ಯಗಳನ್ನು ನೋಡಿದ್ದ. ಶನಿವಾರ ಬೆಳಿಗ್ಗೆ ಮಗನ ಪತ್ನಿ ಓಡೋಡಿ ಬಂದು ಶ್ರೀಕಾಂತ ಬೆವರುತ್ತಿರುವುದನ್ನು ತಿಳಿಸಿದರು. ತಕ್ಷಣವೇ ಜಯದೇವ ಆಸ್ಪತ್ರೆಗೆ ಕರೆದೊಯ್ದಾಗ, ವೈದ್ಯರು ತುರ್ತು ಚಿಕಿತ್ಸೆ ನೀಡಿದರು. ಆದರೆ, ಅರ್ಧ ಗಂಟೆಯಲ್ಲಿ ಮಗ ಸಾವಿಗೀಡಾದ' ಎಂದು ಶ್ರೀಕಾಂತ ತಂದೆ ಪ್ರಕಾಶ ಅಷ್ಠಗಿ ತಿಳಿಸಿದರು.

ಆಂಜನೇಯಸ್ವಾಮಿ ದೇವಾಲಯದಲ್ಲಿ ಮೊಬೈಲ್ ಬಳಕೆ ಆರೋಪ

ಪರಿಶಿಷ್ಟ ವಿದ್ಯಾರ್ಥಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ವಿಜಯಪುರ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ದೇವಾಲಯದಲ್ಲಿ ಮೊಬೈಲ್ ಬಳಕೆ ಮಾಡಿದ ಎನ್ನುವ ವಿಚಾರಕ್ಕೆ ಪರಿಶಿಷ್ಟ ಜಾತಿಗೆ ಸೇರಿದ ಕಾಲೇಜು ವಿದ್ಯಾರ್ಥಿಯ ಮೇಲೆ ಅರ್ಚಕ ಸೇರಿದಂತೆ ದೇವಾಲಯ ಸಮಿತಿಯ ಸದಸ್ಯರು ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಪಟ್ಟಣದ ದೇವನಹಳ್ಳಿ ಮುಖ್ಯರಸ್ತೆಯ ಮೋರಿ ಬಳಿಯಿರುವ ಆಂಜನೇಯಸ್ವಾಮಿ ದೇವಾಲಯದಲ್ಲಿ ಶನಿವಾರ ನಡೆದಿದೆ.



ದಿಲೀಪ್ ಕುಮಾರ್

ದಿಲೀಪ್ ಕುಮಾರ್ ಗಾಯಗೊಂಡ ವಿದ್ಯಾರ್ಥಿ. ಆತನನ್ನು ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಪ್ರಕರಣ ಸಂಬಂಧ ವಿಜಯಪುರ ಠಾಣೆಯಲ್ಲಿ ಏಳು ಮಂದಿ ವಿರುದ್ಧ ದೂರು ದಾಖಲಾಗಿದೆ.

ವಿದ್ಯಾರ್ಥಿಯು ಬೆಳಿಗ್ಗೆ ದೇವರ ದರ್ಶನಕ್ಕೆ ಹೋಗಿದ್ದಾನೆ. ಪ್ರಸಾದ ತೆಗೆದುಕೊಳ್ಳುವಾಗ ಆತನ ಮೊಬೈಲ್ ರಿಂಗ್ ಆಗಿದೆ. ಈ ವೇಳೆ ಅರ್ಚಕರು ದೇವಾಲಯದಲ್ಲಿ ಮೊಬೈಲ್ ಬಳಕೆ ಮಾಡಬಾರದು ಎಂದು ತಿಳಿಸಿದ್ದಾರೆ.

ಆತ ಕರೆ ಸ್ವೀಕರಿಸದೇ ಹೊರಗೆ ಹೋಗುತ್ತಿರುವಾಗ ದೇವಾಲಯದ ಆವರಣದಲ್ಲಿ ಪ್ರಕಾಶ್ ಎಂಬುವರಿಗೆ ಮೊಬೈಲ್ ಕರೆ ಬಂದಿದ್ದು ಅವರು ಮಾತನಾಡುವುದನ್ನು ನೋಡಿದ್ದಾನೆ. ಈ ಬಗ್ಗೆ ದಿಲೀಪ್ ಕುಮಾರ್ ಅರ್ಚಕರ ಬಳಿ ಪ್ರಶ್ನೆ ಮಾಡಿದ್ದಾನೆ.

'ಇದರಿಂದ ಕೋಪಗೊಂಡ ದೇವಾಲಯ ಸಮಿತಿಯ ಪ್ರಕಾಶ್ ಸೇರಿದಂತೆ ಇತರೇ ಸದಸ್ಯರು ಪೈಪ್‌ಗಳಿಂದ ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿದ್ದಾರೆ. ನನ್ನ ಮಗನಿಗೆ ಕಾಲುಗಳಲ್ಲಿ ಒದ್ದು, ಹಲ್ಲೆ ಮಾಡಿದ್ದಾರೆ. ಟವೆಲ್‌ನಿಂದ ಕುತ್ತಿಗೆ ಬಿಗಿದಿದ್ದಾರೆ. ಇದರಿಂದ ಉಸಿರಾಡಲಿಕ್ಕೆ ಸಾಧ್ಯವಾಗದೆ ಅರೆಪ್ರಜ್ಞಾವಸ್ಥೆಗೆ ಜಾರಿದ್ದಾನೆ' ಎಂದು ವಿದ್ಯಾರ್ಥಿಯ ತಂದೆ ಎ. ನಾರಾಯಣಸ್ವಾಮಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ದೊಡ್ಡಬಳ್ಳಾಪುರ ಉಪ ವಿಭಾಗದ ಡಿವೈಎಸ್ಪಿ ಕೆ.ಎಸ್. ನಾಗರಾಜ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸಮಾಜ ಕಲ್ಯಾಣ ಇಲಾಖೆಯ ವ್ಯವಸ್ಥಾಪಕಿ ನಳಿನಾಕ್ಷಿ ಹಾಗೂ ಹಿರಿಯ ಮೇಲ್ವಿಚಾರಕ ರಂಗಪ್ಪ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದರು.

ಸೋಮವಾರ, ನವೆಂಬರ್ 1, 2021 | ಬೆಂಗಳೂರು | ₹ 6.00 | ಸಂಪುಟ 74| ಸಂಚಿಕೆ 303 | ಪುಟ 30

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಕ್ರಿಕೆಟ್: ನ್ಯೂಜಿಲೆಂಡ್‌ಗೆ ಜಯ

ದುಬೈ (ಪಿಟಿಐ): ನ್ಯೂಜಿಲೆಂಡ್ ತಂಡವು ಭಾನುವಾರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೂಪರ್ 12ರ ಹಂತದ ಪಂದ್ಯದಲ್ಲಿ ಭಾರತದ ವಿರುದ್ಧ 8 ವಿಕೆಟ್‌ಗಳಿಂದ ಜಯಿಸಿತು.

ಇದರೊಂದಿಗೆ ಕಿವೀಸ್ ಬಳಗವು ಸೆಮಿಫೈನಲ್ ಪ್ರವೇಶಿಸುವ ಕನಸು ಜೀವಂತವಾಗುಳಿಯಿತು. ಅದರೆ ಟೂರ್ನಿಯಲ್ಲಿ ಎರಡನೇ ಸೋಲು ಅನುಭವಿಸಿದ ಭಾರತ ತಂಡದ ಹಾದಿ ಕಠಿಣವಾಗಿದೆ.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 110 ರನ್ ಗಳಿಸಿತು. ಅದಕ್ಕುತ್ತರವಾಗಿ ನ್ಯೂಜಿಲೆಂಡ್ ತಂಡವು 14.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 111 ರನ್ ಗಳಿಸಿ ಗೆದ್ದಿತು.

ವಿವರ 14

ಮಧ್ಯಪ್ರದೇಶ: ಲೀಟರಿಗೆ ₹ 120 ದಾಟಿದ ಪೆಟ್ರೋಲ್ ದರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಭಾನುವಾರ ತಲಾ 35 ಪೈಸೆ ಹೆಚ್ಚಿಸಿವೆ.

ಇದರಿಂದಾಗಿ ಮಧ್ಯ ಪ್ರದೇಶದ ಪನ್ನಾ, ಸತ್ನಾ, ರೇವಾ, ಶಹದೋಲ್, ಛಿಂದ್ವಾರಾ ಮತ್ತು ಬಾಲಘಾಟ್ ಪ್ರದೇಶಗಳಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 120ರ ಗಡಿಯನ್ನು ದಾಟಿದೆ.

ರಾಜಸ್ಥಾನದ ಗಂಗಾನಗರದಲ್ಲಿ ಪೆಟ್ರೋಲ್ ದರವು ದೇಶದಲ್ಲಿಯೇ ಅತ್ಯಂತ ಗರಿಷ್ಠ ಮಟ್ಟದಲ್ಲಿದೆ. ಭಾನುವಾರ ಲೀಟರಿಗೆ ₹ 121.52 ರಷ್ಟಾಗಿದೆ. ಡೀಸೆಲ್ ದರವು ₹ 112.44 ರಷ್ಟಿದೆ.

ಬೆಂಗಳೂರಿನಲ್ಲಿ ಶನಿವಾರ ಪೆಟ್ರೋಲ್ ದರ ಲೀಟರಿಗೆ ₹111.1ಕ್ಕೆ ಮತ್ತು ಡೀಸೆಲ್ ದರ ಲೀಟರಿಗೆ 37 ಪೈಸೆ ಹೆಚ್ಚಾಗಿ ₹ 104.03ಕ್ಕೆ ಏರಿಕೆ ಆಗಿದೆ.

ಸೆಪ್ಟೆಂಬರ್ 28ರಿಂದ ಈವರೆಗೆ ಪೆಟ್ರೋಲ್ ದರವನ್ನು 25 ಬಾರಿ ಹೆಚ್ಚಿಸಲಾಗಿದ್ದು, ಈ ಅವಧಿಯಲ್ಲಿ ಲೀಟರಿಗೆ ₹ 8.15ರಷ್ಟು ಏರಿಕೆ ಆಗಿದೆ. ಡೀಸೆಲ್ ದರವನ್ನು ಸೆಪ್ಟೆಂಬರ್ 24ರಿಂದ ಈವರೆಗೆ ಒಟ್ಟು 28 ಬಾರಿ ಹೆಚ್ಚಿಸಲಾಗಿದ್ದು, ಲೀಟರಿಗೆ ₹ 9.45ರಷ್ಟು ಹೆಚ್ಚಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಭಾವುಕ ಸನ್ನಿವೇಶದಲ್ಲಿ ಅಂತ್ಯಕ್ರಿಯೆ • ಮೌನವಾಗಿ ಮರುಗಿದ ಅಭಿಮಾನಿಗಳು

ಪೃಥ್ವಿ ಮಡಿಲಿಗೆ ಅಪ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಡಿಸುವಾತನ ಕರುಣೆಯ ಮೇಲೆ ನಮ್ಮ ಪಾತ್ರವು. ಸಮಯದ ಸೂತ್ರ ಅವನದು...' ಪುನೀತ್ ರಾಜಕುಮಾರ್ ಅಭಿನಯದ 'ರಾಜಕುಮಾರ' ಚಿತ್ರದ ಈ ಹಾಡು ಅಲ್ಲಿ ಸೇರಿದವರ ಮನಸ್ಸಲ್ಲೇ ಗುನುಗುನಿಸುತ್ತಿತ್ತು ಎಂಬಂತಹ ವಾತಾವರಣ ಕಂಠೀರವ ಸ್ಟುಡಿಯೊ ಆವರಣವನ್ನೇ ತುಂಬಿಕೊಂಡಂತೆ ಇತ್ತು. ಬೆಳಕು ನಿಧಾನವಾಗಿ ಹರಡುತ್ತಿದ್ದರೂ ನೋವಿನ ಕತ್ತಲೆಯೇ ಮುಸುಕಿಕೊಂಡಂತೆ ಜನ ನಡೆದುಕೊಳ್ಳುತ್ತಿದ್ದರು.


ಹೃದಯಸ್ತಂಭನದಿಂದ ಶುಕ್ರವಾರ ಬೆಳಗ್ಗೆ ನಿಧನರಾದ ಕನ್ನಡಿಗರ ನೆಚ್ಚಿನ 'ಅಪ್ಪು'ವಿನ ಹಣೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮುತ್ತಿಟ್ಟು ಕಂಠೀರವ ಕ್ರೀಡಾಂಗಣದಿಂದ ಭಾವುಕರಾಗಿ ಬೀಳ್ಕೊಟ್ಟಾಗ ಇನ್ನೂ ಬೆಳಕು ಹರಿದಿರಲಿಲ್ಲ. 'ಅಪ್ಪು.. ಅಪ್ಪು..' ಎನ್ನುವ ಸಾವಿರಾರು ಜನರ ಪ್ರೀತಿಯ ಕರೆಗೂ ಓಗೊಡದೆ ಡಾ. ರಾಜ್ ಸ್ಮಾರಕದಲ್ಲೇ ನೆಲದ ಮರೆಯ ನಿದಾನದಂತೆ ಮಲಗಿದ್ದ ಅಪ್ಪ–ಅಮ್ಮನ ಮಡಿಲು ಸೇರಿಕೊಳ್ಳಲು ಹೊರಟೇ ಬಿಟ್ಟರು ಪುನೀತ್.

ವರನಟ ಡಾ.ರಾಜ್‌ಕುಮಾರ್ ಅವರ ಸಮಾಧಿಯ ಪಕ್ಕದಲ್ಲೇ ಇರುವ ಅವರ ಪತ್ನಿ ಪಾರ್ವತಮ್ಮ ರಾಜ್‌ಕುಮಾರ್ ಸಮಾಧಿಯ ಪಕ್ಕದಲ್ಲೇ, ಅಪ್ಪು ಅವರಿಗೆ ಕೊನೆಯ ಅಪ್ಪುಗೆ ನೀಡಿ ವಿದಾಯ ಹಾಡಲು ಅಪಾರ ಜನಸ್ತೋಮ, ಒಡಲೊಳಗೆ ಇಳಿಬಿಟ್ಟುಕೊಳ್ಳಲು ಭೂಮಿತಾಯಿ ಸಜ್ಜುಗೊಂಡಂತಿತ್ತು ಅಲ್ಲಿನ ವಾತಾವರಣ. ಎರಡು ದಿನ ಶೋಕತಪ್ತರಾಗಿಯೇ ದಿನ ದೂಡಿದ್ದ ನಾಡಿನ ಅಸಂಖ್ಯಾತ ಅಭಿಮಾನಿ ವೃಂದದ ನೋವಿನ ಮಧ್ಯೆಯೇ, ಪುನೀತ್ ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ ನಡೆಯಿತು.

8ನೇ ಪುಟ ನೋಡಿ



ಕಂಠೀರವ ಸ್ಟುಡಿಯೊ ಆವರಣದಲ್ಲಿರುವ ನಟ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಗೆ ಭಾನುವಾರ ಆರತಿ ಬೆಳಗುವ ವೇಳೆ ಪತ್ನಿ ಅಶ್ವಿನಿ, ವಿನಯ್ ರಾಜ್‌ಕುಮಾರ್, ಪುನೀತ್ ಕಿರಿಯ ಪುತ್ರಿ ವಂದಿತಾ, ಹಿರಿಯ ಪುತ್ರಿ ಧೃತಿ, ಸಹೋದರ ರಾಘವೇಂದ್ರ ರಾಜ್‌ಕುಮಾರ್, ಅವರ ಪತ್ನಿ ಮಂಗಳಾ ಭಾವುಕರಾದರು. ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಪುನೀತ್ ಅವರ ಭಾವ ಎಸ್.ಎ.ಗೋವಿಂದರಾಜ್ ಹಾಗೂ ಕುಟುಂಬದವರು ಇದ್ದರು –ಪ್ರಜಾವಾಣಿ ಚಿತ್ರ/ ರಂಜು ಪಿ.



ಅವಸರವಾಗಿ ದೇವರು ಅಪ್ಪುವನ್ನು ಕರೆದುಕೊಂಡುಬಿಟ್ಟನೇ ಎಂದೆನಿಸಿ ಬಿಡುತ್ತದೆ. ಅವನನ್ನು ಮಗುವಾಗಿರುವಾಗಲಿಂದ ನೋಡಿದ್ದೇನೆ. ನನ್ನ ಮಗುವನ್ನೇ ಕಳೆದುಕೊಂಡಂತೆ ಅನಿಸುತ್ತಿದೆ

ಶಿವರಾಜ್‌ಕುಮಾರ್, ನಟ

ಮಂಗಳವಾರದ ನಂತರ ಸಾರ್ವಜನಿಕರಿಗೆ ದರ್ಶನ


ಮಂಗಳವಾರ ಪುನೀತ್ ಸಮಾಧಿಗೆ ಹಾಲು–ತುಪ್ಪ ಬಿಡುವ ಕಾರ್ಯ ನಡೆಸಲು ಕುಟುಂಬದ ಸದಸ್ಯರು ನಿರ್ಧರಿಸಿದ್ದಾರೆ. ಹೀಗಾಗಿ ಅಲ್ಲಿಯವರೆಗೂ ಪುನೀತ್ ಅವರ ಸಮಾಧಿ ದರ್ಶನಕ್ಕೆ ಸಾರ್ವಜನಿಕರಿಗೆ ಅವಕಾಶವಿಲ್ಲ. ಈ ಕುರಿತು ಮಾತನಾಡಿದ ನಟ ರಾಘವೇಂದ್ರ ರಾಜ್‌ಕುಮಾರ್, 'ಮಂಗಳವಾರ ಹಾಲು–ತುಪ್ಪ ಬಿಡುವ ಕಾರ್ಯ ನಡೆಯಲಿದ್ದು, ಇದಾದ ಬಳಿಕ ಸಾರ್ವಜನಿಕರಿಗೆ ಕಂಠೀರವ ಸ್ಟುಡಿಯೊ ಒಳಗಡೆ ಪುನೀತ್ ಸಮಾಧಿ ನೋಡಲು ಅವಕಾಶ ನೀಡಲಾಗುವುದು ಎಂದರು.

8ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 11

66 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ

10 ಸಂಸ್ಥೆಗಳಿಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವ ಪುರಸ್ಕಾರ


ಪ್ರಜಾವಾಣಿ ವಾರ್ತೆ




ದೇವರಾಜ್




ಡಾ. ಬಿ.ಎಲ್. ಪಾಟೀಲ



ಗಂಗಾವತಿ ಪ್ರಾಣೇಶ್




ಪ್ರಕಾಶ್ ಬೆಳವಾಡಿ



ಕೃಷ್ಣ ಕೊಲ್ಹಾರ ಕುಲಕರ್ಣಿ



ರೋಹನ್ ಬೋಪಣ್ಣ



ಪ್ರೊ.ಪಿ.ವಿ. ಕೃಷ್ಣ ಭಟ್



ರತ್ನಮ್ಮ ಶಿವಪ್ಪ

ಬೆಂಗಳೂರು: ಸಾಹಿತಿ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಚಿತ್ರನಟ ದೇವರಾಜ್, ಟೆನಿಸ್ ಆಟಗಾರ ರೋಹನ್ ಬೋಪಣ್ಣ, ದೇವದಾಸಿಯರ ಪುನರ್ವಸತಿಗಾಗಿ ಕೆಲಸ ಮಾಡುತ್ತಿರುವ ಬೆಳಗಾವಿ ಜಿಲ್ಲೆಯ ಅಥಣಿಯ ಬಸವಪ್ರಭು ಲಕಮಗೌಡ ಪಾಟೀಲ್, ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಪಿ.ವಿ. ಕೃಷ್ಣ ಭಟ್ ಸೇರಿದಂತೆ 66 ಮಂದಿಯನ್ನು ಪ್ರಸಕ್ತ ವರ್ಷದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಭಾನುವಾರ ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಪ್ರಕಟಿಸಿದರು. ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್, ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್, ರಂಗಭೂಮಿ ಕಲಾವಿದ ಪ್ರಕಾಶ್ ಬೆಳವಾಡಿ, ಯಕ್ಷಗಾನ ಕಲಾವಿದ ಗೋಪಾಲ ಆಚಾರ್ಯ, ಪತ್ರಕರ್ತ ಪಟ್ನಂ ಅನಂತ ಪದ್ಮನಾಭ, ಯಾದಗಿರಿ ನಗರಸಭೆಯ ಪೌರಕಾರ್ಮಿಕ ಮಹಿಳೆ ರತ್ನಮ್ಮ ಶಿವಪ್ಪ ಬಬಲಾದ ಪುರಸ್ಕೃತರ ಪಟ್ಟಿಯಲ್ಲಿದ್ದಾರೆ.

ರಾಜ್ಯಮಟ್ಟದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಂ.ಕೆ. ಸುದರ್ಶನ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎ.ಆರ್. ಪ್ರದೀಪ್, ದೊಮ್ಮಲೂರಿನ ಸ್ಮಶಾನ ಕಾವಲುಗಾರ ಮುನಿಯಪ್ಪ ಕೂಡ ಪುರಸ್ಕೃತರಲ್ಲಿ ಸೇರಿದ್ದಾರೆ.

'ಸೇವಾ ಸಿಂಧು ಪೋರ್ಟಲ್ ಮೂಲಕ ಸಾರ್ವಜನಿಕರು ಶಿಫಾರಸು ಮಾಡಿದ್ದ ಹೆಸರುಗಳನ್ನು ಪರಿಶೀಲಿಸಿ ಮತ್ತು ವಿವಿಧ ಕ್ಷೇತ್ರಗಳಲ್ಲಿ ಎಲೆಮರೆ ಕಾಯಿಯಂತೆ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನು ಗುರುತಿಸಿ ಪಟ್ಟಿ ಮಾಡಲಾಯಿತು. ಅವುಗಳನ್ನು ಪ್ರಶಸ್ತಿ ಪುರಸ್ಕೃತರ ಆಯ್ಕೆಗೆ ರಚಿಸಿದ್ದ ಸಲಹಾ ಸಮಿತಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯ ಆಯ್ಕೆ ಸಮಿತಿಯ ಮುಂದೆ ಇಡಲಾಯಿತು. ಸಮಗ್ರ ಪರಿಶೀಲನೆಯ ನಂತರ ಆಯ್ಕೆ ಸಮಿತಿಯು 66 ಮಂದಿಯನ್ನು ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಿದೆ' ಎಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

8ನೇ ಪುಟ ನೋಡಿ
ಪ್ರಶಸ್ತಿ ಪುರಸ್ಕೃತರ ಪರಿಚಯ 2

ಜಾಗತಿಕ ತಾಪಮಾನ ಏರಿಕೆ ತಡೆ ಸಮಾಲೋಚನೆ

ಜಿ20: ಮಾಲಿನ್ಯ ಕಡಿತಕ್ಕೆ ಬದ್ಧತೆ ಇಲ್ಲ

ರೋಮ್ (ಎಎಫ್‌ಪಿ): ಜಾಗತಿಕ ತಾಪಮಾನ ಹೆಚ್ಚಳವನ್ನು ಕಡಿಮೆ ಮಾಡಲು 'ಅರ್ಥಪೂರ್ಣ ಮತ್ತು ಪರಿಣಾಮಕಾರಿ' ಕ್ರಮಗಳಿಗೆ ಜಿ–20 ದೇಶಗಳ ಮುಖಂಡರು ಭಾನುವಾರ ನಡೆದ ಶೃಂಗಸಭೆಯಲ್ಲಿ ಒಪ್ಪಿಗೆ ಸೂಚಿಸಿದ್ದಾರೆ. ಆದರೆ, ಅದಕ್ಕಾಗಿ ನಿಖರವಾದ ಯಾವುದೇ ಬದ್ಧತೆ ಪ್ರಕಟಿಸಿಲ್ಲ. ಇದು ಹವಾಮಾನ ಬದಲಾವಣೆ ತಡೆ ಕಾರ್ಯಕರ್ತರಲ್ಲಿ ನಿರಾಶೆ ಮೂಡಿಸಿದೆ.

ರೋಮ್ ಶೃಂಗಸಭೆಯು ತಮ್ಮ ಭರವಸೆಗಳನ್ನು ಈಡೇರಿಸಿಲ್ಲ, ಹಾಗಂತ ಅವುಗಳನ್ನು ಹೂತೂ ಹಾಕಿಲ್ಲ ಎಂದು ವಿಶ್ವ ಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಹೇಳಿದ್ದಾರೆ. ಜಗತ್ತು ಹವಾಮಾನ ದುರಂತದತ್ತ ಅತಿ ವೇಗದಿಂದ ಓಡುತ್ತಿದೆ ಎಂದು ಶುಕ್ರವಾರವಷ್ಟೇ ಅವರು ಎಚ್ಚರಿಕೆ ನೀಡಿದ್ದರು.

ಕೈಗಾರಿಕಾ ಪೂರ್ವ ದಿನಗಳನ್ನು ಮೂಲವಾಗಿ ಇರಿಸಿಕೊಂಡು, ಜಾಗತಿಕ ತಾಪಮಾನದ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಮಿತಿಗೊಳಿಸಬೇಕು ಎಂಬ ವಿಚಾರದಲ್ಲಿ ಜಿ20 ನಾಯಕರಲ್ಲಿ ಒಮ್ಮತ ಇದೆ. ಬರಗಾಲ, ಪ್ರವಾಹ, ಬಿರುಗಾಳಿಯಂತಹ ನೈಸರ್ಗಿಕ ವಿಕೋಪಗಳನ್ನು ತಡೆಯಲು ಇದು ಅನಿವಾರ್ಯ ಎಂದು ವಿಶ್ವ ಸಂಸ್ಥೆಯು ಪ್ರತಿಪಾದಿಸುತ್ತಿದೆ.

ಒಟ್ಟು ಇಂಗಾಲ ಹೊರಸೂಸುವಿಕೆಯಲ್ಲಿ ಜಿ20 ದೇಶಗಳ ಪಾಲು ಶೇ 80 ರಷ್ಟು. ಇದನ್ನು ಕಡಿತ ಮಾಡಲು ಈ ದೇಶಗಳು ಯಾವ ಕ್ರಮಗಳಿಗೆ ಬದ್ಧವಾಗಲಿವೆ ಎಂಬುದೇ ಮುಂದಿನ ಹದಿನೈದು ದಿನಗಳಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮಾವೇಶದ (COP26 ಗ್ಲಾಸ್ಗೊ) ಯಶಸ್ಸು ಅಥವಾ ವೈಫಲ್ಯವನ್ನು ನಿರ್ಧರಿಸಲಿದೆ.

ತಾಪಮಾನ ಏರಿಕೆಯನ್ನು ನಿರ್ವಹಿಸುವುದಕ್ಕಾಗಿ ಅಂತರಾಷ್ಟ್ರೀಯ ಸಹಕಾರ ಹಾಗೂ ಬೆಂಬಲದೊಂದಿಗೆ ದೀರ್ಘಾವಧಿ, ಮಧ್ಯಮ ಹಾಗೂ ಸಣ್ಣ ಅವಧಿಯ ಗುರಿ ಹಾಕಿಕೊಂಡು ಯೋಜನೆಗಳನ್ನು ರೂಪಿಸಬೇಕು ಎಂದು ಅಮೆರಿಕ, ಚೀನಾ, ಭಾರತ, ರಷ್ಯಾ, ಐರೋಪ್ಯ ರಾಷ್ಟ್ರಗಳು ಸೇರಿದಂತೆ ವಿವಿಧ ದೇಶಗಳ ನಾಯಕರು ಕರೆ ನೀಡಿದ್ದಾರೆ.

ಆದರೆ, ತಜ್ಞರ ಪ್ರಕಾರ, 1.5 ಡಿ.ಸೆ ಗುರಿಯನ್ನು ಸಾಧಿಸುವುದು ಎಂದರೆ, 2030ರ ವೇಳೆಗೆ ಜಾಗತಿಕ ಇಂಗಾಲದ ಹೊರಸೂಸುವಿಕೆಯನ್ನು ಶೇ 50ರಷ್ಟು ಕಡಿಮೆ ಮಾಡುವುದು ಹಾಗೂ 2050ರ ವೇಳೆ 'ನೆಟ್ ಜೀರೊ' ಗುರಿ ಸಾಧಿಸುವುದು. ಆದರೆ, ಜಿ 20 ಹೇಳಿಕೆಯಲ್ಲಿ ಗುರಿ ತಲುಪುವ ಬಗ್ಗೆ ನಿರ್ದಿಷ್ಟ ದಿನಾಂಕದ ಉಲ್ಲೇಖವಿಲ್ಲ. ಅದು, ನೆಟ್ ಜೀರೊ ವಿಷಯವಾಗಿ 'ಶತಮಾನದ ಮಧ್ಯಂತರಕ್ಕೆ ಅಥವಾ ಆ ಹೊತ್ತಿಗೆ' ಗುರಿ ಸಾಧಿಸುವುದಾಗಿ ಹೇಳುತ್ತದೆ ಅಷ್ಟೆ ಎಂದಿದ್ದಾರೆ.

ಸಂಸ್ಕರಣೆ ಪ್ರಕ್ರಿಯೆ ಇಲ್ಲದೇ ಇಂಗಾಲ ಹೊರಸೂಸುವಿಕೆ ನಡೆದಿರುವ ಕಲ್ಲಿದ್ದಲು ಘಟಕಗಳಿಗೆ 2021ರ ಕೊನೆಯಲ್ಲಿ ಹಣಕಾಸು ಸಹಾಯ ನಿಲ್ಲಿಸಲೂ ಜಿ 20 ನಾಯಕರು ಸಮ್ಮತಿಸಿದ್ದಾರೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.

ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

ಶೌಚಾಲಯಗಳ ಬಾಗಿಲು ತೆರೆಯಿರಿ



ಗಾಯತ್ರಿ ದೇವಿ ಉದ್ಯಾನದಲ್ಲಿರುವ ಶೌಚಾಲಯಗಳಿಗೆ ಬೀಗ ಹಾಕಿರುವುದು

ಮರಿಯಪ್ಪನ ಪಾಳ್ಯದಲ್ಲಿರುವ ಕುವೆಂಪು ರಸ್ತೆ ಮೆಟ್ರೊ ನಿಲ್ದಾಣದ ಬಳಿ ವಿಶಾಲವಾದ ಗಾಯತ್ರಿ ದೇವಿ ಉದ್ಯಾನವಿದೆ. ಅದರ ಒಳಭಾಗದಲ್ಲಿ ವಾಯುವಿಹಾರಕ್ಕೆ ಅನುಕೂಲವಾಗುವಂತೆ ಪಥ ನಿರ್ಮಿಸಲಾಗಿದೆ. ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ವಾಯುವಿಹಾರಿಗಳು ಹಾಗೂ ಮಕ್ಕಳಿಗೆ ಉದ್ಯಾನಕ್ಕೆ ಪ್ರವೇಶ ಕಲ್ಪಿಸಲಾಗಿದೆ.

ಆದರೆ, ಸಾರ್ವಜನಿಕರ ಬಳಕೆಗಾಗಿ ಇಲ್ಲಿ ನಿರ್ಮಿಸಿರುವ ಶೌಚಾಲಯಕ್ಕೆ ಸದಾ ಬೀಗ ಹಾಕಲಾಗಿರುತ್ತದೆ. ಇದರಿಂದ ತುರ್ತು ಸಂದರ್ಭಗಳಲ್ಲಿ ಮೂತ್ರ ವಿಸರ್ಜನೆಗೆ ಅವಕಾಶ ಇಲ್ಲವಾಗಿದೆ. ಉದ್ಯಾನ ನಿರ್ವಹಣೆಯ ಜವಾಬ್ದಾರಿ ಹೊತ್ತವರು ಶೌಚಾಲಯಗಳನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು. ಉದ್ಯಾನ ಪ್ರವೇಶಿಸುವ ವೇಳೆಯಲ್ಲಾದರೂ ಬೀಗ ತೆರೆದರೆ ಅನುಕೂಲ.

ಬಸವರಾಜ ಹುಡೇದಗಡ್ಡಿ, ರಾಜಾಜಿನಗರ



ಎಜಿಬಿ ಬಡಾವಣೆಯ ಸಾರ್ವಜನಿಕ ಉದ್ಯಾನದ ತಂತಿ ಬೇಲಿ ಹಾಳಾಗಿರುವುದು

ಉದ್ಯಾನದಲ್ಲಿ ಅನೈತಿಕ ಚಟುವಟಿಕೆಗಳು

ಹೆಸರಘಟ್ಟ ಮುಖ್ಯರಸ್ತೆಯ ಎಜಿಬಿ ಬಡಾವಣೆಯಲ್ಲಿರುವ ಸಾರ್ವಜನಿಕ ಉದ್ಯಾನದ ನಿರ್ವಹಣೆ ಸರಿಯಾಗಿಲ್ಲ. ಇದಕ್ಕೆ ಉದಾಹರಣೆಯಾಗಿ ಉದ್ಯಾನಕ್ಕೆ ರಕ್ಷಣೆಗೆಂದು ಅಳವಡಿಸಿರುವ ಕಬ್ಬಿಣದ ಬೇಲಿಯ ಅಲ್ಲಲ್ಲಿ ಪುಂಡರು ಪ್ರವೇಶ ದ್ವಾರಗಳನ್ನು ನಿರ್ಮಿಸಿಕೊಂಡಿದ್ದಾರೆ. ಪ್ರವೇಶ ದ್ವಾರವನ್ನೇ ಇಲ್ಲದ ಈ ಉದ್ಯಾನಕ್ಕೆ ಯಾರು ಬೇಕಾದರೂ ಸುಲಭವಾಗಿ ಒಳಪ್ರವೇಶಿಸಬಹುದು.

ಹಾಗಾಗಿ, ರಾತ್ರಿ ವೇಳೆ ಉದ್ಯಾನದ ಒಳಗೆ ಕುಡಿತ, ಧೂಮಪಾನ ಹಾಗೂ ಅನೈತಿಕ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಇದರಿಂದ ಸ್ಥಳೀಯ ನಿವಾಸಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಉದ್ಯಾನಕ್ಕೆ ಪ್ರವೇಶದ್ವಾರ ನಿರ್ಮಿಸಬೇಕು ಹಾಗೂ ಹಾಳಾಗಿರುವ ಬೇಲಿಯನ್ನು ದುರಸ್ತಿಗೊಳಿಸಬೇಕು. ಉದ್ಯಾನದಲ್ಲಿ ಯಾವುದೇ ಅನೈತಿಕ ಚಟುವಟಿಕೆಗಳಿಗೆ ಅವಕಾಶ ಕೊಡಬಾರದು.

ಮೋಹನ್ ಕೃಷ್ಣ, ಸ್ಥಳೀಯ

ರೈಲ್ವೆ ಸೇತುವೆ ಬಳಿ ಸಂಚಾರ ಕಿರಿಕಿರಿ

ಬೆಂಗಳೂರಿನ ಹೃದಯ ಭಾಗದ ಕೆಂಪೇಗೌಡ ಬಸ್ ನಿಲ್ದಾಣ (ಮೆಜೆಸ್ಟಿಕ್) ಸಂಪರ್ಕಿಸುವ ಓಕಳೀಪುರ ಮತ್ತು ಮಲ್ಲೇಶ್ವರ ಮಾರ್ಗದ ರೈಲ್ವೆ ಸೇತುವೆಗಳ ಕೆಳಭಾಗ ಗಲೀಜು ನೀರು, ಮೂತ್ರ ಸೋರುವಿಕೆ ಹೆಚ್ಚಾಗಿ ಕಂಡು ಬರುತ್ತಿದೆ. ಇದು ನೇರವಾಗಿ ಕೆಳಗಿನ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರ ಮೇಲೆ ಬೀಳುತ್ತಾ ಕಸಿವಿಸಿ ಉಂಟು ಮಾಡುತ್ತಿದೆ.

ಇದರಿಂದಾಗಿ ರೈಲು ಸಂಚರಿಸುವಾಗ ಕೆಳಗಿನ ರಸ್ತೆಯಲ್ಲಿ ವಾಹನ ಸವಾರರು ನಿಂತು ಬಿಡುತ್ತಾರೆ. ಹಾಗಾಗಿ, ಪ್ರತಿ ರೈಲು ಹೋಗುವಾಗಲೂ ವಾಹನ ದಟ್ಟಣೆ ಆಗುತ್ತದೆ. ಸೇತುವೆಯನ್ನು ಸರಿಯಾಗಿ ನಿರ್ವಹಣೆ ಮಾಡದ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಸಮಸ್ಯೆ ಬಗೆಹರಿಸಬೇಕು. ಸವಾರರು ನಿಶ್ಚಿಂತೆಯಿಂದ ಪ್ರಯಾಣಿಸಲು ಅನುಕೂಲ ಮಾಡಿಕೊಡಬೇಕು.

ಎ.ಜೆ.ಗಂಗಾಧರ್, ನಂದಿನಿ ಬಡಾವಣೆ



ಕೆ.ಜಿ.ರಸ್ತೆಯಲ್ಲಿ ಬಾಯ್ತೆರೆದುಕೊಂಡಿರುವ ಗುಂಡಿ.

ಕಬ್ಬಿಣದ ಸರಳು ಅಳವಡಿಸಿ

ಹಡ್ಸನ್ ವೃತ್ತದಿಂದ ಮೈಸೂರು ಬ್ಯಾಂಕ್ ವೃತ್ತದ ಕಡೆಗೆ ಸಾಗುವ ಕೆ.ಜಿ.ರಸ್ತೆಯಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ರಸ್ತೆಯ ಬದಿಗಳಲ್ಲಿ ಕಾಂಕ್ರೀಟ್ ಚೇಂಬರ್ ಅಳವಡಿಸಿರುವುದು ಸ್ವಾಗತಾರ್ಹ. ಆದರೆ, ಅವು ಜನಸ್ನೇಹಿಯಾಗಿರದೆ, ಅಪಾಯಕ್ಕೆ ಆಹ್ವಾನಿಸುವ ಗುಂಡಿಗಳಾಗಿ ಪರಿಣಮಿಸಿವೆ. ಸೇಂಟ್ ಮಾರ್ಥಾಸ್ ಆಸ್ಪತ್ರೆ ಹಾಗೂ ಕಂದಾಯ ಭವನ, ಕಾವೇರಿ ಭವನಗಳಿಗೆ ತಲುಪಲು ಪಕ್ಕದ ಪಾದಚಾರಿ ಮಾರ್ಗದಲ್ಲಿ ಸಾವಿರಾರು ಜನ ಪ್ರತಿದಿನ ಸಂಚರಿಸುತ್ತಾರೆ.

ಮಳೆ ನೀರು ಹರಿವಿಗಾಗಿ ಅಳವಡಿಸಿರುವ ಕಾಂಕ್ರೀಟ್ ಗುಂಡಿಗಳು ಬಾಯ್ತೆರೆದುಕೊಂಡಿದ್ದು, ಮಕ್ಕಳು ಹಾಗೂ ಬೈಕ್‌ನ ಚಕ್ರ ಈ ಗುಂಡಿಗಳಲ್ಲಿ ಸಿಲುಕಿಕೊಳ್ಳುವುದರಲ್ಲಿ ಅನುಮಾನವಿಲ್ಲ. ರಾತ್ರಿ ಸಮಯದಲ್ಲಿ ರಸ್ತೆ ದಾಟುವ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಗುಂಡಿಯಲ್ಲಿ ಕಾಲು ಸಿಲುಕಿಕೊಳ್ಳಬಹುದು. ಹಾಗಾಗಿ, ಇವುಗಳಿಗೆ ಕಬ್ಬಿಣದ ಸರಳುಗಳನ್ನು ಅಳವಡಿಸುವುದು ಸೂಕ್ತ. ಅಪಾಯಕ್ಕೂ ಮುನ್ನ ಅದನ್ನು ನಿಯಂತ್ರಿಸುವುದು ಒಳ್ಳೆಯದು.

ಪತ್ತಂಗಿ ಎಸ್.ಮುರಳಿ, ಕುಮಾರಸ್ವಾಮಿ ಬಡಾವಣೆ

ರಸ್ತೆಗೆ ಡಾಂಬರು ಹಾಕಿ

ಪೀಣ್ಯ 2ನೇ ಹಂತದ ಕರಿಹೋಬನಹಳ್ಳಿ ಮುಖ್ಯರಸ್ತೆಯಲ್ಲಿರುವ ಸುಪ್ರಭಾತ ನಗರದಲ್ಲಿ ರಸ್ತೆ ಸಂಪರ್ಕ ಭಾರಿ ಹದಗೆಟ್ಟಿದೆ. ಜಲಮಂಡಳಿಯವರು ಒಳಚರಂಡಿ ಮತ್ತು ಕಾವೇರಿ ನೀರು ಪೂರೈಕೆ ಸಂಪರ್ಕಕ್ಕಾಗಿ ರಸ್ತೆಯನ್ನು ಅಗೆದು, ಈ ದುಸ್ಥಿತಿಗೆ ತಂದಿದ್ದಾರೆ. ಮಳೆ ಬಂದರೆ ಕೆಸರುಮಯವಾಗುವ ಈ ರಸ್ತೆಯಲ್ಲಿ ಸಂಚರಿಸಲು ಜನ ಹೈರಾಣಾಗುತ್ತಾರೆ.



ಸುಪ್ರಭಾತ ನಗರದ ರಸ್ತೆ

ಜನ ಮನೆಯಿಂದ ಹೊರಗೆ ಬರಲು ಹಿಂದೇಟು ಹಾಕುತ್ತಿದ್ದು, ಕೆಲವರು ಜಾರಿ ಬಿದ್ದಿರುವ ಘಟನೆಗಳೂ ನಡೆದಿವೆ. ಮಳೆ ಆರಂಭಗೊಂಡಿರುವ ಸಮಯದಿಂದ ಈ ರಸ್ತೆಯ ಸ್ಥಿತಿ ಹೇಳತೀರದು. ಇಷ್ಟಾದರೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕೆಸರಿನ ರಸ್ತೆಗೆ ಡಾಂಬರು ಹಾಕುವ ಮೂಲಕ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಿ.


ಶ್ರೀಧರ ಮೂರ್ತಿ, ಸುಪ್ರಭಾತ ನಗರದ ನಿವಾಸಿ

ಸುದ್ದಿ 2 ನಿಮಿಷ

‘ಪ್ರಾಮಾಣಿಕತೆ, ಸಮಯ ಪ್ರಜ್ಞೆಯಿಂದ ಕರ್ತವ್ಯ ನಿರ್ವಹಿಸಿ’

ಬೆಂಗಳೂರು: ‘ಜನರಿಗೆ ಒಳಿತಾಗುವ ಕೆಲಸಗಳನ್ನು ದಕ್ಷತೆ, ಪ್ರಾಮಾಣಿಕತೆ, ಸ್ಥಿತಪ್ರಜ್ಞೆ ಮತ್ತು ಸಮಯಪ್ರಜ್ಞೆಯಿಂದ ನಿರ್ವಹಿಸಬೇಕು’ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ರಾಷ್ಟ್ರೀಯ ಏಕತಾ ದಿವಸದ ಅಂಗವಾಗಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಭಾವಚಿತ್ರಕ್ಕೆ ಭಾನುವಾರ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ‘ಪಟೇಲ್ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕಿದೆ’ ಎಂದರು.



‘ನಾವೆಲ್ಲರೂ ಸರ್ಕಾರದ ಒಂದು ಭಾಗವಾಗಿದ್ದೇವೆ. ಜನತಂತ್ರದ ಮುಖಾಂತರ ಜನರ ಶ್ರೇಯೋಭಿವೃದ್ಧಿಗೆ ದುಡಿಯಬೇಕಿದೆ. ನಮ್ಮೆಲ್ಲರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಜನರ ಏಳಿಗೆಗಾಗಿ ದುಡಿದಾಗ ಮಾತ್ರ ಸರ್ಕಾರಿ ಕೆಲಸ, ದೇವರ ಕೆಲಸ ಎನ್ನುವುದು ಸಾರ್ಥಕವಾಗುತ್ತದೆ’ ಎಂದರು.

‘ವಿವಿಧ ಭಾಷೆ ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದ ಈ ದೇಶವನ್ನು ಒಗ್ಗೂಡಿಸಿ ಗಣರಾಜ್ಯವನ್ನಾಗಿಸಿ, ಜನತಾಂತ್ರಿಕ ವ್ಯವಸ್ಥೆ ತರುವಲ್ಲಿ ಪಟೇಲರ ಪಾತ್ರ ಬಹಳ ಹಿರಿದು. ಇಡೀ ದೇಶದ ರೈತ ಮತ್ತು ಕಾರ್ಮಿಕ ವರ್ಗದವನ್ನು ಜಾಗೃತಗೊಳಿಸಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಂತೆ ಮಾಡುವಲ್ಲಿ ಪಟೇಲರು ಪಾತ್ರ ಮಹತ್ವದ್ದು’ ಎಂದರು.

ಸಮರ್ಯ ಸಂಸ್ಥೆಯ ವಾರ್ಷಿಕೋತ್ಸವ

ಬೆಂಗಳೂರು: ನೈಸರ್ಗಿಕ ತ್ವಚೆ ಆರೈಕೆ ಮತ್ತು ಕೇಶ ಆರೈಕೆ ಉತ್ಪನ್ನಗಳ ತಯಾರಿಕಾ ಸಂಸ್ಥೆ ‘ಸಮರ್ಯ ನ್ಯಾಚುರಲ್ಸ್’ ತನ್ನ ಎರಡನೇ ವಾರ್ಷಿಕೋತ್ಸವವನ್ನು ಭಾನುವಾರ ಆಚರಿಸಿತು.

ಸಂಸ್ಥೆಯ ಸ್ಥಾಪಕಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಲಲಿತಾ ಟಿ. ಎಚ್,’ ಮನೆಯ ಜೀವನಾಧಾರವಾಗಿದ್ದ ವ್ಯಕ್ತಿಗಳನ್ನು ಕೋವಿಡ್‌ನಿಂದ ಕಳೆದುಕೊಂಡಿರುವ ಮಹಿಳೆಯರಿಗೆ ಹಾಗೂ ಆರ್ಥಿಕ ಬೆಂಬಲದ ಅಗತ್ಯವಿರುವ ಮಹಿಳೆಯರಿಗೆ ನೆರವಾಗಲು ಕೋವಿಡ್ ನಮಗೆ ಅವಕಾಶ ನೀಡಿದೆ. ಸಂಸ್ಥೆಯ ವಿತರಕರೆಲ್ಲರೂ ಮಹಿಳೆಯರಾಗಿದ್ದು, ದಕ್ಷಿಣ ಭಾರತದೆಲ್ಲೆಡೆ ವ್ಯಾಪಿಸಿದ್ದಾರೆ’ ಎಂದರು.

‘ಸಂಸ್ಥೆಯ ಮುಖ್ಯ ಉದ್ದೇಶವಾದ ಮಹಿಳೆಯರಿಗೆ ಆರ್ಥಿಕ ಅವಕಾಶಗಳನ್ನು ಪೂರೈಸುವ ತನ್ನ ಕಾರ್ಯಾಚರಣೆಗಳನ್ನು ವಿಸ್ತರಿಸಲಿದೆ. ಮುಂದಿನ ಮೂರು ವರ್ಷಗಳಲ್ಲಿ 200 ಮಹಿಳಾ ವಿತರಕರನ್ನು ನೇಮಿಸುವ ಹಾಗೂ ನೂರು ಮಹಿಳೆಯರಿಗೆ ಉದ್ಯೋಗ ನೀಡುವ ಗುರಿ ಹೊಂದಿದೆ’ ಎಂದರು.

ಕಾರ್ಯಕ್ರಮದಲ್ಲಿ ನಿರೂಪಕಿ ದಿವ್ಯ ಆಲೂರ್ ಭಾಗವಹಿಸಿದ್ದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಪರಿಚಯ

‘ಮಸಣದ ಹೂವಿ’ಗೆ ಕನ್ನಡದ ಕಿರೀಟ



ಮುನಿಯಪ್ಪ, ದೊಮ್ಮಲೂರು

ಬೆಂಗಳೂರು: ಹುಟ್ಟಿದಂದಿನಿಂದ ಇಂದಿನವರೆಗೂ ಸ್ಮಶಾನದಲ್ಲೇ ಬದುಕು ಸವೆಸಿದ ಜೀವವದು. ಇಹಲೋಕ ಯಾತ್ರೆ ಮುಗಿಸಿದವರನ್ನು ಗೌರವಯುತವಾಗಿ ಕಳುಹಿಸಿಕೊಡುವ ಕಾರ್ಯದಲ್ಲೇ ಬದುಕಿನ ಸಾರ್ಥಕತೆಯನ್ನು ಕಂಡ ಈ ಕಾಯಕ ಜೀವಿಗೆ ಇಳಿವಯಸ್ಸಿನಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯ ಗೌರವ ಅರಸಿಬಂದಿದೆ.

ದಿಕ್ಕಿಲ್ಲದ ಅನಾಥ ಶವಗಳ ಅಂತ್ಯ ಸಂಸ್ಕಾರವನ್ನು ಯಾವುದೇ ಫಲಾಪೇಕ್ಷೆ ಇಲ್ಲದೇ ಬದುಕಿನುದ್ದಕ್ಕೂ ಶ್ರದ್ಧೆಯಿಂದ ನಡೆಸುತ್ತಾ ಬಂದಿರುವ ದೊಮ್ಮಲೂರಿನ ಸ್ಮಶಾನ ನೌಕರ ಮುನಿಯಪ್ಪ ಅವರ ಕಾಯಕಶ್ರದ್ಧೆಯನ್ನು ರಾಜ್ಯ ಸರ್ಕಾರ ಗುರುತಿಸಿದೆ. ಯಾರೂ ಗಮನಿಸದ ‘ಮಸಣದ ಹೂವಿ’ನ ಕಂಪನ್ನು ಸರ್ಕಾರ ಗುರುತಿಸಿರುವುದು ಸ್ಮಶಾನದಲ್ಲಿ ಕಾಯಕ ನಿರತ ಕಾರ್ಮಿಕರಲ್ಲೂ ಸಾರ್ಥಕತೆಯ ಭಾವವನ್ನು ಮೂಡಿಸಿದೆ.

‘ನನ್ನ ತಂದೆ ತಾಯಿಯವರೂ ಸ್ಮಶಾನದ ಕಾರ್ಮಿಕರಾಗಿದ್ದವರು. ಹುಟ್ಟಿನಿಂದ ಇಲ್ಲಿವರೆಗೂ ನಾನೂ ಸ್ಮಶಾನದಲ್ಲೇ ಬದುಕನ್ನು ಕಳೆದಿದ್ದೇನೆ. 10 ವರ್ಷದವನಿದ್ದಾಗಲೇ ಶವಗಳ ಅಂತ್ಯಸಂಸ್ಕಾರದಲ್ಲಿ ತೊಡಗಿಸಿಕೊಂಡಿದ್ದೇನೆ. ಸರ್ಕಾರವು ಈ ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿದ್ದು ಸಂಜೆ ತಿಳಿಯಿತು. ಕೆಲವರು ಮನೆಗೆ ಬಂದು ಶಾಲು ಹೊದಿಸಿ ಸನ್ಮಾನಿಸಿದರು’ ಎಂದು ಮುನಿಯಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ದೊಮ್ಮಲೂರು ಪರಿಸರದ ಅನಾಥಶವಗಳ ಅಂತ್ಯಕ್ರಿಯೆ ನೆರವೇರಿಸುವ ಪುಣ್ಯ ಕಾರ್ಯದಲ್ಲಿ ತೃಪ್ತಿ ಕಾಣುತ್ತಿರುವ ಮುನಿಯಪ್ಪ ಇಳಿವಯಸ್ಸಿನಲ್ಲೂ ಹುಮ್ಮಸ್ಸಿನಿಂದ ಈ ಕೆಲಸ ಮುಂದುವರಿಸಿದ್ದಾರೆ. ಆರು ಹೆಣ್ಣು ಮಕ್ಕಳು ಹಾಗೂ ಒಬ್ಬ ಪುತ್ರನನ್ನು ಒಳಗೊಂಡ ತುಂಬು ಸಂಸಾರ ಅವರದು. ಅವರ ಕುಟುಂಬ ಈಗಲೂ ಸ್ಮಶಾನದಲ್ಲೇ ನೆಲೆಸಿದೆ. ಕುಟುಂಬದ ಸದಸ್ಯರೂ ಇದೇ ಕಾಯಕದಲ್ಲಿ ತೊಡಗಿದ್ದಾರೆ.

‘ನನ್ನ ಆಯಸ್ಸು ಹೇಗೋ ಕಳೆಯಿತು. ಕುಟುಂಬದವರಾದರೂ ಉತ್ತಮ ಬದುಕು ಕಟ್ಟಿಕೊಳ್ಳುವಂತಾದರೆ ನನ್ನ ಜೀವನ ಸಾರ್ಥಕವಾದಂತೆ’ ಎಂದು ಅವರು ಪ್ರಜಾವಾಣಿ’ಗೆ ತಿಳಿಸಿದರು.

ನಟ ದೇವರಾಜ್



ದೇವರಾಜ್

ಬೆಂಗಳೂರಿನಲ್ಲಿ ಜನಿಸಿ ಎಚ್‌ಎಂಟಿ ವಾಚ್ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೇಳೆ ಹವ್ಯಾಸಿ ರಂಗಭೂಮಿಗೆ ಕಾಲಿಟ್ಟು, ಕಲಾಕ್ಷೇತ್ರದಲ್ಲಿ ರಂಗಭೂಮಿಗೆ ಹೆಜ್ಜೆ ಇಟ್ಟು ಚಿತ್ರರಂಗ ಪ್ರವೇಶಿಸಿದವರು ನಟ ದೇವರಾಜ್. ಇಂದ್ರಜಿತ್ ಸಿನಿಮಾ ನಂತರ ಡೈನಾಮಿಕ್ ದೇವರಾಜ್ ಆದ ಇವರು ಮೂರೂವರೆ ದಶಕಗಳಿಂದ ಕನ್ನಡ, ತೆಲುಗು, ತಮಿಳು ಚಿತ್ರರಂಗದಲ್ಲಿ 250ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದಾರೆ.

1996ರಲ್ಲಿ ತೆರೆಕಂಡ ‘ಹುಲಿಯಾ’ ದೇವರಾಜ್ ಅವರ ವೃತ್ತಿಬದುಕಿಗೆ ಹೊಸ ತಿರುವು ನೀಡಿದ ಸಿನಿಮಾ. ಜೊತೆಗೆ ‘ಉತ್ಕರ್ಷ’,‘ತರ್ಕ’ದಲ್ಲಿನ ನೆಗೆಟಿವ್ ಶೇಡ್ ಪಾತ್ರಗಳು ಇಂದಿಗೂ ಖ್ಯಾತಿಯಲ್ಲಿವೆ. ಖಳಪಾತ್ರದ ಜೊತೆಗೆ ಸಾಲು ಸಾಲು ಚಿತ್ರಗಳಲ್ಲಿ ಪೊಲೀಸ್ ಅಧಿಕಾರಿ ಪಾತ್ರಗಳಲ್ಲೂ ಮಿಂಚಿದ್ದ ದೇವರಾಜ್ ಅವರಿಗೆ ‘ವೀರಪ್ಪನ್’ ಚಿತ್ರಕ್ಕೆ ಅತ್ಯುತ್ತಮ ನಟ ರಾಜ್ಯ ಪ್ರಶಸ್ತಿ ದೊರಕಿತ್ತು. ಇವರು ನಟಿಸಿದ್ದ ‘ಹೆಬ್ಬೆಟ್ ರಾಮಕ್ಕ’ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿಯೂ ದೊರಕಿತ್ತು.

ಸಿ. ನಾಗರಾಜ್



ಸಿ.ನಾಗರಾಜ್

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದವರು. ಇವರು ಸತತವಾಗಿ 35 ವರ್ಷಗಳ ಕಾಲ ಶ್ರಮಪಟ್ಟು ಪವರ್ ಇಂಟರ್ ಕಲ್ಟಿವೇಟರ್ ಯಂತ್ರ ತಯಾರಿಸಿದ್ದಾರೆ. ಇದು ಟ್ರ್ಯಾಕ್ಟರ್, ಟಿಲ್ಲರ್ ಹಾಗೂ ಎತ್ತುಗಳ ಉಪಯೋಗಕ್ಕಿಂತಲೂ ಕಡಿಮೆ ವೆಚ್ಚದಲ್ಲಿ ಉಳುಮೆ ಮಾಡಲಿಕ್ಕೆ ಸಹಕಾರಿಯಾಗಿದೆ.

ಎಸ್.ಎಸ್.ಎಲ್.ಸಿ ವರೆಗೂ ವ್ಯಾಸಂಗ ಮಾಡಿರುವ ಅವರು, ಗ್ರಾಮಾಂತರ ಪ್ರದೇಶದಲ್ಲಿ ಕಳೆ ತೆಗೆಯುವುದು ಸೇರಿದಂತೆ ವಿವಿಧ ಕಸುಬುಗಳಲ್ಲಿ ಕೂಲಿ ಕಾರ್ಮಿಕರು ಕಷ್ಟಪಡುವುದನ್ನು ನೋಡಿ ರೈತರಿಗೆ ಉಪಯೋಗವಾಗುವ ನಿಟ್ಟಿನಲ್ಲಿ ಈ ಯಂತ್ರ ತಯಾರಿಸಿದ್ದಾರೆ.

ಡಾ. ರಾಘವೇಂದ್ರ ಶೆಣೈ



ಡಾ.ರಾಘವೇಂದ್ರ ಶೆಣೈ

ಬೆಂಗಳೂರು: ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿರುವ ನಗರದ ಯೋಗಗುರು ಡಾ. ರಾಘವೇಂದ್ರ ಶೆಣೈ ಅವರು ಯೋಗ ಶಿಕ್ಷಣ ಬೋಧಿಸುವಲ್ಲಿ ತೊಡಗಿಸಿಕೊಂಡಿದ್ದಾರೆ.

ಪ್ರತಿಯೊಬ್ಬರಿಗೂ ಯೋಗ ಶಿಕ್ಷಣ ನೀಡಬೇಕೆಂಬ ಮಹದಾಸೆಯಿಂದ 2007ರಲ್ಲಿ ‘ನಿರ್ಮಯ ಯೋಗ ಕುಟೀರಂ’ ಸ್ಥಾಪಿಸಿ ಸಾವಿರಾರು ಆಸಕ್ತರಿಗೆ ಯೋಗ ಕಲಿಸುತ್ತ ಬಂದಿದ್ದಾರೆ.‘ಜೀವನವೇ ಒಂದು ಯೋಗವಾಗಬೇಕು, ಸ್ವಸ್ಥ ಜೀವನಕ್ಕೆ ಯೋಗವೇ ಸಹಕಾರಿ’ ಎಂಬ ತತ್ವದ ಅಡಿಯಲ್ಲಿ ಯೋಗ ಶಿಕ್ಷಣ ನಿರಂತರವಾಗಿ ನಡೆದು ಬಂದಿದೆ. ಶೆಣೈ ಅವರು ಪ್ರಖ್ಯಾತ ಯೋಗ ಗುರುಗಳಾದ ಬಿ.ಕೆ.ಎಸ್ ಅಯ್ಯಂಗಾರ್ ಅವರ ಶಿಷ್ಯರಾಗಿದ್ದಾರೆ. ಇವರ ಬಳಿ ಯೋಗ ಕಲಿತವರು ಸ್ವಸ್ಥ ಹಾಗೂ ಸಮಭಾವದ ಜೀವನ ನಡೆಸುತ್ತಿದ್ದಾರೆ.

ಶ್ಯಾಮರಾಜ್



ಶ್ಯಾಮರಾಜ್

ಶ್ಯಾಮರಾಜ್ ಅವರು, ಬೆಂಗಳೂರಿನ ಮೌರ್ಯ ಹೋಟೆಲ್‌ನ ವ್ಯವಸ್ಥಾಪಕ ನಿರ್ದೇಶಕರು. ಆದರಾತಿಥ್ಯವನ್ನು ಅತಿಥಿಗಳಿಗೆ ನೀಡಬೇಕೆಂಬ ಮಹದಾಸೆಯಿಂದ ಮೌರ್ಯ ಹೋಟೆಲ್ ಸ್ಥಾಪಿಸಿದ ಶ್ಯಾಮರಾಜು ಅವರು, ಈಗಲೂ ತಮ್ಮ ಪರಂಪರೆಯನ್ನು ಮುಂದುವರಿಸಿದ್ದಾರೆ.ಇವರು ದಕ್ಷಿಣ ಭಾರತ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಸಂಘದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರೊ.ಜಿ.ಯು. ಕುಲಕರ್ಣಿ



ಪ್ರೊ.ಜಿ.ಯು. ಕುಲಕರ್ಣಿ

ಬೆಂಗಳೂರಿನ ಪ್ರೊ.ಜಿ.ಯು.ಕುಲಕರ್ಣಿ ಹಲವಾರು ಸಂಶೋಧನೆ ಹಾಗೂ ಅವಿಷ್ಕಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅವರು ಸಂಶೋಧನೆಗೆ ಸಂಬಂಧಿಸಿದ ಉಪಯುಕ್ತ ಪ್ರಬಂಧಗಳನ್ನು, ಪುಸ್ತಕಗಳನ್ನು ಬರೆದಿದ್ದಾರೆ. ಪ್ರಸ್ತುತ ಜವಾಹರ್ ಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ ಅಧ್ಯಕ್ಷರಾಗಿದ್ದಾರೆ. ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದಾರೆ.

ಎಚ್.ವಿ. ಸಾವಿತ್ರಿ



ಎಚ್.ವಿ. ಸಾವಿತ್ರಿ

ಬೆಂಗಳೂರಿನವರಾದ ಡಾ. ಸಾವಿತ್ರಿ ಅವರು ಸಸ್ಯಗಳ ವೈರಸ್‌ಗಳನ್ನು ಕುರಿತು ಸಂಶೋಧನೆ ನಡೆಸಿರುವ ವಿಜ್ಞಾನಿ. ಜೀವರಸಾಯನ ವಿಜ್ಞಾನದಲ್ಲಿ ಸಂಶೋಧನೆ ನಡೆಸಿ 1977ರಲ್ಲಿ ಡಾಕ್ಟರೇಟ್ ಪದವಿ ಪಡೆದರು. ಐಐಎಸ್ಸಿಯಲ್ಲಿ ಪ್ರಾಧ್ಯಾಪಕ ಹುದ್ದೆ ನಿರ್ವಹಿಸುತ್ತಿರುವ ಸಾವಿತ್ರಿ ಅವರು ಮನುಷ್ಯರ ವಂಶವಾಹಿನಿ ಕುರಿತು ಸಂಶೋಧನೆ ಮಾಡಿದ್ದಾರೆ. 100ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ‘ಜೀವರಸಾಯನ ವಿಜ್ಞಾನ’ ವಿಭಾಗದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.


ಕೆ.ಗೋಪಿನಾಥ್



ಗೋಪಿನಾಥ್

ಜನಿಸಿದಾಗಲೇ ಅಂಗವೈಕಲ್ಯ ಕಾಡಿದ್ದ ಕೆ.ಗೋಪಿನಾಥ್ ಅವರು ಬೆಂಗಳೂರಿನ ರಾಜರಾಜೇಶ್ವರಿ ನಗರ ನಿವಾಸಿ. 18 ವರ್ಷಗಳಿಂದ ಪ್ಯಾರಾ ಕ್ರೀಡೆಯಲ್ಲಿ ಸಾಧನೆ ಮಾಡುತ್ತಿದ್ದಾರೆ. ಮೊದಲು ಪ್ಯಾರಾ ಬ್ಯಾಡ್ಮಿಂಟನ್ ಪಟುವಾಗಿದ್ದ ಅವರು ಸದ್ಯ ವ್ಹೀಲ್ ಚೇರ್ ಟೆನಿಸ್ ಆಟಗಾರ. ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಹತ್ತಾರು ಪದಕಗಳನ್ನು ಗೆದ್ದಿದ್ದು ಖಾಸಗಿ ಕಂಪನಿಯ ಉದ್ಯೋಗಿಯಾಗಿದ್ದಾರೆ.

ಎ.ನಾಗರಾಜ್



ನಾಗರಾಜ್

ಕಬಡ್ಡಿ ಕೋಚಿಂಗ್‌ನಲ್ಲಿ ಹೆಸರು ಮಾಡಿರುವ ಎ.ನಾಗರಾಜ್ ಅವರು ಇಂಡಿಯನ್ ಟೆಲಿಫೋನ್ ಇಂಡಸ್ಟ್ರಿಯಲ್ಲಿ 22 ವರ್ಷ ತರಬೇತಿ ನೀಡಿ ಅನೇಕ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಆಟಗಾರರನ್ನು ತಯಾರು ಮಾಡಿದ್ದಾರೆ. ಹೊನ್ನಪ್ಪ, ತೇಜಸ್ವಿನಿ ಬಾಯಿ, ಮಮತಾ ಪೂಜಾರಿ ಮೊದಲಾದವರು ನಾಗರಾಜ್ ಅವರ ಶಿಷ್ಯಂದಿರು. ಹೆಸರಘಟ್ಟದಲ್ಲಿ ಜನಿಸಿದ ನಾಗರಾಜ್ ಈಗ ಗೋವಿಂದರಾಜನಗರ ನಿವಾಸಿ.

ಡಾ.ಎಂ.ಕೆ. ಸುದರ್ಶನ್



ಡಾ.ಎಂ. ಕೆ.ಸುದರ್ಶನ್

ಬೆಂಗಳೂರು: ಹೆಸರಾಂತ ವೈದ್ಯ ಡಾ.ಎಂ.ಕೆ. ಸುದರ್ಶನ್ ಅವರನ್ನು ರಾಜ್ಯ ಸರ್ಕಾರವು ಈ ಸಾಲಿನಲ್ಲಿ ವೈದ್ಯಕೀಯ ಕ್ಷೇತ್ರದ ಗಣ್ಯರಿಗೆ ನೀಡುವ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯ ಪ್ರಾಧ್ಯಾಪಕರಾಗಿ, ಡೀನ್ ಆಗಿ ಹಾಗೂ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿರುವ ಡಾ.ಎಂ.ಕೆ. ಸುದರ್ಶನ್ ಅವರು ವೈದ್ಯಕೀಯ ಶಿಕ್ಷಣದಲ್ಲಿ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಬದಲಾವಣೆ ತರಲು ಶ್ರಮಿಸಿದವರು. ವೃತ್ತಿ ಬದುಕಿನಲ್ಲಿ ಹತ್ತು ಹಲವು ಹುದ್ದೆಗಳನ್ನು ಅಲಂಕರಿಸಿರುವ ಇವರು ವೈದ್ಯಕೀಯ ಕ್ಷೇತ್ರಕ್ಕೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡುತ್ತಿದ್ದಾರೆ.

ರಾಜ್ಯ ಸರ್ಕಾರ ರಚಿಸಿದ್ದ ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರಾಗಿ ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಮಹತ್ತರ ಪಾತ್ರ ನಿರ್ವಹಿಸಿದ್ದಾರೆ. ಪ್ರಸ್ತುತ ಕಿಮ್ಸ್ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಡಾ.ಎ.ಆರ್.ಪ್ರದೀಪ್




ಡಾ.ಎ.ಆರ್. ಪ್ರದೀಪ್

ಬೆಂಗಳೂರು: ನಗರದ ಖ್ಯಾತ ದಂತ ವೈದ್ಯ ಡಾ.ಎ.ಆರ್. ಪ್ರದೀಪ್ ಅವರಿಗೆ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಒಲಿದಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾಗಿರುವ ಇವರು ಗೌರವ ಪ್ರಾಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರ ಸೇವಾ ಮನೋಭಾವವನ್ನು ಗುರುತಿಸಿದ್ದ ರಾಜ್ಯ ಸರ್ಕಾರ ಡಾ.ಬಿ.ಸಿ.ರಾಯ್ ಪ್ರಶಸ್ತಿ ನೀಡಿ ಗೌರವಿಸಿತ್ತು. ಅಮೆರಿಕನ್ ಕಾಲೇಜ್ ಆಫ್ ಕಾರ್ಡಿಯಾಲಜಿಯಿಂದ ಹಾಗೂ ಇಂಡಿಯನ್ ಕಾಲೇಜ್ ಆಫ್ ಕಾರ್ಡಿಯಾಲಜಿಯಿಂದ ಫೆಲೋಷಿಪ್ ಕೂಡ ಪಡೆದಿದ್ದಾರೆ. ಹಲವಾರು ಅಂತಾರಾಷ್ಟ್ರೀಯ ವಿಚಾರಸಂಕಿರಣಗಳಲ್ಲಿ ವಿಚಾರ ಮಂಡನೆ ಮಾಡಿರುವ ಡಾ.ಪ್ರದೀಪ್ ಹೃದ್ರೋಗದ ಕುರಿತು ಹಲವಾರು ಲೇಖನಗಳನ್ನು ರಚಿಸಿದ್ದಾರೆ. ಸುಮಾರು 60ಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ.

‘ಸುಗಮ ಸಂಗೀತ ಕ್ಷೇತ್ರ ಕಡೆಗಣನೆ’



ಮುದ್ದುಕೃಷ್ಣ

ಬೆಂಗಳೂರು: ‘ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯಲ್ಲಿ ಸುಗಮ ಸಂಗೀತ ಕ್ಷೇತ್ರವನ್ನು ಕಡೆಗಣಿಸಲಾಗಿದೆ’ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ ಬೇಸರ ವ್ಯಕ್ತಪಡಿಸಿದ್ದಾರೆ.

‘ಕರ್ನಾಟಕದಲ್ಲಿ ಅಲ್ಲದೇ, ದೇಶ ವಿದೇಶಗಳಲ್ಲಿಯೂ ಕನ್ನಡದ ಕವಿಗಳು ಹಾಗೂ ಕವಿತೆಗಳನ್ನು ಕಾವ್ಯಗಾಯನದ ಮೂಲಕ ಸುಗಮ ಸಂಗೀತ ಕ್ಷೇತ್ರದ ಕಲಾವಿದರು ಜನಪ್ರಿಯಗೊಳಿಸಿದ್ದಾರೆ. ಆದರೆ, ಈ ಕ್ಷೇತ್ರವನ್ನು ಕಡೆಗಣಿಸಲಾಗಿದೆ. ಸರ್ಕಾರದ ಈ ನಡೆ ಖಂಡನೀಯ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಂಡಿನ ಚಕಮಕಿ:3 ಮಹಿಳಾ ನಕ್ಸಲರು ಹತ

ರಾಯಪುರ (ಪಿಟಿಐ): ಛತ್ತೀಸಗಡದ ದಾಂತೇವಾಡ ಜಿಲ್ಲೆಯಲ್ಲಿ ಭಾನುವಾರ ಭದ್ರತಾ ಪಡೆಗಳೊಂದಿಗೆ ನಡೆಸಿದ ಗುಂಡಿನ ಚಕಮಕಿಯಲ್ಲಿ ಮೂವರು ಮಹಿಳಾ ನಕ್ಸಲರು ಹತರಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಜಿಲ್ಲಾ ಮೀಸಲು ಪಡೆಯ ಯೋಧರು ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ಸಂದರ್ಭದಲ್ಲಿ ಸಂಜೆ 6 ಗಂಟೆಗೆ ನಕ್ಸಲರೊಂದಿಗೆ ಗುಂಡಿನ ಚಕಮಕಿ ನಡೆಯಿತು. ಈ ವೇಳೆ 3 ಮಹಿಳಾ ನಕ್ಸಲರು ಹತರಾದರು’ ಎಂದು ಅವರು ಹೇಳಿದ್ದಾರೆ.


ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವ:ಅತಿಥಿ–ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ, ಸ್ಥಳ–ಪಾಲಿಕೆ ಕೇಂದ್ರ ಕಚೇರಿ ಆವರಣ, ಬೆಳಿಗ್ಗೆ 8

ಕನ್ನಡ ರಾಜ್ಯೋತ್ಸವ ಧ್ವಜಾರೋಹಣ:ಅತಿಥಿಗಳು– ಬಿಜೆಪಿ ರಾಜ್ಯ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ್, ಸಿದ್ದರಾಜು, ಸ್ಥಳ–ಜಗನ್ನಾಥ ಭವನ, ಮಲ್ಲೇಶ್ವರ, ಬೆಳಿಗ್ಗೆ 8.45

ಕನ್ನಡ ರಾಜ್ಯೋತ್ಸವದ ಅಂಗವಾಗಿ ಬಡ ಮಕ್ಕಳಿಗೆ ಪುಸ್ತಕ ವಿತರಣೆ ಹಾಗೂ ಅನ್ನದಾನ: ಧ್ವಜಾರೋಹಣ–ಎಸ್.ಎನ್.ಮೋಹನ್, ಆಯೋಜನೆ–ಸಿಂಹಸ್ವಪ್ನ ಕನ್ನಡಿಗರ ಬಳಗ, ಸ್ಥಳ–ಮೈಸೂರು ಬ್ಯಾಂಕ್ ಕಾಲೊನಿ ವೃತ್ತ, ಬೆಳಿಗ್ಗೆ 9

ಕನ್ನಡ ರಾಜ್ಯೋತ್ಸವ:ಅತಿಥಿ–ಶಿವರಾಜ್ ಬ್ಯಾಡರಹಳ್ಳಿ, ಅಧ್ಯಕ್ಷತೆ– ರೋಶನ್ ಡೇವಿಡ್ ಪೆರೇರಾ, ಆಯೋಜನೆ, ಸ್ಥಳ–ಸೇಂಟ್ ಜೋಸೆಫ್ ಪದವಿ ಪೂರ್ವ ಕಾಲೇಜು, ಲಯೋಲ ಹಾಲ್, ಫೀಲ್ಡ್‌ಮಾರ್ಷಲ್ ಕೆ.ಎಂ.ಕಾರ್ಯಪ್ಪ ರಸ್ತೆ, ಬೆಳಿಗ್ಗೆ 9



ಧನಂಜಯ್

‘ಪುಸ್ತಕ ಜಾತ್ರೆ’: ಉದ್ಘಾಟನೆ–ನಟ ವಸಿಷ್ಠ ಸಿಂಹ, ಅತಿಥಿ–ನಟ ಧನಂಜಯ, ದೀಪಾರಾಧನೆ–ನಟಿ ರಂಜನಿ ರಾಘವನ್, ಅತಿಥಿ ಲೇಖಕರು–ಚಂದ್ರಶೇಖರ ಕಂಬಾರ, ಹಂಪನಾ, ಕಮಲಾ ಹಂಪನಾ, ದೊಡ್ಡರಂಗೇಗೌಡ, ಎಚ್.ಎಸ್.ವೆಂಕಟೇಶ ಮೂರ್ತಿ, ನರಹಳ್ಳಿ ಬಾಲಸುಬ್ರಹ್ಮಣ್ಯ, ಮಲ್ಲೇಪುರಂ ಜಿ.ವೆಂಕಟೇಶ, ಬಿ.ಆರ್.ಲಕ್ಷ್ಮಣರಾವ್, ಎಂ.ಎಸ್.ಆಶಾದೇವಿ, ರಾ.ನಂ. ಚಂದ್ರಶೇಖರ, ವಸುಂಧರಾ ಭೂಪತಿ, ಆಯೋಜನೆ, ಸ್ಥಳ–ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 10.30

ನಾಗರಿಕರ ಮನೆ ಬಾಗಿಲಿಗೆ ಸರ್ಕಾರದ ಸೇವೆಗಳನ್ನು ನೀಡುವ ‘ಜನಸೇವಕ’ ಯೋಜನೆಗೆ ಚಾಲನೆ:ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಅತಿಥಿಗಳು–ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಹಾಗೂ ಎಂ.ರಾಜೀವ್ ಚಂದ್ರಶೇಖರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಚಿವರಾದ ಆರ್.ಅಶೋಕ, ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ–ಇ-ಆಡಳಿತ ಇಲಾಖೆ, ಸ್ಥಳ–ವಿಧಾನಸೌಧದ ಪೂರ್ವ ದ್ವಾರದ ಆವರಣ, ಬೆಳಿಗ್ಗೆ 11

‘ಕನ್ನಡ ಪ್ರಜ್ಞೆಯ ಸುತ್ತಮುತ್ತ’ ಪುಸ್ತಕ ಬಿಡುಗಡೆ:ವಿನಯಾ ವಕ್ಕುಂದ, ಅಧ್ಯಕ್ಷತೆ–ವೂಡೇ ಪಿ.ಕೃಷ್ಣ, ಪುಸ್ತಕ ಪರಿಚಯ–ಮೋಹನ ಚಂದ್ರಗುತ್ತಿ, ಅತಿಥಿಗಳು–ಕೆ.ಎಸ್. ವಿಮಲಾ, ಜಿ.ಚಂದ್ರಶೇಖರ್, ಎನ್.ಕೆ.ವಸಂತರಾಜ್, ಡಿ.ಸಿ.ಗೀತಾ, ನಾಗರೇಖಾ ಗಾಂವಕರ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

ರಾಜ್ಯೋತ್ಸವ ಪ್ರಶಸ್ತಿ ಪ್ರದಾನ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉದ್ಘಾಟನೆ–ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಅತಿಥಿ–ಸಂಸದ ತೇಜಸ್ವಿ ಸೂರ್ಯ, ಅಧ್ಯಕ್ಷತೆ–ಶಾಸಕ ಉದಯ್ ಬಿ.ಗರುಡಾಚಾರ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6

ದೀಪಾವಳಿ ವಿಶೇಷ ತೈಲಾಭ್ಯಂಜನ ಇಂದಿನಿಂದ

ಬೆಂಗಳೂರು: ರಾಜಾಜಿನಗರದಲ್ಲಿರುವ ಕ್ಷೇಮ ಆರೋಗ್ಯಧಾಮವು ದೀಪಾವಳಿ ಪ್ರಯುಕ್ತ ನ.1ರಿಂದ ನ.6ರವರೆಗೆ ವಿಶೇಷ ತೈಲಾಭ್ಯಂಜನ ಸಪ್ತಾಹವನ್ನು ಆಯೋಜಿಸಿದೆ.

ಆರೋಗ್ಯವನ್ನು ಕಾಪಾಡಿಕೊಳ್ಳಲು ಈ ವಿಶೇಷ ತೈಲಾಭ್ಯಂಜನ ಸಹಕಾರಿ. ಬೆಳಿಗ್ಗೆ 7ರಿಂದ ಸಂಜೆ 7 ಗಂಟೆಯವರೆಗೆ ತೈಲಾಭ್ಯಂಜನ ನಡೆಯಲಿದ್ದು, ಜನರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಕೇಂದ್ರವು ಮನವಿ ಮಾಡಿಕೊಂಡಿದೆ.

ಸಂಪರ್ಕಕ್ಕೆ ಮೊ.: 9845572955

ಸಂಸ್ಕೃತಿ ಉತ್ಸವ ಇಂದು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕರ್ನಾಟಕ ಸಂಸ್ಕೃತಿ ವಿದ್ಯಾಪೀಠ ವತಿಯಿಂದ ಪಟ್ಟಣಗೆರೆಯಲ್ಲಿ ರಾಜ್ಯೋತ್ಸವ ಅಂಗವಾಗಿ 'ನುಡಿಹಬ್ಬ-3' ಹಮ್ಮಿಕೊಳ್ಳಲಾಗಿದೆ.

ನ.1ರಂದು ಬೆಳಿಗ್ಗೆ 8.30ಕ್ಕೆ ಶಾಲಾ ವಿದ್ಯಾರ್ಥಿಗಳಿಗಾಗಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಪೋಷಕರಿಗೂ ನಾಡಿನ ಸಂಸ್ಕೃತಿ, ಪರಂಪರೆ, ಇತಿಹಾಸ ತಿಳಿಸಲು ಸಂಸ್ಕೃತಿ ಉತ್ಸವ ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲ ಡಿ.ಬಿ.ವಿವೇಕಾನಂದ ತಿಳಿಸಿದ್ದಾರೆ.

ವೈದ್ಯರ ಸಮಿತಿಯಿಂದ ಸುಕ್ರಜ್ಜಿಗೆ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಕಾರವಾರ: ಉಸಿರಾಟದ ಸಮಸ್ಯೆ ಮತ್ತು ಅಧಿಕ ರಕ್ತದೊತ್ತಡಕ್ಕಾಗಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಜಾನಪದ ಗಾಯಕಿ ಸುಕ್ರಿ ಬೊಮ್ಮುಗೌಡ ಚೇತರಿಸಿಕೊಳ್ಳುತ್ತಿದ್ದಾರೆ. ಅವರ ಚಿಕಿತ್ಸೆಗಾಗಿ ತಜ್ಞ ವೈದ್ಯರ ಸಮಿತಿಯನ್ನು ರಚಿಸಲಾಗಿದೆ ಎಂದು ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಡಾ.ಗಜಾನನ ನಾಯಕ ತಿಳಿಸಿದ್ದಾರೆ.


ಸುಕ್ರಿ ಬೊಮ್ಮುಗೌಡ

ಸಮಿತಿಯಲ್ಲಿ ಶ್ವಾಸಕೋಶ ತಜ್ಞ ಡಾ.ಶ್ರೀನಿವಾಸ, ಮೂತ್ರಪಿಂಡ ತಜ್ಞ ಡಾ.ರಘುರಾಮ ಭಟ್, ಫಿಜಿಷಿಯನ್ ಡಾ.ಅಮಿತ್ ಕಾಮತ್, ಅರಿವಳಿಕೆ ತಜ್ಞ ಡಾ.ಮಂಜುನಾಥ ಭಟ್ ಇದ್ದಾರೆ. ಇವರೊಂದಿಗೆ ಹುಬ್ಬಳ್ಳಿ 'ಕಿಮ್ಸ್'ನ ಹೃದ್ರೋಗ ವಿಭಾಗದ ಮುಖ್ಯಸ್ಥ ಡಾ.ಎನ್.ಎಸ್.ಹಿರೇಗೌಡ ಅವರೂ ವಿಡಿಯೊ ಕಾನ್ಫರೆನ್ಸ್ ಮೂಲಕ ಜೊತೆಯಾಗುತ್ತಿದ್ದಾರೆ.

ಪ್ರಸ್ತುತ ಸುಕ್ರಿ ಬೊಮ್ಮುಗೌಡ ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	6,711	6,478
ಹಾರಂಗಿ	2,859	2,858.12	800	1,050
ಕಬಿನಿ	2,284.00	2,283.98	2,140	700
ಹೇಮಾವತಿ	2,922	2,909.77	1,683	3,596
ಲಿಂಗನಮಕ್ಕಿ	1,819	1,814.75	2,930	-
ಸೂಪಾ (ಮೀ)	564	556.15	1,387	4,029
ಮಾಣಿ	594	587.96	414	-
ತುಂಗಭದ್ರಾ	1,633	1,632.97	11,433	11,073
ಮಲಪ್ರಭಾ	2,079.5	2,078.40	-	1,694
ಘಟಪ್ರಭಾ	2,175	2,172.86	-	3,009
ಭದ್ರಾ	186	185.11	3,520	3,787
ಆಲಮಟ್ಟಿ (ಮೀ)	519.6	519.16	-	11,400
ನಾರಾಯಣಪುರ (ಮೀ)	492.25	491.53	9,350	11,700

* ನೆಲಮಟ್ಟದಿಂದ

'ಕೆ–ಸೆಟ್' ಫಲಿತಾಂಶ ನಾಳೆ ಪ್ರಕಟ

ಮೈಸೂರು: ಮೈಸೂರು ವಿಶ್ವವಿದ್ಯಾಲಯವು 2021ರ ಜುಲೈನಲ್ಲಿ ನಡೆಸಿದ್ದ ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆಯ (ಕೆ–ಸೆಟ್) ಫಲಿತಾಂಶವನ್ನು ಮಂಗಳವಾರ (ನ.2) ಮಧ್ಯಾಹ್ನ ಪ್ರಕಟಿಸಲಾಗುವುದು ಎಂದು ಕುಲಸಚಿವ ಪ್ರೊ.ಆರ್.ಶಿವಪ್ಪ ತಿಳಿಸಿದ್ದಾರೆ.

kset.uni-mysore.ac.in ವೆಬ್‌ಸೈಟ್‌ನಲ್ಲಿ ಫಲಿತಾಂಶ ಲಭ್ಯವಾಗಲಿದೆ. ರಾಜ್ಯದ 11 ಕೇಂದ್ರಗಳಲ್ಲಿ 41 ವಿಷಯಗಳಿಗೆ ಪರೀಕ್ಷೆ ನಡೆಸಲಾಗಿತ್ತು.

6 ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡಿನಲ್ಲಿ ನವೆಂಬರ್ 1 ರಿಂದ 4 ರವರೆಗೆ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಳ್ಳಾರಿ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಇದೇ 4ರವರೆಗೆ ಹೆಚ್ಚು ಮಳೆಯಾಗುವ ಸಾಧ್ಯತೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕರಾವಳಿಯ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ನ.2ರಿಂದ ಭಾರಿ ಮಳೆಯಾಗಲಿದೆ.

ಹಾಸನದಲ್ಲಿ ಧಾರಾಕಾರ ಮಳೆ

ಹಾಸನ: ನಗರದಲ್ಲಿ ಶನಿವಾರ ರಾತ್ರಿ ಮತ್ತು ಭಾನುವಾರ ಸಂಜೆ ಗುಡುಗು ಸಿಡಿಲಿನ ಆರ್ಭಟದೊಂದಿಗೆ ಜೋರು ಮಳೆ ಸುರಿದಿದೆ.

ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣವಿತ್ತು. ಸಂಜೆ 5.45ಕ್ಕೆ ಮಳೆ ಆರಂಭವಾಯಿತು. ತಾಸಿಗೂ ಹೆಚ್ಚು ಕಾಲ ಧಾರಾಕಾರವಾಗಿ ಸುರಿಯಿತು.

ಸಕಲೇಶಪುರದಲ್ಲಿ ಸಂಜೆ ಧಾರಾಕಾರ ಮಳೆಯಾಗಿದೆ.

ಉಳಿದ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸೇರಿದಂತೆ ಸಾಧಾರಣ ಮಳೆಯಾಗಬಹುದು. ನ.5 ರಿಂದ ರಾಜ್ಯದಾದ್ಯಂತ ಮಳೆ ಹೆಚ್ಚಾಗುವ ಸಾಧ್ಯತೆಗಳಿವೆ ಎಂದೂ ಇಲಾಖೆ ಹೇಳಿದೆ.

ಮಳೆ-ಎಲ್ಲಿ, ಎಷ್ಟು?: ಹಾಸನದಲ್ಲಿ ಭಾನುವಾರ 6 ಸೆಂ.ಮೀ ಮಳೆಯಾಗಿದೆ. ಕಾರ್ಕಳ 5, ಬೆಳ್ತಂಗಡಿ, ಸುಬ್ರಹ್ಮಣ್ಯ, ಅರಕಲಗೂಡು, ಬಳ್ಳಾರಿ ಹಾಗೂ ಚಿಕ್ಕಬಳ್ಳಾಪುರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಕಾರವಾರದಲ್ಲಿ 34 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಬೀದರ್‌ನಲ್ಲಿ 17 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಬೀದಿ ನಾಯಿಗಳ ದಾಳಿ: ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ: ಇಲ್ಲಿನ ಸಂತೋಷ ನಗರದಲ್ಲಿ ಭಾನುವಾರ ಬೀದಿನಾಯಿಗಳ ದಾಳಿಯಿಂದ ಖಲಂದರ್ ಖಾನ್ (11) ಎಂಬ ಬಾಲಕ ಮೃತಪಟ್ಟಿದ್ದಾನೆ.

ಖಲಂದರ್ ತಂದೆ ಬಾಬಾಜಾನ್ ಖಾನ್ ಅಂಗಡಿಯೊಂದರ ಬಳಿ ಇದ್ದರು. ಅಲ್ಲಿಗೆ ತೆರಳುತ್ತಿದ್ದ ಖಲಂದರ್ ಮೇಲೆ ಹತ್ತಕ್ಕೂ ಹೆಚ್ಚು ಬೀದಿ ನಾಯಿಗಳು ದಾಳಿ ನಡೆಸಿದ್ದು, ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ಮಾಂಸ ಮಾರಾಟದ ಅಂಗಡಿಗಳ ತ್ಯಾಜ್ಯವನ್ನು ಸಂತೋಷ ನಗರದ ಬಳಿ ಎಸೆಯಲಾಗುತ್ತಿದೆ. ಈ ತ್ಯಾಜ್ಯವನ್ನು ತಿನ್ನುತ್ತಿದ್ದ ನಾಯಿಗಳು ಅದೇ ರಸ್ತೆಯಲ್ಲಿ ಹೋಗುತ್ತಿದ್ದ ಬಾಲಕನ ಮೇಲೆ ದಾಳಿ ನಡೆಸಿವೆ.

ಸ್ಥಳಕ್ಕೆ ಪೊಲೀಸರು, ನಗರಸಭೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಒಳನೋಟ

'ಮತಾಸ್ತ್ರ'ದ ಮಮಕಾರ

ಬೆಂಗಳೂರು: 'ನಾಡಿನಗಲ ಕೋಮು ಕಿಡಿ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಅ.31) ಪ್ರಕಟವಾದ 'ಒಳನೋಟ' ವರದಿಗೆ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ನೈತಿಕ ನಿಲುವುಗಳಿಗೆ ಧಕ್ಕೆ ಆಗದಿರಲಿ



ನಮ್ಮದು ಪ್ರಜಾಪ್ರಭುತ್ವ ದೇಶ. ಇಲ್ಲಿ ಪ್ರಜೆಗಳ ತೀರ್ಪು ಅಂತಿಮ. ರಾಜಕೀಯ ಶಕ್ತಿಗಳು ಪ್ರಜಾಪ್ರಭುತ್ವವನ್ನು ಕಸಿಯುವ ಕೆಲಸ ಮಾಡಬಾರದು. ಚುನಾವಣೆ ಎಂಬ ಪವಿತ್ರ ಕಾರ್ಯವು ಹಿಂಸಾತ್ಮಕ ಪ್ರತಿರೂಪ ಪಡೆಯದಂತೆ ಕಾಪಾಡುವುದು ಎಲ್ಲರ ಕರ್ತವ್ಯ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸರ್ವಾಧಿಕಾರಕ್ಕೆ ಅವಕಾಶ ಇಲ್ಲ. ಚುನಾವಣೆ ಸಂದರ್ಭಗಳು ಹಿಂಸಾತ್ಮಕ ಕೃತ್ಯಗಳಿಗೆ ಕಾರಣವಾಗಿರುವುದನ್ನು ನೋಡಿದ್ದೇವೆ. ಜನರ ನೈತಿಕ ನಿಲುವುಗಳಿಗೆ ಧಕ್ಕೆ ಆಗದಿರಲಿ.

ನಾಗರಾಜ್, ದಾವಣಗೆರೆ

ಪ್ರಜಾಪ್ರಭುತ್ವಕ್ಕೆ ಮಾರಕ



ರಾಜಕೀಯ ನಾಯಕರು ಚುನಾವಣೆಗಳಲ್ಲಿ ಗೆದ್ದು ಬರಲು, ಹಿಂಬಾಗಿಲಿನಿಂದ ಜಾತಿ-ಧರ್ಮಗಳನ್ನು ಎತ್ತಿಕಟ್ಟಿ, ಕೋಮು-ಸೌಹಾರ್ದತೆ ಕದಡುತ್ತಾರೆ. ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಇಂತಹ ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತಿರುವುದು ದುರಂತ. ಕೋಮು ದ್ವೇಷಗಳು ರಾಜ್ಯದ ಇನ್ನುಳಿದ ಭಾಗಗಳಿಗೂ ವಿಸ್ತಾರವಾಗುತ್ತಿರುವುದು ಪ್ರಜಾಪ್ರಭುತ್ವಕ್ಕೆ ಮಾರಕವಾಗಲಿದೆ.

ರವಿ ಎನ್.ಮುಕ್ರಿ, ಹೊನ್ನಾವರ

ಜವಾಬ್ದಾರಿ ಮರೆತ ಸರ್ಕಾರ



ರಾಜ್ಯದಲ್ಲಿ ನಡೆಯುತ್ತಿರುವ ಕೆಲವೊಂದು ಘಟನೆಗಳು ಜನರ ನೆಮ್ಮದಿ ಹಾಳು ಮಾಡುತ್ತಿವೆ. ಸಮಾಜದಲ್ಲಿ ಧರ್ಮಗಳ ಕಲಹಗಳನ್ನು ಪ್ರಚೋದಿಸುವ ಮತ್ತು ಸಹಕರಿಸುವ ಸಂಘಟನೆಗಳು ಹಾಗೂ ವ್ಯಕ್ತಿಗಳನ್ನು ನಿಯಂತ್ರಿಸಬೇಕಾಗಿರುವುದು ಸರ್ಕಾರದ ಕರ್ತವ್ಯ. ಆದರೆ, ಈಗಿನ ಸರ್ಕಾರ ನೈತಿಕ ಪೊಲೀಸ್‌ಗಿರಿಯನ್ನು ಸಮರ್ಥಿಸಿಕೊಳ್ಳುತ್ತಿರುವುದು ಮುಂದಿನ ಅಪಾಯದ ಎಚ್ಚರಿಕೆ ಗಂಟೆ.

ಪ್ರಕಾಶ್, ಚಿತ್ರದುರ್ಗ

ಐಕ್ಯತೆಯ ಬೀಜ ಬಿತ್ತಿ



ನಮ್ಮದು ಸರ್ವಜನಾಂಗದ ಶಾಂತಿಯ ತೋಟ. ಪ್ರಜೆಗಳ ನಾಯಕರಾದವರು ಈ ತೋಟದಲ್ಲಿ ದೇಶದ ಐಕ್ಯತೆಯನ್ನು ಮೂಡಿಸುವ ಹಾಗೂ ಮೌಲ್ಯಗಳನ್ನು ಬೆಳೆಸುವ ಬೀಜ ಬಿತ್ತಬೇಕೆ ಹೊರತು, ತಮ್ಮ ಅನುಕೂಲಕ್ಕಾಗಿ ಏಕತೆಯನ್ನು ಹೊಡೆಯುವಂತೆ ಇರಬಾರದು.

ವಿರೂಪಾಕ್ಷಪ್ಪ, ಹಂಪಿ

ಕೋಮುಗಲಭೆ ಚುನಾವಣೆಯ ಸೂಚಕ



ಸ್ಥಳೀಯ ಚುನಾವಣೆಗಳು ನಡೆದರೆ, ಹೆಚ್ಚಾಗಿ ಯಾವ ಬದಲಾವಣೆ ಆಗುವುದಿಲ್ಲ. ಆದರೆ, ದೊಡ್ಡ ಮಟ್ಟದ ಚುನಾವಣೆಗಳು ಬಂದಾಗ ಕೋಮು ಗಲಭೆಗಳು, ನೈತಿಕ ಪೊಲೀಸ್‌ಗಿರಿ, ಪುಡಿ ರೌಡಿಗಳ ಹಾವಳಿ ಹೆಚ್ಚುತ್ತವೆ. ಮತಾಸ್ತ್ರದ ಮೂಲಕ ಧರ್ಮ, ಸಮುದಾಯಗಳ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವುದೇ ರಾಜಕೀಯ ಪಕ್ಷಗಳ ಹುನ್ನಾರ. ಕರಾವಳಿ ಮಾತ್ರವಲ್ಲದೆ, ರಾಜ್ಯದ ಉಳಿದ ಭಾಗದಲ್ಲೂ ಕೋಮುಗಲಭೆಗಳು ಮಿತಿ ಮೀರಿವೆ. ಅಂದು ರಸ್ತೆಗೆ ಡಾಂಬರು ಬಂದರೆ, ಚುನಾವಣೆ ಎನ್ನುತ್ತಿದ್ದೆವು. ಇಂದು, ಕೋಮು ಗಲಭೆಗಳು ಚುನಾವಣೆಯ ಸೂಚಕವಾಗಿವೆ. ಸಮಾಜದಲ್ಲಿ ಹಿಂಸೆಗಳನ್ನು ನಿಯಂತ್ರಣಕ್ಕೆ ತರಬೇಕು.

ಮುಬೀನಾ, ವಿಜಯನಗರ

ಕೋಮುವಾದ ಎಂಬ ದಳ್ಳುರಿ



ಭಾರತ ಒಂದು ಜಾತ್ಯತೀತ ಹಾಗೂ ಧರ್ಮ ನಿರಪೇಕ್ಷ ದೇಶ. ಇದು ನಮ್ಮ ಸಂವಿಧಾನದ ಮೂಲ ಆಶಯವೂ ಹೌದು. ಈ ನೆಲ ಸರ್ವಧರ್ಮಗಳಿಗೂ ಸಮಾನ ಆಶ್ರಯ ಕಲ್ಪಿಸಿದೆ. ಆದರೆ, ಇತ್ತೀಚಿನ ಕೆಲ ಘಟನೆಗಳು ಕೋಮುವಾದ ಎಂಬ ದಳ್ಳುರಿಗೆ ಸಮಾಜವನ್ನು ಘಾಸಿಗೊಳಿಸುವ ಪ್ರಯತ್ನ ಮಾಡುತ್ತಿರುವುದು ದುರಂತವೇ ಸರಿ.

ರಾಮಚಂದ್ರ, ಗುಬ್ಬಿ

ಧರ್ಮಗಳ ಸಾಮರಸ್ಯಕ್ಕೆ ಚಿಂತಿಸಿ



ಕೋಮುವಾದ ಎಂಬುದು ಜನರಲ್ಲಿರುವ ದೊಡ್ಡ ಮಾನಸಿಕ ಕಾಯಿಲೆ. ಇದನ್ನು ಆರಂಭಿಕ ಹಂತದಲ್ಲೇ ಸರ್ಕಾರ ಹತ್ತಿಕ್ಕಬೇಕು. ಆದರೆ, 'ಭಾವನೆಗಳಿಗೆ ಧಕ್ಕೆಯಾದಾಗ ಕ್ರಿಯೆ–ಪ್ರತಿಕ್ರಿಯೆಗಳು ನಡೆಯುತ್ತವೆ' ಎಂಬ ಸಮರ್ಥನೀಯ ಹೇಳಿಕೆಗಳ ಮೂಲಕ ಕೋಮು ಗೂಂಡಾಗಿರಿಗೆ ಪ್ರಚೋದನೆ ಕೊಡುವ ಬದಲು, ಹಿಂದೂ- ಮುಸ್ಲಿಂ ನಡುವೆ ಸಾಮರಸ್ಯ ಮೂಡುವ ಕ್ರೀಡೆ , ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಪ್ರೋತ್ಸಾಹ ನೀಡಿ.

ಅಬ್ದುಲ್ ರಝಾಕ್, ಮಂಗಳೂರು



ಡಿಜಿಟಲ್ ಮಾಧ್ಯಮ: ವ್ಯಾಪ್ತಿ ಅಗಾಧ



ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಡಿಜಿಟಲ್ ಮಾಧ್ಯಮವು ಸಾಕಷ್ಟು ಅವಕಾಶಗಳನ್ನು ಒದಗಿಸಿದೆ. ವಿದ್ಯಾರ್ಥಿಗಳು ಈ ಮಾಧ್ಯಮದ ಅವಶ್ಯಕತೆ ಮತ್ತು ಆಳವನ್ನು ವಿಸ್ತೃತವಾಗಿ ತಿಳಿದುಕೊಂಡರೆ ಭವಿಷ್ಯದಲ್ಲಿ ಪೂರಕ ಉದ್ಯೋಗ ಸಂಪಾದಿಸಬಹುದು.

ರಾಕೇಶ ವಿ. ತಾಳಿಕೋಟಿ

ಕೆಲವು ವರ್ಷಗಳ ಹಿಂದೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವೈರ್‌ಲೆಸ್ ಫೋನ್‌ಗಳನ್ನು ಬಳಸುವುದು ಚಿತ್ರಗಳಲ್ಲಿ ಅಥವಾ ಯಾವುದಾದರೂ ಜಾಹೀರಾತಿನಲ್ಲಿ ನೋಡಿದಾಗ ಅವರು ಬಳಸುತ್ತಿರುವ ಸಾಧನ ಯಾವುದೆಂಬುದನ್ನು ತಿಳಿದುಕೊಳ್ಳಲು ಸುಮಾರು ದಿನಗಳೇ ಬೇಕಾಗುತ್ತಿದ್ದವು. ಆದರೆ ಈಗ ಕಾಲಘಟ್ಟ ಬದಲಾಗಿದೆ. ಕೊರೊನೋತ್ತರ ಪ್ರಪಂಚವು ಜಗತ್ತಿನಲ್ಲಿ ಆಗು-ಹೋಗುಗಳ ಕುರಿತು ಸಕಲ ಮಾಹಿತಿಯನ್ನು ಬೆರಳ ತುದಿಗೆ ತಂದು ನಿಲ್ಲಿಸಿದೆ. ರೈಲ್ವೆ ಟಿಕೆಟ್ ಬುಕಿಂಗ್ ಮೊದಲು ಮಾಡಿ ಮನೆಯ ಎಲ್ಲ ರೀತಿಯ ಶುಲ್ಕಗಳನ್ನು ಪಾವತಿಸಲು ಅನೇಕ ರೀತಿಯ ಡಿಜಿಟಲ್ ಆ್ಯಪ್‌ಗಳು ಲಭ್ಯ. ಮಾಧ್ಯಮ ರಂಗವು ಕೋವಿಡ್ ವಿಷಯ ಸ್ಥಿತಿಯಲ್ಲಿ ಜಗ್ಗದೆ ಕಾರ್ಯ ನಿರ್ವಹಿಸಿ ಸೈಎನಿಸಿಕೊಂಡಿತು. ಹೀಗಿದ್ದಾಗ ಮಾಧ್ಯಮವೂ ತನ್ನ ಮೂಲರೂಪದಲ್ಲಿ ಬದಲಾವಣೆ ಅಗತ್ಯತೆಯ ಸೂಕ್ತ ಮಾರ್ಗ ಕಂಡುಕೊಂಡಿದ್ದು, ಅದುವೇ ಡಿಜಿಟಲ್ ಮಾಧ್ಯಮ.

ಸಾಂಪ್ರದಾಯಿಕ ವೃತ್ತಿಪರತೆಯಂತೆ ಮುದ್ರಣ ಮಾಧ್ಯಮ ಅಥವಾ ದೃಶ್ಯ ಮಾಧ್ಯಮವನ್ನು ಆಯ್ದುಕೊಂಡ ಪತ್ರಕರ್ತರು ಈಗ ಆ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಮಲ್ಟಿ ಟಾಸ್ಕಿಂಗ್ ಅಥವಾ ಬಹು ಕೌಶಲ ರೂಢಿಗತ ಮಾದರಿ ಮುನ್ನೆಲೆಗೆ ಬಂದಿದೆ. ಇದರ ಪ್ರತಿರೂಪವೇ ಡಿಜಿಟಲ್ ಮಾಧ್ಯಮ. ಈಗ ಕಾರ್ಯಗತವಾಗಿರುವಂತೆ ಬಹುತೇಕ ಎಲ್ಲ ಮಾಧ್ಯಮ ಸಂಸ್ಥೆಗಳು ತಮ್ಮ ಡಿಜಿಟಲ್ ಆವೃತ್ತಿಯನ್ನು ಜನಪ್ರಿಯಗೊಳಿಸಲು ವೆಬ್‌ಸೈಟ್, ಪಾಡ್‌ಕಾಸ್ಟ್, ಸಂದರ್ಶನ, ಪರಾಮರ್ಶೆ, ಲೈವ್ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ. ಸಾಮಾಜಿಕ ಮಾಧ್ಯಮಗಳ ಸಮರ್ಪಕ ಬಳಕೆ ಮೂಲಕ ಡಿಜಿಟಲ್ ಜರ್ನಲಿಸಂನತ್ತ ಮುಖ ಮಾಡುತ್ತಿವೆ. ವಿಶಾಲ ವ್ಯಾಪ್ತಿ, ಸಾಮಾಜಿಕ ಸಂವಹನದ ಸರಳ ಮಾರ್ಗ, ತ್ವರಿತಗತಿಯ ಸುದ್ದಿ ತಲುಪುವಿಕೆಯಿಂದ ಡಿಜಿಟಲ್ ಮಾಧ್ಯಮವು ಉತ್ಸಾಹಿ ಯುವ ಜನರನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ.

ಡಿಜಿಟಲ್ ಎಂದರೆ ಅಂತರ್ಜಾಲ ಆಧಾರಿತ ಕಾರ್ಯ ನಿರ್ವಹಿಸುವ ಮಾಧ್ಯಮ ಎಂದರ್ಥ. ಮುದ್ರಣ ಮಾಧ್ಯಮ ಮತ್ತು ದೃಶ್ಯ ಮಾಧ್ಯಮದ ಸಮಾಗಮವೇ ಡಿಜಿಟಲ್ ಮಾಧ್ಯಮ. ಇಲ್ಲಿ ಕಲಾತ್ಮಕ ಪ್ರತಿಭೆ, ಸೃಜನಶೀಲತೆ ಹಾಗೂ ತಾಂತ್ರಿಕ ಕೌಶಲ ಮೇಳೈಸಿಕೊಂಡ ಜನರೇ ಜೀವಾಳ. ರಾಜ್ಯದ ಬಹುತೇಕ ಎಲ್ಲ ವಿಶ್ವವಿದ್ಯಾಲಯಗಳ ಪತ್ರಿಕೋದ್ಯಮ ಕೋರ್ಸ್‌ಗಳಲ್ಲಿ 'ಡಿಜಿಟಲ್ ಮೀಡಿಯಾ' ಎಂಬ ಶೀರ್ಷಿಕೆಯ ಪೇಪರ್ ಒಂದನ್ನು ತಮ್ಮ ಪಠ್ಯಕ್ರಮದ ಭಾಗವಾಗಿ ರಚನೆ ಮಾಡಿಕೊಂಡಿವೆ.

ಅವಕಾಶಗಳು ಎಲ್ಲಿವೆ?

ವೆಬ್ ಡೆವೆಲಪರ್ಸ್ ಮತ್ತು ಡಿಸೈನರ್ಸ್: ಸಾಫ್ಟ್‌ವೇರ್ ಪದವೀಧರರು ಮಾತ್ರ ಅಭಿವೃದ್ಧಿಪಡಿಸಬಹುದು ಎಂಬ ಎಲ್ಲೆಯನ್ನು ತೊಡೆದುಹಾಕಿ ಡಿಜಿಟಲ್ ಮೀಡಿಯಾ ಕೋರ್ಸ್ ಓದಿದ ವಿದ್ಯಾರ್ಥಿಗಳು ಸಹ ಕಂಪ್ಯೂಟರ್ ಕೋಡಿಂಗ್ ಭಾಷೆಯನ್ನು ಅರಿತುಕೊಂಡು ವೆಬ್‌ಸೈಟ್ ಅಭಿವೃದ್ಧಿಪಡಿಸಬಹುದು. ಸಂಶೋಧನೆ, ನಾವಿನ್ಯತೆ ಮತ್ತು ಸ್ವ ಪ್ರಯತ್ನದಿಂದ ನೀವೂ ಸಹ ವೆಬ್ ಡೆವೆಲಪರ್ ಆಗಬಹುದು.

ಗ್ರಾಫಿಕ್ ಡಿಸೈನರ್ಸ್ ಮತ್ತು ಕಲಾತ್ಮಕ ಸೃಷ್ಟಿಕಾರ: ಡಿಜಿಟಲ್ ಬ್ರ್ಯಾಂಡಿಂಗ್ ಮತ್ತು ಮಾರ್ಕೆಟಿಂಗ್ ಎಂಬ ಸೂರಿನಡಿ ಕಂಪನಿಯೊಂದರ ಬ್ರ್ಯಾಂಡ್ ಪ್ರಚುರಪಡಿಸಲು, ಮಾರುಕಟ್ಟೆ ಪ್ರಚಾರ ಶಿಬಿರಗಳಿಗಾಗಿ ಹಲವು ಬಗೆಯ ಸೃಜನಾತ್ಮಕ, ಕಲಾತ್ಮಕ ಮತ್ತು ವೈವಿಧ್ಯ ವಿನ್ಯಾಸಗಳನ್ನು ಬಿಂಬಿಸಲು ಗ್ರಾಫಿಕ್ ಡಿಸೈನರ್‌ಗಳು ಬೇಕು. ಡಿಜಿಟಲ್ ಮೀಡಿಯಾ ಅಧ್ಯಯನದಿಂದ ನಿಮಗೆ ಈ ಪಟ್ಟ ದೊರಕಲು ಸಾಧ್ಯವಿದೆ.

ವಿಡಿಯೋ ಗೇಮ್ ಡಿಸೈನರ್: ಪಬ್ ಜಿ, ಕಾಲ್ ಆಫ್ ಡ್ಯೂಟಿ, ಫ್ರೀ ಫೈರ್ ಇಂತಹ ಗೇಮ್‌ಗಳು ಜಗತ್ತಿನಾದ್ಯಂತ ಸೃಷ್ಟಿಸಿದ ಜನಪ್ರಿಯತೆ ಬಹುಶಃ ಗೇಮಿಂಗ್ ಲೋಕಕ್ಕೆ ಹೊಸ ಹುಟ್ಟು ನೀಡಿವೆ. ಈ ಕ್ಷೇತ್ರದಲ್ಲೂ ಡಿಜಿಟಲ್ ಮಾಧ್ಯಮದ ವಿದ್ಯಾರ್ಥಿಗಳು ಸೇರಿಕೊಳ್ಳಲು ಅವಕಾಶಗಳಿವೆ.

ಡಿಜಿಟಲ್ ಮೀಡಿಯಾ ಫೋಟೊಗ್ರಾಫರ್: ಡಿಜಿಟಲ್ ಮಾಧ್ಯಮಗಳಿಗೆ ಮತ್ತು ಸುದ್ದಿ ಆ್ಯಪ್‌ಗಳಿಗಾಗಿ ಕಣ್ಮನ ಸೆಳೆಯುವ ಛಾಯಾಚಿತ್ರಗಳನ್ನು ಸೆರೆಹಿಡಿದು ಅವುಗಳನ್ನು ಅಗತ್ಯತೆಗೆ ತಕ್ಕಂತೆ ಎಡಿಟ್ ಮಾಡಬಲ್ಲ ಸಾಮರ್ಥ್ಯ ನಿಮ್ಮಲ್ಲಿ ಡಿಜಿಟಲ್ ಮಾಧ್ಯಮ ಓದುವುದರಿಂದ ಬರುತ್ತದೆ.

ಸಾಮಾಜಿಕ ಜಾಲತಾಣ ತಜ್ಞ: ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಗ್ರಾಹಕರನ್ನು ಸೆಳೆಯಲು ವಿಶೇಷ ಬರವಣಿಗೆ ಮತ್ತು ಆಕರ್ಷಕ ಕಾಮೆಂಟ್‌ಗಳನ್ನು ಸೃಷ್ಟಿಸಲು ಡಿಜಿಟಲ್ ಟ್ರೆಂಡ್ ನಿರ್ಮಿಸುವುದು ಅವಶ್ಯಕ. ಇವುಗಳಲ್ಲಿ ಆಸಕ್ತಿ ಇರುವವರು ಡಿಜಿಟಲ್ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡು ಮುಂದುವರೆಯಬಹುದು.

ಅನಿಮೇಶನ್ ಮತ್ತು ಎಐ: ಮೋಷನ್ ಪಿಕ್ಸ್, 2ಡಿ, 3ಡಿ ತಂತ್ರಾಂಶಗಳ ಪ್ರಾಥಮಿಕ ಹಂತಗಳನ್ನು ಡಿಜಿಟಲ್ ಮೀಡಿಯಾದಲ್ಲಿ ಕಲಿಯಬಹುದು. ಇದರಿಂದ ಮುಂದೆ ಎಐ (ಕೃತಕ ಬುದ್ಧಿಮತ್ತೆ) ನಿರ್ಮಾತೃವಾಗಿ ವೃತ್ತಿಮಾರ್ಗವನ್ನು ರೂಪಿಸಿಕೊಳ್ಳಬಹುದು.

ರೇಡಿಯೊ ಮತ್ತು ಪಾಡ್‌ಕಾಸ್ಟ್: ಇತ್ತೀಚೆಗೆ ಡಿಜಿಟಲ್ ಮಾಧ್ಯಮದಲ್ಲಿ ಪಾಡ್‌ಕಾಸ್ಟ್ ಎಂಬ ಧ್ವನಿಮುದ್ರಿತ ಸರಣಿಕೆಯನ್ನು ಎಲ್ಲ ಮಾಧ್ಯಮಗಳಲ್ಲಿ ಕಾಣಬಹುದಾಗಿದೆ. ಉತ್ತಮ ಧ್ವನಿ, ಸಂಭಾಷಣೆ ಪಾಡ್‌ಕಾಸ್ಟ್ ತಜ್ಞರಾಗುವ ಸಾಧ್ಯತೆ ತಳ್ಳಿಹಾಕುವಂತಿಲ್ಲ. ಕ್ಲಬ್‌ಹೌಸ್ ಎಂಬ ಆ್ಯಪ್ ಸೃಷ್ಟಿಸಿರುವ ಅಲೆಯನ್ನು ಗಮನಿಸಿದರೆ ಇಲ್ಲಿಯೂ ಅವಕಾಶ ತೆರೆದ ಪುಸ್ತಕದಂತಿದೆ.

ಆನ್‌ಲೈನ್ ಕೋರ್ಸ್‌ಗಳು

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮತ್ತು ನಮ್ಮ ದೇಶದಲ್ಲಿ ಅನೇಕ ವಿಶ್ವವಿದ್ಯಾಲಯಗಳು, ಸಂಸ್ಥೆಗಳು ಆನ್‌ಲೈನ್ ಡಿಜಿಟಲ್ ಮಾಧ್ಯಮ ಕೋರ್ಸ್ ಪರಿಚಯಿಸಿವೆ. ನ್ಯೂಯಾರ್ಕ್ ವಿಶ್ವವಿದ್ಯಾಲಯ, ಹಾರ್ವರ್ಡ್ ವಿವಿ, ಯುನಿವರ್ಸಿಟಿ ಆಫ್ ಡೆನ್ವರ್, ಹಾರ್ಡಿಂಗ್ ವಿಶ್ವವಿದ್ಯಾಲಯ, ಬಟ್ಲರ್ ವಿಶ್ವವಿದ್ಯಾಲಯ, ಭಾರತದಲ್ಲಿ ಐಐಎಂಸಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯೂನಿಕೇಶನ್), ಎಜೆಕೆ ಮಾಸ್ ಕಮ್ಯೂನಿಕೇಶನ್ ರಿಸರ್ಚ್ ಸೆಂಟರ್, ಎಸ್‌ಐಎಂಸಿ ಪುಣೆ, ಅಮಿಟಿ ವಿವಿ, ಕ್ರೈಸ್ಟ್ ಯುನಿವರ್ಸಿಟಿ ಮುಂತಾದ ವಿದ್ಯಾಲಯಗಳು ಮಲ್ಟಿಮೀಡಿಯಾ ಆನ್‌ಲೈನ್ ಕೋರ್ಸ್‌ಗಳನ್ನು ಪ್ರಾರಂಭಿಸಿವೆ.

(ಲೇಖಕರು: ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ)


ತಯಾರಿ ಹೇಗಿರಬೇಕು?

ಡಿಜಿಟಲ್ ಮಾಧ್ಯಮದ ಭಾಗವಾಗಲು ಇಚ್ಛಿಸುವ ಪ್ರತಿಯೊಬ್ಬರು ಪಾಲಿಸಬೇಕಾದ ಕೆಲವು ಮಾರ್ಗಗಳೆಂದರೆ,

- ಡಿಜಿಟಲ್ ಮಾಧ್ಯಮದ ಮೂಲಭೂತ ಅಂಶಗಳನ್ನು ಅಭ್ಯಸಿಸಿ
- ಡಿಜಿಟಲ್ ಮಾಧ್ಯಮ ವಿಷಯ ಪಠ್ಯಕ್ರಮದಲ್ಲಿರುವ ಮತ್ತು ಬೋಧಿಸುವ ವಿದ್ಯಾಲಯಗಳಿಂದ ಸಿಲಬಸ್ ಕಂಟೆಂಟ್ ಸಂಗ್ರಹಿಸಿರಿ
- ಡಿಜಿಟಲ್ ಮಾಧ್ಯಮದಲ್ಲಿ ಬಳಕೆ ಮಾಡುವ ಉಪಕರಣಗಳ, ಸಾಫ್ಟ್‌ವೇರ್‌ಗಳ ಬಗ್ಗೆ ತಿಳಿದುಕೊಂಡು ಅವುಗಳನ್ನು ಸಂಗ್ರಹಿಸಿ ಪ್ರಾಯೋಗಿಕ ತುಲನೆ ಪ್ರಾರಂಭಿಸಿ
- ನೀವು ಆಸಕ್ತಿ ಹೊಂದಿರುವ ವಸ್ತು ವಿಷಯವನ್ನು ಹುಡುಕಲು ಆರಂಭಿಸಿ. ಅದಕ್ಕೆ ಸಂಬಂಧಿಸಿದ ಬ್ಲಾಗ್‌ಗಳನ್ನು ಓದಿರಿ. ಸ್ವಂತ ಬ್ಲಾಗ್ ರಚನೆ ಮಾಡಿ ಅದರಲ್ಲಿ ಡಿಜಿಟಲ್ ಮಾಧ್ಯಮದ ಸಂಶೋಧನಾತ್ಮಕ ವರದಿಗಳನ್ನು ನಿಮ್ಮದೇ ಶೈಲಿಯಲ್ಲಿ ಪ್ರಸ್ತುತಪಡಿಸಿರಿ
- ದಿನ ಕಳೆದಂತೆ ನಿಮ್ಮ ಚಾಕಚಕ್ಯತೆ ಹಾಗೂ ಸೃಜನಾತ್ಮಕ ಕೌಶಲಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡಿ
- ದಿನವೊಂದಕ್ಕೆ ಕನಿಷ್ಠ 3-4 ಗಂಟೆ ಡಿಜಿಟಲ್ ಮಾಧ್ಯಮದ ಕಂಟೆಂಟ್ ಮತ್ತು ಅದರಿಂದ ಉಂಟಾದ ಪ್ರಭಾವಗಳ ಪಟ್ಟಿ ಮಾಡಿಟ್ಟುಕೊಳ್ಳಿ
- ಇ-ಮಾಧ್ಯಮ ಓದುಗರು ಹಾಗೂ ಆಯಾ ಸಂಸ್ಥೆಗಳ ಗ್ರಾಹಕರ ಪ್ರತಿಕ್ರಿಯೆ ಏನು ಎಂಬುದನ್ನು ಗ್ರಹಿಸಿಕೊಳ್ಳಿ
- ಡಿಜಿಟಲ್ ಮಾಧ್ಯಮ ಸಂಸ್ಥೆಗಳಲ್ಲಿ ಇಂಟರ್ನ್‌ಶಿಪ್ ಆಧಾರದಲ್ಲಿ ಸೇರಿಕೊಂಡು ಅನುಭವ ಪಡೆಯಿರಿ

ರಕ್ಷಣಾ ಪಡೆಗೆ ಮಹಿಳೆಯರು ಸೇರುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

- **ನಾನು ಬಿಎಸ್‌ಸಿ (ಪಿಸಿಎಂ) ಕೊನೆಯ ವರ್ಷದಲ್ಲಿ ಓದುತ್ತಿದ್ದೇನೆ. ನನಗೆ ರಕ್ಷಣಾ ಪಡೆಗೆ ಸೇರಬೇಕು ಎಂಬ ಆಸೆ ಇದೆ. ಸೇನೆ ಅಥವಾ ವಾಯುಸೇನೆಗೆ ಸೇರಬಯಸಿದ್ದೇನೆ. ಹೇಗೆ ಸೇರಬಹುದೆಂದು ದಯಮಾಡಿ ತಿಳಿಸಿ.**

ವರ್ಷಾ, ಊರು ತಿಳಿಸಿಲ್ಲ.

ರಕ್ಷಣಾ ಪಡೆಗೆ ಸೇರಿ ದೇಶ ಸೇವೆ ಮಾಡಬೇಕೆನ್ನುವ ನಿಮ್ಮ ಆಸೆ ಶ್ಲಾಘನೀಯ. ಸೇನಾಧಿಕಾರಿಗಳಿಗೆ ಸಿಗುವ ವೇತನ, ಸವಲತ್ತುಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಮಾಜದಲ್ಲಿ ಸಿಗುವ ಗೌರವ, ಮನ್ನಣೆಯನ್ನು ಗಮನಿಸಿದರೆ ಈ ವೃತ್ತಿ ಅತ್ಯಂತ ಆಕರ್ಷಣೀಯ. ಪಿಯುಸಿ ನಂತರ ಎನ್‌ಡಿಎ ಪರೀಕ್ಷೆ ಅಥವಾ ಟೆಕ್ನಿಕಲ್ ಎಂಟ್ರಿ ಸ್ಕೀಮ್ ಮುಖಾಂತರ ರಕ್ಷಣಾ ಪಡೆಯನ್ನು ಸೇರಬಹುದು. ನೀವು ಪದವಿಯ ಅಂತಿಮ ವರ್ಷದಲ್ಲಿರುವುದರಿಂದ ಕಂಬೈನ್ಡ್ ಡಿಫೆನ್ಸ್ ಸರ್ವೀಸಸ್ (ಸಿಡಿಎಸ್) ಪರೀಕ್ಷೆಯ ಮುಖಾಂತರ ಇಂಡಿಯನ್ ಮಿಲಿಟರಿ ಅಕಾಡೆಮಿ (ಐಎಂಎ) ಸೇರಿ ನಾನ್-ಟೆಕ್ನಿಕಲ್ ಹುದ್ದೆಗಳನ್ನು ಅರಸಬಹುದು ಹಾಗೂ ಭಾರತೀಯ ವಾಯುಸೇನೆಯ ಹುದ್ದೆಗಳಿಗೆ ಏರ್ ಫೋರ್ಸ್ ಕಂಬೈನ್ಡ್ ಅಡ್ಮಿಷನ್ ಟೆಸ್ಟ್ (ಎಎಫ್‌ಸಿಎಟಿ) ಮುಖಾಂತರ ಪ್ರಯತ್ನಿಸಬಹುದು. ಹೆಚ್ಚಿನ ವಿವರಗಳಿಗೆ ಗಮನಿಸಿ:

https://indianarmy.nic.in/home
https://afcat.cdac.in/AFCAT/CareerAsPerQualification.html

- **ನಾನು ಇಂಗ್ಲಿಷ್ ಎಂಎ ಮುಗಿಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಮಾಡಿರುತ್ತೇನೆ. ಬೆಂಗಳೂರಿನಲ್ಲಿ ಒಂದು ಸರ್ಕಾರಿ ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ವಿದೇಶದಲ್ಲಿ ಪೋಸ್ಟ್ ಡಾಕ್ಟರೇಟ್ ಮಾಡಲು ಆಸೆ ಹಾಗೂ ಅಲ್ಲಿಯೇ ಉದ್ಯೋಗ ಪಡೆಯಬೇಕೆಂದು ಬಯಸುತ್ತೇನೆ. ಯಾವ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಅವಕಾಶಗಳ ಸಿಗುತ್ತವೆ?**

ಪ್ರಜ್ವಲ್, ಬೆಂಗಳೂರು.

ನೀವು ನೀಡಿರುವ ಇಷ್ಟೇ ಮಾಹಿತಿಯನ್ನು ಗಮನಿಸಿ ಸಮಂಜಸವಾದ ಸಲಹೆ ನೀಡಲಾಗುವುದಿಲ್ಲ. ಆದರೂ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿನ ಅವಕಾಶಗಳನ್ನು ಮತ್ತು ನೀವು ಪೋಸ್ಟ್ ಡಾಕ್ಟರೇಟ್ ಸಂಶೋಧನೆಯ ವಿಷಯವನ್ನು ಗಮನಿಸಿ ಸೂಕ್ತವಾದ ವಿಶ್ವವಿದ್ಯಾಲಯದ ಆಯ್ಕೆ ಮಾಡಬೇಕು. ಯುಎಸ್‌ಎ, ಯುಕೆ, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್ ವಿಶ್ವವಿದ್ಯಾಲಯಗಳ ಅವಕಾಶಗಳನ್ನು ಪರಿಶೀಲಿಸಿ. ಪ್ರಮುಖವಾಗಿ, ವಿಷಯದ ಪ್ರಸ್ತುತತೆ ಕುರಿತು ನಿಮ್ಮ ಪಿಎಚ್‌ಡಿ ಮಾರ್ಗದರ್ಶಕರ ಅಭಿಪ್ರಾಯ ಹಾಗೂ ಮಾರ್ಗದರ್ಶನ ಉಪಯುಕ್ತ. 2022-23ನೇ ಸಾಲಿನ ಫುಲ್ ಬ್ರೈಟ್ ಸ್ಕಾಲರ್‌ಶಿಪ್‌ಗೂ ನೀವು ಪ್ರಯತ್ನಿಸಬಹುದು. ಹೆಚ್ಚಿನ ವಿವರಗಳಿಗಾಗಿ, ಗಮನಿಸಿ: https://www.usief.org.in/Fulbright-Nehru-Postdoctoral-Research-Fellowship.aspx

- **ನಾನು ಎಂಎ (ಇಂಗ್ಲಿಷ್) ಮುಗಿಸಿದ್ದೇನೆ. ಆದರೆ, ಮುಂದೇನು ಮಾಡಬೇಕೆಂದು ತಿಳಿಯದೆ ಗೊಂದಲದಲ್ಲಿದ್ದೇನೆ. ದಯವಿಟ್ಟು ನಿಮ್ಮ ಮಾರ್ಗದರ್ಶನ ನೀಡಿ.**


ಸುಷ್ಮಾ, ಶಿವಮೊಗ್ಗ

ನೀವು ನೀಡಿರುವ ಮಾಹಿತಿಯ ಪ್ರಕಾರ ವೃತ್ತಿಯ ಯೋಜನೆಯಂತೆ ಕೋರ್ಸ್ ಮಾಡಿದ್ದೀರಾ ಎಂಬುದು ತಿಳಿಯದು. ಇಲ್ಲದಿದ್ದರೆ, ಇಂತಹ ಗೊಂದಲಗಳು ಸ್ವಾಭಾವಿಕ. ಎಂಎ ನಂತರ ಆಸಕ್ತಿಯಿದ್ದರೆ ಪಿಎಚ್‌ಡಿ ಮಾಡಿ ಅಥವಾ ಅದಕ್ಕೂ ಮುಂಚಿತವಾಗಿ ಶಿಕ್ಷಕ ವೃತ್ತಿಯನ್ನು ಅರಸಬಹುದು. ಭಾಷೆಯ ತಜ್ಞತೆಯಿದ್ದರೆ ಮನೆಯಿಂದಲೇ ಮಾಡಬಹುದಾದ ವಿಷಯಾಭಿವೃದ್ಧಿ, ಅನುವಾದ, ಸಬ್‌ಟೈಟಲ್ಸ್, ಟ್ರಾನ್ಸ್‌ಕ್ರಿಪ್ಶನ್ ಇತ್ಯಾದಿ ಅವಕಾಶಗಳಿವೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ವಲಯದ ವೃತ್ತಿಗಳನ್ನೂ ಅರಸಬಹುದು. ನಿಮ್ಮ ಸಾಮರ್ಥ್ಯ ಮತ್ತು ಆಸಕ್ತಿಯ ಆಧಾರದ ಮೇಲೆ ವೃತ್ತಿಯ ಯೋಜನೆಯನ್ನು ಮಾಡಿದರೆ, ಮುಂದಿನ ಹಾದಿ ಸ್ಪಷ್ಟವಾಗುತ್ತದೆ.

- **ಸರ್, ನಾನು ಡಿಪ್ಲೊಮಾ ಮುಗಿಸಿದ್ದೇನೆ. ನನಗೆ ಪೊಲೀಸ್ ಆಗಬೇಕು ಅಂತ ಆಸೆ. ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಅವಕಾಶ ಇದೆಯಾ? ಹಾಗೇ, ನಾವು ಬಡವರು; ಪರೀಕ್ಷೆಗೆ ಮನೆಯಲ್ಲಿ ಕೂತು ಓದಬಹುದಾ ಅಥವಾ ಕೋಚಿಂಗ್ ಅನಿವಾರ್ಯವೇ? ಮಾರ್ಗದರ್ಶನ ನೀಡಿ ಸರ್.**

ಮೊಹಮದ್ ಅಲಿ, ಊರು ತಿಳಿಸಿಲ್ಲ.

ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಯೋಜನಾ ಶಕ್ತಿ, ಏಕಾಗ್ರತೆ, ಪರಿಶ್ರಮ, ಸಮಯದ ನಿರ್ವಹಣೆ ಮತ್ತು ನಿರಂತರ ಅಭ್ಯಾಸವಿರಬೇಕು. ನಿಭಾಯಿಸಬಹುದು ಎನ್ನುವ ಆತ್ಮವಿಶ್ವಾಸ ನಿಮ್ಮಲ್ಲಿದ್ದರೆ, ಕೋಚಿಂಗ್ ಸೆಂಟರ್ ಅವಶ್ಯಕತೆಯಿಲ್ಲ. ಅನೇಕ ಕಠಿಣವಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಪುಸ್ತಕಗಳನ್ನು ಖರೀದಿಸಿ ಖುದ್ದಾಗಿ ತಯಾರಾಗಿ ಯಶಸ್ವಿಯಾಗಿರುವ ಉದಾಹರಣೆಗಳು ಸಾಕಷ್ಟಿವೆ. ಪರೀಕ್ಷೆಗೆ ಹೇಗೆ ಓದಬೇಕು ಎನ್ನುವುದನ್ನು ಆಗಸ್ಟ್ ತಿಂಗಳ 23ರ ಪ್ರಶ್ನೋತ್ತರದಲ್ಲಿ ಉತ್ತರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ. ಕರ್ನಾಟಕ ಪಿಎಸ್‌ಐ ನೇಮಕಾತಿ ಪ್ರಕ್ರಿಯೆ, ಪರೀಕ್ಷೆಗಳ ವಿವರ, ದೈಹಿಕ ಮಾನದಂಡಗಳು ಮತ್ತು ವಿಷಯಸೂಚಿಗೆ ಗಮನಿಸಿ: https://prepp.in/karnataka-police-exam



ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಎನ್‌ಎಸ್‌ಪಿ ನ್ಯಾಷನಲ್ ಮೀನ್ಸ್ ಕಮ್ ಮೆರಿಟ್ ಸ್ಕಾಲರ್‌ಶಿಪ್ ಸ್ಕೀಮ್ 2021–22

- **ವಿವರ:** 9ನೇ ತರಗತಿ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 9ನೇ ತರಗತಿಯಲ್ಲಿ ಶೇ 55ರಷ್ಟು ಅಂಕ ಪಡೆದವರು ಅಥವಾ 8ನೇ ತರಗತಿ ಶೇ 55ರಷ್ಟು (ಎಸ್‌ಸಿ/ ಎಸ್‌ಟಿ ಸಮುದಾಯದವರಿಗೆ ಶೇ 5 ಅಂಕಗಳಷ್ಟು ವಿನಾಯಿತಿ) ಅಂಕ ಪಡೆದವರು ಅರ್ಜಿ ಸಲ್ಲಿಸಬಹುದಾಗಿದೆ.
- **ಅರ್ಹತೆ:** ಆರ್ಥಿಕವಾಗಿ ಹಿಂದುಳಿದ ಕುಟುಂಬದ ಮಕ್ಕಳ ಮುಂದಿನ ಓದಿಗೆ ಸಹಕಾರಿ ಆಗಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕುಟುಂಬದ ವಾರ್ಷಿಕ ಆದಾಯವು ₹ 1.50 ಲಕ್ಷಕ್ಕಿಂತ ಕಡಿಮೆ ಇರಬೇಕು.
- **ಆರ್ಥಿಕ ಸಹಾಯ:** ವರ್ಷಕ್ಕೆ ₹ 12 ಸಾವಿರ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 15 ನವೆಂಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/NMS8

ಕೊಟಕ್ ಕನ್ಯಾ ಸ್ಕಾಲರ್‌ಶಿಪ್ 2021


- **ವಿವರ:** ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮದಡಿಯಲ್ಲಿ ಕೊಟಕ್ ಮಹೀಂದ್ರ ಗ್ರೂಪ್ಸ್ ಕಂಪನಿಯು, 12ನೇ ತರಗತಿ ಮುಗಿಸಿದ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಿದೆ. 12ನೇ ತರಗತಿಯಲ್ಲಿ ಶೇ 75ರಷ್ಟು ಅಂಕ ಪಡೆದಿರಬೇಕು.
- **ಅರ್ಹತೆ:** ವಿದ್ಯಾರ್ಥಿನಿಯರಿಂದ ಮಾತ್ರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೊದಲನೇ ವರ್ಷದ ಪದವಿಗೆ ಸೇರಿದವರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಕುಟುಂಬದ ವಾರ್ಷಿಕ ಆದಾಯವು ₹ 3 ಲಕ್ಷಕ್ಕಿಂತ ಕಡಿಮೆ ಇರಬೇಕು.
- **ಆರ್ಥಿಕ ಸಹಾಯ:** ವರ್ಷಕ್ಕೆ ₹ 1 ಲಕ್ಷ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 15 ನವೆಂಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/KKGS1

ಕೃಪೆ: buddy4study.com

ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸುವುದು ಹೇಗೆ?

ವೆಂಕಟಸುಬ್ಬರಾವ್. ವಿ

ಸಿಬಿಎಸ್‌ಇ ಪರೀಕ್ಷೆ



ಭಾಗ–2

ಮೊದಲನೆಯ ಅವಧಿಯ ಮೌಲ್ಯಮಾಪನದ ವಿವರಗಳ ಬಗ್ಗೆ ನಾವು ಈಗಾಗಲೇ ಹಿಂದಿನ ಲೇಖನದಲ್ಲಿ ತಿಳಿದಿದ್ದೇವೆ. ಈಗ ಮೊದಲನೆಯ ಅವಧಿಯ ಲಿಖಿತ ಪರೀಕ್ಷೆಯ ಬಗ್ಗೆ ಹಾಗೂ ಪ್ರಶ್ನೆಪತ್ರಿಕೆಯ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸುವ ಬಗ್ಗೆ ತಿಳಿಯೋಣ.

ಈ ಬಾರಿಯ ಮೊದಲನೆಯ ಅವಧಿಯ ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಬಹು ಆಯ್ಕೆ ಪ್ರಶ್ನೆಗಳು ಮಾತ್ರ ಇರುತ್ತವೆ ಎಂದು ತಿಳಿದಿದೆಯಷ್ಟೆ.

- ಈ ಬಹು ಆಯ್ಕೆ ಪ್ರಶ್ನೆಗಳು ಸರಳ, ಕ್ಲಿಷ್ಟ ಹಾಗೂ ತಾರ್ಕಿಕ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ.
- ಪರೀಕ್ಷೆಯ ಅವಧಿ 90 ನಿಮಿಷಗಳು.
- ಪ್ರಶ್ನೆಗಳನ್ನು ಓದಲು ಇರುವ ಸಮಯ 20 ನಿಮಿಷಗಳು.
- ಪ್ರಶ್ನೆಪತ್ರಿಕೆಯು ಎ, ಬಿ, ಸಿ ಎಂದು ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿರುತ್ತದೆ.
- ಈ ಪರೀಕ್ಷೆಯ ಗರಿಷ್ಠ ಅಂಕಗಳು 40 ಇರುತ್ತವೆ. ಕೆಲವು ವಿಷಯಗಳಲ್ಲಿ 50 ಹಾಗೂ ಕೆಲವು ವಿಷಯಗಳಲ್ಲಿ 40 ಪ್ರಶ್ನೆಗಳಿರುತ್ತವೆ.
- ಪ್ರತಿ ಪ್ರಶ್ನೆಗೂ ನಾಲ್ಕು ಆಯ್ಕೆಗಳಿರುತ್ತವೆ. ಅವುಗಳಲ್ಲಿ ಒಂದು ಸರಿ ಉತ್ತರವನ್ನು ಆಯ್ಕೆ ಮಾಡಬೇಕು.
- ಯಾವುದೇ ಪ್ರಶ್ನೆಗೂ ಋಣ ಅಂಕಗಳಿರುವುದಿಲ್ಲ.
- ಪ್ರಶ್ನೆಪತ್ರಿಕೆಯಲ್ಲಿರುವ ಪ್ರಶ್ನೆಗಳಲ್ಲಿ ಮೊದಲು ಉತ್ತರಿಸಿದ ಪ್ರಶ್ನೆಗಳಷ್ಟನ್ನೇ ಪರಿಗಣಿಸಲಾಗುವುದು.

ಉದಾಹರಣೆಗೆ, ಪ್ರಶ್ನೆಪತ್ರಿಕೆಯಲ್ಲಿ 50 ಪ್ರಶ್ನೆಗಳಿವೆ ಎಂದುಕೊಳ್ಳಿ, ಅವುಗಳಲ್ಲಿ ನೀವು 40 ಪ್ರಶ್ನೆಗಳಿಗೆ ಉತ್ತರಿಸಬೇಕು ಎಂದೆಣಿಸಿ. ಉತ್ತರಿಸುವಾಗ ನೀವು ಎಲ್ಲ 50 ಪ್ರಶ್ನೆಗಳಿಗೂ ಉತ್ತರಿಸಿದ್ದೀರಿ ಎಂದು ಭಾವಿಸೋಣ. ಆಗ ಮೊದಲ 40 ಪ್ರಶ್ನೆಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.

ಕೆಲವು ವಿದ್ಯಾರ್ಥಿಗಳಿಗೆ ಈ ರೀತಿಯ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸುವುದು ಇಷ್ಟ. ಈ ರೀತಿಯ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭ ಎಂದು ಭಾವಿಸುವವರೂ ಸಾಕಷ್ಟು ಮಂದಿ. ಏಕೆಂದರೆ,

- ಇಲ್ಲಿ ಅಂಕಗಳನ್ನು ಗಳಿಸುವುದು ಸುಲಭ ಎಂಬ ಭಾವನೆ.
- ಹೆಚ್ಚು ವಿಷಯಗಳ ಬಗ್ಗೆ ಹಾಗೂ ಭಿನ್ನ-ಭಿನ್ನ ರೀತಿಯ ಪ್ರಶ್ನೆಗಳನ್ನು ಕಾಣಬಹುದಾಗಿದೆ.
- ಪ್ರತಿ ಪ್ರಶ್ನೆಗೆ ನಾಲ್ಕೇ ಆಯ್ಕೆಗಳಿರುವುದರಿಂದ, ಸರಿಯಾದ ಉತ್ತರವು ಈ ನಾಲ್ಕು ಆಯ್ಕೆಗಳಲ್ಲೇ ಅಡಗಿರುತ್ತದೆ ಹಾಗೂ ಆ ಸರಿಯಾದ ಉತ್ತರವನ್ನು ಹುಡುಕುವುದು ಸುಲಭ ಎಂದು ಭಾವಿಸುತ್ತಾರೆ.
- ಕೆಲವು ಬಾರಿ ಕೇವಲ ಊಹೆಯಿಂದ ಸರಿ ಉತ್ತರವನ್ನು ಆಯ್ಕೆ ಮಾಡಬಹುದು ಎಂದು ನಂಬಿರುತ್ತಾರೆ.
- ಈ ರೀತಿಯ ಪರೀಕ್ಷೆಗಳಲ್ಲಿ ಹೆಚ್ಚು ಬಾರಿ ಪ್ರಶ್ನೆಗಳು ಸರಳವಾಗಿಯೇ ಇರುತ್ತವೆ ಎಂಬುದು ಒಂದು ವಾದ.
- ಈ ಪರೀಕ್ಷೆಯಲ್ಲಿ ಎಲ್ಲ ಪ್ರಶ್ನೆಗಳಿಗೂ ಸಮಾನವಾದ ಅಂಕಗಳು ಇರುವುದರಿಂದ, ಯಾವುದಾದರೂ ಒಂದು ಪ್ರಶ್ನೆ ತಪ್ಪಾದರೆ, ಕಳೆದು ಕೊಳ್ಳುವ ಅಂಕಗಳು ಕಡಿಮೆಯೇ ಇರುತ್ತವೆ ಎನ್ನುವುದೂ ಒಂದು ಕಾರಣ.
- ಕೆಲವು ಬಾರಿ, ವಿದ್ಯಾರ್ಥಿಗೆ ಪ್ರಶ್ನೆಯಲ್ಲಿ ಕೇಳಿರುವ ವಿಷಯದ ಬಗ್ಗೆ ಸ್ವಲ್ಪವೇ ತಿಳಿದಿದ್ದರೂ ಸರಿಯಾದ ಉತ್ತರದ ಆಯ್ಕೆಯನ್ನು ಮಾಡುವ ಸಂಭವವಿರುತ್ತದೆ.

ಆದರೆ,

- ಈ ರೀತಿಯ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿದ್ಯಾರ್ಥಿಗಳು ಹೆಚ್ಚು ವಿಷಯಗಳನ್ನು ಓದಬೇಕಾಗುತ್ತದೆ ಹಾಗೂ ನೆನಪಿನಲ್ಲಿಯೂ ಇಟ್ಟುಕೊಳ್ಳಬೇಕಾಗುತ್ತದೆ.
- ಸ್ಮರಣಶಕ್ತಿಯ ಜೊತೆಗೆ, ಓದಿದ ವಿಷಯಗಳ ಮನನ ಮತ್ತು ಸರಿಯಾದ ರೀತಿಯ ಅರ್ಥೈಸುವಿಕೆ, ಪ್ರಶ್ನೆಗಳನ್ನು ಸರಿಯಾಗಿ ವಿಶ್ಲೇಷಿಸಿ ಅರ್ಥಮಾಡಿಕೊಳ್ಳುವ ವಿಧಾನಗಳ ಪರಿಚಯ ಮತ್ತು ತಿಳಿವಳಿಕೆಗಳೂ ಮುಖ್ಯವಾಗಿ ಇರಬೇಕಾಗುತ್ತವೆ.
- ಎಲ್ಲ ಸಂದರ್ಭಗಳಲ್ಲಿಯೂ ಕೇವಲ ಊಹೆ ಮಾಡುವುದರಿಂದ ಉತ್ತರಿಸಲು ಸಾಧ್ಯವಾಗುವುದಿಲ್ಲ.

ಕೊಟ್ಟಿರುವ ಸಮಯವನ್ನು 4 ಹಂತಗಳಾಗಿ ಹೀಗೆ ವಿಂಗಡಿಸಿ: ಪರೀಕ್ಷೆಗೆ ಉತ್ತರಿಸಲು ಕೊಟ್ಟಿರುವ ಸಮಯ 90 ನಿಮಿಷಗಳು.

ಮೊದಲನೆಯ ಹಂತ:	ಎರಡನೆಯ ಹಂತ:	ಮೂರನೆಯ ಹಂತ:	ನಾಲ್ಕನೆಯ ಹಂತ:
25 ನಿಮಿಷಗಳು: ಈ ಹಂತದಲ್ಲಿ, ಸರಳವಾದ ಮತ್ತು ನಿಮಗೆ ಖಚಿತವಾಗಿ ಉತ್ತರಗಳು ಗೊತ್ತಿರುವ ಹಾಗೂ ಸುಲಭವಾದ ಪ್ರಶ್ನೆಗಳನ್ನು ಉತ್ತರಿಸಿ.	**45 ನಿಮಿಷಗಳು:** ಈ ಹಂತವನ್ನು, ನಿಮಗೆ ಗೊತ್ತಿರುವ ಆದರೆ ಸ್ವಲ್ಪ ಸಮಯವನ್ನು ಅಪೇಕ್ಷಿಸುವ ಹಾಗೂ ತಾರ್ಕಿಕ ಹಾಗೂ ವಿಶ್ಲೇಷಣೆಗೆ ಒಳಪಡಬೇಕಾದ ಪ್ರಶ್ನೆಗಳಿಗಾಗಿ ಮೀಸಲಿಡಿ.	**15 ನಿಮಿಷಗಳು:** ಈ ಸಮಯವನ್ನು, ಅತ್ಯಂತ ಕ್ಲಿಷ್ಟಕರವಾದ ಹಾಗೂ ನಿಮಗೆ ಉತ್ತರಗಳ ಬಗ್ಗೆ ಗೊಂದಲವಿರುವ ಪ್ರಶ್ನೆಗಳನ್ನು ಉತ್ತರಿಸಲು ಬಳಸಿ.	**5 ನಿಮಿಷಗಳು:** ಈ ಹಂತವನ್ನು ಪುನರಾವರ್ತನೆಗಾಗಿ/ ತಾಳೆ ನೋಡುವುದಕ್ಕಾಗಿ ಮೀಸಲಿಡಿ.

ಈ ರೀತಿಯ ಪರೀಕ್ಷೆಗಳಲ್ಲಿ ಹೀಗೆ ಉತ್ತರಿಸಿ..

- ಪರೀಕ್ಷೆಯಲ್ಲಿ ಉತ್ತರಿಸುವ ಮೊದಲು ಮನಸ್ಸು ಶಾಂತವಾಗುವ ಯಾವುದಾದರೂ ಸಣ್ಣ ಚಟುವಟಿಕೆಯನ್ನು ಮಾಡಿ. (ಉದಾ: ಶೀತಲೀಕರಣ, ನಿಧಾನವಾಗಿ ಉಸಿರಾಡುವುದು ಇತ್ಯಾದಿ). ಸಮಾಧಾನವಾಗಿರಿ.
- 40 ಪ್ರಶ್ನೆಗಳಿಗೆ ಉತ್ತರಿಸಲು 90 ನಿಮಿಷಗಳ ಕಾಲಾವಕಾಶ ಇರುವುದರಿಂದ, ಪ್ರತಿಯೊಂದು ಪ್ರಶ್ನೆಯನ್ನೂ ಸಾವಧಾನವಾಗಿ ಉತ್ತರಿಸಬಹುದು. ಆತ್ಮವಿಶ್ವಾಸದಿಂದ ಉತ್ತರಿಸಿ.
- ಪ್ರಶ್ನೆಪತ್ರಿಕೆಯನ್ನು ಸರಿಯಾಗಿ ಓದಿ, ಅರ್ಥೈಸಿಕೊಳ್ಳಿ.
- ಅನುಭವಿಗಳು ಹೇಳುವ ಪ್ರಕಾರ, ಕೊಟ್ಟಿರುವ ಪ್ರಶ್ನೆಯಲ್ಲಿನ ಆಯ್ಕೆಗಳಲ್ಲಿ ಸರಿ ಉತ್ತರವನ್ನು ಆಯ್ಕೆಮಾಡುವ ಮೊದಲು, ಪ್ರಶ್ನೆಯನ್ನು ಸರಿಯಾಗಿ ಓದಿ, ಮೊದಲು ಆಯ್ಕೆಗಳನ್ನು ಓದಬೇಡಿ. (ಪ್ರಶ್ನೆಯನ್ನು ಓದುವಾಗ ಬೇಕಿದ್ದರೆ, ಆಯ್ಕೆಗಳನ್ನು ನಿಮ್ಮ ಕೈಯಿಂದ ಮುಚ್ಚಿಕೊಂಡು, ಪ್ರಶ್ನೆಯನ್ನು ಮಾತ್ರ ಓದಿ)
- ಪ್ರಶ್ನೆಯನ್ನು ಓದಿದ ನಂತರ, ಮನಸ್ಸಿನಲ್ಲಿಯೇ ಸರಿ ಉತ್ತರದ ಬಗ್ಗೆ ಯೋಚಿಸಿ, ನಂತರ ಕೊಟ್ಟಿರುವ ಆಯ್ಕೆಗಳನ್ನು ನೋಡಿ. ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.
- ಸರಿಯಾದ ಉತ್ತರವು ಗೊತ್ತಿಲ್ಲದ ಪಕ್ಷದಲ್ಲಿ, ಸರಿಯಲ್ಲವೆನಿಸುವ ಉತ್ತರಗಳನ್ನು ಹೊಡೆದುಹಾಕಿ. ಕೊನೆಗೆ ಉಳಿಯುವ ಸರಿಯೆನಿಸುವ ಉತ್ತರವನ್ನು ಆರಿಸಿ.
- ಋಣ ಅಂಕಗಳು ಇಲ್ಲದಿರುವುದರಿಂದ, ಬೇಕಾದ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿ.
- ಕೆಲವು ಬಾರಿ ಉತ್ತರಗಳು ಕೇಳಿರುವ ಪ್ರಶ್ನೆಗಳಲ್ಲಿಯೇ ಅಡಕವಾಗಿರಬಹುದು. ಆದ್ದರಿಂದ ಪ್ರಶ್ನೆಗಳನ್ನು ಓದಿ ಸರಿಯಾಗಿ ಅರ್ಥೈಸಿಕೊಳ್ಳಿ.
- ನಿಮಗೆ ಗೊತ್ತಿರುವ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ.
- ಕೆಲವು ಬಾರಿ ಕೊಟ್ಟಿರುವ ಎಲ್ಲ ಆಯ್ಕೆಗಳೂ ಸಮಂಜಸ ಎನಿಸಬಹುದು, ಆಗ ಕೊಟ್ಟಿರುವ ಆಯ್ಕೆಗಳಲ್ಲಿ ಅತ್ಯಂತ ಸಮಂಜಸವಾದ ಉತ್ತರವನ್ನು ಆರಿಸಿ.

(ಮುಂದಿನ ಸಂಚಿಕೆಯಲ್ಲಿ: ಓದಿದ ವಿಷಯಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳುವ ಕೆಲವು ಸರಳ ವಿಧಾನಗಳು)

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್, ಬೆಂಗಳೂರು)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಿನ್ನಿಂದ ಸಾಧ್ಯವಾಗದ ಕೆಲಸಗಳನ್ನು ನಾನು ಮಾಡಬಹುದು, ನನ್ನಿಂದ ಸಾಧ್ಯವಾಗದ ಕೆಲಸಗಳನ್ನು ನೀನು ಮಾಡಬಹುದು. ಆದರೆ ನಾವಿಬ್ಬರೂ ಒಟ್ಟಿಗೆ ಸೇರಿದರೆ ಮಹತ್ತರವಾದ ಕೆಲಸಗಳನ್ನು ಮಾಡಬಹುದು.

-ಮದರ್ ತೆರೇಸಾ

ಹಾಡಿ, ತಾಂಡಾಗಳಲ್ಲೂ ನ್ಯಾಯಬೆಲೆ ಅಂಗಡಿ ಸ್ವಾಗತಾರ್ಹ ಹೆಜ್ಜೆ, ದೋಷಗಳನ್ನೂ ನಿವಾರಿಸಿ

ಕನಿಷ್ಠ ನೂರು ಪಡಿತರ ಚೀಟಿಗಳಿರುವ ಎಲ್ಲಾ ಹಾಡಿ, ತಾಂಡಾ, ಗೊಲ್ಲರಹಟ್ಟಿ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯಗಳ ಕಾಲೊನಿಗಳಲ್ಲಿ ಇದೇ ವರ್ಷಾಂತ್ಯದೊಳಗೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ತಳ ಸಮುದಾಯಗಳಿಗೆ, ಅದರಲ್ಲೂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ, ತಿಂಗಳ ಪಡಿತರ ಸರಿಯಾಗಿ ತಲುಪುವಂತೆ ಮಾಡುವ ದಿಸೆಯಲ್ಲಿ ಇದೊಂದು ಸ್ವಾಗತಾರ್ಹ ಹೆಜ್ಜೆ. ಆದರೆ, ಸರ್ಕಾರ ತಾನು ಕೊಟ್ಟ ಭರವಸೆಯನ್ನು ಈಡೇರಿಸುವ ನಿಟ್ಟಿನಲ್ಲಿ ಬಲುದೂರ ಸಾಗಬೇಕಿದೆ. ಸೌಲಭ್ಯದಿಂದ ವಂಚಿತವಾದ ಹಾಡಿ, ತಾಂಡಾ, ಹಟ್ಟಿ ಹಾಗೂ ಎಸ್‌ಸಿ ಎಸ್‌ಟಿ ಕಾಲೊನಿಗಳನ್ನು ಗುರುತಿಸಿ, ಅಲ್ಲಿ ನ್ಯಾಯಬೆಲೆ ಅಂಗಡಿ ತೆರೆಯುವ ಹೊಣೆಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ. ಪಡಿತರ ವಿತರಣೆ ನಿಯಮಾವಳಿ ಪ್ರಕಾರ, ಹೊಸ ನ್ಯಾಯಬೆಲೆ ಅಂಗಡಿ ತೆರೆಯಬೇಕಾದರೆ ನಗರ ಪ್ರದೇಶದಲ್ಲಿ ಒಂದು ಅಂಗಡಿಗೆ ಕನಿಷ್ಠ 800 ಹಾಗೂ ಗ್ರಾಮೀಣ ಭಾಗದಲ್ಲಿ ಕನಿಷ್ಠ 500 ಪಡಿತರ ಚೀಟಿಗಳು ಇರಬೇಕು. ಆದರೆ, ಹಾಡಿ, ತಾಂಡಾಗಳಂತಹ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಜನಸಂಖ್ಯೆ ಕಡಿಮೆ ಇರುತ್ತದೆ. ಸಹಜವಾಗಿಯೇ ಪಡಿತರ ಚೀಟಿಗಳ ಸಂಖ್ಯೆಯೂ ಕಡಿಮೆಯೇ ಇರುತ್ತದೆ. ಹೀಗಾಗಿ ಅಲ್ಲಿನ ಫಲಾನುಭವಿಗಳು ಸದ್ಯ ಪಡಿತರ ಪಡೆಯಲು ಹತ್ತಿರದ ಪಟ್ಟಣ ಇಲ್ಲವೆ ಗ್ರಾಮಗಳಿಗೆ ತೆರಳುವುದು ಅನಿವಾರ್ಯವಾಗಿದೆ. ಇದರಿಂದ ದಿನದ ಕೂಲಿ ಕೆಲಸದಿಂದಲೂ ಅವರು ವಂಚಿತರಾಗುವಂತಾಗಿದೆ. ಸರ್ಕಾರದ ತೀರ್ಮಾನದಂತೆ ಅವರ ವಾಸದ ಸ್ಥಳದಲ್ಲೇ ನ್ಯಾಯಬೆಲೆ ಅಂಗಡಿಗಳನ್ನು ತೆರೆದರೆ ಪಡಿತರಕ್ಕಾಗಿ ಅಲೆಯುವುದು ತಪ್ಪಲಿದೆ.



ಮನೆಬಾಗಿಲಿಗೆ ಪಡಿತರ ತಲುಪಿಸುವುದಷ್ಟೇ ಮುಖ್ಯವಲ್ಲ; ಹಾಗೆ ತಲುಪಿಸಿದ ಪಡಿತರ ಗುಣಮಟ್ಟದಿಂದ ಕೂಡಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದೂ ತನ್ನ ಹೊಣೆ ಎಂಬುದನ್ನು ಸರ್ಕಾರ ಅರಿಯಬೇಕು

ಈ ಮಧ್ಯೆ ಮುಖ್ಯಮಂತ್ರಿಯವರು ಮನೆ ಮನೆಗೆ ಪಡಿತರ ಪೂರೈಸುವ ‘ಜನ ಸೇವಕ’ ಯೋಜನೆಯನ್ನೂ ಘೋಷಿಸಿದ್ದಾರೆ. ನವೆಂಬರ್ 1ರಿಂದ ಈ ಯೋಜನೆ ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಜಾರಿಗೆ ಬರಲಿದೆ. ಅಕ್ಕಿ, ಗೋಧಿ ಮತ್ತು ಸಕ್ಕರೆಯನ್ನು ಫಲಾನುಭವಿಗಳ ಮನೆ ಬಾಗಿಲಿಗೇ ತಲುಪಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಬೆಂಗಳೂರಿನಲ್ಲಿ ಯೋಜನೆಯ ಅನುಷ್ಠಾನವನ್ನು ನೋಡಿಕೊಂಡು 2022ರ ಜನವರಿ 26ರಿಂದ ರಾಜ್ಯದಾದ್ಯಂತ ವಿಸ್ತರಿಸಲಾಗುವುದು ಎಂದು ಅವರು ಭರವಸೆ ನೀಡಿದ್ದಾರೆ. ‘ಜನ ಸೇವಕ’ ಯೋಜನೆ ಏನಾದರೂ ಸಮರ್ಪಕವಾಗಿ ಅನುಷ್ಠಾನಗೊಂಡಿದ್ದೇ ಆದಲ್ಲಿ ನ್ಯಾಯಬೆಲೆ ಅಂಗಡಿಗಳ ಮುಂದೆ ಸದ್ಯ ಕಾಣುವ ಉದ್ದನೆಯ ಸರದಿ ಸಾಲುಗಳು ಮಾಯವಾಗಲಿವೆ. ಜನ ಕೂಲಿ ಕೆಲಸ ಬಿಟ್ಟು ಗಂಟೆಗಳವರೆಗೆ ಸರದಿಯಲ್ಲಿ ಕಾಯುವ ಪ್ರಮೇಯವೂ ತಪ್ಪಲಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು (ಪಿಡಿಎಸ್) ದ್ವಿತೀಯ ಜಾಗತಿಕ ಸಮರದ ಹೊತ್ತಿಗೆ ದೇಶದಲ್ಲಿ ಮೊದಲ ಬಾರಿಗೆ ಅನುಷ್ಠಾನಕ್ಕೆ ತರಲಾಯಿತು. ಆಗ ಭೀಕರ ಕ್ಷಾಮದಿಂದ ನಲುಗಿದ್ದ ಜನರ ಕಣ್ಣೀರನ್ನು ಒರೆಸಲು ಇದರಿಂದ ಸಾಧ್ಯವಾಯಿತು. ‘ದೇಶದ ಆಹಾರ ಅಭದ್ರತೆಗೆ ಧಾನ್ಯಗಳ ಕೊರತೆಯೇನೂ ಪ್ರಧಾನ ಕಾರಣವಲ್ಲ; ವಿತರಣಾ ವ್ಯವಸ್ಥೆ ಸಮರ್ಪಕವಾಗಿ ಇಲ್ಲದಿರುವುದು ಹಾಗೂ ಜನರ ಕೈಗೆಟಕುವ ಬೆಲೆಯಲ್ಲಿ ಧಾನ್ಯ ಸಿಗದಿರುವುದು ಮುಖ್ಯ ಕಾರಣ’ ಎಂದು ಅಧ್ಯಯನಗಳು ಹೇಳಿದ್ದವು. ಆಹಾರ ಭದ್ರತೆಯನ್ನು ಖಚಿತಪಡಿಸುವ ಉದ್ದೇಶದಿಂದಲೇ ಆಗ ಪಿಡಿಎಸ್ ಅನ್ನು ಅನುಷ್ಠಾನಕ್ಕೆ ತರಲಾಗಿತ್ತು. ರಾಜ್ಯ ಸರ್ಕಾರ ಈಗ ಕೈಗೊಂಡಿರುವ ತೀರ್ಮಾನಗಳಿಂದ ಆಹಾರ ಭದ್ರತೆಯನ್ನು ಖಾತರಿಪಡಿಸುವ ದಿಸೆಯಲ್ಲಿ ಮತ್ತೊಂದು ಹೆಜ್ಜೆ ಮುಂದೆ ಇಟ್ಟಂತಾಗಿದೆ.

ವಿತರಣಾ ವ್ಯವಸ್ಥೆಯನ್ನು ಪೂರ್ಣವಾಗಿ ಸದೃಢಗೊಳಿಸಲು ಉಳಿದಿರುವ ದೋಷಗಳನ್ನೂ ಸರಿಪಡಿಸುವ ಅಗತ್ಯವನ್ನು ಕುವೆಂಪು ವಿಶ್ವವಿದ್ಯಾಲಯದ ತಜ್ಞರ ತಂಡವೊಂದು ನಡೆಸಿದ ವರದಿ ಎತ್ತಿ ತೋರುತ್ತದೆ. ಪಡಿತರ ವ್ಯವಸ್ಥೆಯಲ್ಲಿ ಪೂರೈಸಬೇಕಾದ ಧಾನ್ಯವು ಕಾಳಸಂತೆಯಲ್ಲಿ ಮಾರಾಟ ಆಗುತ್ತಿರುವುದು, ವಿತರಿಸುವ ಪಡಿತರದಲ್ಲಿ ಕಲಬೆರಕೆ ಆಗುತ್ತಿರುವುದು, ಸಮರ್ಪಕ ಸಂಗ್ರಹ ವ್ಯವಸ್ಥೆ ಇಲ್ಲದಿರುವುದು, ಕಳಪೆ ಗುಣಮಟ್ಟದ ಆಹಾರ ಧಾನ್ಯ ಪೂರೈಕೆ ಮಾಡುತ್ತಿರುವುದು, ನಕಲಿ ಪಡಿತರ ಚೀಟಿಗಳ ಹಾವಳಿ ಹೆಚ್ಚಿರುವುದು ಮತ್ತು ಈ ಅಧ್ವಾನಗಳನ್ನೆಲ್ಲ ಸರಿಪಡಿಸುವಂತಹ ನಿರ್ವಹಣಾ ವ್ಯವಸ್ಥೆ ಇಲ್ಲದಿರುವುದರ ಕಡೆಗೆ ಆ ವರದಿ ಬೊಟ್ಟು ಮಾಡಿದೆ. ನ್ಯಾಯಬೆಲೆ ಅಂಗಡಿಗಳಲ್ಲಿ ಪೂರೈಸುವ ಧಾನ್ಯಗಳು ಸೇವಿಸಲು ಯೋಗ್ಯವಾಗಿಲ್ಲ ಎಂಬ ದೂರುಗಳು ರಾಜ್ಯದ ಒಂದಿಲ್ಲೊಂದು ಭಾಗದಿಂದ ಆಗಾಗ ಕೇಳಿಬರುತ್ತಲೇ ಇವೆ. ಬಡತನ ನಿವಾರಣೆಯ ಮೊದಲ ಮೆಟ್ಟಿಲಾಗಿರುವ ಪಿಡಿಎಸ್‌ನ ದೋಷಗಳನ್ನೆಲ್ಲ ನಿವಾರಿಸಿ, ವ್ಯವಸ್ಥೆಯನ್ನು ಬಲಪಡಿಸಲು ರಾಜ್ಯ ಸರ್ಕಾರ ಆದ್ಯತೆಯ ಮೇಲೆ ಕ್ರಮ ಜರುಗಿಸಬೇಕು. ಮನೆಬಾಗಿಲಿಗೆ ಪಡಿತರ ತಲುಪಿಸುವುದಷ್ಟೇ ಮುಖ್ಯವಲ್ಲ; ಹಾಗೆ ತಲುಪಿಸಿದ ಪಡಿತರ ಗುಣಮಟ್ಟದಿಂದ ಕೂಡಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದೂ ತನ್ನ ಹೊಣೆ ಎಂಬುದನ್ನು ಅರಿಯಬೇಕು.

ದಿನದ ಟ್ವೀಟ್



ಮಾದರಿ ವ್ಯಕ್ತಿತ್ವ

ನನ್ನ ವೈಯಕ್ತಿಕ ಕೋರಿಕೆ ಇಷ್ಟೇ. ಇನ್ನಾದ್ರೂ ಒಂದಷ್ಟು ಅಭಿಮಾನಿಗಳು ಫ್ಯಾನ್ಸ್ ವಾರ್ ಅನ್ನೋದನ್ನ ಬಿಟ್ಟು ಒಂದಾಗಿ, ಪ್ರತಿಯೊಬ್ಬ ನಟರೂ ನಮ್ಮ ಕನ್ನಡಿಗರು, ನಮ್ಮವ್ರು ಅನ್ನೋ ಭಾವನೆಯೊಂದಿಗೆ ಪ್ರೀತಿಸಿ, ಗೌರವಿಸಿ, ಅಭಿಮಾನ ತೋರಿಸಿ. ಅಪ್ಪು ಸಾರ್ ನಮ್ಮೆಲ್ಲರನ್ನೂ ಬೆಸೆದು ಹೋದರೇನೋ ಅನ್ನಿಸುತ್ತಿದೆ. ಕನ್ನಡಕ್ಕಾಗಿ ಒಂದಾಗೋಣ.

ರೂಪೇಶ್ ರಾಜಣ್ಣ, ನಾಗರಿಕ

ಕಿಡಿನುಡಿ



ಮಾದಕ ದ್ರವ್ಯ ನಿಯಂತ್ರಣ ಬ್ಯೂರೊ (ಎನ್‌ಸಿಬಿ) ಪ್ರಾದೇಶಿಕ ನಿರ್ದೇಶಕ ಸಮೀರ್ ವಾಂಖೆಡೆ ಅವರು ಹಿಂದೂ ದಲಿತ ಆಗಿದ್ದಾರೆ. ಅವರು ಮತ್ತು ಅವರ ಕುಟುಂಬದವರ ವ್ಯಕ್ತಿತ್ವಕ್ಕೆ ಧಕ್ಕೆ ತರಬಾರದು. ವಾಂಖೆಡೆ ಅವರು ಡಾ. ಅಂಬೇಡ್ಕರ್ ಅವರ ಅನುಯಾಯಿ. ಮುಸಲ್ಮಾನರಲ್ಲ.

(ಮುಂಬೈ ಡ್ರಗ್ಸ್ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸುವಾಗ, ವಾಂಖೆಡೆ ಹುಟ್ಟಿನಿಂದ ಮುಸಲ್ಮಾನರು ಎಂದಿದ್ದ ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಅವರ ಹೇಳಿಕೆಗೆ ಪ್ರತಿಕ್ರಿಯೆ)

ರಾಮದಾಸ್ ಆಠವಳೆ, ಕೇಂದ್ರ ಸಚಿವ, ಆರ್‌ಪಿಐ (ಎ) ಅಧ್ಯಕ್ಷ

25 ವರ್ಷಗಳ ಹಿಂದೆ

ಶುಕ್ರವಾರ, 1-11-1996

• **ನಾಲ್ಕು ಗಂಟೆ ದೊಂಬಿ, ಭಾರಿ ನಷ್ಟ**

ಧಾರವಾಡ, ಅ. 31– ಗದಗ ಜಿಲ್ಲೆ ರಚನೆಗಾಗಿ ಸುಮಾರು 2 ದಶಕಗಳಿಗೂ ಹೆಚ್ಚು ಕಾಲದಿಂದ ಬೇಡಿಕೆ ಸಲ್ಲಿಸುತ್ತ ಬಂದಿರುವ ಗದಗ ಪಟ್ಟಣದಲ್ಲಿ ನಿನ್ನೆ ಉದ್ರಿಕ್ತ ಜನರ ದೊಡ್ಡ ಗುಂಪು ಹಿಂಸಾಚಾರದಲ್ಲಿ ತೊಡಗಿ, ಈ ಶತಮಾನದಲ್ಲಿಯೇ ಕಂಡು ಕೇಳರಿಯದಂತಹ ವ್ಯಾಪಕ ಪ್ರಮಾಣದಲ್ಲಿ ಸರ್ಕಾರಿ ಆಸ್ತಿಪಾಸ್ತಿಯನ್ನು ನಾಶಪಡಿಸುವಂತಹ ಪೈಶಾಚಿಕ ಕೃತ್ಯ ನಡೆಸಿದೆ.

ಸುಮಾರು ನಾಲ್ಕು ತಾಸುಗಳಿಗೂ ಹೆಚ್ಚು ಕಾಲ ಇಡೀ ಪಟ್ಟಣದಲ್ಲಿ ಉಂಟಾದ ಅರಾಜಕ ಪರಿಸ್ಥಿತಿಯಿಂದಾಗಿ ಹಿಂಸಾಚಾರ, ಆಸ್ತಿಪಾಸ್ತಿ ನಷ್ಟದಲ್ಲಿ ತೊಡಗಿದ ಸಾವಿರಾರು ಸಂಖ್ಯೆಯಲ್ಲಿದ್ದ ಜನರು ಸಮೂಹಸನ್ನಿಗೆ ಒಳಗಾದಂತೆ ವರ್ತಿಸಿ ರಾಜ್ಯ ಸರ್ಕಾರದ ಹಾಗೂ ಕೇಂದ್ರದ ಹಲವಾರು ಕಚೇರಿಗಳಿಗೆ ನುಗ್ಗಿ ಪೀಠೋಪಕರಣಗಳು, ದಾಖಲೆ ಪತ್ರಗಳು, ನಗದು ಹಣ, ಸರ್ಕಾರಿ ಹಾಗೂ ಸಾರ್ವಜನಿಕರ ವಾಹನಗಳು ಸೇರಿದಂತೆ ಕಚೇರಿಯ ಸಮಸ್ತ ವಸ್ತುಗಳಿಗೆ ಬೆಂಕಿ ಹಚ್ಚಿ ನಾಶಪಡಿಸಿದ್ದಾರೆ. ವ್ಯಾಪಕ ಹಿಂಸಾಚಾರದಲ್ಲಿ ಸುಮಾರು 15 ಕೋಟಿ ರೂಪಾಯಿಗೂ ಹೆಚ್ಚಿನ ನಷ್ಟ ಆಗಿರಬಹುದು ಎಂದು ಪ್ರಾಥಮಿಕವಾಗಿ ಅಂದಾಜು ಮಾಡಲಾಗಿದೆ.

• **ಕ್ರಿಕೆಟ್ ಸ್ಟೇಡಿಯಂ ಬಳಿ ಸ್ಫೋಟ**

ಬೆಂಗಳೂರು, ಅ. 31– ವಿಶ್ವ ಸುಂದರಿ ಸ್ಪರ್ಧೆ ನಡೆಯಲಿರುವ ನಗರದ ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣದ ಹೊರಗೆ ಇಂದು ರಾತ್ರಿ ಅಪರಿಚಿತರು ಸ್ಫೋಟಕ ಸಿಡಿಸಿ ಹಾನಿಯುಂಟು ಮಾಡಿದ್ದಾರೆ.

ರಾತ್ರಿ ಸುಮಾರು 8.45ರ ವೇಳೆಗೆ ಕ್ರೀಡಾಂಗಣದ ಮುಖ್ಯ ಪ್ರವೇಶ ದ್ವಾರದ ಬಳಿ ಭಾರಿ ಸದ್ದಿನೊಂದಿಗೆ ಸ್ಫೋಟಕ ಸಿಡಿದು ಪಕ್ಕದಲ್ಲಿದ್ದ ಮಾಹಿತಿ ಕೇಂದ್ರದ ಗಾಜುಗಳು ಪುಡಿಯಾದವು.

50 ವರ್ಷಗಳ ಹಿಂದೆ

ಸೋಮವಾರ, 1-11-1971

• **ಕೂಡಲೆ ರಾಜ್ಯಮಟ್ಟದಲ್ಲೂ ಕನ್ನಡ**

ಬೆಂಗಳೂರು, ಅ. 31– ಆಡಳಿತಾನುಕೂಲ ದೃಷ್ಟಿಯಿಂದ ಕನ್ನಡವನ್ನು ಉಪವಿಭಾಗ ಮಟ್ಟದಲ್ಲಿ ಜಾರಿಗೆ ತರುವುದರ ಜೊತೆಗೆ ಕೂಡಲೆ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲೂ ಜಾರಿಗೆ ತರಬೇಕೆಂದು ರಾಜ್ಯದ ಕನ್ನಡ ಭಾಷಾ ಸಮಿತಿ ಶಿಫಾರಸು ಮಾಡಿದೆ.

ಕನ್ನಡವನ್ನು ಉಪ ವಿಭಾಗ ಹಾಗೂ ಕ್ರಮೇಣ ಎಲ್ಲ ಹಂತಗಳಲ್ಲಿ ಜಾರಿಗೆ ತರಲು ಅಗತ್ಯವಾದ ಕ್ರಮಗಳನ್ನು ಸೂಚಿಸಲು ಸರ್ಕಾರ ನೇಮಿಸಿದ್ದ ಭಾಷಾ ಸಮಿತಿಯ ಅಂತಿಮ ವರದಿಯನ್ನು ಸರ್ಕಾರ ರಾಜ್ಯೋತ್ಸವದ ಸಂದರ್ಭದಲ್ಲಿ ಬಿಡುಗಡೆ ಮಾಡಿದೆ.

• **ತಾತ್ಸಾರ ತೋರುವ ಅಧಿಕಾರಿಗಳ ದಂಡನೆಗೆ ಸಲಹೆ**

ಬೆಂಗಳೂರು, ಅ. 31– ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವುದರಲ್ಲಿ ತಾತ್ಸಾರ ತೋರಿಸುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಕನ್ನಡ ಭಾಷಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಬೇಕಾಗಿದೆ ಗುಣಮಟ್ಟದ ಕನ್ನಡ ಮಾಧ್ಯಮ ಶಾಲೆಗಳನ್ನು ಸಾಧ್ಯವಾಗಿಸುವ ನೀತಿ

ಕನ್ನಡದ ಸುತ್ತ ಬದುಕು ಕಟ್ಟುವ ಬಗೆ



ವಿಶ್ಲೇಷಣೆ

ವಸಂತ ಶೆಟ್ಟಿ

ಇನ್ನೊಂದು ‘ಕರ್ನಾಟಕ ರಾಜ್ಯೋತ್ಸವ’ದ ದಿನ ನಮ್ಮೆದುರಿದೆ. ಈ ಬಾರಿಯ ಸಂಭ್ರಮಕ್ಕೆ ಮಂಕು ಕವಿಯುವಂತೆ ನಟ ಪುನೀತ್ ರಾಜ್‌ಕುಮಾರ್ ಅವರು ಹಠಾತ್ ಆಗಿ ನಮ್ಮನ್ನಗಲಿದ್ದಾರೆ. ಮನಸ್ಸುಗಳು ಆ ಪಂಥ, ಈ ಪಂಥ ಎಂದು ಒಡೆದು ಚೂರಾಗಿರುವ, ಎಲ್ಲರೂ ತಮ್ಮದೇ ಸತ್ಯದ ಪ್ರಪಂಚದಲ್ಲಿ ಬದುಕುತ್ತಿರುವ ಈ ಹೊತ್ತಿನಲ್ಲಿ ಎಲ್ಲರನ್ನೂ ಎಲ್ಲ ಒಡಕುಗಳ ಆಚೆಯೂ ಜೋಡಿಸುವಂತಹ ಶಕ್ತಿ ಹೊಂದಿದ್ದ ಕೆಲವೇ ಕೆಲವು ಕನ್ನಡಿಗರಲ್ಲಿ ಅವರೊಬ್ಬರಾಗಿದ್ದರು. ಅವರ ಅಗಲಿಕೆಗೆ ನಾಡಿನ ಉದ್ದಗಲಕ್ಕೂ ಕಿರಿಯರಿಂದ ಹಿರಿಯರವರೆಗೆ ಕಂಬನಿ ಮಿಡಿದ ಎಲ್ಲರನ್ನೂ ಕಂಡಾಗ, ಕನ್ನಡ ಎನ್ನುವ ಮೂರಕ್ಷರಕ್ಕೆ ಹೇಗೆ ನಮ್ಮನ್ನೆಲ್ಲ ನಮ್ಮೆಲ್ಲ ವ್ಯತ್ಯಾಸಗಳ ಆಚೆ ಒಂದಾಗಿಸುವ ಒಂದು ಅಗಾಧ ಶಕ್ತಿಯಿದೆ ಅನ್ನುವುದು ಗೊತ್ತಾಗುತ್ತದೆ. ರಾಜ್ಯೋತ್ಸವದ ಹೊತ್ತಿನಲ್ಲಿ ಕರ್ನಾಟಕದ ಏಳಿಗೆಯ ಕುರಿತ ಯಾವುದೇ ಪ್ರಶ್ನೆಗೆ ಪರಿಹಾರ ಅರಸುವ ತಾತ್ವಿಕತೆಗೆ ಬೇಕಾದ ಅಡಿಪಾಯ ಇಂತಹದೊಂದು ಒಗ್ಗಟ್ಟಿನಲ್ಲಿದೆ ಅನ್ನುವುದನ್ನು ಮನಗಂಡರೆ ನಮ್ಮ ಸಮಸ್ಯೆಗಳ ಪರಿಹಾರಕ್ಕೆ ಒಂದು ಹೊಸ ನೋಟ ದೊರೆಯಬಹುದು.

ಕನ್ನಡಿಗರೆಲ್ಲ ಒಂದಾಗಿ ಭಾರತದ ಒಕ್ಕೂಟದಲ್ಲಿ ಕರ್ನಾಟಕವೆನ್ನುವ ರಾಜಕೀಯ ಗಡಿಯೊಳಗೆ ನೆಲೆ ನಿಂತ ದಿನ ಕರ್ನಾಟಕ ರಾಜ್ಯೋತ್ಸವ. ಏಕೀಕರಣದ ಮೂಲ ಆಶಯವೇ ‘ಕನ್ನಡ ರಾಜ್ಯದಲ್ಲಿ ಕನ್ನಡದಿಂದ ಕನ್ನಡಿಗರೆಲ್ಲರ ಏಳಿಗೆ’. ಕನ್ನಡಿಗರ ಬದುಕು-ಬಿಡುಗಡೆಯ ಎಲ್ಲ ಅಗತ್ಯಗಳು ಸಾಕಷ್ಟು ಚೆನ್ನಾಗಿ ಕನ್ನಡ ನೆಲದಲ್ಲೇ ಈಡೇರುವಂತಹ ಏರ್ಪಾಡು ಇದ್ದಾಗ ಅಲ್ಲಿ ಕನ್ನಡಿಗರ ಏಳಿಗೆ ಸಾಧ್ಯ ಅನ್ನಬಹುದು. ಹಾಗಿದ್ದರೆ ಇಂತಹದೊಂದು ಏಳಿಗೆಯ ಏರ್ಪಾಡು ಕಟ್ಟಲು ಇರುವ ದಾರಿ ಯಾವುದು ಅನ್ನುವುದು ನಮ್ಮ ಮುಂದಿನ ಪ್ರಶ್ನೆ. ಈ ಪ್ರಶ್ನೆ ಹುಟ್ಟಿದಾಗ ನಾವು ಇಂದು ಇರುವ ಜಗತ್ತು, ಅದನ್ನು ನಿಯಂತ್ರಿಸುತ್ತಿರುವ ಆರ್ಥಿಕ ಮತ್ತು ರಾಜಕೀಯ ನೀತಿಗಳು, ಅವುಗಳ ಜೊತೆಗಿನ ಕರ್ನಾಟಕದ ಸಂಬಂಧ ಮುಂತಾದ ಇಂದಿನ ವಾಸ್ತವಗಳ ಅಡಿಯಲ್ಲೇ ನಮ್ಮ ಏಳಿಗೆಗೆ ಆಗಬೇಕಿರುವ ಕೆಲಸಗಳೇನು ಅನ್ನುವ ಕುರಿತು ಯೋಚಿಸಬೇಕಾಗುತ್ತದೆ. ನಮ್ಮ ಇಂದಿನ ವಾಸ್ತವವೇನು?

ನಾವು ಕಳೆದ ಮೂವತ್ತು ವರ್ಷಗಳಿಂದ ಜಾಗತೀಕರಣದ ವ್ಯವಸ್ಥೆಯಡಿ ಇದ್ದೇವೆ. ತಂತ್ರಜ್ಞಾನದಲ್ಲಾಗುತ್ತಿರುವ ವೇಗದ ಬದಲಾವಣೆ, ಅಡೆತಡೆಯಿಲ್ಲದ ಜಾಗತಿಕ ವ್ಯಾಪಾರ, ಬಂಡವಾಳ ಮತ್ತು ವಲಸೆಯ ತಡೆಯಿಲ್ಲದ ಹರಿವು ಇದರ ಮುಖ್ಯ ಗುಣಲಕ್ಷಣಗಳಾಗಿವೆ. ಇದು ಹಲವಾರು ದೇಶಗಳಲ್ಲಿ ಆರ್ಥಿಕತೆಯ ಬೆಳವಣಿಗೆಗೆ, ಹೊಸ ಉದ್ಯೋಗ ಸೃಷ್ಟಿಗೆ ಒಂದಿಷ್ಟು ಕೊಡುಗೆ ಖಂಡಿತ ನೀಡಿದೆ. ಜೊತೆ ಜೊತೆಯಲ್ಲೇ ಇಂತಹದೊಂದು ವ್ಯಾಪಾರ ಕೇಂದ್ರಿತವಾದ ವ್ಯವಸ್ಥೆಯು ಪರಿಸರ ನಾಶ, ಅಕಾಲಿಕ ನೆರೆ, ಬರದಂತಹ ಶತಮಾನದ ಸವಾಲನ್ನು ತಂದಿದೆ. ಅದರ ನಡುವೆಯೇ ಕೊರೊನಾದಂತಹ ಆರೋಗ್ಯ ಬಿಕ್ಕಟ್ಟು ಜಾಗತೀಕರಣದ ನಿಜವಾದ ಮಿತಿಯನ್ನೂ ಎತ್ತಿ ತೋರಿದೆ.

ಕೊರೊನಾ ತಂದ ಆರ್ಥಿಕ ಬಿಕ್ಕಟ್ಟು, ಸೃಷ್ಟಿಸುತ್ತಿರುವ ಸಾಮಾಜಿಕ ತೊಂದರೆಗಳು ಹಲವು ದೇಶಗಳ ರಾಜಕೀಯದ ಸ್ವರೂಪವನ್ನು ಬದಲಾಯಿಸುತ್ತಿವೆ. ಈ ಬದಲಾವಣೆಗಳು ಜಾಗತಿಕ ಸಹಕಾರ, ಸಮನ್ವಯದ ಮೇಲೂ ಬೇರೆ ಬೇರೆ ರೀತಿಯ ಒತ್ತಡ ಹೇರುತ್ತಿವೆ. ಈ ವಾಸ್ತವಗಳಿಂದ ಕೆಲವು ತೀರ್ಮಾನಗಳಿಗೆ ಬರಬಹುದು. ಮೊದಲನೆಯದ್ದು, ವಿಜ್ಞಾನ ಮತ್ತು ತಂತ್ರಜ್ಞಾನದ ಬಲದ ಮೇಲೆ ನಿಂತಿರುವ ಜಾಗತೀಕರಣದ ಇಂದಿನ ಸ್ವರೂಪ ಕೊಂಚ ಬದಲಾಗಬಹುದು, ಆದರೆ ಅದು ಬಹುಮಟ್ಟಿಗೆ ಹೀಗೆಯೇ ಮುಂದುವರೆಯುತ್ತದೆ.

ಎರಡನೆಯದ್ದು, ಈ ಜಾಗತೀಕರಣದ ಅತೀ ಹೆಚ್ಚು ಆರ್ಥಿಕ ಪ್ರಯೋಜನ ಪಡೆದುಕೊಳ್ಳುತ್ತಿರುವ ನಾಡುಗಳು ಯಾವುವು ಅಂದರೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ತಮಗೆ ಸಿಕ್ಕಿರುವ ಮುನ್ನಡೆಯನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿರುವ ನಾಡುಗಳು. ಮೂರನೆಯದ್ದು, ಇಂತಹದೊಂದು ಮುನ್ನಡೆಯನ್ನು ಕಾಯ್ದುಕೊಳ್ಳಲು ಈ ನಾಡುಗಳು ತಮ್ಮ ಕಲಿಕೆಯ ವ್ಯವಸ್ಥೆಯತ್ತ ಸತತವಾದ ಗಮನ ಮತ್ತು ಹೂಡಿಕೆ ಮಾಡುತ್ತಲಿವೆ. ವಿಜ್ಞಾನ ಮತ್ತು ತಂತ್ರಜ್ಞಾನದ ಈ ಶತಮಾನದಲ್ಲಿ ಮೇಲೆ ಚರ್ಚಿಸಿದ ವಿಷಯಗಳು, ಸವಾಲುಗಳ ಹಿನ್ನೆಲೆಯಲ್ಲಿ ಕನ್ನಡಿಗರ ಏಳಿಗೆ ಅಂತ ಯೋಚಿಸಿದಾಗ ನಮ್ಮ ಆದ್ಯತೆ ಏನಾಗಬೇಕು ಅನ್ನುವ ಕುರಿತು ಕೆಲವು ಹೊಳಹುಗಳು ಕಾಣಬಹುದು.

ಮೊದಲನೆಯದ್ದು- ಕನ್ನಡಕ್ಕಿರುವ ವಿಜ್ಞಾನ-ತಂತ್ರಜ್ಞಾನದ ಸಾಧ್ಯತೆ ಹಿಗ್ಗಿಸುವುದು. ಕನ್ನಡವೆಂದರೆ ಹಾಡು, ಕುಣಿತ, ಸಾಹಿತ್ಯ, ಸಿನಿಮಾಗಳಿಗೆ ಮೀಸಲಿಟ್ಟು ಹೊಸ ಜಗತ್ತಿನ ಯಾವ ಸಾಧ್ಯತೆಗಳಿಗೂ ಕನ್ನಡ ಲಾಯಕ್ಕಿಲ್ಲ ಅನ್ನುವ ಕೈಚೆಲ್ಲುವ ನಿಲುವು ಕೈಬಿಟ್ಟು ಕನ್ನಡಕ್ಕಿರುವ ಸಾಧ್ಯತೆಗಳನ್ನು ಮಿತಿಯಿಲ್ಲದೆ ಹಿಗ್ಗಿಸುವ ಯೋಚನೆ ನಮ್ಮದಾಗಬೇಕು. ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನದ ಎಲ್ಲ ಕವಲುಗಳನ್ನು ತರುವತ್ತ, ಅದಕ್ಕೆ ಬೇಕಿರುವ ಅನುವಾದ, ಪದಕಟ್ಟಣೆ, ಪ್ರಕಟಣೆ, ಆಡಿಯೊ-ವಿಡಿಯೊ ಸಾಮಗ್ರಿ ರೂಪಿಸುವಿಕೆಯಂತಹ ಯೋಜನೆಗಳನ್ನು ನಿರಂತರವಾಗಿ ರೂಪಿಸುತ್ತ ಹಂತ ಹಂತವಾಗಿ ಕನ್ನಡದಲ್ಲೂ ಇದೆಲ್ಲ ಸಾಧ್ಯ ಅನ್ನುವಂತಹ ವಾತಾವರಣ ಕಟ್ಟಬೇಕು. ಇದರಲ್ಲಿ ಸರ್ಕಾರ, ಸಂಘ-ಸಂಸ್ಥೆಗಳು ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಎಲ್ಲವುಗಳಿಗೂ ಪಾತ್ರವಿದೆ. ಬೇಕಿರುವುದು ಇದಾಗಬೇಕು ಅನ್ನುವ ಒಂದು ಮುನ್ನೋಟ ಮಾತ್ರ.



ಎರಡನೆಯದ್ದು- ಕನ್ನಡ ಮಾಧ್ಯಮದಲ್ಲಿ ಕಲಿಕೆಗೆ ಬಲ ತುಂಬುವುದು. ಕರ್ನಾಟಕದಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳ ಪ್ರಮಾಣ ಈಗ ಶೇ 52ರ ಆಸುಪಾಸಿನಲ್ಲಿದೆ. ಕೇವಲ 20 ವರ್ಷಗಳ ಹಿಂದೆ ಇದು ಶೇ 85ರಷ್ಟಿತ್ತು. ಹೀಗೆ ಕುಸಿಯುತ್ತಿರುವುದನ್ನು ತಡೆಯುವ ಪ್ರಯತ್ನವನ್ನು ಯಾವ ಪಕ್ಷದ ನೇತೃತ್ವದ ಸರ್ಕಾರವೂ ಪ್ರಾಮಾಣಿಕವಾಗಿ ಮಾಡಿಲ್ಲ. ಕನ್ನಡದಲ್ಲಿ ಕಲಿತರೆ ಪ್ರಯೋಜನವಿಲ್ಲ, ಉದ್ಯೋಗವಿಲ್ಲ ಅನ್ನುವ ಅನಿಸಿಕೆಯನ್ನು ವ್ಯಾಪಕವಾಗಿ ಬಿತ್ತಿರುವ ಮಾರುಕಟ್ಟೆಯ ಶಕ್ತಿಗಳಿಂದ ‘ಇಂಗ್ಲಿಷೇ ಪರಿಹಾರ’ ಅನ್ನುವ ಮನಃಸ್ಥಿತಿ ಸಾಮಾನ್ಯರಲ್ಲಿ ನೆಲೆಯೂರಿದೆ. ಆದರೆ ನಮ್ಮ ಪರಿಸರದಲ್ಲಿಲ್ಲದ ಹಾಗೂ ಮಗು, ಶಿಕ್ಷಕ ಮತ್ತು ಪಾಲಕರ ನಾಲಿಗೆಯ ಮೇಲೂ ಇಲ್ಲದ ಇಂಗ್ಲಿಷಿನಲ್ಲಿ ಎಲ್ಲವನ್ನೂ ಕಲಿಸುತ್ತೇನೆ ಎಂದು ಹೊರಡುವುದು ಎಂದಿಗೂ ಒಂದು ವ್ಯಾಪಕವಾದ, ಸಮಾನ ಅವಕಾಶಗಳನ್ನು ಕಲ್ಪಿಸುವ, ಹೆಚ್ಚು ಜನರನ್ನು ಒಳಗೊಳ್ಳುವ ವ್ಯವಸ್ಥೆಯನ್ನು ಕಟ್ಟುವುದನ್ನು ಸಾಧ್ಯ ವಾಗಿಸದು. ಮುಂದುವರೆದ ಎಲ್ಲ ನಾಡುಗಳಲ್ಲೂ ಮಗು ತಾನು ಕನಸು ಕಾಣುವ, ಆಲೋಚಿಸುವ ನುಡಿ ಯಲ್ಲೇ ಕಲಿಕೆ ಪಡೆದುಕೊಳ್ಳುತ್ತದೆ. ಸಹಜವಾಗಿಯೇ ಬಾಯಿಪಾಠಕ್ಕಿಂತ ವಿಷಯದ ತಿರುಳು ತಿಳಿಯುವ ಕಲಿಕೆ ಅಲ್ಲಿ ಹೆಚ್ಚು ಸಹಜವಾಗಿ ಸಾಧ್ಯವಾಗಿದೆ. ಇದು ಕನ್ನಡದಲ್ಲಿ ಸಾಧ್ಯವಾದಾಗಲೇ ಹೆಚ್ಚು ಕನ್ನಡ ಮಕ್ಕಳು ಕಲಿಯುವುದಕ್ಕೂ, ಕಲಿತದ್ದನ್ನು ಬಳಸಿ ಸಾಧಿಸುವುದಕ್ಕೂ ಅವಕಾಶವಾಗುತ್ತದೆ.

ಹೊಸ ಶಿಕ್ಷಣ ನೀತಿ ಪ್ರಾಥಮಿಕ ಹಂತದಲ್ಲಿ ಮಗುವಿನ ಭಾಷೆಯಲ್ಲೇ ಕಲಿಕೆ ಕೊಡುವುದಕ್ಕೆ ಒತ್ತು ನೀಡುವ ಮಾತುಗಳನ್ನು ಆಡಿದೆ. ಇದನ್ನು ಬಳಸಿ ಇಂಗ್ಲಿಷಿಗೆ ಪರ್ಯಾಯವಾಗುವಂತಹ ಗುಣಮಟ್ಟದ ಕನ್ನಡ ಮಾಧ್ಯಮ ಶಾಲೆಗಳನ್ನು ಸಾಧ್ಯವಾಗಿಸುವ ನೀತಿಯೊಂದು ಇಂದು ಬೇಕಿದೆ. ಇಂಗ್ಲಿಷ್ ಮಾಧ್ಯಮ ಬೇಕು-ಬೇಡ ಅನ್ನುವ ಚರ್ಚೆಗೆ ಹೋಗದೇ ಕನ್ನಡ ಮಾಧ್ಯಮಕ್ಕೆ ಇಷ್ಟಪಟ್ಟು ಸೇರಿಸುವಂತೆ ಪರ್ಯಾಯವಾದ ಏರ್ಪಾಡನ್ನು ಕಟ್ಟುತ್ತ ಹೋದರೆ ಖಂಡಿತವಾಗಿಯೂ ಕನ್ನಡ ಮಾಧ್ಯಮಕ್ಕೆ ಮತ್ತೆ ಬಲ ಬರಬಹುದು.

ಇವೆರಡೂ ಅಷ್ಟೇನೂ ಹೊಸ ಹೊಳಹುಗಳಲ್ಲ ಅನ್ನಿಸಬಹುದು, ಆದರೆ ವಿಜ್ಞಾನ ಮತ್ತು ತಂತ್ರಜ್ಞಾನಗಳೇ ಎಲ್ಲವನ್ನೂ ನಿರ್ದೇಶಿಸುವ 21ನೇ ಶತಮಾನದಲ್ಲಿ ಕನ್ನಡ ಉಳಿಯಬೇಕು, ಕನ್ನಡವೇ ಕನ್ನಡಿಗರ ಏಳಿಗೆಗೆ ದಾರಿಯಾಗಬೇಕು ಅಂದರೆ ಕನ್ನಡವೂ ವಿಜ್ಞಾನ-ತಂತ್ರಜ್ಞಾನದ ಭಾಷೆಯಾಗಬೇಕು. ಕಳೆದ ಇನ್ನೂರು ವರ್ಷಗಳ ಮನುಷ್ಯನ ಇತಿಹಾಸವನ್ನೊಮ್ಮೆ ತೆಗೆದು ನೋಡಿದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯೇ ಅದರ ದಿಕ್ಕುದೆಸೆಯನ್ನು ರೂಪಿಸಿದೆ ಅನ್ನುವುದು ಸ್ಪಷ್ಟ. ಕಷ್ಟ ಅನ್ನಿಸುವಂತಹ, ಆದರೆ ನಿಜವಾದ ಪರಿಹಾರ ಕೊಡುವ ಇಂತಹ ಕನಸು ಕಾಣಲು ಸಜ್ಜಾಗದಿದ್ದರೆ ಹಾಡು, ಕುಣಿತ ಮಾಡಿಕೊಂಡು ಇದ್ದುಬಿಡಬಹುದು. ಆಯ್ಕೆ ನಮ್ಮದು. ಈ ಮಾತು ಭಾರತದ ಪ್ರತಿಯೊಂದು ಭಾಷೆಗೂ ಅನ್ವಯಿಸುತ್ತೆ. ಭಾಷಿಕ ಭಾರತ ಬಲಗೊಂಡಷ್ಟು ಭಾರತದ ಏಳಿಗೆಯೂ ಸಾಧ್ಯ. ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಸಿಹಿ ಹಾರೈಕೆಗಳು.

ಚುರುಮುರಿ



ಹ್ಯಾಕರ್ ಪ್ರಶಸ್ತಿ

• ಸುಮಂಗಲಾ

ಮೊನ್ನೆಯಿಂದ ಬೆಕ್ಕಣ್ಣ ಯಾರದ್ದೇ ಕರೆ ಬಂದರೂ ಮೊಬೈಲ್ ಎತ್ತಿದೊಡನೆ ‘ಸ್ವಚ್ಛ ಭಾರತ’ ಎನ್ನುತ್ತಿತ್ತು.

‘ಇದೇನಲೇ ಹೊಸಾ ಸುಪ್ರಭಾತ... ಭಾರತ ಸ್ವಚ್ಛವಾಗತೊಡಗಿ ಬರೋಬ್ಬರಿ ಏಳು ವರ್ಷ ಆದುವಲ್ಲ... ರಗಡ್ ಥಳಥಳ ಆಗ್ಯೈತೇಳು...’ ಎಂದೆ.

‘ಹಾಯ್, ಹಲೋ ಬದಲಿಗೆ ಸ್ವಚ್ಛ ಭಾರತ ಅಂತ ಅಚ್ಚ ಕನ್ನಡದಾಗೆ ಹೇಳ್ರಿ ಅಂತ ಕ್ರೀಡಾ ಸಚಿವರು ಯುವಜನರಿಗೆ ಕರೆ ಕೊಟ್ಟಾರ. ಎಲ್ಲಾರೂ ಹೇಳಾಕಹತ್ತಿದರ ದೇಶ ತಾನಾಗೇ ಸ್ವಚ್ಛ ಆಗತದ’ ಎಂದಿತು.

‘ಹುಚ್ ಪ್ಯಾಲಿ... ಬರೀ ಬಾಯೊಳಗ ಅಂದ್ರ ಆಗಂಗಿಲ್ಲಲೇ. ಕಂಡ್ಕಂಡಲ್ಲಿ ಕಸ ಹಾಕಬಾರದು, ಎಲ್ಲಿ ಕಸ ಕಂಡ್ರೂ ತೆಗೀಬಕು, ಮೊದ್ಲಿಗಿ ನಮ್ಮ ನಾಲಗಿ ಸ್ವಚ್ಛ ಇಟ್ಟುಕೋಬೇಕು...’

ನಾನು ಮಾತು ಮುಗಿಸುವ ಮೊದಲೇ ಬೆಕ್ಕಣ್ಣ ‘ಕಸ ತೆಗಿಲಾಕ ಪೌರಕಾರ್ಮಿಕರು ಅದಾರಲ್ಲ, ನಾವೆದಕ್ಕೆ ತೆಗಿಯೂಣು’ ಎಂದು ಪೇಪರಿನಲ್ಲಿ ಮುಖ ಹುದುಗಿಸಿತು.

‘ಯುವಜನರಿಗೆ ಸಾಮರ್ಥ್ಯ, ಕೌಶಲ ಇಲ್ಲ ಅಂತ ಹಿರೀತಲೆಗಳು ಸುಳ್ಳೆ ವದರತಿರ್ತಾರ. ನೋಡಿಲ್ಲಿ... ಈ ಶ್ರೀಕಿ ಎಷ್ಟ್ ಬೆರಿಕಿ ಅದಾನ. ಹೆಂಗ ಸರ್ಕಾರಿ ಖಜಾನಿಗೆ ಖನ್ನ ಹಾಕಿ, ಕೋಟಿಗಟ್ಲೆ ರೊಕ್ಕ ಬಾಚ್ಯಾನ...’ ಎಂದು ಉದ್ಗರಿಸಿತು.

‘ವಳ್ಳೆ ಕೆಲಸಕ್ಕೆ ಸಾಮರ್ಥ್ಯ, ಕೌಶಲ ಬಳಸಬೇಕಲೇ... ಹೀಂಗ ಖಜಾನೆ ಸ್ವಚ್ಛ ಮಾಡಾಕ ಬಳಸತಾರೇನು’ ಅಂದೆ.

‘ಏನ್ ತಪ್ಪಾತು... ಎಲ್ಲಾ ಕಡಿಗಿ ಕರುನಾಡಿನ ಖ್ಯಾತಿ ಹಬ್ಬಿಸ್ಯಾನ’.

‘ಅದ್ ಖ್ಯಾತಿಯಲ್ಲ, ಕುಖ್ಯಾತಿ’ ಎಂದು ತಿದ್ದಿದೆ.

‘ಹ್ಯಾಕ್ ಮಾಡೂ ಚಾಣಾಕ್ಷತನಾನ ಕ್ರೀಡಾ ಪ್ರಶಸ್ತಿಗೆ ಅಥವಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಪದ್ಮ ಪ್ರಶಸ್ತಿ, ಹಿಂತಾ ಪ್ರಶಸ್ತಿಗೆ ಪರಿಗಣಿಸಬೇಕು. ಅವಂಗ ಹ್ಯಾಕರ್ ರತ್ನ ಅಂತ ಅಥವಾ ಹ್ಯಾಕರ್ ಪದ್ಮ ಪ್ರಶಸ್ತಿ ಕೊಡಬಕು’ ಬೆಕ್ಕಣ್ಣ ವಾದಿಸಿತು.

‘ಅಷ್ಟರೊಳಗೆ ಪ್ರಶಸ್ತಿ ರೊಕ್ಕ ಇರೂ ಸರ್ಕಾರಿ ಖಾತೆನ ಹ್ಯಾಕ್ ಮಾಡಿ, ಅದನ್ನ ಬಿಟ್ ಕಾಯಿನ್‌ಗೆ ಮಾರಿಕೊಂಡಿರ್ತಾನ ಅಂವ’ ಎಂದು ನಾನು ನಕ್ಕೆ.

ಸಂಗತ

ಕಸಾಪ: ಚುಕ್ಕಾಣಿ ಹಿಡಿಯುವುದರ ಹಿಂದೆ...

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರು ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾದ ಪರಿಸ್ಥಿತಿ ಈಗ್ಗೆ ಕೆಲವು ದಶಕಗಳಿಂದ ಇರುವುದು ಗುಟ್ಟೇನೂ ಅಲ್ಲ

• ಡಾ. ಆರ್.ಲಕ್ಷ್ಮೀನಾರಾಯಣ

ಕನ್ನಡದ ಮಹತ್ವದ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನ ಮತ್ತು ಅದರ ಜಿಲ್ಲಾ ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಇನ್ನೇನು ಇದೇ ತಿಂಗಳೇ ಚುನಾವಣೆ ನಡೆಯಲಿದೆ. ಜಿಲ್ಲಾ ಘಟಕಗಳ ಅಧ್ಯಕ್ಷರ ಚುನಾವಣೆಯದು ಒಂದು ತೂಕವಾದರೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಚುನಾವಣೆಯದೇ ಇನ್ನೊಂದು ತೂಕ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಅದರದೇ ಆದ ಮಹತ್ವವಿದೆ.

ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ನಂತರದ ಪ್ರಾರಂಭದ ವರ್ಷಗಳಲ್ಲಿ ಯುವರಾಜರು ನಾಮಮಾತ್ರಕ್ಕೆ ಅದರ ಅಧ್ಯಕ್ಷರಾಗಿದ್ದರೂ ಉಪಾಧ್ಯಕ್ಷರಾಗಿರುತ್ತಿದ್ದ ಖ್ಯಾತಿವಂತ ಸಾಹಿತಿಗಳು ಅದರ ಕಾರ್ಯಾಧ್ಯಕ್ಷರಾಗಿ ಅದರ ನಿಜವಾದ ಅಧ್ಯಕ್ಷರಾಗಿರುತ್ತಿದ್ದರು. ಯುವರಾಜರು ತೀರಿಕೊಂಡ ಮೇಲೆ ಸಾಹಿತಿಗಳೇ ಅದರ ಅಧ್ಯಕ್ಷರಾಗುವುದು ರೂಢಿಗೆ ಬಂದಿತೆನಿಸುತ್ತದೆ. ಡಿವಿಜಿ, ಮಾಸ್ತಿ, ಬಿಎಂಶ್ರೀ, ಎಂಆರ್‌ಶ್ರೀ ಮುಂತಾದ ಸಾಹಿತ್ಯ ಕ್ಷೇತ್ರದ ಧೀಮಂತರು ಅದರ ಉಪಾಧ್ಯಕ್ಷ/ಅಧ್ಯಕ್ಷರಾಗಿ ಪರಿಷತ್ತಿಗೆ ಮತ್ತು ಅದರ ಅಧ್ಯಕ್ಷ ಸ್ಥಾನಕ್ಕೆ ಎಲ್ಲಿಲ್ಲದ ಘನತೆ, ಗೌರವಗಳನ್ನು ತಂದುಕೊಟ್ಟರು. ಆನಂತರದಲ್ಲಿ ಖ್ಯಾತ ವಿದ್ವಾಂಸರಾದ ಶಿವಮೂರ್ತಿ ಶಾಸ್ತ್ರಿಗಳು ಅಧ್ಯಕ್ಷರಾಗಿ ಬಹಳಷ್ಟು ವರ್ಷಗಳು ಅದನ್ನು ಮುನ್ನಡೆಸಿದರು. ಆನಂತರ ಪ್ರೊ. ಜೀವಿಯವರು ಅಧ್ಯಕ್ಷರಾಗಿ ಪರಿಷತ್ತಿಗೆ ಜೀವಕಳೆ ತಂದುಕೊಟ್ಟರು. ಮುಂದೆ ಜಿ.ನಾರಾಯಣ ಅವರು ಅಧ್ಯಕ್ಷರಾಗಿ ಅದನ್ನು ಎಲ್ಲ ರೀತಿಯಲ್ಲಿ ಅಭಿವೃದ್ಧಿಪಡಿಸಿದ್ದೊಂದು ದಾಖಲೆಯೇ ಆಯಿತು. ಅವರು ಸ್ವತಃ ಅಂಥ ದೊಡ್ಡ ಸಾಹಿತಿಯೆಂದೇನೂ ಹೆಸರಾಗಿಲ್ಲದಿದ್ದರೂ ಅತ್ಯಂತ ನಿಸ್ವಾರ್ಥ ಭಾವದಿಂದ ದುಡಿದು, ತಮ್ಮ ರಾಜಕೀಯ ಕ್ಷೇತ್ರದಲ್ಲಿನ ಅನುಭವ ಮತ್ತು ರಾಜಕಾರಣಿಗಳ ಸಂಪರ್ಕ, ವೈಯಕ್ತಿಕ ಪ್ರಭಾವ, ಅದ್ಭುತ ಕಾಣ್ಕೆಗಳಿಂದಾಗಿ ಕೇಂದ್ರ ಕಚೇರಿಯ ನವೀಕರಣದಿಂದ ಹಿಡಿದು ಜಿಲ್ಲಾ ಶಾಖೆಗಳನ್ನು ಹುಟ್ಟುಹಾಕುವವರೆಗೆ ಒಂದು ಸಾರ್ವಕಾಲಿಕ ದಾಖಲೆಯನ್ನೇ ಸ್ಥಾಪಿಸಿದರು.

ಬಹುಶಃ ಅಲ್ಲಿಂದ ಮುಂದಕ್ಕೆ ಪರಿಷತ್ತಿನ ಅಧ್ಯಕ್ಷರಾಗುವವರು ಸಾಹಿತಿಗಳೇ ಆಗಬೇಕೆಂದಿಲ್ಲ; ಸಾಹಿತ್ಯಾಭಿಮಾನಿಗಳು, ಸಾಹಿತ್ಯಾಸಕ್ತರೂ ಆಗಬಹುದು ಎಂಬ ಅಘೋಷಿತ ಸಂಪ್ರದಾಯ ರೂಢಿಗೆ ಬಂದಿತೆನಿಸುತ್ತದೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಈ ಮುಂಚೆ ವರ್ಷಕ್ಕೊಂದರಂತೇನೂ ನಿಯಮಬದ್ಧವಾಗಿ ನಡೆಯುತ್ತಿರಲಿಲ್ಲ. ಅವುಗಳನ್ನು ಕ್ರಮಬದ್ಧವಾಗಿ ನಡೆಸಿದ್ದು, ಜನಪದ ಸಮ್ಮೇಳನಗಳು, ಪ್ರಕಟಣೆಗಳ ಮಹಾಪೂರ ಇವೆಲ್ಲ ಅವರ ಸಾಧನೆಗಳು. ಬಹುಶಃ ಜಿ.ನಾರಾಯಣ ಅವರ ಪ್ರಯತ್ನದಿಂದಲೇ ಎಂದು ತೋರುತ್ತದೆ ಪರಿಷತ್ತಿಗೆ ಸರ್ಕಾರದಿಂದ ಅತ್ಯಧಿಕ ಅನುದಾನ ಬರಲಾರಂಭಿಸಿತು. ಸಮ್ಮೇಳನಗಳು ಅದ್ದೂರಿಯಿಂದ ನಡೆಯತೊಡಗಿದವು.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಮ್ಮೇಳನವೆಂದರೆ ಸರ್ಕಾರಕ್ಕೂ ಹೆಮ್ಮೆ ಮತ್ತು ಗೌರವದ ಸಂಗತಿಯೆನಿಸಿ ಕೋಟಿಗಟ್ಟಲೆ ಅನುದಾನ ನೀಡಲಾರಂಭಿಸಿತು. ಹಾಗೆ ಅನುದಾನವನ್ನು ಹಕ್ಕಿನಿಂದ ಕೇಳುವ ಮತ್ತು ಪಡೆದುಕೊಳ್ಳುವ ಸಾಮರ್ಥ್ಯ ಪರಿಷತ್ತಿನ ಅಧ್ಯಕ್ಷರದಾಗತೊಡಗಿತು. ಅಧಿಕಾರದ ಮಹತ್ವದ ಜೊತೆಗೆ ಹಣದ ಕಾರಣವೂ ಸೇರಿಕೊಂಡು ಜಿ.ನಾರಾಯಣರ ನಂತರ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ಪ್ರಾರಂಭವಾಯಿತು. ಎಷ್ಟರಮಟ್ಟಿಗೆ ಎಂದರೆ, ತಾವು ಗೆಲ್ಲಬೇಕೆಂದರೆ ತಮ್ಮ ಮತದಾರರನ್ನು ಗುರುತಿಸಿಕೊಂಡು, ಕನ್ನಡವೆಂದರೆ ಯಾವ ಪಕ್ಷಿ ಎಂದು ಕೇಳುವವರನ್ನೂ, ಇನ್ನು ಎರಡು ದಿನ ಚುನಾವಣೆ ಇದೆ ಎನ್ನುವಾಗ ಪುಸಲಾಯಿಸಿಯೋ ಅಥವಾ ಅವರ ಸದಸ್ಯತ್ವದ ಶುಲ್ಕ ತಾವೇ ತುಂಬಿಯೋ ಸದಸ್ಯರನ್ನಾಗಿಸುವುದೂ ಚಾಲ್ತಿಗೆ ಬಂತು. ಈ ಅಬದ್ಧವನ್ನು ತಡೆಯಲು, ವೋಟು ಮಾಡುವವರು ಇಂತಿಷ್ಟು ವರ್ಷ ಸದಸ್ಯರಾಗಿರಲೇಬೇಕೆಂಬ ನಿಯಮ ರೂಢಿಗೆ ತರಬೇಕಾಯಿತು.



ಮತದಾರರನ್ನು ಒಲಿಸಿಕೊಳ್ಳಲು ರಾಜಕೀಯ ಪಕ್ಷಗಳು ಲಾಗಾಯ್ತಿನಿಂದ ನಡೆಸುತ್ತಿರುವ ಹುನ್ನಾರುಗಳಾದ ವ್ಯಾಪಕ ಪ್ರಚಾರ, ನೀರಿನಂತೆ ಧನವ್ಯಯ, ಮಠಾಧಿಪತಿಗಳ ಕಡೆಯಿಂದ ಭಕ್ತ ಮತ್ತು ಶಿಷ್ಯ ಗಣಕ್ಕೆ ಹೇಳಿಸುವುದು, ಜಾತಿಗಳ ಪ್ರಭಾವ, ಇನ್ನಿತರೆ ವಶೀಲಿಬಾಜಿಗಳು ಪರಿಷತ್ತಿನ ಅಧ್ಯಕ್ಷ ಚುನಾವಣೆಯಲ್ಲೂ ನಡೆಯುತ್ತವೆಂದು ಎಲ್ಲರ ಅಂಬೋಣ. ಬಹುಶಃ ಅದೇ ನಿಜ. ಅಭ್ಯರ್ಥಿಗಳು ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾದ ಪರಿಸ್ಥಿತಿ ಈಗ್ಗೆ ಕೆಲವು ದಶಕಗಳಿಂದ ಇರುವುದು ಗುಟ್ಟೇನೂ ಅಲ್ಲ.

ಇಂಥ ಪರಿಸ್ಥಿತಿಯಲ್ಲಿ ಅಧ್ಯಕ್ಷರಾಗಬೇಕೆಂದು ಎಷ್ಟೇ ತೀವ್ರವಾಗಿ ಅನ್ನಿಸಿದರೂ ನಿಜವಾದ ಸಾಹಿತ್ಯಿಕ ಸಂವೇದನೆ ಉಳ್ಳ ಪ್ರಾಮಾಣಿಕ ವ್ಯಕ್ತಿಗೆ, ಸಾಹಿತಿಗೆ- ನಮ್ಮ ರಾಜಕೀಯ ಚುನಾವಣೆಗಳಿಗೆ ಸ್ಪರ್ಧಿಸುವ ಬಗ್ಗೆ- ‘ಒಬ್ಬ ಪ್ರಾಮಾಣಿಕ ವ್ಯಕ್ತಿ ಈಗಿನ ಚುನಾವಣೆಗಳಲ್ಲಿ ಸ್ಪರ್ಧಿಸುವುದಿರಲಿ, ಸ್ಪರ್ಧಿಸುವುದನ್ನು ಯೋಚಿಸುವುದಕ್ಕೂ ಸಾಧ್ಯವಿಲ್ಲ’- ಎಂಬ ರಾಷ್ಟ್ರಕವಿ ಕುವೆಂಪು ಅವರ ಮಾತು ನೆನಪಾಗಿ ಹಿಂದೆ ಸರಿಯಲೇಬೇಕಾಗುತ್ತದೆ. ಇಂಥ ಹುನ್ನಾರವಿಲ್ಲದೆ ವ್ಯಕ್ತಿತ್ವದ ಪ್ರಭಾವದಿಂದ ಆಯ್ಕೆಯಾದ ಒಂದಿಬ್ಬರು ಸಾಹಿತಿಗಳೂ ಇದ್ದಾರೆ.

ಪರಿಷತ್ತಿನ ಮತದಾರರ ಸಂಖ್ಯೆಯನ್ನು ಎಷ್ಟೋ ಪಟ್ಟು ಹೆಚ್ಚಿಸಬೇಕೆಂಬ ಮಾತು ಕೆಲ ದಿನಗಳ ಹಿಂದೆ ಕೇಳಿಬಂತು. ಈ ಪರಿಸ್ಥಿತಿಯಲ್ಲಿ ಪರಿಷತ್ತು ಕನ್ನಡಿಗರೆಲ್ಲರ ಅಭಿಮಾನದ ಸಂಸ್ಥೆಯಾಗುಳಿದು, ಅವರುಗಳು ಸದಸ್ಯರಾಗದೆ ಧನಸಹಾಯ ನೀಡಿದರೆ ಸಾಕೆ, ಇಲ್ಲ ಸದಸ್ಯತ್ವ ಶುಲ್ಕ ತೆರಬಲ್ಲವರೆಲ್ಲರೂ ಮತದಾರರಾಗಿ ಪರಿಷತ್ ಚುನಾವಣೆಗಳು ರಾಜಕೀಯ ಚುನಾವಣೆಗಳ ತದ್ವತ್ತಾಗಬೇಕೆ, ಅಲ್ಲಿಯ ಅಧ್ವಾನಗಳೆಲ್ಲ ಇಲ್ಲೂ ಇರಬೇಕೆ ಎಂಬ ಬಗ್ಗೆ ಕನ್ನಡಿಗರೆಲ್ಲರೂ ಗಂಭೀರವಾಗಿ ಯೋಚಿಸುವ ಅಗತ್ಯವಿದೆ ಎನಿಸುತ್ತದೆ.

ವಾಚಕರ ವಾಣಿ

ತಂತ್ರಜ್ಞಾನದಿಂದಷ್ಟೇ ಸುಧಾರಣೆ ಆಗದು

‘ಸೇವೆಗಳು ಹೆಚ್ಚು ಜನಸ್ನೇಹಿಯಾಗಬೇಕಾಗಿದೆ’ ಎಂಬ ಅಭಿಪ್ರಾಯವುಳ್ಳ ಸಂಪಾದಕೀಯಕ್ಕೆ (ಪ್ರ.ವಾ., ಅ. 29) ಪೂರಕವಾಗಿ ಇತ್ತೀಚಿನ ಎರಡು ಭೇಟಿಗಳ ಆಧಾರದ ಮೇಲೆ ಕೆಲವು ಅಂಶ ಸೇರಿಸಬೇಕಾಗಿದೆ. ‘ಆನ್‌ಲೈನ್ ಅರ್ಜಿ ಕಡ್ಡಾಯ’ ಎಂದಾಗ ಹಲವರು ಅಪ್‌ಲೋಡ್ ಮಾಡಲು ಕಂಪ್ಯೂಟರ್ ಆಪರೇಟರ್‌ಗಳನ್ನು ಅವಲಂಬಿಸಬೇಕಾಗುತ್ತದೆ. ಒಟಿಪಿ ಸಿಕ್ಕಾಗ ಅದು ಸ್ಮಾರ್ಟ್‌ಫೋನ್ ಅಲ್ಲದಿದ್ದರೆ ಅಪಾಯಿಂಟ್‌ಮೆಂಟ್ ಸಿಗುವುದು ಕಷ್ಟ (ಮೂರು ಒಟಿಪಿ ಸಿಕ್ಕರೂ ನಿರರ್ಥಕವಾಗಿ, ಮುಂದಿನ ಕೆಲಸದ ದಿನ ಮತ್ತೆ ಹೋಗಬೇಕಾಯಿತು). ಡಿಎಲ್ ನವೀಕರಣ ಒಂದು ಸಾಮಾನ್ಯ ಪ್ರಕ್ರಿಯೆ, ವಿಳಾಸ ಬದಲಾಗಿದ್ದರೂ. ಹಣ ಕಟ್ಟಿಸಿಕೊಳ್ಳಲು ವ್ಯವಹಾರದ ಸಮಯದಲ್ಲಿ ಮತ್ತೆ ಒಳಮಿತಿ ಮಾಡಬಾರದು. ಮೆಡಿಕಲ್ ಸರ್ಟಿಫಿಕೇಟ್ ಸರ್ಕಾರಿ ವೈದ್ಯರಿಂದಲೇ ಪಡೆಯಬೇಕಂತೆ (‘ಫೀ’ ಕೊಟ್ಟರೆ ಅರ್ಜಿದಾರನನ್ನು ನೋಡದೆಯೇ ಖಾಲಿ ಫಾರ್ಮ್‌ಗೆ ಸೀಲ್, ಸಹಿ ಮಾಡುವವರೂ ಇದ್ದಾರೆ!)

ಡ್ರೈವಿಂಗ್ ಸ್ಕೂಲ್‌ಗಳು ಇನ್ನೂ ಹತೋಟಿ ಇಟ್ಟುಕೊಂಡಿವೆ (ಅರ್ಜಿದಾರ ವೈಯಕ್ತಿಕವಾಗಿ ಸಲ್ಲಿಸಿದ್ದರೂ, ಪರವಾನಗಿ ಸಿದ್ಧವಾದಾಗ ಅದನ್ನು ಸಂಗ್ರಹಿಸಿ ಅವನಿಂದ ಹೆಚ್ಚುವರಿ ಹಣ ವಸೂಲಿ ಮಾಡಬಹುದು). ಒಂದು ಭೇಟಿಯಲ್ಲಿ ಎಲ್ಲ ಪ್ರಕ್ರಿಯೆ ಮುಗಿದರೆ ಉತ್ತಮ. ಡಾಕ್ಟರ್ 11.30ಕ್ಕೆ ಬರುವುದು, ಹಣ ಮಧ್ಯಾಹ್ನ 2.30ರ ನಂತರವೇ ಕಟ್ಟಿಸಿಕೊಳ್ಳುವುದು, ಫೋಟೊ ಇತ್ಯಾದಿ 3.30ರ ನಂತರ, ಇದೆಲ್ಲ ಹಿರಿಯ ನಾಗರಿಕರಿಗೆ ಹೆಚ್ಚು ಕಷ್ಟ (‘ಎಕ್ಸ್‌ಟ್ರಾ’ ಕೊಟ್ಟರೆ ಸಡಿಲಿಕೆ ಸಂಭವ).

ಒಟ್ಟಾರೆ, ತಂತ್ರಜ್ಞಾನದಿಂದಷ್ಟೇ ಸುಧಾರಣೆ ಆಗದು, ಪ್ರಕ್ರಿಯೆಯನ್ನು ಇನ್ನಷ್ಟು ಸರಳಗೊಳಿಸಬೇಕು. ಕೇಂದ್ರ ಸಚಿವ ನಿತಿನ್ ಗಡ್ಕರಿಯವರು ಆರ್‌ಟಿಒ ಬಂದ್ ಮಾಡಿ, ಖಾಸಗಿಯವರಿಗೆ ಕೊಡಲು ಯೋಚಿಸಿದ್ದರು. ಈಗಿರುವ ಶುಲ್ಕ ಎಷ್ಟು ಹೆಚ್ಚಾಗುತ್ತಿತ್ತೊ?

ಎಚ್.ಎಸ್.ಮಂಜುನಾಥ, ಬೆಂಗಳೂರು

ವಿನಯವಂತಿಕೆ ಆದರ್ಶವಾಗಲಿ

ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ಮರಣವು ಇಡೀ ರಾಜ್ಯವನ್ನು ಸೂತಕದಲ್ಲಿ ಮುಳುಗಿಸಿದಂತೆ ಭಾಸವಾಗುತ್ತಿದೆ. ಅವರ ಪಾರ್ಥಿವ ಶರೀರದ ಮೇಲೆ ಇರಿಸಿದ್ದ ಗಾಜಿನ ಪೆಟ್ಟಿಗೆಯ ಮೇಲೆ ‘ಸಂಜೀವಿನಿ’ ಎಂದು ಇದ್ದುದನ್ನು ನೋಡಿ, ಲಕ್ಷ್ಮಣನನ್ನು ಉಳಿಸಲು ರಾಮಾಯಣದಲ್ಲಿ ಹನುಮಂತ ತಂದಿದ್ದ ಸಂಜೀವಿನಿಯಂತೆ, ಅದು ಪವಾಡ ಸೃಷ್ಟಿಸಿ ಅವರು ಮೇಲೇಳಬಾರದೇ ಎನಿಸಿತು. ಅವರ ನಗು, ವಿನಯವಂತಿಕೆ ಮತ್ತು ಸಮಾಜಸೇವೆ ನಮ್ಮ ಆದರ್ಶಗಳಾದರೆ ಅವರು ಎಂದೆಂದಿಗೂ ನಮ್ಮೊಂದಿಗೆ ಇದ್ದಂತೆಯೇ.

ದರ್ಶನ್ ಕೆ.ಓ., ಶಿವಮೊಗ್ಗ

ಕರ್ತವ್ಯಪ್ರಜ್ಞೆ ಮೆರೆದ ಸೇನಾನಿಗಳು

ಪುನೀತ್ ರಾಜ್‌ಕುಮಾರ್ ಸಾವು ಕನ್ನಡ ನಾಡು ಸುಲಭವಾಗಿ ಅರಗಿಸಿಕೊಳ್ಳಲಾಗದ ಕಹಿ ಸತ್ಯ. ಈ ಮೂರು ದಿನಗಳ ಕಾಲ ಲಕ್ಷಾಂತರ ಅಭಿಮಾನಿಗಳು ನಾಡಿನ ಮೂಲೆ ಮೂಲೆಯಿಂದ ಅಂತಿಮ ದರ್ಶನಕ್ಕಾಗಿ ಬಂದಿದ್ದರು. ಅವರನ್ನೆಲ್ಲಾ ಅತ್ಯಂತ ಸಮರ್ಥವಾಗಿ ನಿಭಾಯಿಸಲು ಪೊಲೀಸ್ ಬಾಂಧವರು ಪಟ್ಟ ಶ್ರಮ ಅನನ್ಯವಾದದ್ದು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಸಿಲು, ಮಳೆ, ಚಳಿ ಲೆಕ್ಕಿಸದೇ ಜೊತೆಗೆ ಸರಿಯಾದ ಸಮಯಕ್ಕೆ ಊಟ, ತಿಂಡಿ, ನೀರು ಇರದಿದ್ದರೂ ಕರ್ತವ್ಯಪ್ರಜ್ಞೆ ಮೆರೆದ ಸಾವಿರಾರು ಪೊಲೀಸ್ ಸೇನಾನಿಗಳಿಗೆ ಕನ್ನಡ ಜನತೆ ಶಿರಬಾಗಿ ನಮಿಸುತ್ತದೆ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಕನ್ನಡದ ತಳ ಗಟ್ಟಿಗೊಳ್ಳಲಿ

ಮತ್ತೆ ರಾಜ್ಯೋತ್ಸವದ ಸಂಭ್ರಮ ಮೊಳಗುತ್ತಿದೆ. ನಾಡುನುಡಿ ಕುರಿತು ಪ್ರೀತಿ, ಅಭಿಮಾನ ಉಕ್ಕಿ ಹರಿಯತೊಡಗಿದೆ. ಸರ್ಕಾರವೇ ಮುಂದಾಗಿ ದೊಡ್ಡ ಪ್ರಮಾಣದಲ್ಲಿ ನುಡಿಯ ನಾದೋಪಾಸನೆ ಮಾಡತೊಡಗಿದೆ. ನಾಡುನುಡಿ ಕುರಿತು ಯುವಪೀಳಿಗೆಯಲ್ಲಿ ಪ್ರೀತಿ, ಅಭಿಮಾನ ಮೂಡಿಸಲು ಇದೆಲ್ಲ ಸರಿಯೆ. ನೂತನ ಶಿಕ್ಷಣ ನೀತಿಯ ಅಂಗವಾಗಿ ಕೆಲವು ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಕನ್ನಡದಲ್ಲಿ ಬೋಧನೆ ಮಾಡಲು ಸರ್ಕಾರ ಮುಂದಾಗಿದೆ. ಮುಂದಿನ ವರ್ಷದಿಂದ ಪ್ರಾಥಮಿಕ ಹಂತದಲ್ಲಿ ಕೂಡಾ ಹೊಸ ಶಿಕ್ಷಣ ನೀತಿಯನ್ನು ಅಳವಡಿಸಲು ಕ್ರಮ ಜರುಗಿಸಲಾಗುವುದು ಎಂದು ಶಿಕ್ಷಣ ಸಚಿವರು ಹೇಳಿದ್ದಾರೆ. ಆದರೆ ನಾಡುನುಡಿಯ ಉಳಿವಿನ ದೃಷ್ಟಿಯಿಂದ ಮುಖ್ಯವಾಗಿ ಆಗಬೇಕಾದುದು ಪ್ರಾಥಮಿಕ ಹಂತದಲ್ಲಿ ಕಡ್ಡಾಯ ಕನ್ನಡದ ಕಲಿಕೆ. ನೂತನ ಶಿಕ್ಷಣ ನೀತಿ ಅಡಿ ಪ್ರಾಥಮಿಕ ಮತ್ತು ನಂತರದ ಹಂತದಲ್ಲಿ ಮಾತೃಭಾಷೆ ಅಥವಾ ಪರಿಸರದ ಭಾಷೆಯಲ್ಲಿ ಕಲಿಕೆಗೆ ಒತ್ತು ನೀಡಲಾಗಿದ್ದರೂ ಅದಕ್ಕೆ ಕಾನೂನು ಅಥವಾ ಸಾಂವಿಧಾನಿಕ ಬೆಂಬಲವನ್ನು ಒದಗಿಸಿಲ್ಲ. ಕಲಿಕೆ ಮಾಧ್ಯಮ ಕುರಿತು 2015ರ ಸುಪ್ರೀಂ ಕೋರ್ಟ್ ತೀರ್ಪು ನಂತರ ಸಂವಿಧಾನಕ್ಕೆ ತಿದ್ದುಪಡಿ ತಂದು ಕಲಿಕೆಯಲ್ಲಿ ದೇಶಿಭಾಷೆಗಳಿಗೆ ಬಲ ತುಂಬುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕಿತ್ತು. ಎಲ್ಲ ರಾಜ್ಯ ಸರ್ಕಾರಗಳು ಅದಕ್ಕಾಗಿ ಒತ್ತಾಯಿಸಬೇಕಿತ್ತು. ಇದಕ್ಕೆ ಸಾಕಷ್ಟು ಕಾಲಾವಕಾಶವೂ ಇತ್ತು. ಸರ್ಕಾರಗಳಲ್ಲಿ ಭಾಷೆ ಕುರಿತು ಬದ್ಧತೆಯ ಕೊರತೆಯಿಂದ ಈಗಲೂ ಭಾಷೆ ಕುರಿತು ದ್ವಂದ್ವಗಳು ಮುಂದುವರಿದು, ನಾಡುನುಡಿ ಕುರಿತು ಅನಾದರ ಉಳ್ಳ ಹಿತಾಸಕ್ತಿಗಳು ಕೋರ್ಟ್ ಮೆಟ್ಟಿಲುಗಳನ್ನು ಹತ್ತುತ್ತಲೇ ಇವೆ. ಕೋರ್ಟ್ ಮುಂದೆ ಸರ್ಕಾರ ಬಾಗುತ್ತಲೇ ಇದೆ. ಇಂಥದರ ಮಧ್ಯ ನೂತನ ಶಿಕ್ಷಣ ನೀತಿಗೆ ಸರ್ಕಾರ ಮುಂದಾಗುತ್ತಿದೆ.

ಅದು ಒಂದು ಕಡೆಯಾದರೆ, ಸರ್ಕಾರವೇ ಮುಂದಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯುತ್ತಿರುವುದಕ್ಕೆ ಏನನ್ನುವುದು? ಅದು ಕನ್ನಡ ಮಾಧ್ಯಮ ಶಾಲೆಗಳಿಗೆ ಕೊಡುತ್ತಿರುವ ಪೆಟ್ಟು ಮತ್ತು ವರ್ಷದಿಂದ ವರ್ಷಕ್ಕೆ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿರುವುದರ ಅರಿವು ಸರ್ಕಾರಕ್ಕೆ ಇಲ್ಲದಿಲ್ಲ. ಶಾಲೆಗಳಲ್ಲಿ ಕನ್ನಡ ಉಳಿಯದಿದ್ದರೆ ಕನ್ನಡ ಇನ್ನೆಲ್ಲಿ ಉಳಿದೀತು! ಆಡುಭಾಷೆಯಾಗಿಯೇ? ಕನ್ನಡದ ತಳ ಗಟ್ಟಿಗೊಳಿಸುವ ಕ್ರಮಗಳಾಗದೇ ಕೇವಲ ಹಾಡುಹಸೆಗಳ ಅಬ್ಬರದಲ್ಲಿ ಕನ್ನಡ ಗೊಬ್ಬರವಾಗಿ ಹೋಗಬಾರದಲ್ಲವೆ. ಇದಕ್ಕಾಗಿ ಭಾಷೆ ಉಳಿವಿನ ಕುರಿತು ದೀರ್ಘಾಲೋಚನೆ, ಕಾನೂನಿನ, ಸಾಂವಿಧಾನಿಕ ಬೆಂಬಲ ನೀಡುವ ಕ್ರಮಕ್ಕೆ ಸರ್ಕಾರ ಮೊದಲು ಮುಂದಾಗಬೇಕು. ಆಗ ನಮ್ಮ ಆಚರಣೆಗಳಿಗೆ ಅರ್ಥ ಬಂದೀತು.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನವಭಾರತಕ್ಕಾಗಿ ಕನ್ನಡದ ನಿರ್ಲಕ್ಷ್ಯವು ಸಾಮಂತಗಿರಿಯ ಇನ್ನೊಂದು ರೂಪ

‘ನವಕರ್ನಾಟಕ’ ಎತ್ತ ಸಾಗುತ್ತಿದೆ?

ಅಂತರ ಧರ್ಮೀಯ ಪ್ರೀತಿಗಾಗಿ ತಲೆಕಡಿಯಲ್ಪಟ್ಟ ಅರ್ಬಾಜ್, ಅಂತರ ಜಾತೀಯ/ ಅಂತರ ಧರ್ಮೀಯ ಸಂಬಂಧಗಳಿಗೆ ಹೆಚ್ಚುತ್ತಿರುವ, ಬಹಿರಂಗ ಹಿಂಸೆಯ ಬೆದರಿಕೆ ಮತ್ತು ಕರೆ; ಜೊತೆಗೆ ಇಂಥಾ ದ್ವೇಷ ಭಾಷಣ ಮತ್ತು ಪ್ರಚೋದಕ ಮಾತುಗಳನ್ನು ನಿಗ್ರಹಿಸಲು ಹಿಂದೇಟು ಹಾಕುತ್ತಿರುವುದು- ಇವೆಲ್ಲಾ ರಾಜ್ಯದ ಹೊಸ ರಾಜಕೀಯ ಅಧಿಕಾರದ ಚಿಹ್ನೆಗಳಾಗಿವೆ




• ಜಾನಕಿ ನಾಯರ್, ಎ.ಆರ್.ವಾಸವಿ

‘ನವಭಾರತಕ್ಕಾಗಿ ನವಕರ್ನಾಟಕ’ ಎಂಬುದು ಹೊಸ ಘೋಷವಾಕ್ಯವಾಗಿ ಅದರ ಸುತ್ತಲೇ ರಾಜ್ಯವನ್ನು ಮರುಕಲ್ಪಿಸಲಾಗುತ್ತಿದೆ. ಈ 65ನೇ ರಾಜ್ಯೋತ್ಸವದ ಸಂದರ್ಭದಲ್ಲಿ ಒಂದು ಕಾಲದಲ್ಲಿ ಮಾದರಿ ರಾಜ್ಯವಾಗಿದ್ದ ಕರ್ನಾಟಕ ಯಾವ ದಿಕ್ಕಿನಲ್ಲಿ ಚಲಿಸುತ್ತಿದೆ ಎಂಬ ವಿಮರ್ಶಾತ್ಮಕ ವಿಶ್ಲೇಷಣೆಯು ಈ ರೂಪಾಂತರವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಬಹುದು. ಶತಮಾನಕ್ಕೂ ಹೆಚ್ಚಿನ ಕಾಲ ಅಭಿವೃದ್ಧಿಪಥದ ನೇತೃತ್ವವನ್ನು ರಾಜ್ಯವೇ ವಹಿಸಿತ್ತು ಮತ್ತು ಸಾಮಾಜಿಕ ಸೌಹಾರ್ದದ ಕೀರ್ತಿಯನ್ನೂ ಹೊಂದಿತ್ತು. ರಾಜ್ಯವು ಇಂದು ಆಡಳಿತ ಮತ್ತು ಸಾರ್ವಜನಿಕ ಸಂಸ್ಕೃತಿಯ ಹೊಸಮಾದರಿಗೆ ಹೊರಳಿಕೊಳ್ಳುತ್ತಿದೆ. 1970ರ ದಶಕದ ‘ಎಲ್ಲರನ್ನೂ ಒಳಗೊಳ್ಳುವ ಸಾಮಾಜಿಕನ್ಯಾಯ’ದ ಕಾರ್ಯಕ್ರಮಗಳಿಂದ ಹೊರಳಿ, ಸಾರ್ವಜನಿಕ, ಸಾಂವಿಧಾನಿಕ ಹಕ್ಕು ಮತ್ತು ಸಮಾನತೆ ಮುಂತಾದ ಪದಗಳಿಗೆ ಹೊಸ ಅರ್ಥಗಳನ್ನು ‘ನವಕರ್ನಾಟಕ’ ಟಂಕಿಸುತ್ತಿದೆ. ಭಾರತದ ಪ್ರಜಾಸತ್ತೆ, ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯಗಳ ಭವಿಷ್ಯಕ್ಕೇ ಕಾರ್ಮೋಡ ಕವಿಯುವಂತೆ ಈ ಹೊಸ ಪ್ರಯತ್ನಗಳಿವೆ.

ಜಾತಿ ಮತ್ತು ಕಾಸಿನ ತಂತ್ರಗಳ ಮೂಲಕ ಗೆದ್ದಿರುವ ನಮ್ಮ ಶಾಸಕರ ಪೈಕಿ ಶೇ 97ರಷ್ಟು ಮಂದಿ ಕೋಟ್ಯಧಿಪತಿಗಳಾಗಿದ್ದರೆ, 77 ಮಂದಿಯ ಮೇಲೆ ಕ್ರಿಮಿನಲ್ ಕೇಸುಗಳಿವೆ 54 ಶಾಸಕರ ಮೇಲೆ ಗಂಭೀರ ಅಪರಾಧ ಪ್ರಕರಣಗಳಿವೆ. ಈ ವಸ್ತು ಸ್ಥಿತಿ ಸಾರ್ವಜನಿಕ ಬದುಕಿನ ಚರ್ಚೆಯನ್ನೇ ಒರಟು ಮಾಡಿಬಿಟ್ಟಿದೆ. ಜನಪ್ರತಿನಿಧಿಗಳಿಂದ ನಿರೀಕ್ಷಿಸುವ ಸಾರ್ವಜನಿಕ ಗಾಂಭೀರ್ಯ ಮತ್ತು ಶಿಷ್ಟತೆಯ ನಿರೀಕ್ಷೆಗಳನ್ನೇ ಈ ಸ್ಥಿತಿಗತಿ ಕೊರೆದು ಹಾಕುತ್ತಿದೆ. ಇದಕ್ಕಿಂತಲೂ ಘೋರವೆಂದರೆ ಹಿಂಸೆಯನ್ನು ಛೂಬಿಡುವುದು, ಅಧಿಕಾರದಲ್ಲಿದ್ದಾಗ ತಮ್ಮನ್ನು ತಾವೇ ಕ್ಷಮಿಸಿ ಬಿಡುವುದು, ಕಾನೂನಿಗೆ ಅತೀತರೆಂಬಂತೆ ಕಾರ್ಯನಿರ್ವಹಿಸುವುದು. ಪೋಲೀಸ್ ಮಹಾನಿರ್ದೇಶಕರು, ದಾವೆ ನಿರ್ದೇಶನಾಲಯ ಮತ್ತು ಕಾನೂನು ಇಲಾಖೆ ವಿರೋಧ ವ್ಯಕ್ತಪಡಿಸಿದಾಗಲೂ ಬಿಜೆಪಿಯ ನಾಯಕರು, ಶಾಸಕರು, ಸಂಸದರ ಮೇಲೆ ಇದ್ದ 62 ಅಪರಾಧ ಪ್ರಕರಣಗಳನ್ನು ಹಿಂಪಡೆದಿದ್ದರಲ್ಲೇ ಈ ನಡೆಯ ಪುರಾವೆ ಇದೆ.

1975ರ ಭೂಸುಧಾರಣಾ ಕಾಯ್ದೆ ಮೂಲಕ ಕರ್ನಾಟಕವು ಗಮನಾರ್ಹ ಸಾಮಾಜಿಕ, ಆರ್ಥಿಕ ಕಲ್ಯಾಣ ಕಾರ್ಯಕ್ರಮಗಳ ಹರಿಕಾರನಾಗಿ ಮೂಡಿಬಂತು. ಆದರೆ ಇತ್ತೀಚೆಗೆ ಯಾವ ಸಮಾಲೋಚನೆಯಾಗಲೀ, ಚರ್ಚೆಯಾಗಲೀ ನಡೆಸದೇ ಈ ಕಾಯ್ದೆಯನ್ನೇ ನಿಷ್ಫಲಗೊಳಿಸುವ ಕಾಯ್ದೆಗಳನ್ನು ಅಂಗೀಕಾರ ಮಾಡಲಾಯಿತು.

ಜಮೀನಿನ ಕ್ರೋಡೀಕರಣ ಮತ್ತು ದುರುಪಯೋಗ ಮಿತಿಮೀರಿದೆ; ಇದು ಸಣ್ಣ ಮತ್ತು ಅತಿಸಣ್ಣ ರೈತರ ಪಾಲಿಗೆ ಮರಣ ಶಾಸನವಾಗಲಿದೆ. ಕರ್ನಾಟಕದ ಪಾಲಿಗೆ ದುಃಸ್ವಪ್ನದಂತಿದ್ದ ಗಣಿಗಾರಿಕೆಯನ್ನು ಮತ್ತೆ ಪ್ರೋತ್ಸಾಹಿಸಲಾಗುತ್ತಿದೆ. ಈ ಹಿರಿದು ತೆಗೆವ ಆರ್ಥಿಕತೆಯು ಪರಿಸರ, ಶಾಸನಾತ್ಮಕ ಮತ್ತು ವಿಕೇಂದ್ರೀಕೃತ ಆಡಳಿತದ ಕಾನೂನುಗಳನ್ನೇ ಧಿಕ್ಕರಿಸಿದೆ ಎಂಬುದನ್ನು ಮರೆತು ಗಣಿಗಾರಿಕೆಗೆ ಮತ್ತೆ ಮಣೆ ಹಾಕಲಾಗುತ್ತಿದೆ. ತನ್ಮೂಲಕ, ಪ್ರಜಾಸತ್ತಾತ್ಮಕ ಪ್ರಕ್ರಿಯೆ, ಸಾಮಾಜಿಕ/ ಆರ್ಥಿಕ ನ್ಯಾಯ ಮತ್ತು ಪರಿಸರದ ಸುಸ್ಥಿರತೆಯ ಅಂಶಗಳನ್ನು ಸಂಪೂರ್ಣ ನಿರ್ಲಕ್ಷಿಸಿದೆಯಷ್ಟೇ ಅಲ್ಲ; ಈ ಮೂಲಕ ಪಾಳೇಗಾರಿಕೆಯ ತುಂಡರಸರನ್ನು ಸೃಷ್ಟಿಸಿದೆ.

ಜನಾಂಗೀಯ ನವಭಾರತ

ಹೊಸ ಶಾಸನಗಳು ಜನಾಂಗೀಯ ನವಭಾರತದ ಚಿಂತನೆ ಮತ್ತು ಕಾರ್ಯಸೂಚಿಗಳು ಅಡಿಯಾಳಾದ ಕರ್ನಾಟಕದ ಸೂಚನೆಗಳಾಗಿವೆ. ದುಡಿವ ವರ್ಗಗಳ ಹಿತಾಸಕ್ತಿಗೆ ವಿರುದ್ಧವಾದ ಕಾರ್ಮಿಕ ಕಾನೂನು (ಇದು ರಾಜ್ಯಪಾಲರಿಂದ ತಿರಸ್ಕೃತವಾಗಿದೆ), ಗೋಹತ್ಯಾ ನಿಷೇಧ ಕಾಯಿದೆ, ಇವೆಲ್ಲಾ ಈ ಪಟ್ಟಿಯಲ್ಲಿ ಸೇರಿವೆ. ಹಿಂದೆಂದೂ ಕಾಣದ ರೀತಿಯಲ್ಲಿ ವಿಧಾನಸೌಧದಲ್ಲಿ ಅಸಂವಿಧಾನಾತ್ಮಕವಾಗಿ ಗೋಪೂಜೆಯನ್ನೂ ನಡೆಸಲಾಗಿದೆ ಎಂಬುದನ್ನು ಗಮನಿಸಿ. ಮತಾಂತರ ನಿಷೇಧ ಕಾಯ್ದೆ, ಕುಟುಂಬ ನಿಯಂತ್ರಣ ಕಾಯ್ದೆ, ‘ಲವ್ ಜಿಹಾದ್’ ನಿಷೇಧ ಇವೆಲ್ಲಾ ಚರ್ಚೆಯ ವಿಷಯಗಳಾಗಿ ಮುನ್ನೆಲೆಗೆ ಬರುತ್ತಿವೆ. ಕ್ರಿಶ್ಚಿಯನ್ ಅಲ್ಪ ಸಂಖ್ಯಾತರು ಮತ್ತು ಅವರ ಸಂಸ್ಥೆಗಳನ್ನು ಗುರಿ ಮಾಡಿ ಈ ಸರ್ಕಾರ ತನಿಖೆ ಆರಂಭಿಸಿದೆ. ಇದು ಸಂವಿಧಾನ ಮತ್ತು ನಾಗರಿಕ ಹಕ್ಕುಗಳ ಭಂಡ ಉಲ್ಲಂಘನೆ. ಇವು ಮೂಲತಃ ಧಾರ್ಮಿಕ ಅಲ್ಪಸಂಖ್ಯಾತರನ್ನು ರಾಕ್ಷಸರಂತೆ ಬಿಂಬಿಸಿ ಅವರ ನಾಗರಿಕತ್ವ ಮತ್ತು ಮಾನವ ಹಕ್ಕುಗಳನ್ನು ದಮನಿಸುವ ಹೆಜ್ಜೆಗಳಾಗಿವೆ. ಮುದ್ರಣ ಮತ್ತು ಟಿವಿ ಮಾಧ್ಯಮಗಳಲ್ಲಿ ಹೆಚ್ಚಿನವು ಈ ದ್ವೇಷ ಭಾಷಣ ಮತ್ತು ಸುಳ್ಳು ಮಾಹಿತಿಯ ಮೇಳಕ್ಕೆ ಕೈಜೋಡಿಸಿವೆ. ಆದರೆ ಸರ್ಕಾರ ಈ ಹಿಂಸಾತ್ಮಕ ಸಾರ್ವಜನಿಕ ಸಂಸ್ಕೃತಿಯ ಹರಡುವಿಕೆಯನ್ನು ನೋಡಿಯೂ ಜಾಣ ಕುರುಡುತನ ಪ್ರದರ್ಶಿಸುತ್ತಿದೆ.

ಕರ್ನಾಟಕದ ಪಂಚಾಯಿತಿ ರಾಜ್ ಸಂಸ್ಥೆಗಳು ದೇಶಕ್ಕೇ ಮಾದರಿಯಾಗಿದ್ದವು. ಅವುಗಳನ್ನು ಇಂದು ಹಳಿತಪ್ಪಿಸಲಾಗಿದೆ. ಇತ್ತೀಚೆಗಿನ ಕ್ಷೇತ್ರ ಮರುವಿಂಗಡಣೆಯ ಪ್ರಕ್ರಿಯೆಯೂ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳನ್ನು ಮುಂದೂಡಿ ವಿಕೇಂದ್ರೀಕೃತ ಆಡಳಿತಾತ್ಮಕ ರಚನೆಗಳ ಕಾರ್ಯಕ್ಕೆ ಅಡ್ಡಿಯುಂಟು ಮಾಡುವ ಪ್ರಯತ್ನವಾಗಿದೆ. ಇದೇ ರೀತಿ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯನ್ನೂ ಅನಿರ್ದಿಷ್ಟ ಕಾಲ ಮುಂದೂಡಲಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯ ಸತತ ಮುಂದೂಡಿಕೆಯು ಶಾಸಕರ, ಮಂತ್ರಿಗಳ ಕಪಿಮುಷ್ಠಿಯಲ್ಲಿ ರಾಜಕೀಯ ಅಧಿಕಾರದ ಕೇಂದ್ರೀಕರಣಕ್ಕೆ ಕಾರಣವಾಗುತ್ತದೆ.

ಕೇಂದ್ರದ ನೀತಿ ಆಯೋಗವನ್ನು ಅನುಸರಿಸಿ ಕರ್ನಾಟಕವೂ ತನ್ನ ಯೋಜನಾ ಮಂಡಳಿಗೆ ‘ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಮಂಡಲಿ’ ಎಂದು ಮರುನಾಮಕಣ ಮಾಡಿದೆ. ಈಗ ಅದು ವಿವರವಾದ ನೀತಿ ವಿಶ್ಲೇಷಣೆ, ಮೌಲ್ಯಮಾಪನದ ಫಲಿತಗಳ ಅನುಷ್ಠಾನ, ಹಾಗೂ ದಕ್ಷ ನಿಗಾವಣೆಗೆ ಮಹತ್ವ ನೀಡುವ ಬದಲು ಕೇಂದ್ರೀಕೃತ ನಿಯಂತ್ರಣ ಮತ್ತು ಕಂಪ್ಯೂಟರುಗಳ ಮೇಲೆ ಒತ್ತು ನೀಡುತ್ತಿರುವಂತಿದೆ.

ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಯ ದಿಕ್ಸೂಚಿಯಾಗಿದ್ದ ಡಾ. ನಂಜುಂಡಪ್ಪ ವರದಿಯನ್ನು ಮೂಲೆಗೆ ತಳ್ಳಲಾಗಿದೆ. ಹೈದರಾಬಾದ್ ಕರ್ನಾಟಕಕ್ಕೆ ‘ಕಲ್ಯಾಣ ಕರ್ನಾಟಕ’ ಎಂದು ಮರುನಾಮಕರಣ ಮಾಡಲಾಗಿದೆಯಾದರೂ ಯಾವುದೇ ಗಮನಾರ್ಹ ಕಲ್ಯಾಣವಾಗಿದ್ದು ಕಾಣುತ್ತಿಲ್ಲ. ಹವಾಮಾನ ಬದಲಾವಣೆಯ ಪರಿಣಾಮದ ಲಕ್ಷಣಗಳು ಹೆಚ್ಚುತ್ತಿರುವ ಪ್ರವಾಹ, ಬರಗಾಲ ಮತ್ತು ಉಷ್ಣಾಂಶಗಳಲ್ಲಿ ಕಾಣಿಸುತ್ತಿದ್ದರೂ ಇದನ್ನು ಎದುರಿಸಲು ಬೇಕಾದ ಕ್ರಿಯಾಯೋಜನೆ ನಾಪತ್ತೆಯಾಗಿದೆ. ಮಾನ್ಯತೆ, ಗೌರವ ಉಳಿಸಿಕೊಂಡಿರುವ ಸಂಸ್ಥೆಗಳು, ಚಿಂತಕರ ಚಾವಡಿಗಳು ಅಂಚಿಗೆ ತಳ್ಳಲ್ಪಟ್ಟಿವೆ. ಸರಕಾರವು ಖ್ಯಾತನಾಮರಿಂದ ಸಲಹೆ ಪಡೆಯುತ್ತಿದೆ. ವಿಕೇಂದ್ರೀಕೃತ ಅಭಿವೃದ್ಧಿಯನ್ನು ಹಿಂದಕ್ಕೆ ತಳ್ಳಲಾಗಿದ್ದು ಅಭಿವೃದ್ಧಿ ಎಂದರೆ ಜಾತಿ ಕ್ರೋಡೀಕರಣವಾಗಿದೆ. ಅಷ್ಟೇ ಅಲ್ಲ ಅನಭಿವೃದ್ಧಿಯನ್ನೇ ಮರುನಿರ್ವಚಿಸಲಾಗುತ್ತಿದೆ.



ರಾಜ್ಯೋತ್ಸವದ ಮುನ್ನಾದಿನ ಕನ್ನಡ ಧ್ವಜದ ಮಾರಾಟ

ವಿವಿಧ ಜಾತಿ ನಿಗಮಗಳನ್ನು ಸ್ಥಾಪಿಸುವ ಮೂಲಕ ಕರ್ನಾಟಕ ಸರ್ಕಾರವು ಯಜಮಾನಿಕೆಯ ಜಾತಿ/ ಮಠಗಳನ್ನು ಓಲೈಸುತ್ತಿರುವಂತಿದೆ. ಒಬಿಸಿ/ ಪರಿಶಿಷ್ಟಜಾತಿ/ ಪಂಗಡಗಳ ನಿಗಮಗಳ ಅನುದಾನಕ್ಕೆ ಸಂಚಕಾರ ತಂದು ಬ್ರಾಹ್ಮಣ, ಮರಾಠ, ಲಿಂಗಾಯತ, ಒಕ್ಕಲಿಗ ಮಠಗಳಿಗೆ ಅನುದಾನ ನೀಡಿರುವುದನ್ನು ಗಮನಿಸಬೇಕು. ಈ ಪ್ರಬಲ ಜಾತಿಗಳನ್ನು ಬಲಪಡಿಸುವ ನಿರ್ಲಜ್ಜ ಹೆಜ್ಜೆಯೊಂದಿಗೆ ಕರ್ನಾಟಕದ ಶ್ರೀಮಂತ, ವೈವಿಧ್ಯಮಯ ಚರಿತ್ರೆಯ ಘನ ವ್ಯಕ್ತಿಗಳನ್ನು ದುರುಪಯೋಗ ಮಾಡುವ ಪ್ರಯತ್ನವೂ ನಡೆದಿದೆ.

ಬಸವಕಲ್ಯಾಣದಲ್ಲಿ ಅನುಭವ ಮಂಟಪದಿಂದ ಹಿಡಿದು ಅಕ್ಕಮಹಾದೇವಿ ಸ್ಮಾರಕಕ್ಕೂ ಅನುದಾನ ನೀಡಲಾಗಿದೆಯಲ್ಲದೇ ಸಿದ್ಧಗಂಗಾಶ್ರೀಗಳ 111 ಅಡಿ ಮೂರ್ತಿಯ ಸ್ಥಾಪನೆಗೂ ಅನುದಾನ ಘೋಷಿಸಲಾಗಿದೆ. ಇದೆಲ್ಲದರಲ್ಲೂ ಸರ್ಕಾರ ಮತ್ತು ಜಾತಿ/ಮತ ನಾಯಕರ ಮಧ್ಯೆ ಅಧಿಕಾರ ಹಂಚಿಕೆಯ ಒಪ್ಪಂದ ಕಾಣುತ್ತಿದೆ.

ಒಂದು ಕಾಲದಲ್ಲಿ ಆಧ್ಯಾತ್ಮಿಕ ವಿಚಾರ, ಶಿಕ್ಷಣ ನೀಡುವಿಕೆ, ಸ್ಥಳೀಯ ಪಂಚಾಯಿತಿಕೆ, ಮತ್ತು ತಮ್ಮ ತಮ್ಮ ಪ್ರಭಾವದ ವಲಯಗಳಲ್ಲಿ ಅಭಿವೃದ್ಧಿ ಕುರಿತಂತೆ ಮಾಡಲಾದ ಭರವಸೆಗಳ ಈಡೇರಿಕೆಗಳಲ್ಲಿ ಈ ಮಠಗಳು ತೊಡಗಿಸಿಕೊಂಡಿದ್ದವು. ಆದರೆ ಈಗ ಈ ಮಠಾಧಿಪತಿಗಳು ಬಲಾಢ್ಯ ರಾಜಕೀಯ ಮಧ್ಯವರ್ತಿಗಳ ರೀತಿ ವರ್ತಿಸುತ್ತಿದ್ದಾರೆ.

ಎರಡನೇ ಅಧಿಕಾರ ಹಂಚಿಕೆಯ ವರ್ಗ ಸ್ಥಳೀಯ ಅತಿರೇಕಿ ಗುಂಪುಗಳು. ಇವು ಅಂಚಿನ ಗುಂಪುಗಳಾಗಿ ಈಗ ಉಳಿದಿಲ್ಲ; ಇವುಗಳಿಗೆ ವಿಸ್ತೃತ ಮಾನ್ಯತೆ ಮತ್ತು ಅಧಿಕಾರ ದೊರಕುತ್ತಿದೆ. ಇವುಗಳಲ್ಲಿ ಹೆಚ್ಚಿನವು ಹಿಂದುತ್ವದ ಗುಂಪುಗಳು. ಇವು ಕಾನೂನುಬಾಹಿರ ಹಿಂಸೆಯ ಮೂಲಕ ಸಾಮಾಜಿಕ ವಿಷಯಗಳಲ್ಲೂ ತಲೆಹಾಕುತ್ತಿವೆ. ಈ ಗುಂಪುಗಳ ಹೇಳಿಕೆ ಮತ್ತು ಕಾರ್ಯಾಚರಣೆಗಳಿಗೆ ವಿಸ್ತೃತ ಮಾನ್ಯತೆಯೂ ದೊರಕುತ್ತಿರುವಂತಿದೆ. ಈ ಗುಂಪುಗಳ ಮೂಗು ತೂರಿಸುವಿಕೆಗೆ ಶಾಸಕರಷ್ಟೇಅಲ್ಲ; ಮುಖ್ಯಮಂತ್ರಿಗಳೂ ಅಂಗೀಕಾರದ ಮುದ್ರೆ ಒತ್ತುತ್ತಿರುವಂತಿದೆ.

ಅಂತರ ಧರ್ಮೀಯ ಪ್ರೀತಿಗಾಗಿ ತಲೆಕಡಿಯಲ್ಪಟ್ಟ ಅರ್ಬಾಜ್, ಅಂತರ ಜಾತೀಯ ಅಂತರ ಧರ್ಮೀಯ ಸಂಬಂಧಗಳಿಗೆ ಹೆಚ್ಚುತ್ತಿರುವ ಬೆದರಿಕೆ, ಬಹಿರಂಗ ಹಿಂಸೆಯ ಬೆದರಿಕೆ ಮತ್ತು ಕರೆ; ಜೊತೆಗೆ ಇಂಥಾ ದ್ವೇಷ ಭಾಷಣ ಮತ್ತು ಪ್ರಚೋದಕ ಮಾತುಗಳನ್ನು ನಿಗ್ರಹಿಸಲು ಹಿಂದೇಟು ಹಾಕುತ್ತಿರುವುದು- ಇವೆಲ್ಲಾ ರಾಜ್ಯದ ಹೊಸ ರಾಜಕೀಯ ಅಧಿಕಾರದ ಚಿಹ್ನೆಗಳಾಗಿವೆ.

ಪ್ರಭುತ್ವದ ವಿಮರ್ಶೆ, ಪಕ್ಷದ ಆಂತರಿಕ ಭಿನ್ನಮತಗಳನ್ನು ಭಯೋತ್ಪಾದಕ ಚಟುವಟಿಕೆಗಳೆಂದು ಬಣ್ಣಿಸಿ ಕಾನೂನುಬಾಹಿರ ಕೃತ್ಯ ತಡೆಯಂತಹ (ಯುಎಪಿಎ) ರಾಕ್ಷಸೀ ಕಾನೂನುಗಳನ್ನು ಪದೇಪದೇ ಬಳಸಲಾಗುತ್ತಿದೆ .ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಪ್ರಕರಣಗಳಲ್ಲಿ 370 ಮಂದಿ ಮೇಲೆ ಈ ಕಾಯ್ದೆ ಬಳಸಲಾಗಿದೆ. ಇವರಿಗೆ ಆರು ತಿಂಗಳಾದರೂ ಜಾಮೀನೂ ದೊರಕಲಿಲ್ಲ. ಬೀದರದ ಶಾಲೆಯೊಂದರಲ್ಲಿ ಸಿಎಎ ಕುರಿತ ನಾಟಕ ಪ್ರದರ್ಶನದ ಕಾರಣಕ್ಕೆ ಶಾಲಾ ಮಕ್ಕಳನ್ನೂ ಸರ್ಕಾರ ಬಿಟ್ಟಿಲ್ಲ. ಭಿನ್ನಮತವನ್ನು ಅಪರಾಧವೆಂಬಂತೆ ಬಗೆದು ದೇಶದ್ರೋಹದ ಪ್ರಕರಣವನ್ನು ಬಳಸಲಾಗುತ್ತಿದೆ. ದಿಶಾ ರವಿಯನ್ನು ಯಾವುದೇ ಕಾನೂನು ಪ್ರಕ್ರಿಯೆಗಳಿಲ್ಲದೇ ದೆಹಲಿಗೆ ಒಯ್ಯಲಾಯಿತು. ಈ ಪ್ರಕರಣ ನಮ್ಮ ಸರ್ಕಾರವು ಮುಗ್ಧ ನಾಗರಿಕರನ್ನು ಅಪರಾಧಿಗಳೆಂದು ಬಿಂಬಿಸುವಲ್ಲಿ ಕೈಜೋಡಿಸುತ್ತಿದೆ ಎಂಬುದರ ಪುರಾವೆ.

ಕೋವಿಡ್ ಕಾರಣಕ್ಕೆ ಶಿಕ್ಷಣ ಮತ್ತು ಗಣಿತದ ಸಾಕ್ಷರತೆ ತೀವ್ರ ಕುಸಿತ ಕಂಡು ಶೈಕ್ಷಣಿಕ ತುರ್ತುಪರಿಸ್ಥಿತಿಯಂಥಾ ಸನ್ನಿವೇಶ ಸೃಷ್ಟಿಯಾದರೂ ಸರ್ಕಾರವು ಹೊಸ ಶಿಕ್ಷಣನೀತಿಯನ್ನು ಮೊದಲು ಜಾರಿಗೆ ತಂದ ರಾಜ್ಯವಾಗಬೇಕೆಂಬ ಹೆಗ್ಗಳಿಕೆಯ ತರಾತುರಿಯಲ್ಲಿದೆ. ಹೈಸ್ಕೂಲುವರೆಗಿನ ಸಮಾಜ, ಭಾಷಾ ಪಠ್ಯ ಮತ್ತು ಪರಿಸರ ವಿಜ್ಞಾನದ ಪಠ್ಯಪುಸ್ತಕಗಳ ಪರಿಷ್ಕರಣೆಗೆ ಮತ್ತೆ ಸಮಿತಿಯೊಂದನ್ನು ನೇಮಿಸುವ ತುರ್ತು ಸರ್ಕಾರಕ್ಕಿದೆ.

‘ಕನ್ನಡಕಾಯಕ ವರ್ಷ’ ಇತ್ಯಾದಿ ಸಾಂಕೇತಿಕ ಆಚರಣೆಗಳನ್ನು ಘೋಷಿಸಿದರೂ, ನವಕರ್ನಾಟಕದ ಬದಲು ನವಭಾರತವನ್ನು ಮುಂಚೂಣಿಗೆ ತರುವಲ್ಲಿ ಕನ್ನಡವನ್ನು ಅಂಚಿಗೆ ತಳ್ಳಿ ಹಿಂದಿ ಭಾಷೆಗೆ ಪ್ರೋತ್ಸಾಹ ನೀಡುವ ಪ್ರಯತ್ನಗಳು ನಡೆಯುತ್ತಲೇ ಇವೆ.

ಇಷ್ಟೇ ಪ್ರಮಾಣದ ದಮನ ನೀತಿ ಮಹಿಳೆಯರ ಬಗ್ಗೆಯೂ ಬೆಳೆಯುತ್ತಿದೆ. ರಾಷ್ಟ್ರೀಯತೆ ಮತ್ತು ಕುಲ ನೆಂಟಸ್ತಿಕೆ ಆದರ್ಶದ ಪರಿಣಾಮ ಇದು. ಇದು ಸ್ವಾಯತ್ತೆ ಮತ್ತು ಹಕ್ಕುಗಳಿಂದ ದೂರ ಸೆಳೆಯುವ ತಿರುವು. ಜನಪ್ರತಿನಿಧಿಗಳು ಮತ್ತು ಅತಿರೇಕಿ ಗುಂಪುಗಳ ಹೇಳಿಕೆಗಳು ಸತತವಾಗಿ ಬಲಿಪಶುವನ್ನು ಆಪಾದಿಸುವ, ತಪ್ಪಿತಸ್ಥಳಂತೆ ನೋಡುವ ಮನಃಸ್ಥಿತಿಯನ್ನಷ್ಟೇ ಅಲ್ಲ, ಮಹಿಳೆಯರು ಹೇಗೆ ವರ್ತಿಸಬೇಕು, ಹೇಗೆ ಉಡುಪು ಧರಿಸಬೇಕು ಎಂದು ನಿಗದಿ ಪಡಿಸುವ ಮನಃಸ್ಥಿತಿಯನ್ನು ಜಾಹೀರುಗೊಳಿಸಿದೆ. 2001ರಲ್ಲಿ ಸ್ಥಾಪಿಸಲಾಗಿದ್ದ 187 ಸಾಂತ್ವನ ಕೇಂದ್ರಗಳನ್ನು ಹಣಕಾಸಿನ ಕೊರತೆಯ ನೆಪವೊಡ್ಡಿ (₹6 ಕೋಟಿ ಅನುದಾನ!) ಮುಚ್ಚಿರುವುದು ಆಕಸ್ಮಿಕವಲ್ಲ. ಈ ಕೇಂದ್ರಗಳು ಕೌಟುಂಬಿಕ ಹಿಂಸೆಯ ಬಲಿಪಶುಗಳು ಮೊರೆ ಹೋಗುವ ಕೇಂದ್ರಗಳಾಗಿದ್ದವು. ಕುಟುಂಬದ ಚೌಕಟ್ಟು ಈಗ ಕಾನೂನಿಂದ ಹೊರತಾಗಿದೆ!

ಹೊಸ ಮಾರ್ಗಾನ್ವೇಷಿ, ಒಳಗೊಳ್ಳುವ ರಾಜಕೀಯ ಚಿಂತನೆಗಳ ರಾಜ್ಯವಾಗಿದ್ದ ಕರ್ನಾಟಕ ಇಂದು ಚಿಲ್ಲರೆ ಮನಸ್ಸಿನ, ಶಿಕ್ಷಾದಾಹಿ, ವಿಭಜಕ ಗುರಿಯ ರಾಜಕೀಯದಿಂದ ತುಂಬಿದೆ. ಹಿಂದೂರಾಷ್ಟ್ರದ ಪರಿಕಲ್ಪನೆಯಲ್ಲಿ ಕಾನೂನು ಮತ್ತು ನ್ಯಾಯದ ಆಡಳಿತವೆಂಬುದು ಭಯ ಹುಟ್ಟಿಸುವ ಆಡಳಿತವಾಗಿದೆ. ಬೇರು ಮಟ್ಟದ ಸಮುದಾಯ/ ಸಂಸ್ಥೆಗಳನ್ನು ಬಲಗೊಳಿಸುತ್ತಾ ಪ್ರಜಾಸತ್ತೆಯನ್ನು ಆಳ/ ಅಗಲಗೊಳಿಸಿದ ಕಾಲದಿಂದ ನಾವು ಈಗ ಪ್ರಭುತ್ವ, ಧಾರ್ಮಿಕ (ಹಿಂದೂ) ಅಧಿಕಾರ ಕೇಂದ್ರಗಳು ಮತ್ತು ಅತಿರೇಕಿ ಸಂಘಟನೆಗಳ ನಡುವೆ ಅಧಿಕಾರ ಹಂಚಿಕೆಯ ಅಪಾಯಕಾರಿ ಹಂತಕ್ಕೆ ಸಾಕ್ಷಿಯಾಗಿದ್ದೇವೆ. ತುಚ್ಛ ಆಚರಣೆ/ ನಡಾವಳಿಗಳ ಅನುಕರಣೆಯೇ ನವ ಕರ್ನಾಟಕದ ಮೊದಲ ಆಯ್ಕೆಯಾಗಿರುವಂತಿದೆ. ದಕ್ಷಿಣದ ಉಳಿದ ರಾಜ್ಯಗಳು ವಿಸ್ತರಿಸಿದ ಆರೋಗ್ಯ ವ್ಯವಸ್ಥೆ, ನಗರ ಉದ್ಯೋಗ ಖಾತರಿ, ಸಾರ್ವಜನಿಕ ಶಿಕ್ಷಣದ ಸುಧಾರಣೆಗಳ ಮೂಲಕ ಮಾರಕ ಸಾಂಕ್ರಾಮಿಕ ತಂದಿಟ್ಟಿರುವ ಸಂಕಷ್ಟಗಳನ್ನು ಎದುರಿಸುವ ಪ್ರಯತ್ನ ಮಾಡಿದರೆ ಉತ್ತರ ಪ್ರದೇಶವನ್ನು ದಕ್ಷತೆಯಲ್ಲಿ ಮೀರಿಸುವುದೇ ಕರ್ನಾಟಕದ ಸದ್ಯದ ಸರ್ಕಾರದ ಘೋಷಿತ ಗುರಿಯಾಗಿದೆ. ಅಂದರೆ ನಮ್ಮ ರಾಜ್ಯವೇ ಅಲ್ಪಸಂಖ್ಯಾತರ ಭೀಕರ ಹಿಂಸೆಯ ವಿಚಾರಣಾ ಕೊಠಡಿಯಾಗಿದೆ.

‘ನವಭಾರತಕ್ಕಾಗಿ ನವಕರ್ನಾಟಕ’ ಎಂಬ ಘೋಷಣೆಯ ಹಿಂದೆ ಸಾಮಂತಗಿರಿ ಇದೆ. ಪ್ರಜಾಸತ್ತೆಯ ಭರವಸೆಯನ್ನು, ಒಕ್ಕೂಟ ಪರಿಕಲ್ಪನೆಯನ್ನು, ಬಹುಸಂಸ್ಕೃತಿ, ಬಹು ಧರ್ಮೀಯ ಸಾಂಸ್ಕೃತಿಕ ಪರಂಪರೆಯನ್ನು ದಮನಿಸಿ ವಿಕೃತಗೊಳಿಸುವ ಕಾರ್ಯತಂತ್ರವಿದೆ.



ಲೇಖಕರು:
ಜಾನಕಿ ನಾಯರ್ ಅವರು ಇತಿಹಾಸ ಪ್ರಾಧ್ಯಾಪಕಿ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ದೆಹಲಿ.
ವಾಸವಿ ಅವರು ಮಾನವಶಾಸ್ತ್ರಜ್ಞೆ

ವಿವಿಧ ಸೂಚ್ಯಂಕಗಳಲ್ಲಿ ರಾಜ್ಯದ ಸ್ಥಾನ ಹೀಗಿದೆ

(● ಸ್ಥಾನ ● ಸೂಚ್ಯಂಕ)

ಸುಸ್ಥಿರ ಅಭಿವೃದ್ಧಿ ಸೂಚ್ಯಂಕ

	ಸ್ಥಾನ	ಸೂಚ್ಯಂಕ
ಕೇರಳ	1	75
ಹಿಮಾಚಲ ಪ್ರದೇಶ	2	74
ತಮಿಳುನಾಡು	2	74
ಆಂಧ್ರಪ್ರದೇಶ	3	72
ಗೋವಾ	3	72
ಕರ್ನಾಟಕ	3	72
ರಾಷ್ಟ್ರೀಯ ಸರಾಸರಿ	10	66

ಬಡತನ ನಿರ್ಮೂಲನೆ

	ಸ್ಥಾನ	ಸೂಚ್ಯಂಕ
ತಮಿಳುನಾಡು	1	86
ಗೋವಾ	2	83
ಕೇರಳ	2	83
ಕರ್ನಾಟಕ	11	68
ರಾಷ್ಟ್ರೀಯ ಸರಾಸರಿ	16	60

ಆರೋಗ್ಯ

	ಸ್ಥಾನ	ಸೂಚ್ಯಂಕ
ಗುಜರಾತ್	1	86
ಮಹಾರಾಷ್ಟ್ರ	2	83
ತಮಿಳುನಾಡು	3	81
ಕರ್ನಾಟಕ	5	78
ರಾಷ್ಟ್ರೀಯ ಸರಾಸರಿ	8	74

ಗುಣಮಟ್ಟದ ಶಿಕ್ಷಣ

	ಸ್ಥಾನ	ಸೂಚ್ಯಂಕ
ಕೇರಳ	1	80
ಹಿಮಾಚಲ ಪ್ರದೇಶ	2	74
ಗೋವಾ	3	71
ಉತ್ತರಾಖಂಡ	4	70
ಕರ್ನಾಟಕ	6	64
ರಾಷ್ಟ್ರೀಯ ಸರಾಸರಿ	10	57

ಆಧಾರ: ನೀತಿ ಆಯೋಗದ ಸುಸ್ಥಿರ ಅಭಿವೃದ್ಧಿ ಸೂಚ್ಯಂಕ ವರದಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೆಲವು ದಿನಗಳಿಂದ ಕೋಮು ಘರ್ಷಣೆಗಳಿಗೆ ತ್ರಿಪುರಾ ಸಾಕ್ಷಿಯಾಗುತ್ತಿದೆ. ಹಲವು ಕಡೆ ನಿಷೇಧಾಜ್ಞೆ ಹೇರಲಾಗಿದೆ. ಈ ಮಧ್ಯೆ ಮಸೀದಿಯೊಂದನ್ನು ಸುಡಲಾಗಿದೆ ಎಂಬ ಸುದ್ದಿ ಹರಿದಾಡುತ್ತಿದೆ. ಸುಟ್ಟು ಕರಕಲಾಗಿರುವ ಧಾರ್ಮಿಕ ಪುಸ್ತಕಗಳನ್ನು ಹಿಡಿದಿರುವ ಇಬ್ಬರು ಯುವಕರ ಚಿತ್ರ ವೈರಲ್ ಆಗಿದೆ. ಹಿಂಸಾಚಾರದಲ್ಲಿ ಧಾರ್ಮಿಕ ಗ್ರಂಥಗಳನ್ನು ಸುಡಲಾಗಿದೆ ಎಂದು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಬರೆದಿದ್ದಾರೆ.



ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ಹಾಗೂ ಆಲ್ಟ್ ನ್ಯೂಸ್, ವೈರಲ್ ಫೋಟೊ ಬಗ್ಗೆ ಪರಿಶೀಲನೆ ನಡೆಸಿವೆ. ಈ ಚಿತ್ರವು ತ್ರಿಪುರಾದ್ದಲ್ಲ ಎಂದು ಖಚಿತಪಡಿಸಿವೆ. ಇತ್ತೀಚೆಗೆ ದೆಹಲಿಯ ರೋಹಿಂಗ್ಯಾ ನಿರಾಶ್ರಿತರ ಕೇಂದ್ರದಲ್ಲಿ ಸಂಭವಿಸಿದ ಅಗ್ನಿ ಆಕಸ್ಮಿಕದಲ್ಲಿ ಪುಸ್ತಕಗಳು ಬೆಂಕಿಗಾಹುತಿಯಾಗಿವೆ. ತ್ರಿಪುರಾ ಹಿಂಸಾಚಾರಕ್ಕೂ, ಧಾರ್ಮಿಕ ಗ್ರಂಥಗಳು ಸುಟ್ಟಿರುವುದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ವೆಬ್‌ಸೈಟ್‌ಗಳು ಅಭಿಪ್ರಾಯಪಟ್ಟಿವೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸತ್ಯ ಒಂದೇ

ನರರವೊಲೆ ಸುರರುಮಲೆದಲೆದು ಮರೆಯಾಗಿಹರು|
ಭರತದೇಶದೊಳಮೈಗುಪ್ತಯವನರೊಳಂ||
ಸುರ ನಾಮ ರೂಪಗಳಸಂಖ್ಯಾತ, ನಿಜವೊಂದು|
ತೆರೆಕೋಟಿ ಕಡಲೊಂದು – ಮಂಕುತಿಮ್ಮ ||487||

ಪದ-ಅರ್ಥ: ನರರವೊಲೆ = ನರರಂತೆ, ಸುರರುಮಲೆದಲೆದು = ಸುರರುಮ್ (ಸುರರು ಕೂಡ) + ಅಲೆದಲೆದು, ಭರತದೇಶದೊಳಮೈಗುಪ್ತಯವನರೊಳಂ = ಭರತದೇಶದೊಳಮ್ (ಭರತದೇಶದಲ್ಲಿ) + ಐಗುಪ್ತ (ಇಜಿಪ್ತ) + ಯವನರೊಳ್ (ಗ್ರೀಸ್ ದೇಶದವರಲ್ಲಿ), ರೂಪಗಳಸಂಖ್ಯಾತ = ರೂಪಗಳು + ಅಸಂಖ್ಯಾತ.

ವಾಚ್ಯಾರ್ಥ: ನರರಂತೆ ಸುರರು ಕೂಡ ತಮ್ಮ ಕಾಲಾವಧಿಯ ನಂತರ ಮರೆಯಾಗಿದ್ದಾರೆ. ಭಾರತದೇಶದಲ್ಲಿ, ಇಜಿಪ್ತ ಮತ್ತು ಗ್ರೀಸ್ ದೇಶಗಳಲ್ಲಿ ದೇವತೆಗಳ ಅಸಂಖ್ಯಾತ ಹೆಸರು, ರೂಪಗಳಿವೆ ಆದರೆ ಸತ್ಯ ಒಂದೇ. ಕೋಟಿ ತೆರೆಗಳಿದ್ದರೂ ಸಮುದ್ರ ಒಂದೇ.

ವಿವರಣೆ: ಮನುಷ್ಯರು ಹೇಗೆ ಪ್ರಪಂಚದಲ್ಲಿ ಬದುಕಿ, ಕೆಲಕಾಲ ಇದ್ದು ಮರೆಯಾಗಿ ಹೋಗುವಂತೆ ದೇವತೆಗಳೂ ಕೂಡ ಮರೆಯಾಗುತ್ತಾರೆ. ಒಂದು ಕಾಲದಲ್ಲಿ ಅತ್ಯಂತ ಪ್ರಚಲಿತವಾಗಿದ್ದ, ನಿರಾಕಾರವಾದ ಅಗ್ನಿ, ವಾಯು, ಭೂಮಿ, ನೀರು, ಆಕಾಶಗಳನ್ನು ಪೂಜಿಸುತ್ತಿದ್ದ ಮನುಷ್ಯ ನಿಧಾನವಾಗಿ ಆಕಾರಸಿದ್ಧವಾದ, ತಮ್ಮ ಮನಸ್ಸಿಗೆ ಹೊಂದುವಂಥ ವಿಗ್ರಹಗಳ ಪೂಜೆಗೆ ಮನಸ್ಸು ಮಾಡಿದ. ಹೀಗಾಗಿ ನೂರಾರು, ಸಾವಿರಾರು ದೇವತೆಗಳ ಕಲ್ಪನೆಗೆ ದಾರಿಯಾಯಿತು. ಇದು ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಎಲ್ಲೆಡೆಗೆ ಕಂಡುಬಂದ ಚಿಂತನೆ. ಒಂದು ಬಾರಿ ತರುಣನೊಬ್ಬ ಸೂಫೀ ಸಂತರಾದ ಆಗಾ ಬಳಿಗೆ ಬಂದು, ‘ಗುರುಗಳೇ, ಜಗತ್ತಿನಲ್ಲಿ ಇಷ್ಟೊಂದು ದೇವತೆಗಳಿದ್ದಾರಲ್ಲ, ಇವರಲ್ಲಿ ನಿಜವಾದ ದೇವರು ಯಾರು?’ ಗುರು ಒಂದು ಪುಟ್ಟ ಕಥೆ ಹೇಳಿದ. ಒಂದು ಸಲ ಒಬ್ಬ ಪರ್ಶಿಯನ್, ಒಬ್ಬ ಟರ್ಕಿ ಪ್ರಜೆ, ಒಬ್ಬ ಅರಬ್, ಮತ್ತೊಬ್ಬ ಗ್ರೀಕ್ ಮನುಷ್ಯ ಜೊತೆಯಾಗಿ ಪ್ರವಾಸಕ್ಕೆ ಹೊರಟಿದ್ದರು. ಪರ್ಶಿಯನ್ ಹೇಳಿದ ‘ನನಗೆ ಅಂಗೂರ್ ಬೇಕು’, ಟರ್ಕಿ ಹೇಳಿದ, ‘ಅದಾರಿಗೆ ಬೇಕು? ನನಗೆ ಉಜುಮ್ ಬೇಕು’. ಅರಬ್, ‘ನನಗೆ ಅವು ಬೇಡ. ನನಗೆ ಇನಾಬ್ ಮಾತ್ರ ಸಾಕು’ ಎಂದ. ಕೊನೆಗೆ ಗ್ರೀಕ್ ಹೇಳಿದ, ‘ಅವೆಲ್ಲವೂ ನನಗೆ ಪ್ರಯೋಜನವಿಲ್ಲ, ನನಗೆ ಸ್ಟಾಫಿಲ್ ಮಾತ್ರ ಬೇಕು’. ಅವರಲ್ಲಿ ಜಗಳ ಪ್ರಾರಂಭವಾಯಿತು. ಅಲ್ಲೊಬ್ಬ ಬಹುಭಾಷಾ ತಜ್ಞ ಬಂದ. ಇವರ ವಾದಗಳನ್ನು ಕೇಳಿದ. ಅವರ ಹತ್ತಿರವಿದ್ದ ಹಣವನ್ನು ತೆಗೆದುಕೊಂಡು ಹೋಗಿ, ದ್ರಾಕ್ಷಿ ಹಣ್ಣಿನ ಬುಟ್ಟಿಯನ್ನು ತಂದು ಕೊಟ್ಟ. ಎಲ್ಲರಿಗೂ ಸಂತೋಷವಾಯಿತು. ‘ಇದೇ ಅಂಗೂರ್’ ಎಂದ ಪರ್ಶಿಯನ್, ಇದೇ ಉಜುಮ್ ಎಂದ ಟರ್ಕಿ, ಇದನ್ನೇ ನಾವು ಇನಾಬ್ ಎನ್ನುತ್ತೇವೆ ಎಂದ ಅರಬ್, ಗ್ರೀಕ್ ಹೇಳಿದ, ‘ನಮ್ಮ ಭಾಷೆಯಲ್ಲಿ ಇದನ್ನೇ ಸ್ಟಾಫಿಲ್ ಎನ್ನುತ್ತೇವೆ’. ಗುರು ಆಗಾ ಹೇಳಿದ, ಪ್ರಪಂಚದ ಸಾಮಾನ್ಯ ಜನರೆಲ್ಲ ಈ ಪ್ರವಾಸಿಗರಿದ್ದ ಹಾಗೆ. ಅವರಿಗೆ, ತಮ್ಮನ್ನು ಮೀರಿದ, ಎಲ್ಲವನ್ನು ನಿಗ್ರಹಿಸುವ ಯಾವುದೋ ಶಕ್ತಿ ಇದೆಯೆಂದು ತಿಳಿದಿದೆ. ಅದನ್ನು ಕಾಣುವ ಆಂತರಿಕ ತುಡಿತವಿದೆ. ಅದಕ್ಕೆ ಯಾವುದೋ ಒಂದು ಹೆಸರನ್ನು ಕೊಡುತ್ತಾರೆ. ಅದನ್ನೇ ದೇವರೆಂದು ಪೂಜಿಸುತ್ತಾರೆ. ಆದರೆ ನಿಜವಾದ ಧರ್ಮಜ್ಞ, ಬಹುಭಾಷಾ ವಿದ್ವಾಂಸನಂತೆ. ಅವನಿಗೆ ಗೊತ್ತು, ಅವೆಲ್ಲ ಒಂದೇ ಶಕ್ತಿಯ ಬೇರೆ ಬೇರೆ ಹೆಸರುಗಳು. ಕಗ್ಗ ಅದನ್ನು ವಿಶದಪಡಿಸುತ್ತದೆ. ‘ದೇವನೊಬ್ಬ ನಾಮ ಹಲವು’ ಎನ್ನುವಂತೆ, ಭಾರತ, ಇಜಿಪ್ತ, ಗ್ರೀಕ್ ದೇಶಗಳಲೆಲ್ಲ ಅಸಂಖ್ಯಾತ ನಾಮರೂಪಗಳಿಂದ ಪೂಜಿಸಿದರೂ, ಕೋಟಿ ತೆರೆಗಳಿದ್ದರೂ ಸಮುದ್ರ ಒಂದೇ ಎನ್ನುವಂತೆ, ಸತ್ಯದ ಸ್ವರೂಪ ಒಂದೇ ಆಗಿದೆ. ಅದು ನಾಮರೂಪಾತೀತವಾದದ್ದು. ❖

ದಿನ ಭವಿಷ್ಯ

ಸೋಮವಾರ ನವೆಂಬರ್ 1, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಸ್ವಾತಿ ಏಕಾದಶೀ ಗಂ. 6-50 (ಬೆ. 9-04) ಸೋಮವಾರ ನಿತ್ಯ ನಕ್ಷತ್ರ ಪೂರ್ವ ಫಲ್ಗುಣಿ ಗಂ. 8-42 (ಬೆ. 9-49) ಐಂದ್ರ ನಾಮ ಯೋಗ ಗಂ. 32-24 ಬಾಲವ ಕರಣ ಗಂ. 6-50 ವಿಷ ಗಂ. 26-29 ಅಮೃತ ಗಂ 50-13: ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-16 ಸೂರ್ಯಾಸ್ತ: 5-50 ಅದೃಷ್ಟ ಸಂಖ್ಯೆ 5 8

ಮೇಷ: ಕೈಗೊಂಡ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲಿದ್ದೀರಿ. ಹಿರಿಯರ ಪ್ರಶಂಸೆಗೆ ಪಾತ್ರರಾಗುವಿರಿ. ನವ ದಂಪತಿಗಳಿಗೆ ಸಂತಾನ ಭಾಗ್ಯ ಲಭ್ಯವಾಗಲಿದೆ.

ವೃಷಭ: ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರಗಳಿಂದ ಅಧಿಕ ವರಮಾನ ದೊರಕಲಿದೆ. ಗೃಹ ನಿರ್ಮಾಣ ಕೆಲಸಗಳು ಶೀಘ್ರಗತಿಯಲ್ಲಿ ಸಾಗುವವು. ಸಮಾಧಾನಕರವಾಗಿ ಕೆಲಸಗಳನ್ನು ನಿರ್ವಹಿಸಿ.

ಮಿಥುನ: ಸರ್ಕಾರಿ ಕೆಲಸಗಳಲ್ಲಿರುವವರಿಗೆ ಬಡ್ತಿ ಅಥವಾ ಸ್ಥಳ ಬದಲಾವಣೆಯ ಸಾಧ್ಯತೆ. ಹೊಸ ನಿವೇಶನ ಖರೀದಿ ಅಥವಾ ಗೃಹ ನಿರ್ಮಾಣ ಕಾರ್ಯಗಳು ಚುರುಕುಗೊಳ್ಳಲಿದೆ.

ಕರ್ಕಾಟಕ: ಕೃಷಿಕರಿಗೆ ಬೆಳೆದ ಫಸಲಿಗೆ ಉತ್ತಮ ಬೆಲೆ ದೊರಕುವುದರಿಂದಾಗಿ ಕೃಷಿ ಕೆಲಸಗಳಲ್ಲಿ ಉತ್ಸಾಹ. ತೈಲ ಉತ್ಪನ್ನಗಳ ಮಾರಾಟಗಾರರಿಗೆ ಉತ್ತಮ ಲಾಭ ದೊರಕಲಿದೆ.

ಸಿಂಹ: ಗುತ್ತಿಗೆ ವ್ಯವಹಾರ ನಡೆಸುತ್ತಿರುವವರಿಗೆ ಸರ್ಕಾರದ ಕಾಮಗಾರಿಗಳು ದೊರೆತು ಸಂತಸ ನೀಡಲಿದೆ. ಬಾಕಿ ಇರುವ ಕೆಲಸಗಳನ್ನು ಪೂರ್ಣಗೊಳಿಸಲು ಸಕಾಲವಾಗಿದೆ.

ಕನ್ಯಾ: ಉದ್ಯಮವನ್ನು ವಿಸ್ತರಿಸುವ ಸಲುವಾಗಿ ಸಿದ್ಧತೆ ನಡೆಸಲು ಸಕಾಲವಾಗಿದೆ. ನಿಮ್ಮ ಕಾರ್ಯಕ್ಷೇತ್ರವನ್ನು ವಿದೇಶಗಳಲ್ಲೂ ವಿಸ್ತರಿಸಲು ಅನುಮತಿಯನ್ನು ಪಡೆಯಲಿದ್ದೀರಿ.

ತುಲಾ: ವಿವಿಧ ಮೂಲಗಳಿಂದ ಹೆಚ್ಚಿನ ಆದಾಯವು ಹರಿದುಬರಲಿದೆ. ವಾಹನ ಮಾರಾಟದಿಂದ ಉತ್ತಮ ಲಾಭ ಗಳಿಸಲಿದ್ದೀರಿ. ಸಮಾಧಾನ ಚಿತ್ತರಾಗಿ ವ್ಯವಹರಿಸುವುದು ಉತ್ತಮ.

ವೃಶ್ಚಿಕ: ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯಧನ ದೊರಕಲಿದೆ ಹೊಸ ಕೆಲಸಗಳಿಗೆ ಮಾಡುವ ಪ್ರಯತ್ನಕ್ಕೆ ಸ್ನೇಹಿತರಿಂದ ಸಹಾಯ ದೊರೆಯಲಿದೆ.

ಧನು: ನೂಲು ತೆಗೆಯುವ, ಶೃಂಗಾರ ಸಾಮಗ್ರಿ ಹಾಗೂ ಔಷಧ ತಯಾರಕರಿಗೆ ವಿಶೇಷ ಬೇಡಿಕೆಯಿಂದಾಗಿ ಉತ್ತಮ ಲಾಭ ದೊರೆಯಲಿದೆ. ಸ್ವಂತ ಉದ್ಯಮ ನಡೆಸುತ್ತಿರುವವರಿಗೆ ಉತ್ತಮ ಆದಾಯ.

ಮಕರ: ಜಾಹೀರಾತುಗಳ ಮೂಲಕ ವಹಿವಾಟನ್ನು ಹೆಚ್ಚಿಸಿಕೊಳ್ಳಲಿದ್ದೀರಿ. ವಿದೇಶಿ ಉತ್ಪನ್ನಗಳ ಮಾರಾಟದಿಂದಾಗಿ ಹೇರಳ ಲಾಭದೊರಕಲಿದೆ. ಮಂಗಲ ಕಾರ್ಯಗಳಲ್ಲಿ ಭಾಗಿ.

ಕುಂಭ: ರಫ್ತು ಮಾರಾಟಗಾರರಿಗೆ ಉತ್ತಮ ವ್ಯವಹಾರ ಕುದುರುವುದರಿಂದ ಆದಾಯ ಹೆಚ್ಚಲಿದೆ. ನಟ ನಟಿಯರು ಕಲಾವಿದರುಗಳಿಗೆ ಹೆಚ್ಚಿನ ಅವಕಾಶಗಳು ದೊರಕುವ ಸಾಧ್ಯತೆ ಕಂಡುಬರುತ್ತಿದೆ.

ಮೀನ: ಪ್ರಭಾವಿ ವ್ಯಕ್ತಿಗಳೊಂದಿಗಿನ ಒಡನಾಟದಿಂದಾಗಿ ಹೆಚ್ಚಿನ ಸ್ಥಾನವನ್ನು ಪಡೆದುಕೊಳ್ಳಲಿದ್ದೀರಿ. ಸರ್ಕಾರದ ಉನ್ನತ ಹುದ್ದೆಗಳಲ್ಲಿ ಕೆಲಸಗಳನ್ನು ನಿರ್ವಹಿಸುವ ಅವಕಾಶ ದೊರಕಲಿದೆ.


ನಿಮ್ಮ ಜನ್ಮದಿನ 1-ನವೆಂಬರ್ ಈ ದಿನ ಅತ್ಯಂತ ಶುಭ ದಿನವಾಗಿದೆ. ನಿಮ್ಮ ಗ್ರಹ ಸಂಚಾರದ ಉತ್ತಮತೆಯಿಂದಾಗಿ ಗುರುಕೃಪೆಗೆ ಪಾತ್ರರಾಗಲಿದ್ದೀರಿ. ಯಾವುದೇ ತೊಂದರೆಗಳು ಬಾಧಿಸುವ ಸಾಧ್ಯತೆ ಕಂಡುಬರುವುದಿಲ್ಲ. ನೀವು ಬಯಸಿದ ಸ್ವಂತ ಉದ್ದಿಮೆಯನ್ನು ಪ್ರಾರಂಭಿಸಲು ಸಕಾಲವಾಗಿರುವುದು.

ಪದಬಂಧ 4765

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದಾಯಾದಿಗಳಲ್ಲಿನ ಜಗಳ (5)
3.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)
5.ಕಲೆಯನ್ನು ಆರಾಧಿಸುವುದು (5)
7.ಹತ್ತು ನೂರು ಇಲ್ಲಿದೆ (3)
8.ಹುಚ್ಚನ್ನು ಹೀಗೂ ಹೇಳುವರು (5)
10.ಕೊನೆಗೆ ಬೆಲೆಯಿಟ್ಟಾಗಲೇ ಈ ಸಲಿಗೆ! (3)
11.ದಾರ ಹಿಡಿದಿಹನಲ್ಲಾಈ ಬಾಧ್ಯಸ್ಥ! (5)
14.ಕಮ್ಮಾರನ ಒಲೆ (3)
15.ತರ್ಜುಮೆ ಮಾಡುವವನು (5)

ಮೇಲಿಂದ ಕೆಳಕ್ಕೆ
1.ಪಕ ಪಕ ನಕ್ಕಾಗ ಬಂದಿರುವ ನೆನೆಪು (3)
2.ಪಾಕದಲ್ಲಿನ ದೋಷ ಉಲ್ಟಾ ಕಾಣುತ್ತಿದೆಯಲ್ಲಾ? (3)
4.ಹೆಂಡತಿಯನ್ನು ಕಳೆದುಕೊಂಡವನು (3)
6.ಸತಿ ಸೂಚಿಸಿದ ಒಪ್ಪಿಗೆ (3)
7.ನೆಲವನ್ನು ಗೋಮಯದಿಂದ ಸಾರಿಸುವುದು (3)
8.ಕನ್ನಡಿಗನ ಬಳಿಯಿರುವ ಲೆನ್ಸ್ (3)
9.ಹೊಟ್ಟೆಕಿಚ್ಚು ಹೀಗೆ ಬಂದಿದೆ (3)
10.ಸರಕ್ಕನೆ ಹೋಗಿ ತಂದ ಸಾಮಾನು (3)
12.ತಿರುಗಿ ನಿಂತು ಈ ರೀತಿ ಚರ್ಚಿಸು (3)
13. ರಸಸ್ವಾದನೆ ಬಲ್ಲವನೀತ (3)



4764ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಜರಾಯು 4.ಪ್ರಧಾನ 5.ಜಬರ್ದಸ್ತಿ 6.ನಾಮಧೇಯ 8.ಕರ 9.ರಿಪು 13.ದಾರಿಹೋಕ 14.ಉಪಕಾರಿ 15.ಕೀಚಕ 16.ಕರಟ

ಮೇಲಿಂದ ಕೆಳಕ್ಕೆ: 1ಅಪ್ರಸ್ತುತ 2.ಜನನಾಯಕ 3.ಮರ್ದನ 5.ಜಯಭೇರಿ 8.ರಹದಾರಿ 10.ಪುಸ್ತಕಕೀಟ 11.ಮಧುಕರಿ 12.ವಿಪತ್ತು

ಸುಡೊಕು 5151

	3		6		2		4	
6		2				8		3
	4		3		9		1	
4		8			5		2	
				1		4		7
2		5	4				6	
			8		3		9	
7		3				6		5
	8		7		6		3	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5150 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ಪಿಎಂಸಿ ಗ್ರಾಹಕರಿಗೆ ಮೊದಲ ಹಂತದಲ್ಲಿ ಇಲ್ಲ ಪರಿಹಾರ

ನವದೆಹಲಿ (ಪಿಟಿಐ): ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಪಿಎಂಸಿ ಬ್ಯಾಂಕ್ ಗ್ರಾಹಕರಿಗೆ ₹ 5 ಲಕ್ಷದವರೆಗಿನ ವಿಮಾ ಸೌಲಭ್ಯವು ಮೊದಲ ಹಂತದಲ್ಲಿ ಸಿಗುವುದಿಲ್ಲ.

ಬಿಕ್ಕಟ್ಟಿಗೆ ಸಿಲುಕಿರುವ 20 ಬ್ಯಾಂಕ್‌ಗಳ ಪೈಕಿ ಪಿಎಂಸಿ ಹೊರತುಪಡಿಸಿ ಇತರ ಬ್ಯಾಂಕ್‌ಗಳಲ್ಲಿ ಹಣ ಠೇವಣಿ ಇರಿಸಿದ ಗ್ರಾಹಕರಿಗೆ ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮವು (ಡಿಐಸಿಜಿಸಿ) ಮೊದಲ ಹಂತದಲ್ಲಿ ವಿಮಾ ಮೊತ್ತವನ್ನು ನೀಡಲಿದೆ.

ಪಿಎಂಸಿ ಬ್ಯಾಂಕ್ ಸ್ವಾಧೀನಕ್ಕೆ ಸೆಂಟ್ರಂ ಫೈನಾನ್ಶಿಯಲ್ ಸರ್ವಿಸಸ್ ಮತ್ತು ಭಾರತ್‌ಪೆ ಕಂಪನಿಗಳಿಗೆ ಆರ್‌ಬಿಐ ಜೂನ್ ತಿಂಗಳಿನಲ್ಲಿ ತಾತ್ವಿಕ ಒಪ್ಪಿಗೆ ನೀಡಿದೆ. ಹಣಕಾಸಿನ ಬಿಕ್ಕಟ್ಟಿಗೆ ಸಿಲುಕಿರುವ ಒಟ್ಟು 20 ಬ್ಯಾಂಕ್‌ಗಳ ಪೈಕಿ ಐದು ಕರ್ನಾಟಕ ಮೂಲದವು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹460

ರಾಮನಗರ ರೇಷ್ಮೆ

ಮಿಶ್ರತಳಿ	₹287-482
ದ್ವಿತಳಿ	₹291-539

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಎಂಎಫ್: ತೆರಿಗೆ ಲೆಕ್ಕಾಚಾರ ಹೇಗೆ?



ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮುನ್ನ ಅದಕ್ಕೆ ಸಂಬಂಧಿಸಿದ ತೆರಿಗೆ ಲೆಕ್ಕಾಚಾರ ಅರಿಯುವುದು ಬಹಳ ಮುಖ್ಯ. ಒಂದೊಂದು ರೀತಿಯ ಫಂಡ್‌ಗೂ ಒಂದೊಂದು ರೀತಿಯಲ್ಲಿ ತೆರಿಗೆ ನಿಯಮವಿದೆ. ಈಕ್ವಿಟಿ, ಡೆಟ್ ಮತ್ತು ಹೈಬ್ರೀಡ್ ಮ್ಯೂಚುವಲ್ ಫಂಡ್‌ಗಳ ತೆರಿಗೆ ಲೆಕ್ಕಾಚಾರಗಳು ಹೇಗಿವೆ ಎಂಬುದನ್ನು ವಿವರವಾಗಿ ತಿಳಿಯೋಣ ಬನ್ನಿ.

ಈಕ್ವಿಟಿ ಮ್ಯೂಚುವಲ್ ಫಂಡ್: ಯಾವುದೇ ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿ ಲಾಭ ಗಳಿಸಿ, ಒಂದು ವರ್ಷದ (365 ದಿನಗಳ ಅವಧಿ) ಒಳಗೆ ಅದನ್ನು (ಯೂನಿಟ್‌ಗಳನ್ನು) ಮಾರಾಟ ಮಾಡಿದರೆ ಅಲ್ಪಾವಧಿ ಬಂಡವಾಳ ಗಳಿಕೆ (STCG) ತೆರಿಗೆ ಅನ್ವಯಿಸುತ್ತದೆ. ಶೇಕಡ 15ರಷ್ಟು ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ ಮೇಲೆ ಶೇಕಡ 4ರಷ್ಟು ಸೆಸ್ ಪಾವತಿಸಬೇಕಾಗುತ್ತದೆ. ಉದಾಹರಣೆಗೆ, ಒಂದು ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ₹ 30,000 ಹೂಡಿಕೆ ಮಾಡಿದ ಏಳು ತಿಂಗಳ ಅವಧಿಯಲ್ಲಿ ₹ 10 ಸಾವಿರ ಲಾಭ ಗಳಿಸಿದ್ದೀರಿ ಎಂದಿಟ್ಟುಕೊಳ್ಳಿ. ಒಂದೊಮ್ಮೆ ಲಾಭವನ್ನು ಕೂಡಲೇ ಪಡೆದುಕೊಳ್ಳಬೇಕು ಎಂದಾದಲ್ಲಿ ಶೇಕಡ 15ರಷ್ಟು, ಅಂದರೆ ₹ 1,500 ತೆರಿಗೆ ಪಾವತಿಸಬೇಕಾಗುತ್ತದೆ.

ಯಾವುದೇ ಕಂಪನಿಯ ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿ ಲಾಭ ಗಳಿಸಿದ್ದು, ಒಂದು ವರ್ಷದ ಬಳಿಕ ಅದನ್ನು ಮಾರಾಟ ಮಾಡಿದರೆ ₹ 1 ಲಕ್ಷ ಮೇಲ್ಪಟ್ಟ ಗಳಿಕೆಗೆ ಶೇ 10ರಷ್ಟು ದೀರ್ಘಾವಧಿ ಬಂಡವಾಳ ಗಳಿಕೆಗೆ (LTCG) ತೆರಿಗೆ ಅನ್ವಯಿಸುತ್ತದೆ. ಉದಾಹರಣೆ-1 ನೀವು ಈಕ್ವಿಟಿ ಮ್ಯೂಚುವಲ್ ಫಂಡ್ ಒಂದರಲ್ಲಿ ₹ 50,000 ಹೂಡಿಕೆ ಮಾಡಿ ₹ 30,000 ಲಾಭ ಗಳಿಸಿದ್ದೀರಿ ಎಂದಿಟ್ಟುಕೊಳ್ಳಿ. ಹೂಡಿಕೆ ಮಾಡಿದ 365 ದಿನಗಳ (ಒಂದು ವರ್ಷದ) ನಂತರ ಮ್ಯೂಚುವಲ್ ಫಂಡ್ ಮಾರಾಟ ಮಾಡಿದರೆ ನೀವು ಗಳಿಸಿರುವ ₹ 30,000 ಲಾಭಕ್ಕೆ ಯಾವುದೇ ತೆರಿಗೆ ಕಟ್ಟಬೇಕಿಲ್ಲ.

ಉದಾಹರಣೆ-2 ನೀವು ₹ 9 ಲಕ್ಷ ಮೌಲ್ಯದ ಈಕ್ವಿಟಿ ಮ್ಯೂಚುವಲ್ ಫಂಡ್ ಖರೀದಿಸಿ ₹ 10 ಲಕ್ಷ ಲಾಭ ಗಳಿಸಿದ್ದು, ಒಂದು ವರ್ಷದ ನಂತರ ಮಾರಾಟಕ್ಕೆ ನಿರ್ಧರಿಸಿದ್ದೀರಿ ಎಂದು ಭಾವಿಸೋಣ. ಈಗ ನೀವು ₹ 10 ಲಕ್ಷ ಲಾಭದಲ್ಲಿ ₹ 1 ಲಕ್ಷಕ್ಕೆ ಯಾವುದೇ ತೆರಿಗೆ ಕಟ್ಟಬೇಕಿಲ್ಲ. ಇನ್ನುಳಿದ ₹ 9 ಲಕ್ಷದ ಮೇಲೆ ಶೇ 10ರಷ್ಟು ತೆರಿಗೆ, ಅಂದರೆ ₹ 90 ಸಾವಿರ, ಪಾವತಿ ಮಾಡಬೇಕಾಗುತ್ತದೆ.

ಡೆಟ್ ಮ್ಯೂಚುವಲ್ ಫಂಡ್: ಡೆಟ್ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿ ಲಾಭ ಗಳಿಸಿದ್ದು ಮೂರು ವರ್ಷಗಳ ಒಳಗಾಗಿ ಮಾರಾಟ ಮಾಡಲು ತೀರ್ಮಾನಿಸಿದರೆ ಅದನ್ನು ಅಲ್ಪಾವಧಿ ಬಂಡವಾಳ ಗಳಿಕೆ ಎಂದು ಪರಿಗಣಿಸಲಾಗುತ್ತದೆ. ಈ ರೀತಿಯ ಗಳಿಕೆಗೆ ನಿಮ್ಮ ಆದಾಯ ತೆರಿಗೆಯ ಸ್ಲ್ಯಾಬ್‌ಗೆ ಅನುಗುಣವಾಗಿ ತೆರಿಗೆ ಕಟ್ಟಬೇಕಾಗುತ್ತದೆ. ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿ ಲಾಭ ಗಳಿಸಿದ್ದು ಮೂರು ವರ್ಷಗಳ ನಂತರ ಮಾರಾಟ ಮಾಡಿದರೆ ಅದನ್ನು ದೀರ್ಘಾವಧಿ ಬಂಡವಾಳ ಗಳಿಕೆ ಎನ್ನಲಾಗುತ್ತದೆ. ಇಲ್ಲಿ ಇಂಡೆಕ್ಸೇಷನ್ ಅಂದರೆ ಬೆಲೆ ಏರಿಕೆ ಲೆಕ್ಕಾಚಾರವನ್ನು ಪರಿಗಣಿಸಿ ಶೇಕಡ 20ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ.

ಹೈಬ್ರೀಡ್ ಮ್ಯೂಚುವಲ್ ಫಂಡ್: ಹೈಬ್ರೀಡ್ ಮ್ಯೂಚುವಲ್ ಫಂಡ್‌ನಲ್ಲಿ ಈಕ್ವಿಟಿ ಮತ್ತು ಡೆಟ್ ಹೂಡಿಕೆಗಳ ಮಿಶ್ರಣವಿರುದರಿಂದ ಇದರ ತೆರಿಗೆ ಲೆಕ್ಕಾಚಾರ ಕೊಂಚ ಭಿನ್ನ. ಹೈಬ್ರೀಡ್ ಫಂಡ್‌ನಲ್ಲಿ ಶೇ 65ಕ್ಕಿಂತ ಹೆಚ್ಚು ಹೂಡಿಕೆ ಈಕ್ವಿಟಿಯಲ್ಲಿ ಇದ್ದರೆ, ಅದಕ್ಕೆ ಈಕ್ವಿಟಿ ಮ್ಯೂಚುವಲ್ ಫಂಡ್‌ಗೆ ಅನ್ವಯಿಸುವ ಲೆಕ್ಕಾಚಾರ ಪ್ರಕಾರ ತೆರಿಗೆ ಕಟ್ಟಬೇಕಾಗುತ್ತದೆ. ಹೈಬ್ರೀಡ್ ಫಂಡ್‌ನಲ್ಲಿ ಶೇ 65ಕ್ಕಿಂತ ಕಡಿಮೆ ಪ್ರಮಾಣದ ಈಕ್ವಿಟಿಗಳಲ್ಲಿ ಇದ್ದರೆ, ಡೆಟ್ ಮ್ಯೂಚುವಲ್ ಫಂಡ್‌ಗೆ ಅನ್ವಯಿಸುವ ಲೆಕ್ಕಾಚಾರದ ಪ್ರಕಾರ ತೆರಿಗೆ ಪಾವತಿ ಮಾಡಬೇಕಾಗುತ್ತದೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಎರಡನೇ ವಾರವೂ ಕುಸಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೆಯ ವಾರವೂ ಕುಸಿತ ದಾಖಲಿಸಿವೆ. 59,306 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇಕಡ 2.49ರಷ್ಟು ಇಳಿಕೆ ಕಂಡಿದೆ. 17,671 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.44ರಷ್ಟು ತಗ್ಗಿದೆ. ವಾರದ ವಹಿವಾಟಿನ ಲೆಕ್ಕಾಚಾರಕ್ಕೆ ಬಂದರೆ, ಇದು ಎಂಟು ತಿಂಗಳ ಅವಧಿಯ ಅತ್ಯಂತ ದೊಡ್ಡ ಕುಸಿತವಾಗಿದೆ.

ಲಾಭಗಳಿಕೆಯ ಉದ್ದೇಶಕ್ಕಾಗಿ ಷೇರುಗಳ ಮಾರಾಟ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳಲ್ಲಿನ ಬಂಡವಾಳ ಹಿಂತೆಗೆತ, ಕಚ್ಚಾ ವಸ್ತುಗಳ ಬೆಲೆ ಏರಿಕೆಯಿಂದಾಗಿ ಕಂಪನಿಗಳ ಲಾಭಾಂಶದ ಮೇಲೆ ನಕಾರಾತ್ಮಕ ಪರಿಣಾಮ, ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳಿಗೆ ಮಿಶ್ರಫಲ, ಜಾಗತಿಕ ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳ ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣ.

ವಲಯವಾರು ಪ್ರಗತಿ ನೋಡಿದಾಗ, ಎಲ್ಲಾ ವಲಯಗಳಲ್ಲೂ ಕುಸಿತ ಕಂಡುಬಂದಿದೆ. ನಿಫ್ಟಿ ಎನರ್ಜಿ ಮತ್ತು ಖಾಸಗಿ ಬ್ಯಾಂಕ್ ಸೂಚ್ಯಂಕ ಕ್ರಮವಾಗಿ ಶೇ 4.3ರಷ್ಟು ಮತ್ತು ಶೇ 3.6ರಷ್ಟು ಇಳಿಕೆಯಾಗಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 15,702.26 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 9,427.23 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ–ಇಳಿಕೆ: ಅಲ್ಟ್ರಾ ಟೆಕ್ ಸಿಮೆಂಟ್ ಶೇ 7ರಷ್ಟು, ಐಸಿಐಸಿಐ ಬ್ಯಾಂಕ್ ಶೇ 5ರಷ್ಟು, ಯುಪಿಎಲ್ ಶೇ 4ರಷ್ಟು ಮತ್ತು ಏಷ್ಯನ್ ಪೇಂಟ್ಸ್ ಶೇ 4ರಷ್ಟು ಗಳಿಕೆ ಕಂಡಿವೆ. ಎಕ್ಸಿಸ್ ಬ್ಯಾಂಕ್ ಶೇ 9ರಷ್ಟು, ಅದಾನಿ ಪೋರ್ಟ್ಸ್ ಶೇ 9ರಷ್ಟು, ಎನ್‌ಟಿಪಿಸಿ ಶೇ 8ರಷ್ಟು, ಬಿಪಿಸಿಎಲ್ ಶೇ 7ರಷ್ಟು ಮತ್ತು ಕೋಲ್ ಇಂಡಿಯಾ ಶೇ 8ರಷ್ಟು ಇಳಿಕೆಯಾಗಿವೆ.

ಮುನ್ನೋಟ: ಷೇರು ಮಾರುಕಟ್ಟೆ ಅಲ್ಪ ಕುಸಿತ ಕಂಡಾಗಲೆಲ್ಲ ಖರೀದಿಗೆ ಮುಗಿಬೀಳುತ್ತಿದ್ದ ಹೂಡಿಕೆದಾರರು, ಈಗ ಸೂಚ್ಯಂಕಗಳು ಅಲ್ಪ ಏರಿಕೆ ಕಂಡಾಗಲೆಲ್ಲ ಷೇರುಗಳನ್ನು ಮಾರಾಟ ಮಾಡಿ ಲಾಭ ಗಳಿಕೆಗೆ ಮುಂದಾಗುತ್ತಿದ್ದಾರೆ. ಸದ್ಯದ ಸ್ಥಿತಿಯಲ್ಲಿ ಷೇರು ಮಾರುಕಟ್ಟೆಯಲ್ಲಿ ಏರಿಳಿತದ ಹಾದಿ ಮುಂದುವರಿಯಲಿದೆ. ನವೆಂಬರ್ 1ರಂದು ವಾಹನ ಮಾರಾಟದ ಅಂಕಿ-ಅಂಶ ಸಿಗಲಿದೆ. ದೀಪಾವಳಿ ಸಮಯದಲ್ಲಿ ಗ್ರಾಹಕರ ಮನಃಸ್ಥಿತಿ ಹೇಗಿದೆ ಎನ್ನುವ ಅಂದಾಜು ಪಡೆಯಲು ಮಾರುಕಟ್ಟೆ ಕಾತರವಾಗಿದೆ.

ಈ ವಾರ ಎಚ್‌ಡಿಎಫ್‌ಸಿ, ಐಆರ್‌ಸಿಟಿಸಿ, ಐಆರ್‌ಎಫ್‌ಸಿ, ಗ್ರಾಫೈಟ್ ಇಂಡಿಯಾ ಲಿ., ಜಿಂದಾಲ್ ಸ್ಟೀಲ್, ದೇವಯಾನಿ, ಎಂಟಾರ್ ಟೆಕ್ನಾಲಜೀಸ್, ಟಾಟಾ ಮೋಟರ್ಸ್, ಐಷರ್ ಮೋಟರ್ಸ್, ಗೋದ್ರೇಜ್ ಪ್ರಾಪರ್ಟೀಸ್, ಸೆಂಚುರಿ ಪ್ಲೈ, ಜಿಲೆಟ್ ಇಂಡಿಯಾ, ಏರ್‌ಟೆಲ್, ನೀಲ್‌ಕಮಲ್, ಕ್ವೆಸ್ಟ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಪೃಥ್ವಿ ಮಡಿಲಿಗೆ ಅಪ್ಪು

ಒಂದನೇ ಪುಟದಿಂದ

‘ವೀರಕನ್ನಡಿಗ’ನಿಗೆ ಮುಖ್ಯಮಂತ್ರಿ ಬೊಮ್ಮಾಯಿ ಸರ್ಕಾರಿ ಗೌರವ ಅರ್ಪಿಸಿ, ಪುನೀತ್ ಪಾರ್ಥಿವ ಶರೀರದ ಮೇಲಿದ್ದ ರಾಷ್ಟ್ರಧ್ವಜವನ್ನು ಪುನೀತ್ ಪತ್ನಿ ಅಶ್ವಿನಿ ಅವರಿಗೆ ಹಸ್ತಾಂತರಿಸಿದರು. ಈ ವೇಳೆ ‘ಭಾರತ್ ಮಾತಾ ಕಿ ಜೈ’ ಎಂಬ ಜೈಕಾರ ಮುಗಿಲುಮುಟ್ಟಿತ್ತು. ರಾಘವೇಂದ್ರ ರಾಜ್‌ಕುಮಾರ್ ಅವರ ಪುತ್ರ ವಿನಯ್ ಅವರು ಎದೆಯಲ್ಲಿ ನೋವಿನ ಬಂಡೆಯನ್ನೇ ಇಟ್ಟುಕೊಂಡು ಸಂಪ್ರದಾಯದಂತೆ ಚಿಕ್ಕಪ್ಪನ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿದರು.

ಮಡುಗಟ್ಟಿದ ಮೌನ, ಕಣ್ಣೊಳಗೆ ತುಂಬಿಕೊಂಡ ಜಲಪಾತವನ್ನೇ ಅದು ಮಿಟ್ಟುಕೊಂಡಂತಿದ್ದ ಅಪ್ಪು ಕುಟುಂಬ ಹಾಗೂ ಚಿತ್ರರಂಗದ ಸ್ನೇಹಿತರು ತದೇಕ ಚಿತ್ತದಿಂದ ನೋಡುತ್ತಿದ್ದರು. ಮುಖಗವ ಸಿನಡಿ ಪುನೀತ್ ಪುತ್ರಿಯರಾದ ಧೃತಿ, ವಂದಿತಾ ಕಣ್ಣಂಚಿನಲ್ಲಿದ್ದ ಹನಿಗಳೇ ನೋವು, ಒಳಗೊಳಗಿನ ಸಂಕಟ, ತಳಮಳವನ್ನು ಅಮ್ಮನ ಬಳಿ ಹೇಳಿಕೊಳ್ಳುವಂತಿತ್ತು. ಪರಸ್ಪರ ಸಂತೈಸುತ್ತಾ, ಸಾಂತ್ವನ ಹೇಳುತ್ತಾ ಪರಸ್ಪರ ಕೈಹಿಡಿದುಕೊಂಡೇ ಅಶ್ವಿನಿ, ಧೃತಿ ಹಾಗೂ ವಂದಿತಾ ಅನಾಥ ಭಾವವನ್ನು ಮರೆಯಲು ಯತ್ನಿಸುತ್ತಿದ್ದರು. ನೋವು ನುಂಗಿಕೊಂಡಿದ್ದರೂ ಅಪ್ಪುವಿನ ಮುಖವನ್ನು ನೋಡಿದ ಪ್ರತಿಕ್ಷಣವೂ ಶಿವರಾಜ್ ಕುಮಾರ್ ಕಣ್ಣೀರಾಗುತ್ತಿದ್ದರು.

ಒಂದು ಕ್ಷಣ ಮೌನ. ಮತ್ತೊಂದು ಕ್ಷಣ ದುಃಖ ಉಮ್ಮಳಿಸಿ ಕಟ್ಟೆಯೊಡೆಯುವ ಭಾವನೆ ಇಡೀ ಆವರಣವನ್ನೇ ತುಂಬಿಕೊಂಡಿತ್ತು. ಪುನೀತ್ ಪಾರ್ಥಿವ ಶರೀರ ಕಂಠೀರವ ಸ್ಟುಡಿಯೊಗೆ ಆಗಮಿಸುತ್ತಿದ್ದಂತೆಯೇ ಅಶ್ವಿನಿ ಅವರು, ಪುನೀತ್ ಹಣೆಗೆ ಮುತ್ತಿಕ್ಕಿ ಕಣ್ತುಂಬಿಕೊಂಡರು. ಧೃತಿ ಹಾಗೂ ವಂದಿತಾ ಅಪ್ಪನನ್ನು ಕೊನೆಗೊಮ್ಮೆ ಬಿಗಿದಪ್ಪಿಹಿಡಿದರು. ಇತ್ತ ಶಿವರಾಜ್‌ಕುಮಾರ್ ತಮ್ಮನ ನೆರಳಿನಿಂದ ಕದಲಲಿಲ್ಲ. ಕೊನೆಯ ಅಪ್ಪುಗೆ ನೀಡಲು ಮುಂದಾದ ಅವರು, ಸುಮಾರು ಹೊತ್ತು ತಮ್ಮನ ಪಾರ್ಥಿವ ಶರೀರವನ್ನು ಎದೆಗವಚಿಕೊಂಡು ನೋವನ್ನು ಬಸಿದೇ ಬಿಟ್ಟಂತೆ ಅಲ್ಲಿಂದ ಎದ್ದು ಬಂದ ದೃಶ್ಯ ಹೃದಯ ಕಿವುಚವಂತಿತ್ತು. ರಾಘವೇಂದ್ರ ರಾಜ್‌ಕುಮಾರ್ ಮೌನವಾಗಿಯೇ ಅಪ್ಪುವಿನೊಂದಿಗೆ ಸಂವಾದ ನಡೆಸುವಂತೆ ಕುಳಿತು ಬಿಟ್ಟಿದ್ದರು.

ಹೂವಿನ ಪಲ್ಲಕ್ಕಿಯಲ್ಲಿ ‘ಅರಸು’ ಮಲಗಿದಾಗ, ‘ಯುವರತ್ನ’ ‘ಪೃಥ್ವಿ’ ಸೇರಿದಾಗ ‘ಆಕಾಶ್’ದಲ್ಲಿ ಕಾರ್ಮೋಡ ಕವಿದಿತ್ತು. ‘ಪರಮಾತ್ಮ’ನೊಂದಿಗೆ ‘ರಾಜಕುಮಾರ’ನ ‘ಮೈತ್ರಿ’ಯಾಗಿತ್ತು. ಒಂದು ಹಿಡಿ ಮಣ್ಣು ಬೆಟ್ಟದಷ್ಟು ಭಾರವಾಗಿತ್ತು.

ಸಮಾಧಿಯ ಮೇಲೆ ತುಳಸಿಗಿಡ ನೆಟ್ಟು, ಪೂಜೆ ಸಲ್ಲಿಸಿ ತಿರುಗಿ ಹೊರಟ ಕುಟುಂಬದ ಮನಸ್ಸಿನಲ್ಲಿ ಅಪ್ಪುವಿನ ನಿಷ್ಕಲ್ಮಶ ನಗುವಿನ ಚಿತ್ರವಿತ್ತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಸೇರಿ ರಾಜಕೀಯ ಹಾಗೂ ಚಿತ್ರರಂಗದ ಪ್ರಮುಖರು ಇವೆಲ್ಲವುದಕ್ಕೂ ಸಾಕ್ಷಿಯಾದರು.

ಕಲ್ಲೇಶ್ವರ ದೇಗುಲ ಗೋಪುರ ಧ್ವಂಸ



ಕಲ್ಲೇಶ್ವರ ದೇವಸ್ಥಾನದ ಗೋಪುರ ಧ್ವಂಸಗೊಳಿಸಿದ್ದು, ಅವಶೇಷ ಬಿದ್ದಿರುವುದು

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಹಿರೇಹಡಗಲಿ ಗ್ರಾಮದ ಐತಿಹಾಸಿಕ ಕಲ್ಲೇಶ್ವರ ದೇವಸ್ಥಾನ ಗೋಪುರದ ಸ್ತೂಪವನ್ನು ಶನಿವಾರ ತಡರಾತ್ರಿ ಧ್ವಂಸಗೊಳಿಸಲಾಗಿದೆ. ನಿಧಿಗಳ್ಳರು ಈ ದುಷ್ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ. ಹರಪನಹಳ್ಳಿ ಡಿವೈಎಸ್ಪಿ ಹಾಲ ಮೂರ್ತಿರಾವ್, ಪಿಎಸ್‌ಐ ದಾದಾವಲಿ, ಪುರಾತತ್ವ ಇಲಾಖೆಯ ಹರಪನಹಳ್ಳಿ ಉಪ ವಿಭಾಗದ ಸಹಾಯಕ ಸಂರಕ್ಷಣಾಧಿಕಾರಿ ಸುನೀಲ್ ಕುಮಾರ್ ಪರಿಶೀಲನೆ ನಡೆಸಿದರು.



ಅನಂತಶ್ರೀ ಪ್ರಶಸ್ತಿ ಪ್ರದಾನ

ಸಿದ್ದಾಪುರ ತಾಲ್ಲೂಕಿನ ಕೊಳಗಿಯ ಅನಂತ ಯಕ್ಷಕಲಾ ಪ್ರತಿಷ್ಠಾನದ ವತಿಯಿಂದ ನೀಡುವ ‘ಅನಂತಶ್ರೀ ಪ್ರಶಸ್ತಿ’ಯನ್ನು ಯಕ್ಷಗಾನದ ಹಿರಿಯ ಕಲಾವಿದ ಗೋಡೆ ನಾರಾಯಣ ಹೆಗಡೆ ಮತ್ತು ಲಕ್ಷ್ಮೀ ಹೆಗಡೆ ದಂಪತಿಗೆ ಭಾನುವಾರ ಶಿರಸಿಯ ಟಿ.ಎಂ.ಎಸ್. ಸಭಾಂಗಣದಲ್ಲಿ ನಡೆದ ‘ಅನಂತೋತ್ಸವ’ ಕಾರ್ಯಕ್ರಮದಲ್ಲಿ ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಪ್ರದಾನ ಮಾಡಿದರು. ಪ್ರತಿಷ್ಠಾನದ ಅಧ್ಯಕ್ಷ ವಿ.ಎಂ.ಭಟ್ಟ, ಸಹಕಾರ ಧುರೀಣ ಆರ್.ಎಂ.ಹೆಗಡೆ ಬಾಳೆಸರ, ಗ್ರಾಮೀಣಾಭಿವೃದ್ಧಿ ಪಂಚಾಯತರಾಜ್ ವಿಕೇಂದ್ರೀಕರಣ ಸಮಿತಿ ರಾಜ್ಯ ಉಪಾಧ್ಯಕ್ಷ ಪ್ರಮೋದ ಹೆಗಡೆ, ಉಮಾಕಾಂತ ಭಟ್ಟ ಕೆರೆಕೈ, ಕೇಶವ ಹೆಗಡೆ ಕೊಳಗಿ, ಉದ್ಯಮಿ ಮೋಹನ ಹೆಗಡೆ ಹೆರವಟ್ಟಾ ಇದ್ದಾರೆ

ಮಂಗಳವಾರದ ನಂತರ ಸಾರ್ವಜನಿಕರಿಗೆ ದರ್ಶನ

ಒಂದನೇ ಪುಟದಿಂದ

‘ಈ ಭಾರ ನಮ್ಮ ಕೊನೆಯವರೆಗೂ ಇರಲಿದೆ. ತಂದೆ- ತಾಯಿಯನ್ನು ಇಷ್ಟಪಟ್ಟು ಅಪ್ಪು ಬೇಗ ಹೋಗಿದ್ದಾನೆ ಎನಿಸುತ್ತಿದೆ. ಅಭಿಮಾನಿಗಳ ಪ್ರೀತಿಗೆ ಏನೂ ಹೇಳಲು ಸಾಧ್ಯವಿಲ್ಲ. ಮೂರು ದಿನ ಕಳೆದರೂ ಲಕ್ಷಾಂತರ ಜನ ಇನ್ನೂ ಬರುತ್ತಿದ್ದಾರೆ. ಇದಕ್ಕಾಗಿಯೇ ಅಪ್ಪಾಜಿ ಅಭಿಮಾನಿ ದೇವರುಗಳು ಎಂದಿದ್ದರು. ಅಪ್ಪಾಜಿ ಅಂತ್ಯಕ್ರಿಯೆ ಸಂದರ್ಭದಲ್ಲಿ ಜನರೇ ಕಂಠೀರವ ಸ್ಟುಡಿಯೊ ಒಳಗೆ ಹೋಗಿ ಕುಟುಂಬಸ್ಥರಿಗಿಂತ ಮೊದಲೇ ಹಾಲು-ತುಪ್ಪ ಬಿಟ್ಟಿದ್ದರು. ಮಣ್ಣನ್ನೂ ತೋಡಿದ್ದರು. ಹೀಗಾಗಿ ಈ ಬಾರಿ ಹಾಗೆ ಆಗಬಾರದು ಎಂದು ಕುಟುಂಬಸ್ಥರು ಹಾಲು-ತುಪ್ಪ ಬಿಟ್ಟ ಬಳಿಕ ಸಾರ್ವಜನಿಕರಿಗೆ ಪ್ರವೇಶಕ್ಕೆ ಅವಕಾಶ ನೀಡಲಾಗುವುದು ಎಂದರು.

2021ರ ಏಪ್ರಿಲ್–ಸೆಪ್ಟೆಂಬರ್‌ನಲ್ಲಿ ₹ 1.71 ಲಕ್ಷ ಕೋಟಿ

ಎಕ್ಸೈಸ್ ಸುಂಕ: ನಾಲ್ಕು ಪಟ್ಟು ಹೆಚ್ಚು ಸಂಗ್ರಹ

ಮುಖ್ಯಾಂಶಗಳು

- ₹ 42,931 ಕೋಟಿ ಹೆಚ್ಚುವರಿ ಎಕ್ಸೈಸ್ ಸುಂಕ ಸಂಗ್ರಹ
- ಈ ವರ್ಷ ತೈಲ ಕಂಪನಿಗಳಿಗೆ ಪಾವತಿಸಬೇಕಿರುವುದು ₹ 10 ಸಾವಿರ ಕೋಟಿ
- ಆರ್ಥಿಕತೆಯಲ್ಲಿ ಚೇತರಿಕೆ; ಇಂಧನ ಬೇಡಿಕೆ ಹೆಚ್ಚಳ ಸಂಭವ

ನವದೆಹಲಿ (ಪಿಟಿಐ): ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಎಕ್ಸೈಸ್ ಸುಂಕ ಸಂಗ್ರಹವು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಮೊದಲ ಆರು ತಿಂಗಳಿನಲ್ಲಿ ಶೇಕಡ 33ರಷ್ಟು ಹೆಚ್ಚಾಗಿದೆ. ಕೋವಿಡ್‌ಗೂ ಮೊದಲಿನ ಮಟ್ಟಕ್ಕಿಂತ ಶೇ 79ರಷ್ಟು ಹೆಚ್ಚಿಗೆ ಎಕ್ಸೈಸ್ ಸುಂಕ ಸಂಗ್ರಹ ಆಗಿದೆ.

ಕೇಂದ್ರ ಹಣಕಾಸು ಸಚಿವಾಲಯದ ಲೆಕ್ಕಪತ್ರಗಳ ಮಹಾನಿಯಂತ್ರಕರ (ಸಿಜಿಎ) ಮಾಹಿತಿಯ ಪ್ರಕಾರ, 2020ರ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ಎಕ್ಸೈಸ್ ಸುಂಕ ಸಂಗ್ರಹವು ₹ 1.28 ಲಕ್ಷ ಕೋಟಿ ಆಗಿತ್ತು. ಇದು 2021ರ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ₹ 1.71 ಲಕ್ಷ ಕೋಟಿಗೆ ಏರಿಕೆ ಆಗಿದೆ.

2019ರ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ಎಕ್ಸೈಸ್ ಸುಂಕದಿಂದ ಸಂಗ್ರಹ ಆಗಿದ್ದ ಮೊತ್ತವು ₹ 95,930 ಕೋಟಿ. ಇದಕ್ಕೆ ಹೋಲಿಸಿದರೆ ಈ ವರ್ಷದ ಇದೇ ಅವಧಿಯಲ್ಲಿ ಶೇ 79ರಷ್ಟು ಹೆಚ್ಚು ಸುಂಕ ಸಂಗ್ರಹ ಆದಂತಾಗಿದೆ.

2020–21ನೇ ಹಣಕಾಸು ವರ್ಷದಲ್ಲಿ ಒಟ್ಟು ₹ 3.89 ಲಕ್ಷ ಕೋಟಿ ಎಕ್ಸೈಸ್ ಸುಂಕ ಸಂಗ್ರಹ ಆಗಿತ್ತು. ಇದು 2019–20ರಲ್ಲಿ ₹ 2.39 ಲಕ್ಷ ಕೋಟಿಯಷ್ಟು ಇತ್ತು ಎಂದು ಸಿಜಿಎ ಮಾಹಿತಿಯಲ್ಲಿದೆ.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಗೆ ಬಂದ ಬಳಿಕ ಪೆಟ್ರೋಲ್, ಡೀಸೆಲ್, ವಿಮಾನ ಇಂಧನ ಮತ್ತು ನೈಸರ್ಗಿಕ ಅನಿಲದ ಮೇಲೆ ಮಾತ್ರವೇ ಎಕ್ಸೈಸ್ ಸುಂಕ ವಿಧಿಸಲಾಗುತ್ತಿದೆ.

ತೈಲ ಬಾಂಡ್ ಮೊತ್ತಕ್ಕಿಂತ ನಾಲ್ಕು ಪಟ್ಟು ಹೆಚ್ಚು ಸಂಗ್ರಹ: ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳುಗಳಲ್ಲಿ ಹೆಚ್ಚುವರಿಯಾಗಿ ಸಂಗ್ರಹ ಆಗಿರುವ ಎಕ್ಸೈಸ್ ಸುಂಕದ ಮೊತ್ತ ₹ 42,931 ಕೋಟಿ. ಇದು, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಇಂಧನ ಸಬ್ಸಿಡಿಗಾಗಿ ನೀಡಿದ್ದ ತೈಲ ಬಾಂಡ್‌ಗಳ ಮರುಪಾವತಿಗೆ ಇಡೀ ವರ್ಷಕ್ಕೆ ಬೇಕಿರುವ ₹ 10,000 ಕೋಟಿಯ ಮೊತ್ತಕ್ಕಿಂತ ನಾಲ್ಕು ಪಟ್ಟು ಹೆಚ್ಚು.

ಎಕ್ಸೈಸ್ ಸುಂಕದ ಬಹುಪಾಲು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸುವ ಸುಂಕದಿಂದ ಬರುತ್ತದೆ. ಆರ್ಥಿಕತೆಯು ಚೇತರಿಕೆ ಕಾಣುತ್ತಿರುವುದರಿಂದ ಮಾರಾಟವೂ ಹೆಚ್ಚಾಗುತ್ತಿದೆ. ಹೀಗಾಗಿ ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವರ್ಷದಲ್ಲಿ ಸುಂಕದಿಂದ ಹೆಚ್ಚುವರಿಯಾಗಿ ₹ 1 ಲಕ್ಷ ಕೋಟಿ ಸಂಗ್ರಹ ಆಗಬಹುದು ಎಂದು ಉದ್ಯಮದ ಮೂಲಗಳು ಹೇಳಿವೆ.

ಎಲ್‌ಪಿಜಿ, ಸೀಮೆಎಣ್ಣೆ ಹಾಗೂ ಡೀಸೆಲ್‌ಅನ್ನು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಮಾರಾಟ ಮಾಡಲು, ಯುಪಿಎ ಸರ್ಕಾರವು ಒಟ್ಟು ₹ 1.34 ಲಕ್ಷ ಕೋಟಿ ಮೌಲ್ಯದ ತೈಲ ಬಾಂಡ್ ಅನ್ನು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಿಗೆ ನೀಡಿದೆ. ಈ ಮೊತ್ತದಲ್ಲಿ ₹ 10 ಸಾವಿರ ಕೋಟಿಯನ್ನು ಕೇಂದ್ರ ಸರ್ಕಾರವು ಕಂಪನಿಗಳಿಗೆ ಈ ವರ್ಷ ಪಾವತಿಸಬೇಕಿದೆ.

ದೇಶಿ ಮಾರುಕಟ್ಟೆಯಲ್ಲಿ ಇಂಧನ ದರವು ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ. ಹೀಗಿದ್ದರೂ ಅವುಗಳ ದರ ಕಡಿಮೆ ಮಾಡಿ ಜನಸಾಮಾನ್ಯರ ಮೇಲಿನ ಹೊರೆಯನ್ನು ತಗ್ಗಿಸಲು ಸಾಧ್ಯವಾಗದೇ ಇರುವುದಕ್ಕೆ ಕಾರಣ ತೈಲ ಬಾಂಡ್‌ಗಳು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಕೇಂದ್ರ ಇಂಧನ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ.

66 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ

ಒಂದನೇ ಪುಟದಿಂದ

‘ಪ್ರಶಸ್ತಿ ಪುರಸ್ಕೃತರ ಆಯ್ಕೆ ಪೂರ್ಣಗೊಂಡಿತ್ತು. ಆದರೆ, ಚಿತ್ರನಟ ಪುನೀತ್ ರಾಜ್‌ಕುಮಾರ್ ನಿಧನದ ಕಾರಣದಿಂದ ಪಟ್ಟಿ ಬಿಡುಗಡೆ ವಿಳಂಬವಾಯಿತು. ಸಮಾಜಮುಖಿ ಚಿಂತನೆಯ ಜತೆಗೆ ಸಮಾಜದ ವಿವಿಧ ವರ್ಗಗಳಿಗೆ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿರುವವರನ್ನು ಈ ಬಾರಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ’ ಎಂದು ಹೇಳಿದ್ದಾರೆ.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ನಡೆಯುವ ಸಮಾರಂಭದಲ್ಲಿ ಎಲ್ಲರಿಗೂ ಪ್ರಶಸ್ತಿ ಪ್ರದಾನ ಮಾಡಲಾಗುವುದು. ₹ 1 ಲಕ್ಷ ನಗದು, 25 ಗ್ರಾಂ ಚಿನ್ನದ ಪದಕವನ್ನು ಪ್ರಶಸ್ತಿ ಒಳಗೊಂಡಿದೆ.

ಸುಗಮ ಸಂಗೀತ, ಚಿತ್ರಕಲೆ ಕಡೆಗಣನೆಗೆ ಆಕ್ಷೇಪ: ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಆಯ್ಕೆಯಲ್ಲಿ ಸುಗಮ ಸಂಗೀತ ಮತ್ತು ಚಿತ್ರಕಲಾ ಕ್ಷೇತ್ರದ ಸಾಧಕರನ್ನು ಪರಿಗಣಿಸಿಲ್ಲ. ಸರ್ಕಾರದ ಈ ನಿಲುವಿಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಮತ್ತು ಚಿತ್ರ ಕಲಾವಿದ ಗಣಪತಿ ಅಗ್ನಿಹೋತ್ರಿ ಪ್ರಶಸ್ತಿ ಆಯ್ಕೆ ಸಮಿತಿಯ ತೀರ್ಮಾನವನ್ನು ಖಂಡಿಸಿದ್ದಾರೆ.



ಕ್ಯಾಪ್ಟನ್ ರಾಜಾರಾವ್



ಪಟ್ಟಂ ಅನಂತಪದ್ಮನಾಭ

ಸ್ವಾತಂತ್ರ್ಯದ ಅಮೃತ ಮಹೋತ್ಸವ ಪ್ರಶಸ್ತಿ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಹತ್ತು ಸಂಸ್ಥೆಗಳಿಗೆ ‘ಅಮೃತ ಮಹೋತ್ಸವದ ರಾಜ್ಯ ಪ್ರಶಸ್ತಿ’ ಪ್ರಕಟಿಸಲಾಗಿದೆ.

ಸಂಸ್ಥೆ	ಜಿಲ್ಲೆ
ಶ್ರೀ ವೀರೇಶ್ವರ ಪುಣ್ಯಾಶ್ರಮ ಅಂಧ ಮಕ್ಕಳ ಶಾಲೆ	ಗದಗ
ಕರ್ನಾಟಕ ಹಿಮೋ ಫೀಲಿಯಾ ಸೊಸೈಟಿ	ದಾವಣಗೆರೆ
ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ	ಕಲಬುರಗಿ
ಶ್ರೀ ರಾಮಕೃಷ್ಣಾಶ್ರಮ, ಮಂಗಳೂರು	ದಕ್ಷಿಣ ಕನ್ನಡ
ಆಲ್ ಇಂಡಿಯಾ ಜೈನ್ ಯೂತ್ ಫೆಡರೇಷನ್	ಹುಬ್ಬಳ್ಳಿ
ಅನುಗ್ರಹ ಕಣ್ಣಿನ ಆಸ್ಪತ್ರೆ	ವಿಜಯಪುರ
ಉತ್ಸವ ರಾಕ್ ಗಾರ್ಡನ್	ಹಾವೇರಿ
ಅದಮ್ಯ ಚೇತನ	ಬೆಂಗಳೂರು
ಸ್ಟೆಪ್ ಒನ್	ಬೆಂಗಳೂರು
ಬನಶಂಕರಿ ಮಹಿಳಾ ಸಂಘ	ಬೆಂಗಳೂರು

ಪ್ರಶಸ್ತಿ ಪುರಸ್ಕೃತರ ಪಟ್ಟಿ

ಹೆಸರು	ಜಿಲ್ಲೆ
ಸಾಹಿತ್ಯ	
ಮಹಾದೇವ ಶಂಕನಪುರ	ಚಾಮರಾಜನಗರ
ಪ್ರೊ.ಡಿ.ಟಿ. ರಂಗಸ್ವಾಮಿ	ಚಿತ್ರದುರ್ಗ
ಜಯಲಕ್ಷ್ಮೀ ಮಂಗಳಮೂರ್ತಿ	ರಾಯಚೂರು
ಅಜ್ಜಂಪುರ ಮಂಜುನಾಥ್	ಚಿಕ್ಕಮಗಳೂರು
ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ	ವಿಜಯಪುರ
ಸಿದ್ದಪ್ಪ ಬಿದರಿ	ಬಾಗಲಕೋಟೆ
ರಂಗಭೂಮಿ	
ಫಕೀರಪ್ಪ ರಾಮಪ್ಪ ಕೊಡಾಯಿ	ಹಾವೇರಿ
ಪ್ರಕಾಶ್ ಬೆಳವಾಡಿ	ಚಿಕ್ಕಮಗಳೂರು
ರಮೇಶ್ ಗೌಡ ಪಾಟೀಲ	ಬಳ್ಳಾರಿ
ಮಲ್ಲೇಶಯ್ಯ ಎನ್.	ರಾಮನಗರ
ಸಾವಿತ್ರಿ ಗೌಡರ್	ಗದಗ
ಜಾನಪದ	
ಆರ್.ಬಿ. ನಾಯಕ	ವಿಜಯಪುರ
ಗೌರಮ್ಮ ಹುಚ್ಚಪ್ಪ ಮಾಸ್ತರ್	ಶಿವಮೊಗ್ಗ
ದುರ್ಗಪ್ಪ ಚೆನ್ನದಾಸರ	ಬಳ್ಳಾರಿ
ಬನ್ನಂಜೆ ಬಾಬು ಅಮೀನ್	ಉಡುಪಿ
ಮಲ್ಲಿಕಾರ್ಜುನ ರಾಚಪ್ಪ ಮುದಕವಿ	ಬಾಗಲಕೋಟೆ
ವೆಂಕಪ್ಪ ಗೋವಿಂದಪ್ಪ ಭಜಂತ್ರಿ	ಧಾರವಾಡ
ಮಹಾರುದ್ರಪ್ಪ ವೀರಪ್ಪ ಇಟಗಿ	ಹಾವೇರಿ
ಸಂಗೀತ	
ತ್ಯಾಗರಾಜು (ನಾದಸ್ವರ)	ಕೋಲಾರ
ಹೆರಾಲ್ಡ್ ಸಿರಿಲ್ ಡಿಸೋಜ	ದಕ್ಷಿಣ ಕನ್ನಡ
ಶಿಲ್ಪಕಲೆ	
ಡಾ.ಜಿ. ಜ್ಞಾನಾನಂದ	ಚಿಕ್ಕಬಳ್ಳಾಪುರ
ವೆಂಕಣ್ಣ ಚಿತ್ರಗಾರ	ಕೊಪ್ಪಳ
ಸಮಾಜ ಸೇವೆ	
ಸೂಲಗಿತ್ತಿ ಯಮುನವ್ವ (ಸಾಲಮಂಟಪಿ)	ಬಾಗಲಕೋಟೆ
ಮದಲಿ ಮಾದಯ್ಯ	ಮೈಸೂರು
ಮುನಿಯಪ್ಪ ದೊಮ್ಮಲೂರು	ಬೆಂಗಳೂರು ನಗರ
ಬಸವಪ್ರಭು ಲಕಮಗೌಡ ಪಾಟೀಲ್ (ಬಿ.ಎಲ್. ಪಾಟೀಲ್)	ಬೆಳಗಾವಿ
ಡಾ.ಜೆ.ಎನ್. ರಾಮಕೃಷ್ಣೇಗೌಡ	ಮಂಡ್ಯ
ವೈದ್ಯಕೀಯ	
ಸುಲ್ತಾನ್‌ಬಿ ಜಗಳೂರು	ದಾವಣಗೆರೆ
ಡಾ. ವ್ಯಾಸ ದೇಶಪಾಂಡೆ (ವೇದವ್ಯಾಸ)	ಧಾರವಾಡ
ಡಾ.ಎ.ಆರ್. ಪ್ರದೀಪ್ (ದಂತ ವೈದ್ಯಕೀಯ)	ಬೆಂಗಳೂರು ನಗರ
ಡಾ. ಸುರೇಶ್ ರಾವ್	ದಕ್ಷಿಣ ಕನ್ನಡ
ಡ. ಎಂ.ಕೆ. ಸುದರ್ಶನ್	ಬೆಂಗಳೂರು
ಡಾ. ಶಿವನಗೌಡ ರುದ್ರಗೌಡ ರಾಮನಗೌಡರ್	ಧಾರವಾಡ
ಕ್ರೀಡೆ	
ರೋಹನ್ ಬೋಪಣ್ಣ	ಕೊಡಗು
ಕೆ. ಗೋಪಿನಾಥ್ (ಅಂಗವಿಕಲ)	ಬೆಂಗಳೂರು ನಗರ
ರೋಹಿತ್ ಕುಮಾರ್ ಕಟೀಲ್	ಉಡುಪಿ
ಎ.ನಾಗರಾಜ್ (ಕಬಡ್ಡಿ)	ಬೆಂಗಳೂರು ನಗರ

ಹೆಸರು	ಜಿಲ್ಲೆ
ಸಾಹಿತ್ಯ	
ಸಿನಿಮಾ	
ದೇವರಾಜ್	ಬೆಂಗಳೂರು ನಗರ
ಶಿಕ್ಷಣ	
ಸ್ವಾಮಿ ಲಿಂಗಪ್ಪ	ಮೈಸೂರು
ಶ್ರೀಧರ್ ಚಕ್ರವರ್ತಿ	ಧಾರವಾಡ
ಪ್ರೊ.ಪಿ.ವಿ. ಕೃಷ್ಣ ಭಟ್	ಶಿವಮೊಗ್ಗ
ಸಂಕೀರ್ಣ	
ಡಾ.ಬಿ. ಅಂಬಣ್ಣ	ವಿಜಯನಗರ
ಕ್ಯಾಪ್ಟನ್ ರಾಜಾರಾವ್	ಬಳ್ಳಾರಿ
ಗಂಗಾವತಿ ಪ್ರಾಣೇಶ್	ಕೊಪ್ಪಳ
ವಿಜ್ಞಾನ/ ತಂತ್ರಜ್ಞಾನ	
ಡಾ.ಎಚ್.ಎಸ್. ಸಾವಿತ್ರಿ	ಬೆಂಗಳೂರು ನಗರ
ಪ್ರೊ.ಜಿ.ಯು. ಕುಲಕರ್ಣಿ	ಬೆಂಗಳೂರು
ಕೃಷಿ	
ಡಾ.ಸಿ. ನಾಗರಾಜ್	ಬೆಂಗಳೂರು ಗ್ರಾಮಾಂತರ
ಗುರುಲಿಂಗಪ್ಪ ಮೇಲ್ದೊಡ್ಡಿ	ಬೀದರ್
ಶಂಕರಪ್ಪ ಅಮ್ಮನಘಟ್ಟ	ತುಮಕೂರು
ಪರಿಸರ	
ಮಹಾದೇವ ವೇಳಿಪಾ	ಉತ್ತರ ಕನ್ನಡ
ರಾಮಚಂದ್ರ ಬೈಕಂಪಾಡಿ	ದಕ್ಷಿಣ ಕನ್ನಡ
ಪತ್ರಿಕೋದ್ಯಮ	
ಪಟ್ಟಂ ಅನಂತ ಪದ್ಮನಾಭ	ಮೈಸೂರು
ಯು.ಬಿ. ರಾಜಲಕ್ಷ್ಮಿ	ಉಡುಪಿ
ನ್ಯಾಯಾಂಗ	
ಸಿ.ವಿ. ಕೇಶವಮೂರ್ತಿ	ಮೈಸೂರು
ಆಡಳಿತ	
ಎಚ್.ಆರ್. ಕಸ್ತೂರಿ ರಂಗನ್	ಹಾಸನ
ಸೈನಿಕ	
ನವೀನ್ ನಾಗಪ್ಪ	ಹಾವೇರಿ
ಯಕ್ಷಗಾನ	
ಗೋಪಾಲ ಆಚಾರ್ಯ	ಶಿವಮೊಗ್ಗ
ಹೊರನಾಡು ಕನ್ನಡಿಗ	
ಡಾ. ಸುನೀತಾ ಶೆಟ್ಟಿ	ಮುಂಬೈ
ಚಂದ್ರಶೇಖರ್ ಪಾಲ್ತಾಡಿ	ಮುಂಬೈ
ಡಾ. ಸಿದ್ದರಾಮೇಶ್ವರ ಕಂಟಿಕರ್	
ಪ್ರವೀಣ್ ಶೆಟ್ಟಿ	ದುಬೈ
ಪೌರ ಕಾರ್ಮಿಕ	
ರತ್ನಮ್ಮ ಶಿವಪ್ಪ ಬಬಲಾದ	ಯಾದಗಿರಿ
ಹೈದರಾಬಾದ್ ಕರ್ನಾಟಕ ಏಕೀಕರಣ ಹೋರಾಟ	
ಮಹದೇವಪ್ಪ ಕಡೆಚೂರು	ಕಲಬುರಗಿ
ಯೋಗ	
ಭ.ಮ. ಶ್ರೀಕಂಠ	ಶಿವಮೊಗ್ಗ
ಡಾ. ರಾಘವೇಂದ್ರ ಶೆಣೈ	ಬೆಂಗಳೂರು
ಉದ್ಯಮ	
ಶ್ಯಾಮರಾಜು	ಬೆಂಗಳೂರು

ಧರ್ಮಸ್ಥಳ: ಡಿ.3ಕ್ಕೆ ಲಕ್ಷದೀಪೋತ್ಸವ

ಪ್ರಜಾವಾಣಿ ವಾರ್ತೆ

ಉಜಿರೆ: ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಯ ಲಕ್ಷ ದೀಪೋತ್ಸವ ಡಿ.3ರಂದು ನಡೆಯಲಿದೆ.

ಲಕ್ಷ ದೀಪೋತ್ಸವ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ನವೆಂಬರ್ 29ರಿಂದ ಆರಂಭಗೊಂಡು, ಡಿ.4ರವರೆಗೆ ನಡೆಯಲಿವೆ. ನ.29ರಂದು ವಸಂತ ಕಟ್ಟೆ ಉತ್ಸವ, 30ರಂದು ಕೆರೆಕಟ್ಟೆ ಉತ್ಸವ, ಡಿ.1ರಂದು ಲಲಿತೋದ್ಯಾನ ಉತ್ಸವ, ಡಿ.2ರಂದು ಕಂಚಿಮಾರುಕಟ್ಟೆ ಉತ್ಸವ ಹಾಗೂ ಸರ್ವಧರ್ಮ ಸಮ್ಮೇಳನ ನಡೆಯಲಿವೆ.

ಡಿ.3ರಂದು ಗೌರಿಮಾರುಕಟ್ಟೆ ಉತ್ಸವ, ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಡಿ.4ರಂದು ಚಂದ್ರನಾಥ ಸ್ವಾಮಿಯ ಸಮವಸರಣ ಪೂಜೆಯೊಂದಿಗೆ ಲಕ್ಷದೀಪೋತ್ಸವ ಕಾರ್ಯಕ್ರಮಗಳು ಸಮಾಪನಗೊಳ್ಳಲಿವೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಬೌದ್ಧ ಧರ್ಮ ಸ್ವೀಕರಿಸಿದ 103 ಮಂದಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹಿಂದೂ ಧರ್ಮದ 103 ಜನರು ಮಹಾಬೋಧಿ ಸಂಸ್ಥೆಯ ಸಾರಥ್ಯದಲ್ಲಿ ಭಾನುವಾರ ಬೌದ್ಧ ಧರ್ಮ ದೀಕ್ಷೆ ಸ್ವೀಕರಿಸಿದರು. ಉಪಾಸಕ ಹಾಗೂ ಉಪಾಸಕಿಯರಾಗಿ ಬುದ್ಧನ ಮಾರ್ಗದಲ್ಲಿ ಸಾಗುವುದಾಗಿ ಪ್ರತಿಜ್ಞೆ ಮಾಡಿದರು.

ತರಾಸು ರಂಗಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಬೆಂಗಳೂರಿನ ಮಹಾಬೋಧಿ ಸಂಸ್ಥೆಯ ಆನಂದ ಬಂತೇಜಿ ಬೌದ್ಧ ಧರ್ಮ ದೀಕ್ಷೆ ನೀಡಿದರು. ಪಂಚಶೀಲ ತತ್ವಗಳನ್ನು ಪಠಿಸುವ ಮೂಲಕ ಹೊಸ ಧರ್ಮಕ್ಕೆ ಪದಾರ್ಪಣೆ ಮಾಡಿದರು. ಇದರಲ್ಲಿ ಪರಿಶಿಷ್ಟ ಜಾತಿಯ ಎಡಗೈ ಹಾಗೂ ಬಲಗೈ ಸಮುದಾಯದವರೇ ಹೆಚ್ಚಾಗಿದ್ದರು. ಗೊಲ್ಲ ಹಾಗೂ ಲಿಂಗಾಯತ ಸಮುದಾಯದ ತಲಾ ಒಬ್ಬರು ಬೌದ್ಧ ಧರ್ಮ ದೀಕ್ಷೆ ಪಡೆದರು.

‘ಇದೊಂದು ಜಾತಿಯಲ್ಲ, ಧರ್ಮ. ಜಾತಿ ಮನೋಭಾವದಿಂದ ಪ್ರತಿಯೊಬ್ಬರೂ ಹೊರಗೆ ಬರುವ ಅಗತ್ಯವಿದೆ. ಧರ್ಮ ದೀಕ್ಷೆಯನ್ನು ಸಾಮಾಜಿಕ ಪರಿವರ್ತನೆ ಎಂಬಂತೆ ಬಿಂಬಿಸಬೇಡಿ. ಇದರಲ್ಲಿ ಯಾವುದೇ ರಾಜಕೀಯ ಉದ್ದೇಶವಿಲ್ಲ’ ಎಂದು ಆನಂದ ಬಂತೇಜಿ ಹೇಳಿದರು.

ನಗರದಲ್ಲಿ ಸಂಚಾರ ದಟ್ಟಣೆ ಉಂಟಾಗದಂತೆ ಕ್ರಮ • ಅಧಿಕಾರಿಗಳ ಕಾರ್ಯಕ್ಕೆ ಅಪಾರ ಮೆಚ್ಚುಗೆ

ಯುದ್ಧೋಪಾದಿಯಲ್ಲಿ ಕೆಲಸ ಮಾಡಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ನಿಧನರಾದ ದಿನದಿಂದ ಅವರ ಅಂತ್ಯ ಸಂಸ್ಕಾರದವರೆಗೂ ಯುದ್ಧೋಪಾದಿಯಲ್ಲಿ ಕೆಲಸ ಮಾಡಿದ ಪೊಲೀಸ್ ಹಾಗೂ ಕಂದಾಯ ಇಲಾಖೆ, ಬಿಬಿಎಂಪಿ ಮತ್ತು ಬೆಂಗಳೂರು ನಗರ ಜಿಲ್ಲಾಡಳಿತದ ಕಾರ್ಯಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರು ಸಮನ್ವಯತೆಯಿಂದ ಕೆಲಸ ಮಾಡಿದ ಕಾರಣ ಪುನೀತ್ ಅವರ ಅಂತಿಮ ದರ್ಶನ, ಅಂತ್ಯ ಸಂಸ್ಕಾರ ಹಾಗೂ ಅಂತಿಮ ಯಾತ್ರೆ ಸುಸೂತ್ರವಾಗಿ ನೆರವೇರಿತು.

ಪುನೀತ್ ನಿಧನರಾದ ಸುದ್ದಿ ತಿಳಿದ ಕೂಡಲೇ ಕಂಠೀರವ ಕ್ರೀಡಾಂಗಣಕ್ಕೆ ಧಾವಿಸಿದ್ದ ಈ ಮೂವರು, ನಟನ ಅಂತಿಮ ದರ್ಶನಕ್ಕೆ ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಮಾಡಿದ್ದರು. ಅಷ್ಟೇ ಅಲ್ಲದೆ ಶುಕ್ರವಾರ ಮಧ್ಯಾಹ್ನದಿಂದ ಭಾನುವಾರದ ಮುಂಜಾವಿನವರೆಗೂ ಕ್ರೀಡಾಂಗಣದಲ್ಲೇ ಮೊಕ್ಕಾಂ ಹೂಡಿದ್ದರು.

ಸ್ವತಃ ಕಮಲ್ ಪಂತ್ ಅವರೇ ಅಭಿಮಾನಿಗಳನ್ನು ನಿಯಂತ್ರಿಸುತ್ತಿದ್ದ ದೃಶ್ಯಗಳು ಕಂಡುಬಂದಿದ್ದವು. ಮಂಜುನಾಥ್ ಅವರು ಮೂರೂ ದಿನವೂ ಮೈಕ್ ಹಿಡಿದು ನಿಂತುಬಿಟ್ಟಿದ್ದರು. ಶಾಂತ ರೀತಿಯಿಂದ ದರ್ಶನ ಪಡೆಯುವಂತೆ ಧ್ವನಿವರ್ಧಕದ ಮೂಲಕ ಅಭಿಮಾನಿಗಳಲ್ಲಿ ವಿನಂತಿಸುತ್ತಿದ್ದರು.



ಪುನೀತ್ ರಾಜ್‌ಕುಮಾರ್ ಅವರ ಪಾರ್ಥಿವ ಶರೀರದ ಅಂತಿಮ ಯಾತ್ರೆಯ ಸಂದರ್ಭದಲ್ಲಿ ಹೊರ ವರ್ತುಲ ರಸ್ತೆಯಲ್ಲಿ ರ್‍ಯಾಪಿಡ್ ಆ್ಯಕ್ಷನ್ ಪಡೆ ಬಿಗಿ ಬಂದೋಬಸ್ತ್ ಕಲ್ಪಿಸಿತ್ತು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಪುನೀತ್ ನಿಧನದ ಬಳಿಕ ನಗರದ ವಿವಿಧ ಸ್ಥಳಗಳಲ್ಲಿ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸ್ ಸಿಬ್ಬಂದಿ ಹಗಲಿರುಳೆನ್ನದೆ ದಕ್ಷತೆಯಿಂದ ಕೆಲಸ ಮಾಡಿದ್ದರು.

ಡಿಸಿಪಿ, ಎಸಿಪಿಗಳ ನೇತೃತ್ವದಲ್ಲಿ ಕಂಠೀರವ ಕ್ರೀಡಾಂಗಣದ ಸುತ್ತ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಪ್ರವಾಹದ ಹಾಗೆ ಕ್ರೀಡಾಂಗಣದತ್ತ ಧಾವಿಸುತ್ತಿದ್ದ ಅಭಿಮಾನಿಗಳನ್ನು ಬಿಸಿಲು, ಮಳೆ, ದೂಳಿಗೂ ಜಗ್ಗದೆ ಪೊಲೀಸರು ಸಮರ್ಥವಾಗಿ ನಿಯಂತ್ರಿಸಿದರು. ಶವ ಪೆಟ್ಟಿಗೆಯ ಎದುರು ಕದಲದೇ ನಿಂತುಬಿಡುತ್ತಿದ್ದ ಅಭಿಮಾನಿಗಳನ್ನು ಸಾಗ ಹಾಕಿ ಸುಸ್ತಾದರೂ ದಣಿವಾರಿಸಿಕೊಳ್ಳದೆ ಮತ್ತೆ ಪುಟಿದೆದ್ದು ನಿಂತುಬಿಡುತ್ತಿದ್ದ ದೃಶ್ಯಗಳು ಗೋಚರಿಸಿದವು. ಈ ವಿಚಾರದಲ್ಲಿ ಮಹಿಳಾ ಸಿಬ್ಬಂದಿಯೂ ಹಿಂದೆ ಬೀಳಲಿಲ್ಲ.

ನೂಕು ನುಗ್ಗಲಿನಲ್ಲಿ ಕಾಲಿಗೆ ಹಾಕಿದ್ದ ಬೂಟುಗಳು ಕಿತ್ತುಹೋದವು. ಕೈ ಕಾಲಿಗೆ ಗಾಯವಾದವು. ಅದ್ಯಾವುದಕ್ಕೂ ಪೊಲೀಸರು ಜಗ್ಗದೆ ಕೆಲಸ ಮಾಡಿದ್ದು ಹಲವರ ಮೆಚ್ಚುಗೆಗೆ ಕಾರಣವಾಯಿತು. ನಗರದಲ್ಲಿ ಸಂಚಾರ ದಟ್ಟಣೆ ಉಂಟಾಗದಂತೆ ಸಂಚಾರ ಪೊಲೀಸರು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದರು.

ಪುನೀತ್ ನಿಧನದ ವಿಷಯ ತಿಳಿದೊಡನೆ ಕಮಲ್ ಪಂತ್ ಅವರು ನಗರದಾದ್ಯಂತ ಭಾನುವಾರ ಮಧ್ಯಾಹ್ನದವರೆಗೂ ಮದ್ಯ ಮಾರಾಟ ನಿಷೇಧಿಸಿ ಆದೇಶ ಹೊರಡಿಸಿದ್ದರಿಂದ ಮುಂದಾಗಬಹುದಾಗಿದ್ದ ಅನಾಹುತಗಳು ತಪ್ಪಿದವು ಎಂದು ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಭದ್ರತಾ ಸಿಬ್ಬಂದಿ ಕೈ ಕುಲುಕಿ ಅಭಿನಂದನೆ

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅಂತಿಮ ಯಾತ್ರೆ ಹಾಗೂ ಅಂತ್ಯ ಸಂಸ್ಕಾರದ ವೇಳೆ ಸೂಕ್ತ ಭದ್ರತೆ ಕೈಗೊಂಡಿದ್ದ ಸಿಬ್ಬಂದಿಯನ್ನು ಕಮಿಷನರ್ ಕಮಲ್ ಪಂತ್ ಕೈಕುಲುಕಿ ಅಭಿನಂದಿಸಿದರು.

ಅಂತಿಮ ಯಾತ್ರೆ ಸಾಗಿದ್ದ ರಸ್ತೆಯುದ್ದಕ್ಕೂ ನಸುಕಿನಿಂದಲೇ 12 ಸಾವಿರಕ್ಕೂ ಹೆಚ್ಚು ಪೊಲೀಸರು ಭದ್ರತೆ ಹೊಣೆ ಹೊತ್ತಿದ್ದರು. ಎಲ್ಲರನ್ನೂ ಖುದ್ದಾಗಿ ಭೇಟಿಯಾಗಿ ಹಸ್ತಲಾಘವ ನೀಡಿದರು. ಉತ್ತಮ ಸೇವೆಗಾಗಿ ಪ್ರಶಂಸನೀಯ ಪತ್ರ ನೀಡುವುದಾಗಿಯೂ ಹೇಳಿದರು.

ತಂದೆಯ ಹಾದಿ ಬಿಡದ ಪುನೀತ್: ಡಿಕೆಶಿ

‘ಪುನೀತ್ ರಾಜ್‌ಕುಮಾರ್ ಅವರನ್ನು ರಾಜಕೀಯಕ್ಕೆ ಕರೆತರಲು ನಾನು ಮತ್ತು ಸಿದ್ದರಾಮಯ್ಯ ಪ್ರಯತ್ನಿಸಿದ್ದೆವು. ಆದರೆ, ನಾನು ತಂದೆಯ ಹಾದಿ ಬಿಡುವುದಿಲ್ಲ ಎಂದು ಹೇಳಿ ರಾಜಕೀಯದಿಂದ ಅವರು ದೂರ ಉಳಿದರು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಮರಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಪುನೀತ್ ಅವರಿಗೆ ಸಂತಾಪ ಸೂಚಿಸಿ ಮಾತನಾಡಿದ ಅವರು, ‘ಅವರ ಅತ್ತಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದಾಗಲೂ, ತಂದೆಯ ದಾರಿ ಬಿಡುವುದಿಲ್ಲ ಎಂಬ ಬದ್ಧತೆಗಾಗಿ ಪ್ರಚಾರಕ್ಕೂ ಹೋಗಲಿಲ್ಲ’ ಎಂದರು.

ಪುನೀತ್ ಜೊತೆಗಿನ ಒಡನಾಟವನ್ನು ಮೆಲುಕು ಹಾಕಿದ ಅವರು, ‘ಜೀವನದಲ್ಲಿ ಜನರಿಗೆ ಏನು ಸಹಾಯ ಮಾಡಬೇಕೊ ಅದನ್ನು ಅವರು ಮಾಡಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಅಮಿತಾಬ್ ಬಚ್ಚನ್ ಅವರ ಎತ್ತರಕ್ಕೆ ಬೆಳೆಯುವ ಸಾಮರ್ಥ್ಯ ಪುನೀತ್ ಅವರಲ್ಲಿತ್ತು’ ಎಂದರು.

‘ಪುನೀತ್ ಕುಟುಂಬದವರು ಅಜಾತಶತ್ರುಗಳು. ಅವರಲ್ಲಿ ಸಾಮಾಜಿಕ ಕಳಕಳಿ, ಬದ್ಧತೆ ಇದೆ. ಸರ್ಕಾರದ ಕಾರ್ಯಕ್ರಮಗಳಿಗೆ ಯಾವುದೇ ಹಣ ಪಡೆಯದೆ ರಾಯಭಾರಿಯಾಗಿ ಅವರು ಕೆಲಸ ಮಾಡಿದ್ದರು. ನನ್ನ ಚಿತ್ರಮಂದಿರಗಳ ಸಮೂಹದ ಅನಾವರಣಕ್ಕೆ ಬರಬೇಕು ಎಂದು ಇತ್ತೀಚೆಗೆ ಅವರನ್ನು ಆಹ್ವಾನಿಸಿದ್ದೆ. ಅವರೊಂದಿಗಿನ ಒಡನಾಟವನ್ನು ನೆನಪಿಸಿಕೊಂಡರೆ ಮನಸ್ಸಿಗೆ ತೀವ್ರ ನೋವಾಗುತ್ತದೆ. ಭಗವಂತ ಎಷ್ಟು ಕ್ರೂರಿ ಎಂಬುದಕ್ಕೆ ಪುನೀತ್ ನಿಧನ ಸಾಕ್ಷಿ’ ಎಂದು ಭಾವುಕರಾದರು.

ಕಾಂಗ್ರೆಸ್ ವಿರುದ್ಧ ದಲಿತರ ಎತ್ತಿಕಟ್ಟಲು ಬಿಜೆಪಿ ಯತ್ನ: ಸಿದ್ದರಾಮಯ್ಯ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿ.ಆರ್. ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಸೋಲಿಸಿತ್ತು ಎಂದು ಅಪಪ್ರಚಾರ ಮಾಡುವ ಮೂಲಕ ದಲಿತರನ್ನು ಕಾಂಗ್ರೆಸ್ ವಿರುದ್ಧ ಎತ್ತಿಕಟ್ಟಲು ಬಿಜೆಪಿಯವರು ಪ್ರಯತ್ನಿಸುತ್ತಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಕಾಂಗ್ರೆಸ್ ನಾಯಕಿ ಇಂದಿರಾ ಗಾಂಧಿ ಅವರ ಹುತಾತ್ಮ ದಿನ ಹಾಗೂ ಹಿರಿಯ ಕಾಂಗ್ರೆಸ್ ನಾಯಕ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನ ಪ್ರಯುಕ್ತ ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನೆಹರು ಅವರಿಗೆ ಅಗೌರವ ತೋರಿಸುವ ಬಿಜೆಪಿಯವರು ಪಟೇಲರ ವಿಷಯದಲ್ಲಿ ರಾಜಕೀಯ ಮಾಡುತ್ತಿದ್ದಾರೆ’ ಎಂದೂ ಟೀಕಿಸಿದರು.

‘ದೇಶದ ಸ್ವಾತಂತ್ರ್ಯದ ಬಗ್ಗೆ, ದೇಶಭಕ್ತಿಯ ಬಗ್ಗೆ ಮಾತನಾಡುತ್ತ ತಮ್ಮಿಂದಲೇ ದೇಶ ಉಳಿದಿದೆ ಎಂದು ಬಿಂಬಿಸಲು ನರೇಂದ್ರ ಮೋದಿ ಹೊರಟಿದ್ದಾರೆ. ಕಾಂಗ್ರೆಸ್‌ನವರು ಮಾತ್ರ ದೇಶಕ್ಕಾಗಿ ಪ್ರಾಣ, ಆಸ್ತಿ ಪಾಸ್ತಿ ತ್ಯಾಗ ಮಾಡಿದ್ದಾರೆ. ಕಾಂಗ್ರೆಸ್ಸಿಗೂ ಮತ್ತು ಬಿಜೆಪಿಗೂ ಇರುವ ವ್ಯತ್ಯಾಸವಿದು’ ಎಂದರು.

‘ಕಾಂಗ್ರೆಸ್ ಪಕ್ಷ ಏನು ಮಾಡಿದೆ ಎಂದು ಮೋದಿ ಕೇಳುತ್ತಾರೆ. ದೇಶ ಕಟ್ಟಿದ್ದು, ಅಭಿವೃದ್ಧಿ ಮಾಡಿದ್ದು ಕಾಂಗ್ರೆಸ್ ಪಕ್ಷ. ಕಾಂಗ್ರೆಸ್‌ನವರು ಸ್ವಾತಂತ್ರ್ಯಕ್ಕಾಗಿ ಹೋರಾಡದೇ ಇದ್ದಿದ್ದರೆ, ದೇಶಕ್ಕೆ ಸ್ವಾತಂತ್ರ್ಯ ಬರುತ್ತಿತ್ತೆ. ಮೋದಿ ಪ್ರಧಾನಿ ಆಗುತ್ತಿದ್ದರೇ’ ಎಂದೂ ಪ್ರಶ್ನಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಬಡವರ ಹಸಿವು ನೀಗಿಸಲು ನಾವು (ಕಾಂಗ್ರೆಸ್) ಇಂದಿರಾ ಕ್ಯಾಂಟೀನ್ ತೆರೆದರೆ, ಅದರ ಹೆಸರು ಬದಲಿಸಲು ಮುಂದಾಗುತ್ತಾರಲ್ಲ ಅವರು (ಬಿಜೆಪಿಯವರು) ಎಂಥ ಕ್ರೂರಿಗಳು. ಹೆಸರು ಬದಲಿಸಲು ಮುಂದಾಗಿದ್ದರೆ ನಮ್ಮ ಶಕ್ತಿ ಏನು ಎಂದು ತೋರಿಸುತ್ತಿದ್ದೆವು. ಆದರೆ, ಯೋಜನೆಯನ್ನೇ ನಿಲ್ಲಿಸಿ ಬಡವರ ಹೊಟ್ಟೆ ಮೇಲೆ ಕಲ್ಲು ಹಾಕಿದ್ದಾರೆ’ ಎಂದು ದೂರಿದರು.

ಸಂಗೀತ ವಿದ್ವಾಂಸ ವಿದ್ಯಾಭೂಷಣ ಅಭಿಮತ • ‘ಕಾಳಿಂಗ ನಾವಡ ಪ್ರಶಸ್ತಿ’ ಪ್ರದಾನ

‘ಯಕ್ಷಗಾನ ಎಲ್ಲವನ್ನೂ ಒಳಗೊಂಡ ಪರಿಪೂರ್ಣ ಕಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಗೀತ, ನೃತ್ಯ, ಸಾಹಿತ್ಯ, ಮಾತು, ವೇಷ ಭೂಷಣ ಸೇರಿದಂತೆ ಎಲ್ಲವನ್ನೂ ಒಳಗೊಂಡ ಪರಿಪೂರ್ಣ ಕಲೆ ಯಕ್ಷಗಾನ. ಇದನ್ನು ಮುಂದಿನ ಜನಾಂಗಕ್ಕೆ ಪರಿಚಯಿಸುವ ಕೆಲಸಗಳು ಹೆಚ್ಚಬೇಕು’ ಎಂದು ಸಂಗೀತ ವಿದ್ವಾಂಸ ವಿದ್ಯಾಭೂಷಣ ಅಭಿಮತ ವ್ಯಕ್ತಪಡಿಸಿದರು.

ಇಲ್ಲಿನ ಕಲಾ ಕದಂಬ ಆರ್ಟ್ ಸೆಂಟರ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಂಕರ ಭಾಗವತ ಯಲ್ಲಾಪುರ ಅವರಿಗೆ ‘ಕಾಳಿಂಗ ನಾವಡ’ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಬೆಳ್ಳಿತಟ್ಟೆಯನ್ನು ಒಳಗೊಂಡಿದೆ.

‘ಪೌರಾಣಿಕ ನೆಲೆಗಟ್ಟನ್ನು ಹೊಂದಿರುವ ಯಕ್ಷಗಾನದಿಂದ ಯುವಜನರಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಲು ಸಾಧ್ಯ. ಆದ್ದರಿಂದ ಈ ಕಲೆಯನ್ನು ಮತ್ತಷ್ಟು ಮುಂದಕ್ಕೆ ಕರೆದೊಯ್ಯಬೇಕಾಗಿದೆ. ಮಕ್ಕಳಿಗೆ ಈ ಕಲೆಯ ಪಾಠವಾಗಬೇಕು. ವಿದೇಶಗಳಲ್ಲಿಯೂ ಯಕ್ಷಗಾನಕ್ಕೆ ಮನ್ನಣೆ ದೊರೆಯುತ್ತಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಯಕ್ಷಗಾನ ಸಂಶೋಧಕ ಆನಂದರಾಮ ಉಪಾಧ್ಯ, ‘ಕಲೆಯು ಬದುಕಿನ ಸೂಕ್ಷ್ಮತೆಯನ್ನು ತಿಳಿಸಿಕೊಡುತ್ತದೆ. ಹಾಗಾಗಿ, ಮಕ್ಕಳಿಗೆ ಕಲೆಯಲ್ಲಿಯೂ ಆಸಕ್ತಿ ಬೆಳೆಸಬೇಕು. ಯಕ್ಷಗಾನವು ಆಧುನಿಕ ಕಾಲಕ್ಕೆ ತನ್ನನ್ನು ತಾನು ತೆರೆದುಕೊಳ್ಳಬೇಕೆಂಬ ಜಿಜ್ಞಾಸೆಯಿದೆ. ಕಲೆಯ ಮೂಲ ಆಶಯಕ್ಕೆ ಧಕ್ಕೆ ಆಗದಂತೆ ಇದನ್ನು ಮುನ್ನಡೆಸುವ ಜವಾಬ್ದಾರಿ ಯಕ್ಷ ಸಂಸ್ಥೆಗಳಿಗಿವೆ’ ಎಂದರು.

‘ಕಾಳಿಂಗ ನಾವಡ ಅವರದ್ದು ಎಲ್ಲಾ ಕಾಲಕ್ಕೂ ಸ್ಮರಿಸಿಕೊಳ್ಳುವ ವ್ಯಕ್ತಿತ್ವ. ಅವರ ಗಾಯನಕ್ಕೆ ಕಿವಿ ತೆರೆಸುವ ಶಕ್ತಿಯಿತ್ತು’ ಎಂದು ಹೇಳಿದರು.

ಕನ್ನಡ ಪ್ರಭ ಮತ್ತು ಸುವರ್ಣ ನ್ಯೂಸ್ ಪ್ರಧಾನ ಸಂಪಾದಕ ರವಿ ಹೆಗಡೆ, ‘ನಾವಡ ಅವರಿಗಿಂತ ಮೊದಲು ಹಲವು ಭಾಗವತರು ಬಂದು ಹೋಗಿದ್ದಾರೆ. ಆದರೆ, ಇವರು ಸದಾ ನಮ್ಮ ನೆನಪಿನಲ್ಲಿ ಉಳಿಯುತ್ತಾರೆ. ಸಾಂಪ್ರದಾಯಿಕ ಶೈಲಿಯಲ್ಲಿಯೇ ಹೊಸತನವನ್ನು ಅವರು ತಂದಿದ್ದರು’ ಎಂದು ಅವರು ಹೇಳಿದರು.

ಪ್ರಶಸ್ತಿ ಪುರಸ್ಕೃತ ಶಂಕರ ಭಾಗವತ ಯಲ್ಲಾಪುರ ಮಾತನಾಡಿ, ‘ಯಕ್ಷಗಾನ ಕಲೆ ಉಳಿಯುವವರೆಗೂ ನಾವಡ ಅವರ ಹೆಸರು ಚಿರಸ್ಥಾಯಿ. ಯಕ್ಷಗಾನದಲ್ಲಿ ನಾವಡ, ಸಂಗೀತದಲ್ಲಿ ಭೀಮಸೇನ ಜೋಶಿ ಅವರನ್ನು ಮೀರಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.



ಕಲಾಕದಂಬ ಆರ್ಟ್ ಸೆಂಟರ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಂಕರ ಭಾಗವತ ಯಲ್ಲಾಪುರ ಅವರಿಗೆ ‘ಕಾಳಿಂಗ ನಾವಡ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. (ಎಡದಿಂದ) ಕಲಾಕದಂಬ ಆರ್ಟ್ ಸೆಂಟರ್‌ನ ಕಾರ್ಯದರ್ಶಿ ಮುರಳೀಧರ ನಾವಡ , ಕಾಳಿಂಗ ನಾವಡ ಅವರ ಸಹೋದರಿ ಸುಶೀಲಾ ಉರಾಳ, ರವಿ ಹೆಗಡೆ, ವಿದ್ಯಾಭೂಷಣ, ಆನಂದರಾಮ ಉಪಾಧ್ಯ, ಸೆಂಟರ್‌ನ ನಿರ್ದೇಶಕ ರಾಧಾಕೃಷ್ಣ ಉರಾಳ ಮತ್ತು ಕರಬ ಪ್ರತಿಷ್ಠಾನದ ಅಧ್ಯಕ್ಷ ದೇವರಾಜ ಕರಬ ಇದ್ದರು – ಪ್ರಜಾವಾಣಿ ಚಿತ್ರ

ಅಪರಾಧ ಸುದ್ದಿ

ಗೋಮಾಂಸ ಮಾರಾಟ ಮಳಿಗೆಗಳ ಮೇಲೆ ದಾಳಿ

ಬೆಂಗಳೂರು: ಎಂ.ಎಸ್.ಪಾಳ್ಯ ಬಳಿ ಅಕ್ರಮವಾಗಿ ಗೋಮಾಂಸ ಮಾರುತ್ತಿದ್ದ ಮಳಿಗೆಗಳ ಮೇಲೆ ಪೊಲೀಸರ ಜೊತೆಯಲ್ಲಿ ‘ಗೋ ಜ್ಞಾನ’ ಫೌಂಡೇಷನ್ ಸದಸ್ಯರು ಭಾನುವಾರ ದಾಳಿ ಮಾಡಿದರು.

ಪ್ರಾರ್ಥನಾ ಮಂದಿರ ಕಟ್ಟಡದಲ್ಲಿರುವ 9 ಮಳಿಗೆಗಳಲ್ಲಿ ಅಕ್ರಮವಾಗಿ ಗೋವುಗಳನ್ನು ಸಾಯಿಸಿ, ಮಾಂಸ ಮಾರಾಟ ಮಾಡುತ್ತಿದ್ದ ಆರೋಪ ಕೇಳಿಬಂದಿತ್ತು.

ಈ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ‘ಗೋ ಜ್ಞಾನ’ ಫೌಂಡೇಷನ್ ಸದಸ್ಯರು, ಯಲಹಂಕ ಠಾಣೆಗೆ ದೂರು ನೀಡಿದರು. ನಂತರ, ಪೊಲೀಸರ ಜೊತೆಯಲ್ಲೇ ಮಳಿಗೆಗಳ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿದರು.

‘ಮಳಿಗೆಯಲ್ಲಿ ಆಗತಾನೇ ಗೋವುಗಳನ್ನು ಸಾಯಿಸಿ, ಮಾಂಸದ ತುಂಡುಗಳನ್ನು ನೇತು ಹಾಕಲಾಗಿತ್ತು. ಮಳಿಗೆಯ ಹಲವೆಡೆ ರಕ್ತ ಹರಿಯುತ್ತಿತ್ತು. ಪ್ರಶ್ನಿಸಲು ಹೋದ ನಮ್ಮ ಮೇಲೆಯೂ ಮಳಿಗೆ ಕೆಲಸಗಾರರು ಹಲ್ಲೆಗೆ ಯತ್ನಿಸಿದರು’ ಎಂದು ಫೌಂಡೇಶನ್ ಸದಸ್ಯರೊಬ್ಬರು ಹೇಳಿದರು.

ಕಿಟಕಿಯಲ್ಲಿಟ್ಟಿದ್ದ ಕೀ ಬಳಸಿ ಕಳವು

ಬೆಂಗಳೂರು: ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಪ್ರವೀಣ್ (23) ಹಾಗೂ ಸೂರ್ಯ (19) ಬಂಧಿತರು. ಅವರಿಂದ ₹ 6.50 ಲಕ್ಷ ಮೌಲ್ಯದ 150 ಗ್ರಾಂ ಚಿನ್ನಾಭರಣ ಹಾಗೂ 148 ಗ್ರಾಂ ತೂಕದ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ದೂರುದಾರರು, ಅ. 6ರಂದು ಮಧ್ಯಾಹ್ನ 12.30 ಗಂಟೆಗೆ ಮನೆಗೆ ಬೀಗ ಹಾಕಿ, ಅದರ ಕೀಯನ್ನು ಕಿಟಕಿಯಲ್ಲಿಟ್ಟು ಹೊರಗಡೆ ಹೋಗಿದ್ದರು. ಮಧ್ಯಾಹ್ನ 2 ಗಂಟೆಗೆ ವಾಪಸು ಬಂದು ನೋಡಿದಾಗ, ಬಾಗಿಲು ತೆರೆದಿತ್ತು. ಒಳಗೆ ಹೋಗಿ ಗಮನಿಸಿದಾಗ, ಕಳ್ಳತನ ಆಗಿರುವುದು ಗೊತ್ತಾಗಿತ್ತು.’ ಎಂದರು.

ಕೆಲಸದ ಮಹಿಳೆಗಾಗಿ ಗಲಾಟೆ ಸಹೋದ್ಯೋಗಿ ಕೊಲೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಕೇಶವೇಲು ರೆಡ್ಡಿ (37) ಎಂಬುವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಅವರ ಸಹೋದ್ಯೋಗಿಯೇ ಕೃತ್ಯ ಎಸಗಿ ಪರಾರಿಯಾಗಿರುವುದು ತನಿಖೆಯಿಂದ ಗೊತ್ತಾಗಿದೆ.

‘ಶ್ರೀರಾಮಪುರದ ನಿವಾಸಿ ಕೇಶವೇಲು, ಕಾಮಾಕ್ಷಿಪಾಳ್ಯದ ‘ಮಾಲ್ಗುಡೀಸ್ ಫಾರ್ಮ್’ ಮಳಿಗೆಯಲ್ಲಿ ಮೇಲ್ವಿಚಾರಕನಾಗಿ ಕೆಲಸ ಮಾಡುತ್ತಿದ್ದರು. ಅದೇ ಮಳಿಗೆಯಲ್ಲಿ ಆರೋಪಿ ರಾಜೇಶ್ ಅಲಿಯಾಸ್ ಶಿವಣ್ಣ ಸಹ ಮೇಲ್ವಿಚಾರಕನಾಗಿದ್ದ. ಇಬ್ಬರ ನಡುವೆ ಆತ್ಮೀಯತೆ ಇತ್ತು. ಆಗಾಗ ಒಟ್ಟಿಗೆ ಸೇರಿ ಮದ್ಯದ ಪಾರ್ಟಿ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಶುಕ್ರವಾರ ರಾತ್ರಿ (ಅ. 29) ಮಳಿಗೆ ಸಮೀಪದ ಕೊಠಡಿಯಲ್ಲಿ ಇಬ್ಬರು ಸೇರಿ ಮದ್ಯ ಕುಡಿಯುತ್ತಿದ್ದರು. ಮಳಿಗೆಯಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬರ ವಿಷಯ ಪ್ರಸ್ತಾಪವಾಗಿ, ಮಾತಿನ ಚಕಮಕಿ ನಡೆದಿತ್ತು.’

‘ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ ಇಬ್ಬರೂ ಕೈ ಕೈ ಮಿಲಾಯಿಸಿದ್ದರು. ಈರುಳ್ಳಿ ಕತ್ತರಿಸಲು ಇರಿಸಿದ್ದ ಚಾಕು ತೆಗೆದುಕೊಂಡಿದ್ದ ರಾಜೇಶ್, ಕೇಶವೇಲು ಅವರ ದೇಹದ ಹಲವೆಡೆ ಇರಿದು ಪರಾರಿಯಾಗಿದ್ದಾನೆ. ಈ ಬಗ್ಗೆ ಪ್ರತ್ಯಕ್ಷದರ್ಶಿಯೊಬ್ಬರು ಮಾಹಿತಿ ನೀಡಿದ್ದಾರೆ’ ಎಂದರು.

‘ತೀವ್ರ ರಕ್ತಸ್ರಾವದಿಂದ ಕೇಶವೇಲು ಸ್ಥಳದಲ್ಲೇ ಮೃತಪಟ್ಟಿದ್ದರು. ಸ್ಥಳೀಯರು ನೀಡಿದ್ದ ಮಾಹಿತಿಯಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು’ ಎಂದರು.

‘ರಾಜೇಶ್‌ನೇ ಕೃತ್ಯ ಎಸಗಿರುವುದಕ್ಕೆ ಪುರಾವೆಗಳು ಸಿಕ್ಕಿವೆ. ಬಂಧನ ಭೀತಿಯಲ್ಲಿ ಆತ ನಗರ ತೊರೆದಿರುವ ಮಾಹಿತಿ ಇದೆ’ ಎಂದೂ ತಿಳಿಸಿದರು.

‘ಅನುವಾದ ಕೃತಿಗೆ ಅಕಾಡೆಮಿಯಲ್ಲಿ ಸಿಗದ ಮನ್ನಣೆ’

ಪತ್ರಕರ್ತ ಜೆ.ಎನ್. ರಂಗನಾಥರಾವ್ ಬೇಸರ • ಶಾ. ಬಾಲೂರಾವ್ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಹಿತ್ಯ, ಸಂಸ್ಕೃತಿಯ ಪಾಲನೆ ಮತ್ತು ಪೋಷಣೆಯ ಹೊಣೆಹೊತ್ತ ಅಕಾಡೆಮಿಗಳಲ್ಲಿ ಆಂಗ್ಲ ಭಾಷೆಯಿಂದ ಭಾರತೀಯ ಭಾಷೆಗಳಿಗೆ ಅನುವಾದಗೊಂಡ ಕೃತಿಗಳಿಗೆ ಸೂಕ್ತ ಮನ್ನಣೆ ಸಿಗುತ್ತಿಲ್ಲ’ ಎಂದು ಪತ್ರಕರ್ತ ಜಿ.ಎನ್. ರಂಗನಾಥರಾವ್ ಬೇಸರ ವ್ಯಕ್ತಪಡಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಸೀತಾ’ ಅನುವಾದಿತ ಕೃತಿಗೆ (ಮೂಲ ಕೃತಿಯ ಲೇಖಕ ದೇವದತ್ತ ಪಟ್ಟನಾಯಕ) ಪತ್ರಕರ್ತ ಪದ್ಮರಾಜ ದಂಡಾವತಿ ಅವರಿಗೆ ‘ಶಾ. ಬಾಲೂರಾವ್ ಅನುವಾದ ಪ್ರಶಸ್ತಿ’ ಹಾಗೂ ‘ಋಷ್ಯಶೃಂಗ’ ಕೃತಿಗೆ ಹರೀಶ್ ಹಾಗಲವಾಡಿ ಅವರಿಗೆ ‘ಶಾ. ಬಾಲೂರಾವ್ ಯುವ ಬರಹಗಾರ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ವಿವಿಧ ಕಾರಣಗಳಿಂದ ನಮಗೆ ಎಲ್ಲ ಭಾರತೀಯ ಭಾಷೆಗಳನ್ನು ಕಲಿಯಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಬಹುತೇಕ ಭಾರತೀಯ ಭಾಷಾ ಕೃತಿಗಳು ಇಂಗ್ಲಿಷ್ ಮೂಲಕವೇ ಬರುತ್ತವೆ. ಆದ್ದರಿಂದ ಮಹತ್ವದ ಕೃತಿಗಳನ್ನು ಇಂಗ್ಲಿಷ್‌ನಿಂದಲೇ ಕನ್ನಡಕ್ಕೆ ಅನುವಾದ ಮಾಡಿ, ಕನ್ನಡಿಗರಿಗೆ ನೀಡುವುದು ಅನಿವಾರ್ಯ. ಆದರೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿಗೆ ಭಾರತೀಯ ಭಾಷೆಗಳಿಂದ ಪ್ರಕಟಗೊಂಡ ಕೃತಿಗಳನ್ನು ಮಾತ್ರ ಪರಿಗಣಿಸಲಾಗುತ್ತಿದೆ. ಇಂಗ್ಲಿಷ್‌ನಿಂದ ಅನುವಾದಗೊಂಡ ಕೃತಿಗಳು ಅಕಾಡೆಮಿಯ ಮುಖ್ಯ ಪ್ರಶಸ್ತಿಗಳ ಮನ್ನಣೆಗೆ ನಗಣ್ಯವಾಗಿವೆ. ಇನ್ನಾದರೂ ವಿಷಯ ವಸ್ತುಗಳನ್ನು ಪರಿಗಣಿಸಿ, ಪ್ರಶಸ್ತಿ ನೀಡಲಿ’ ಎಂದು ಹೇಳಿದರು.



ಬಿ.ಎಂ.ಶ್ರೀ ಪ್ರತಿಷ್ಠಾನ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪದ್ಮರಾಜ ದಂಡಾವತಿ ಅವರಿಗೆ ‘ಶಾ.ಬಾಲೂರಾವ್ ಅನುವಾದ ಪ್ರಶಸ್ತಿ’ ಹಾಗೂ ಹರೀಶ್ ಹಾಗಲವಾಡಿ ಅವರಿಗೆ ‘ಶಾ.ಬಾಲೂರಾವ್ ಯುವಬರಹಗಾರ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಸಂಸ್ಥೆಯ ಗೌರವ ಕಾರ್ಯದರ್ಶಿ ಎಚ್‌.ಎಸ್‌.ಎಂ. ಪ್ರಕಾಶ್, ಜಿ.ಎನ್. ರಂಗನಾಥರಾವ್, ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಹಾಗೂ ಗೌರವ ಕೋಶಾಧಿಕಾರಿ ಎಸ್‌.ಅನಿಲ್ ಕುಮಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪುರಸ್ಕೃತ ಪದ್ಮರಾಜ ದಂಡಾವತಿ, ‘ಆಂಗ್ಲ ಭಾಷೆಯಲ್ಲಿ ದೇವದತ್ತ ಪಟ್ಟನಾಯಕ ರಚಿಸಿದ ಈ ಕೃತಿಯನ್ನು ಕನ್ನಡಕ್ಕೆ ಅನುವಾದ ಮಾಡಿದ ಬಳಿಕ ಪತ್ರಿಕೆಗಳಲ್ಲಿ ಉತ್ತಮ ವಿಮರ್ಶೆಗಳು ಬಂದಿದ್ದವು. ‘ಮಹಾಭಾರತ’ದಷ್ಟೇ ‘ರಾಮಾಯಣವೂ’ ಅತ್ಯಂತ ಕ್ಲಿಷ್ಟವಾದ ಸಂಕೀರ್ಣ ಕೃತಿ ಎನ್ನುವುದು ‘ಸೀತೆ’ ಕೃತಿಯನ್ನು ಓದಿದರೆ ತಿಳಿಯುತ್ತದೆ. ಎರಡೂ ಮಹಾಕಾವ್ಯವನ್ನೂ ಮತ್ತೆ ಮತ್ತೆ ಓದುತ್ತಾ ಇರಬೇಕು. ಇವು ನಮಗೆ ಜೀವನ ಪಾಠವನ್ನು ಕಲಿಸುತ್ತವೆ’ ಎಂದು ಅವರು ತಿಳಿಸಿದರು.

ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರಾದ ಪ್ರೊ.ಎಂ.ಎಸ್. ರಘುನಾಥ್ ಅವರು ‘ಸೀತೆ’ ಕೃತಿಯ ಬಗ್ಗೆ ಹಾಗೂ ಆನಂದರಾಮ ಉಪಾಧ್ಯ ಅವರು ‘ಋಷ್ಯಶೃಂಗ’ ಕೃತಿಯ ಬಗ್ಗೆ ಮಾತನಾಡಿ, ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಸ್ಯೆ ಅಲ್ಲಗಳೆಯುತ್ತಿರುವ ಕೇಂದ್ರ, ರಾಜ್ಯ ಸರ್ಕಾರ

ಹಲವೆಡೆ ಡಿಎಪಿ, ಯೂರಿಯಾ ಕೊರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂಗಾರು ಹಂಗಾಮಿನ ಬಿತ್ತನೆ ಚುರುಕಾಗುತ್ತಿರುವ ಸಮಯದಲ್ಲೇ ರಾಜ್ಯದ ಹಲವೆಡೆ ಡಿಎಪಿ, ಯೂರಿಯಾ ರಸಗೊಬ್ಬರಗಳ ಕೊರತೆ ಸೃಷ್ಟಿಯಾಗಿದೆ. ದಿನದಿಂದ ದಿನಕ್ಕೆ ರಸಗೊಬ್ಬರ ಸಮಸ್ಯೆ ಹೆಚ್ಚುತ್ತಿದ್ದು, ರೈತರು ದಿನವಿಡೀ ಅಂಗಡಿಗಳ ಎದುರು ಕಾದು ನಿಲ್ಲಬೇಕಾದ ಸ್ಥಿತಿ ಕೆಲವು ಜಿಲ್ಲೆಗಳಲ್ಲಿ ಇದೆ.

ಬಾಗಲಕೋಟೆ, ಉತ್ತರ ಕನ್ನಡ, ಚಿಕ್ಕಮಗಳೂರು, ರಾಮನಗರ, ರಾಯಚೂರು, ಚಾಮರಾಜನಗರ, ಮಂಡ್ಯ, ಕಲಬುರಗಿ, ಯಾದಗಿರಿ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ರಸಗೊಬ್ಬರದ ಬೇಡಿಕೆ ಮತ್ತು ಪೂರೈಕೆಯಲ್ಲಿ ವ್ಯತ್ಯಾಸ ಉಂಟಾಗಿದೆ. ಕೆಲವೆಡೆ ಡಿಎಪಿ ರಸಗೊಬ್ಬರದ ಕೊರತೆ ತೀವ್ರವಾಗಿದ್ದು, ಪರ್ಯಾಯವಾಗಿ ಕಾಂಪ್ಲೆಕ್ಸ್ ರಸಗೊಬ್ಬರ ಬಳಸುವಂತೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳು ರೈತರ ಮನವೊಲಿಕೆಗೆ ಕಸರತ್ತು ಮಾಡುತ್ತಿದ್ದಾರೆ.

‘ರಾಜ್ಯದಲ್ಲಿ ರಸಗೊಬ್ಬರದ ಕೊರತೆಯೇ ಇಲ್ಲ. ಬೇಡಿಕೆಗಿಂತ ಹೆಚ್ಚು ದಾಸ್ತಾನು ಇದೆ’ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದ್ದರು. ರಾಜ್ಯದ ಕೃಷಿ ಸಚಿವ ಬಿ.ಸಿ. ಪಾಟೀಲ ಇದನ್ನು ಪುನರುಚ್ಚರಿಸಿದ್ದರು.

ಕೇಂದ್ರ ರಸಗೊಬ್ಬರ ಇಲಾಖೆ ವೆಬ್‌ಸೈಟ್

ಕರ್ನಾಟಕದಲ್ಲಿ ರಸಗೊಬ್ಬರ ದಾಸ್ತಾನು (ಅಕ್ಟೋಬರ್ ಅಂತ್ಯಕ್ಕೆ ಲಕ್ಷ ಟನ್‌ಗಳಲ್ಲಿ)

ಗೊಬ್ಬರ	ಬೇಡಿಕೆ	ದಾಸ್ತಾನು
ಯೂರಿಯಾ	1.21	3.69
ಡಿಎಪಿ	0.33	0.71
ಎಂಒಪಿ	0.11	0.51
ಎನ್‌ಪಿಕೆ	1.16	5.01

ಕೇಂದ್ರ ಸರ್ಕಾರದ ರಸಗೊಬ್ಬರ ಇಲಾಖೆಯ ವೆಬ್‌ಸೈಟ್‌ನಲ್ಲಿರುವ ಮಾಹಿತಿಯೂ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದ ದಾಸ್ತಾನು ಇದೆ ಎಂದೇ ಹೇಳುತ್ತಿದೆ. ಆದರೆ, ಸ್ಥಳೀಯವಾಗಿ ರೈತರಿಗೆ ಅಗತ್ಯವಿರುವಷ್ಟು ರಸಗೊಬ್ಬರ ದೊರೆಯುತ್ತಿಲ್ಲ. ಕೆಲವು ಭಾಗಗಳಲ್ಲಿ ಯೂರಿಯಾ ಕೊರತೆ ಇದ್ದರೆ, ಇನ್ನು ಕೆಲವೆಡೆ ಡಿಎಪಿ ಕೊರತೆ ತಲೆದೋರಿದೆ.

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ಡಿಎಪಿ ಕೊರತೆ ತೀವ್ರವಾಗಿದ್ದು, ರೈತರು ಇಡೀ ದಿನ ಅಂಗಡಿಗಳ ಮುಂದೆ ಕಾದು ನಿಂತಿರುವ ದೃಶ್ಯ ಕಂಡುಬರುತ್ತಿದೆ. ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲೂ ಅದೇ ಪರಿಸ್ಥಿತಿ ಇದೆ. ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನಲ್ಲೂ ಕೊರತೆ ಎದುರಾಗಿದ್ದು, ರಸಗೊಬ್ಬರ ಅಂಗಡಿಗಳ ಮುಂದೆ ಉದ್ದನೆಯ ಸಾಲು ನಿತ್ಯವೂ ಕಾಣುತ್ತಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನಲ್ಲಿ ರಸಗೊಬ್ಬರದ ಕೊರತೆ ಹೆಚ್ಚಾಗಿದ್ದು, ಕಾಳಸಂತೆಯಲ್ಲಿ ದುಬಾರಿ ದರಕ್ಕೆ ಮಾರಾಟ ಮಾಡುತ್ತಿರುವ ದೂರುಗಳಿವೆ. ಯೂರಿಯಾ ಬೇಡಿಕೆ ಹೆಚ್ಚಿದ್ದು, ಇತರ ಗೊಬ್ಬರ ಖರೀದಿಸಿದವರಿಗೆ ಮಾತ್ರ ಯೂರಿಯಾ ನೀಡಲಾಗುತ್ತಿದೆ. ಯಾದಗಿರಿ ಜಿಲ್ಲೆಯಲ್ಲಿ ಶೇಂಗಾ ಬಿತ್ತನೆ ಮಾಡಿರುವ ರೈತರು ರಸಗೊಬ್ಬರಕ್ಕಾಗಿ ಪರದಾಡುತ್ತಿದ್ದಾರೆ.

ರಾಯಚೂರು ಜಿಲ್ಲೆಯಲ್ಲಿ ಪೊಟ್ಯಾಷ್ ಮತ್ತು ಡಿಎಪಿಗೆ 15 ದಿನಗಳಲ್ಲಿ ಬೇಡಿಕೆ ಹೆಚ್ಚಲಿದೆ. ಆದರೆ, ಎರಡೂ ರಸಗೊಬ್ಬರ ದಾಸ್ತಾನು ಇಲ್ಲ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ತಿಂಗಳು ರಸಗೊಬ್ಬರದ ತೀವ್ರ ಅಭಾವ ಎದುರಾಗಿತ್ತು. ಕೆಲವು ಸಹಕಾರ ಸಂಸ್ಥೆಗಳ ಎದುರು ರೈತರು ಗಲಾಟೆ ಮಾಡಿದ್ದ ಪ್ರಕರಣಗಳೂ ನಡೆದಿದ್ದವು. ಈ ತಿಂಗಳು ಹೆಚ್ಚುವರಿ ರಸಗೊಬ್ಬರ ಪೂರೈಕೆ ಮಾಡಿರುವುದರಿಂದ ಪರಿಸ್ಥಿತಿ ತುಸು ಸುಧಾರಿಸಿದೆ. ಆದರೆ, ಪೂರೈಕೆಯಲ್ಲಿ ವ್ಯತ್ಯಯ ಉಂಟಾದರೆ ಮತ್ತೆ ಸಮಸ್ಯೆ ಎದುರಾಗಬಹುದು ಎಂಬ ಆತಂಕವಿದೆ.

ಚಿಕ್ಕಮಗಳೂರಿನಲ್ಲಿ ಕಾಫಿ ಬೆಳೆಗಾರರಿಗೆ ಬೇಡಿಕೆಗೆ ತಕ್ಕಷ್ಟು ಡಿಎಪಿ ಮತ್ತು ಪೊಟ್ಯಾಷ್ ಗೊಬ್ಬರ ಲಭ್ಯವಾಗುತ್ತಿಲ್ಲ. ರಾಮನಗರ ಜಿಲ್ಲೆಯಲ್ಲಿ ರಸಗೊಬ್ಬರದ ಕೊರತೆ ನಿರಂತರವಾಗಿ ಮುಂದುವರಿದಿದೆ. ಗೊಬ್ಬರದ ಅಂಗಡಿಗಳ ಎದುರು ರೈತರ ಸಾಲು ಕಡಿಮೆಯಾಗುತ್ತಿಲ್ಲ.

ಈ ಕುರಿತು ಕೃಷಿ ಸಚಿವರು ಮತ್ತು ಕೃಷಿ ಇಲಾಖೆ ಅಧಿಕಾರಿಗಳ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಯಾರೂ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

ಕೋವಿಡ್: 29.88 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ 292 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.88 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.06 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.27 ರಷ್ಟು ವರದಿಯಾಗಿದೆ. 5 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬಳ್ಳಾರಿ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲಿ 137 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50 ರ ಗಡಿಯೊಳಗೆ ಇವೆ.

ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 8,644 ಕ್ಕೆ ಇಳಿಕೆ ಕಂಡಿದೆ. 18 ಜಿಲ್ಲೆಗಳಲ್ಲಿ 50 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ. ಬೆಂಗಳೂರಿನಲ್ಲಿ ಗರಿಷ್ಠ (6,531) ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ 345 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.41 ಲಕ್ಷ ದಾಟಿದೆ.

11 ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರಿನಲ್ಲಿ ಏಳು ಮಂದಿ, ಮೈಸೂರಿನಲ್ಲಿ ಇಬ್ಬರು, ಚಿಕ್ಕಬಳ್ಳಾಪುರ ಹಾಗೂ ಧಾರವಾಡದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 3.76 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,082ಕ್ಕೆ ಏರಿಕೆಯಾಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ


12,51,872 ▲ ಒಟ್ಟು ಸೋಂಕಿತರು
12,51,735 ನಿನ್ನೆಯ ವಿವರ

6,531 ▼	12,29,059 ▲	16,281 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	137 ▼
ಗುಣಮುಖ	204 ▲
ಸಾವು	07 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಅಸ್ಗರ್‌ಗೆ ಅಫ್ಗಾನ್ ಜಯದ ಕಾಣಿಕೆ

ಅಬುಧಾಬಿ (ಎಎಫ್‌ಪಿ): ಅಂತರ ರಾಷ್ಟ್ರೀಯ ಟ್ವೆಂಟಿ–20 ಕ್ರಿಕೆಟ್‌ಗೆ ವಿದಾಯ ಹೇಳಿದ ಮಾಜಿ ನಾಯಕ ಅಸ್ಗರ್ ಅಫ್ಗಾನ್ ಅವರಿಗೆ ಅಫ್ಗಾನಿಸ್ತಾನ ಗೆಲುವಿನ ಉಡುಗೊರೆ ನೀಡಿತು. ನಮೀಬಿಯಾ ಎದುರು ಭಾನುವಾರ ನಡೆದ ಎರಡನೇ ಗುಂಪಿನ ಪಂದ್ಯದಲ್ಲಿ ಮೊಹಮ್ಮದ್ ನಬಿ ಬಳಗ 62 ರನ್‌ಗಳ ಗೆಲುವು ಸಾಧಿಸಿತು.

ಟಾಸ್ ಗೆದ್ದ ಅಫ್ಗಾನಿಸ್ತಾನ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತ್ತು.

ಆರಂಭಿಕ ಜೋಡಿ ಹಜರತ್ ಉಲ್ಲಾ ಜಜಾಯ್ ಮತ್ತು ಮೊಹಮ್ಮದ್ ಶೆಹಜಾದ್ ಅವರ ಭರ್ಜರಿ ಬ್ಯಾಟಿಂಗ್ ಬೆನ್ನಲ್ಲೇ ಅಸ್ಗರ್ ಅಫ್ಗಾನ್ ಮತ್ತು ಮೊಹಮ್ಮದ್ ನಬಿ ಕೂಡ ಮಿಂಚಿದರು. ಇದರ ಪರಿಣಾಮ ತಂಡ 160 ರನ್ ಗಳಿಸಿತು.

ಕಠಿಣ ಗುರಿ ಬೆನ್ನತ್ತಿದ ನಮೀಬಿಯಾಗೆ ಯಾವ ಹಂತದಲ್ಲೂ ಪ್ರತಿರೋಧ ಒಡ್ಡಲು ಆಗಲಿಲ್ಲ. ನವೀನ್ ಉಲ್ ಹಕ್, ಹಮೀದ್ ಹಸನ್ ಮತ್ತು ಗುಲ್ಬದಿನ್ ನಯೀಮ್ ಅವರ ಪ್ರಬಲ ದಾಳಿಗೆ ನಲುಗಿದ ತಂಡಕ್ಕೆ 20 ಓವರ್‌ಗಳಲ್ಲಿ 98 ರನ್ ಗಳಿಸಲಷ್ಟೇ ಸಾಧ್ಯವಾಯಿತು. 26 ರನ್ ಗಳಿಸಿದ ಡೇವಿಡ್ ವೀಸ್ ತಂಡದ ಪರ ಗರಿಷ್ಠ ರನ್ ಗಳಿಸಿದ ಆಟಗಾರ ಎನಿಸಿಕೊಂಡರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 5ಕ್ಕೆ 160 (ಹಜರತ್ ಉಲ್ಲಾ ಜಜಾಯ್ 33, ಮೊಹಮ್ಮದ್ ಶೆಹಜಾದ್ 45, ಅಸ್ಗರ್ ಅಫ್ಗಾನ್ 31, ಮೊಹಮ್ಮದ್ ನಬಿ ಔಟಾಗದೆ 32; ರೂಬೆನ್ 34ಕ್ಕೆ2, ಲಾಫ್ಟಿ ಈಟನ್ 21ಕ್ಕೆ2); **ನಮೀಬಿಯಾ:** 20 ಓವರ್‌ಗಳಲ್ಲಿ 9ಕ್ಕೆ 98 (ಡೇವಿಡ್ ವೀಸ್ 26; ನವೀನ್ ಉಲ್ ಹಕ್ 26ಕ್ಕೆ3, ಹಮೀದ್ ಹಸನ್ 9ಕ್ಕೆ3, ಗುಲ್ಬದಿನ್ 19ಕ್ಕೆ2, ರಶೀದ್ ಖಾನ್ 14ಕ್ಕೆ1)



ವಿಕೆಟ್‌ಗಾಗಿ ಮನವಿ ಸಲ್ಲಿಸಿದ ಮೊಹಮ್ಮದ್ ನಬಿ –ಎಎಫ್‌ಪಿ ಚಿತ್ರ

ಟೂರ್ನಿ ಮಧ್ಯೆ ನಿವೃತ್ತಿ ಘೋಷಣೆ

ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಅನುಭವಿಸಿದ ರೋಚಕ ಸೋಲಿನಿಂದ ಬೇಸರಗೊಂಡು ಟ್ವೆಂಟಿ–20 ಕ್ರಿಕೆಟ್‌ನಿಂದ ನಿವೃತ್ತಿ ಹೊಂದುವುದಾಗಿ ಪಂದ್ಯದ ಆರಂಭದಲ್ಲಿ ಅಸ್ಗರ್ ಅಫ್ಗಾನ್ ಘೋಷಿಸಿದ್ದರು. ಇದು ತಮ್ಮ ಕೊನೆಯ ಪಂದ್ಯ ಎಂದೂ ಅವರು ತಿಳಿಸಿದ್ದರು.

ಹೀಗಾಗಿ ಅಸ್ಗರ್ ಬ್ಯಾಟಿಂಗ್‌ಗೆ ಬರುವಾಗ ನಮೀಬಿಯಾ ಫೀಲ್ಡರ್‌ಗಳು ಸಾಲಾಗಿ ನಿಂತು ಚಪ್ಪಾಳೆ ತಟ್ಟಿ ಸ್ವಾಗತಿಸಿದರು. ಔಟಾಗಿ ವಾಪಸ್ ಹೋಗುವಾಗ ಅಫ್ಗನ್ ಆಟಗಾರರು ಬ್ಯಾಟ್‌ಗಳ ಕಮಾನು ನಿರ್ಮಿಸಿ ಅಭಿನಂದನೆ ಸಲ್ಲಿಸಿದರು.


33 ವರ್ಷದ ಅಸ್ಗರ್

ಜನನ	
1987, ಡಿಸೆಂಬರ್ 26 (ಕಾಬೂಲ್)	
ಟೆಸ್ಟ್ ಪಂದ್ಯಗಳು	6
ರನ್	440
ಏಕದಿನ ಪಂದ್ಯಗಳು	114
ರನ್	2424

ಟ್ವೆಂಟಿ–20 ಕ್ರಿಕೆಟ್‌ನಲ್ಲಿ ಸಾಧನೆ

ಪಂದ್ಯ	ಇನಿಂಗ್ಸ್	ರನ್	ಗರಿಷ್ಠ	ಅರ್ಧ ಶತಕ
75	67	1382	62	4

2010ರಲ್ಲಿ ಟ್ವೆಂಟಿ–20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿರುವ ಅವರು ಕೇವಲ ನಾಲ್ಕು ಎಸೆತಗಳ ಬೌಲಿಂಗ್ ಮಾಡಿದ್ದಾರೆ. ಅವರ ಖಾತೆಯಲ್ಲಿ ಒಂದು ವಿಕೆಟ್ ಇದೆ.



ಅಸ್ಗರ್ ಅಫ್ಗಾನ್ ಎಎಫ್‌ಪಿ ಚಿತ್ರ

ಟ್ರೆಂಟ್ ಬೌಲ್ಟ್, ಈಶ್ ಸೋಧಿ ಅಮೋಘ ಬೌಲಿಂಗ್: ಅರ್ಧಶತಕ ವಂಚಿತ ಡ್ಯಾರಿಲ್ ಮಿಷೆಲ್

ನ್ಯೂಜಿಲೆಂಡ್‌ಗೆ ಮಣಿದ ವಿರಾಟ್ ಬಳಗ

ದುಬೈ (ಪಿಟಿಐ): ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಹೀನಾಯ ಸೋಲುಂಡ ಭಾರತ ತಂಡ ಸೂಪರ್ 12ರ ಹಂತದ ತನ್ನ ಎರಡನೇ ಪಂದ್ಯದಲ್ಲೂ ಸೋಲಿನ ಸುಳಿಯಲ್ಲಿ ಸಿಲುಕಿತು.

ನ್ಯೂಜಿಲೆಂಡ್ ವಿರುದ್ಧ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಬಳಗ ಎಂಟು ವಿಕೆಟ್‌ಗಳಿಂದ ಪರಾಭವಗೊಂಡಿತು.

ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದ ಭಾರತಕ್ಕೆ 20 ಓವರ್‌ಗಳಲ್ಲಿ 110 ರನ್ ಗಳಿಸಲಷ್ಟೇ ಸಾಧ್ಯವಾಗಿತ್ತು. ಸುಲಭ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ಇನ್ನೂ 33 ಎಸೆತ ಬಾಕಿ ಇರುವಾಗಲೇ ಜಯ ಸಾಧಿಸಿತು.

24 ರನ್‌ಗಳಿಗೆ ಮೊದಲ ವಿಕೆಟ್ ಕಳೆದುಕೊಂಡರೂ ಎರಡನೇ ವಿಕೆಟ್‌ಗೆ ಡ್ಯಾರಿಲ್ ಮಿಷೆಲ್ ಮತ್ತು ನಾಯಕ ಕೇನ್ ವಿಲಿಯಮ್ಸನ್ ಅಮೋಘ ಜೊತೆಯಾಟವಾಡಿ ತಂಡಕ್ಕೆ ಆಸರೆಯಾದರು. ಇದು ಸುಲಭ ಜಯಕ್ಕೆ ಕಾರಣವಾಯಿತು.

ಭಾರತದ ಬಲಿಷ್ಠ ಬ್ಯಾಟಿಂಗ್ ಪಡೆ ನ್ಯೂಜಿಲೆಂಡ್‌ನ ಈಶ ಸೋಧಿ ಮತ್ತು ಟ್ರೆಂಟ್ ಬೌಲ್ಟ್ ಅವರ ದಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ವಿಫಲವಾಯಿತು.

ಸೆಮಿಫೈನಲ್ ಪ್ರವೇಶದ ಕನಸು ಜೀವಂತವಾಗುಳಿಯಬೇಕಾದರೆ, ಉಭಯ ತಂಡಗಳಿಗೂ ಈ ಪಂದ್ಯ ಗೆಲ್ಲುವುದು ಅವಶ್ಯಕವಾಗಿದೆ.

‘ಕ್ವಾರ್ಟರ್‌ಫೈನಲ್’ ಎಂದೇ ಬಿಂಬಿಸಲಾಗಿರುವ ಪಂದ್ಯದಲ್ಲಿ ಭಾರತದ ಅಗ್ರಕ್ರಮಾಂಕದ ಬ್ಯಾಟರ್‌ಗಳು ಕಳಪ ಆಟವಾಡಿದರು.

ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ಎದುರು 150 ರನ್‌ಗಳ ಗಡಿಯನ್ನಾದರೂ ದಾಟಿತ್ತು. ಆದರೆ ಇಲ್ಲಿ ನೂರರ ಮೊತ್ತ ತಲುಪಲೂ ಪರದಾಡಿತು. ತಂಡದಲ್ಲಿ ಕೆಲವು ಪ್ರಮುಖ ಬದಲಾವಣೆಗಳೊಂದಿಗೆ ಕಣಕ್ಕಿಳಿದರೂ ಹೆಚ್ಚು ಪ್ರಯೋಜನವಾಗಲಿಲ್ಲ. ಇನಿಂಗ್ಸ್ ಆರಂಭಿಸಿದ ರಾಹುಲ್ ಮತ್ತು ಇಶಾನ್ ಕಿಶನ್ ಜೋಡಿಯು ಉತ್ತಮ ಆರಂಭ ನೀಡುವಲ್ಲಿ ವಿಫಲವಾಯಿತು.

ಬೌಲ್ಟ್ ಹಾಕಿದ ಮೂರನೇ ಓವರ್‌ನಲ್ಲಿಯೇ ಇಶಾನ್ ಔಟಾದರು. ಮೂರನೇ ಕ್ರಮಾಂಕದಲ್ಲಿ ಬಂದ ರೋಹಿತ್ ಶರ್ಮಾ (14 ರನ್) ಅವರು ರಾಹುಲ್ (18 ರನ್) ಜೊತೆಗೆ ಇನಿಂಗ್ಸ್‌ಗೆ ಬಲ ತುಂಬುವ ವಿಶ್ವಾಸ ಮೂಡಿಸಿದರು. ಮೂರನೇ ಓವರ್‌ನಲ್ಲಿ ಅವರಿಗೆ ಒಂದು ಜೀವದಾನವೂ ಲಭಿಸಿತು.

ಆದರೆ ಆರನೇ ಓವರ್‌ನಲ್ಲಿಯೇ ಟಿಮ್ ಸೌಥಿ ರಾಹುಲ್ ವಿಕೆಟ್ ಗಳಿಸಿ, ಜೊತೆಯಾಟವನ್ನು ಮುರಿದರು. ಮೊದಲ ಪಂದ್ಯದಲ್ಲಿ ಅರ್ಧಶತಕ ಬಾರಿಸಿದ್ದ ವಿರಾಟ್ ಕೊಹ್ಲಿ ಕ್ರೀಸ್‌ಗೆ ಬಂದರು. ಆದರೆ ಕಿವೀಸ್ ಸ್ಪಿನ್ನರ್, ‘ಬರ್ತಡೆ ಬಾಯ್’ ಈಶ್ ಸೋಧಿ ಕೈಚಳಕ ತೋರಿದರು. ಎಂಟು ರನ್‌ಗಳ ಅಂತರದಲ್ಲಿ ಉಪನಾಯಕ ರೋಹಿತ್ ಮತ್ತು ನಾಯಕ ವಿರಾಟ್ ವಿಕೆಟ್‌ಗಳನ್ನು ಗಳಿಸಿದರು. ಇದರಿಂದಾಗಿ ತಂಡದ ರನ್‌ಗಳಿಕೆಯ ವೇಗ ಕುಸಿಯಿತು.

ಮತ್ತೊಂದು ಅವಕಾಶ ಪಡೆದ ಹಾರ್ದಿಕ್ ಪಾಂಡ್ಯ (23; 24ಎ) ಬ್ಯಾಟಿಂಗ್‌ನಲ್ಲಿ ಆತ್ಮವಿಶ್ವಾಸ ಕಾಣಲಿಲ್ಲ. 14ನೇ ಓವರ್‌ನಲ್ಲಿ ಸೋಧಿ ಬೌಲಿಂಗ್‌ನಲ್ಲಿ ಒಂದು ಜೀವದಾನ ಸಿಕ್ಕಿತು.

ಇನ್ನೊಂದೆಡೆ ರಿಷಭ್ ಪಂತ್ ಕೂಡ 19 ಎಸೆತಗಳಲ್ಲಿ 12 ರನ್ ಹೊಡೆದರು. ಆ್ಯಡಂ ಮಿಲ್ನೆ ಎಸೆತದಲ್ಲಿ ಪಂತ್ ಔಟಾದರು.



ಡೆರಿಲ್ ಮಿಷೆಲ್ –ರಾಯಿಟರ್ಸ್ ಚಿತ್ರ

ಹಾರ್ದಿಕ್ ಜೊತೆಗೂಡಿದ ರವೀಂದ್ರ ಜಡೇಜ ಆರಂಭದಲ್ಲಿ ಎಚ್ಚರಿಕೆಯಿಂದ ಎಸೆತಗಳನ್ನು ಎದುರಿಸಿದರು.

ಆದರೆ 19ನೇ ಓವರ್‌ನಲ್ಲಿ ಮತ್ತೆ ವಿಜೃಂಭಿಸಿದ ಟ್ರೆಂಟ್ ಬೌಲ್ಟ್ ಪಾಂಡ್ ಮತ್ತು ಶಾರ್ದೂಲ್ ಠಾಕೂರ್ ಅವರ ವಿಕೆಟ್ ಕಬಳಿಸಿದರು. ಆಗಲೂ ತಂಡದ ಮೊತ್ತ ನೂರು ರನ್ ದಾಟಿರಲಿಲ್ಲ.

ಕೊನೆಯ ಓವರ್‌ನಲ್ಲಿ ಜಡೇಜ ದಿಟ್ಟತನ ತೋರಿದರು. ಸೌಥಿ ಎಸೆತದಲ್ಲಿ ಒಂದು ಸಿಕ್ಸರ್ ಹೊಡೆದರು. ಇದರಿಂದಾಗಿ ನೂರು ರನ್‌ಗಳ ಗಡಿ ದಾಟಿತು. ಓವರ್‌ನಲ್ಲಿ ಕೊನೆಯ ಎಸೆತದಲ್ಲಿ ಈಶ್ ಸೋಧಿ ಕ್ಯಾಚ್ ಕೈಚೆಲ್ಲಿದರು.

ಕಿವೀಸ್ ಮುಂದೆ ದಕ್ಕದ ಜಯ

ಐಸಿಸಿ ವಿಶ್ವಕಪ್ ಟೂರ್ನಿಗಳಲ್ಲಿ ನ್ಯೂಜಿಲೆಂಡ್ ವಿರುದ್ಧ ಮತ್ತೊಮ್ಮೆ ಭಾರತ ತಂಡವು ಸೋಲನುಭವಿಸಿದೆ.

2016 ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಲೀಗ್ ಹಂತದ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ಸೋಲನುಭವಿಸಿತ್ತು. 2019ರ ಏಕದಿನ ವಿಶ್ವಕಪ್ ಸೆಮಿಫೈನಲ್ ಮತ್ತು ಈಚೆಗೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿಯೂ ಕಿವೀಸ್ ಭಾರತ ತಂಡವನ್ನು ಸೋಲಿಸಿತ್ತು. ಇದೀಗ ಮಹತ್ವದ ಪಂದ್ಯದಲ್ಲಿ ಮತ್ತೊಮ್ಮೆ ಭಾರತಕ್ಕೆ ಕಹಿಯುಣಿಸಿದೆ.

ಭಾರತ ತಂಡಕ್ಕೆ ಸೆಮಿ ಅವಕಾಶ ಇಲ್ಲ?

ಭಾರತ ತಂಡವು ಸೂಪರ್ 12ರ ಹಂತದ ಮೊದಲೆರಡೂ ಪಂದ್ಯಗಳಲ್ಲಿ ಸೋತಿದೆ. ಆ ಮೂಲಕ ತಂಡವು ಸೆಮಿಫೈನಲ್ ಹಂತ ತಲುಪುವ ಸಾಧ್ಯತೆಯೂ ಕ್ಷೀಣಿಸಿದೆ. ಇನ್ನುಳಿದಿರುವ ಮೂರು ಪಂದ್ಯಗಳಲ್ಲಿ ಗೆದ್ದರೂ ಅವಕಾಶ ಸಿಗುವುದು ಕಷ್ಟ. ಆದರೆ, ನ್ಯೂಜಿಲೆಂಡ್ ತಂಡವು ತನ್ನ ಇನ್ನುಳಿದ ಮೂರು ಪಂದ್ಯಗಳ ಪೈಕಿ ಒಂದರಲ್ಲಿ ಸೋತರೆ ಆಗ ಭಾರತಕ್ಕೊಂದು ಅವಕಾಶ ಸಿಗಬಹುದು. ಆದರೆ, ಆಗ ಕಿವೀಸ್ ತಂಡಕ್ಕಿಂತ ಉತ್ತಮ ರನ್ ರೇಟ್ ಹೊಂದಿರಬೇಕು. ಉಭಯ ತಂಡಗಳು ತಮ್ಮ ಮುಂದಿನ ಮೂರು ಪಂದ್ಯಗಳಲ್ಲಿ ಅಫ್ಗಾನಿಸ್ತಾನ, ನಮಿಬಿಯಾ ಮತ್ತು ಸ್ಕಾಟ್ಲೆಂಡ್ ತಂಡಗಳ ವಿರುದ್ಧ ಆಡಲಿವೆ. ಈ ಮೂರು ತಂಡಗಳಿಗಿಂತಲೂ ಭಾರತ ಮತ್ತು ಕಿವೀಸ್ ತಂಡಗಳು ಬಲಶಾಲಿಯಾಗಿವೆ. ಆದ್ದರಿಂದ ಭಾರತಕ್ಕೆ ಸೆಮಿಫೈನಲ್ ಕನಸು ಕೈಗೂಡುವುದು ಕಷ್ಟವೆಂದೇ ಹೇಳಲಾಗುತ್ತಿದೆ.

ಸ್ಕೋರ್ ಕಾರ್ಡ್

ಭಾರತ 7ಕ್ಕೆ 110 (20 ಓವರ್)
ರಾಹುಲ್ ಸಿ ಮಿಚೆಲ್ ಬಿ ಸೌಥಿ 18 (16ಎ, 4X3), ಇಶಾನ್ ಸಿ ಮಿಚೆಲ್ ಬಿ ಬೌಲ್ಟ್ 4 (8ಎ, 4X1), ರೋಹಿತ್ ಸಿ ಗಪ್ಟಿಲ್ ಬಿ ಸೋಧಿ 14 (14ಎ, 4X1, 6X1), ಕೊಹ್ಲಿ ಸಿ ಬೌಲ್ಟ್ ಬಿ ಸೋಧಿ 9 (17ಎ), ಪಂತ್ ಬಿ ಮಿಲ್ನೆ 12 (19ಎ), ಹಾರ್ದಿಕ್ ಸಿ ಗಪ್ಟಿಲ್ ಬಿ ಬೌಲ್ಟ್ 23 (24ಎ, 4X1), ಜಡೇಜ ಔಟಾಗದೆ 26 (19ಎ, 4X2, 6X1), ಠಾಕೂರ್ ಸಿ ಗಪ್ಟಿಲ್ ಬಿ ಬೌಲ್ಟ್ 0 (3ಎ), ಶಮಿ ಔಟಾಗದೆ 0 (0 ಎ)
ಇತರೆ (ಲೆಗ್‌ಬೈ 2, ವೈಡ್ 2) 4
ವಿಕೆಟ್ ಪತನ: 1–11 (ಇಶಾನ್ ಕಿಶನ್, 2.5), 2–35 (ಕೆ.ಎಲ್.ರಾಹುಲ್, 5.5), 3–40 (ರೋಹಿತ್ ಶರ್ಮಾ, 7.4), 4–48 (ವಿರಾಟ್ ಕೊಹ್ಲಿ, 10.1), 5–70 (ರಿಷಭ್ ಪಂತ್, 14.3), 6–94 (ಹಾರ್ದಿಕ್ ಪಾಂಡ್ಯ, 18.1), 7–94 (ಶಾರ್ದೂಲ್ ಠಾಕೂರ್, 18.4)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–20–3, ಟಿಮ್ ಸೌಥಿ 4–0–26–1, ಮಿಚೆಲ್ ಸ್ಯಾಂಟನರ್ 4–0–15–0, ಆ್ಯಡಂ ಮಿಲ್ನೆ 4–0–30–1, ಈಶ್ ಸೋಧಿ 4–0–17–2

ನ್ಯೂಜಿಲೆಂಡ್ 2ಕ್ಕೆ 111 (14.3 ಓವರ್)
ಗಪ್ಟಿಲ್ ಸಿ ಠಾಕೂರ್ ಬಿ ಬೂಮ್ರಾ 20 (17ಎ, 4X3), ಮಿಷೆಲ್ ಸಿ ರಾಹುಲ್ ಬಿ ಬೂಮ್ರಾ 49 (35ಎ, 4x4, 6x3), ವಿಲಿಯಮ್ಸನ್ ಔಟಾಗದೆ 33 (31ಎ, 4X3), ಕಾನ್ವೆ ಔಟಾಗದೆ 2 (4ಎ)
ಇತರೆ (ಲೆಗ್‌ಬೈ 1, ವೈಡ್ 6) 7
ವಿಕೆಟ್ ಪತನ: 1–24 (ಮಾರ್ಟಿನ್ ಗಪ್ಟಿಲ್, 3.4), 2–96 (ಡೆರಿಲ್ ಮಿಷೆಲ್, 12.4),
ಬೌಲಿಂಗ್: ವರುಣ್ ಚಕ್ರವರ್ತಿ 4–0–23–0, ಜಸ್‌ಪ್ರೀತ್ ಬೂಮ್ರಾ 4–0–19–2, ರವೀಂದ್ರ ಜಡೇಜ 2–0–23–0, ಮೊಹಮ್ಮದ್ ಶಮಿ 1–0–11–0, ಶಾರ್ದೂಲ್ ಠಾಕೂರ್ 1.3–0–17–0, ಹಾರ್ದಿಕ್ ಪಾಂಡ್ಯ 2–0–17–0

ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ 8 ವಿಕೆಟ್‌ಗಳ ಜಯ



ಸಿಎಸ್‌ಕೆಯಿಂದ ನೀರಜ್‌ಗೆ ಒಂದು ಕೋಟಿ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಫ್ರ್ಯಾಂಚೈಸಿಯು ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಅಥ್ಲೀಟ್ ನೀರಜ್ ಚೋಪ್ರಾ ಅವರಿಗೆ ಒಂದು ಕೋಟಿ ರೂಪಾಯಿ ಬಹುಮಾನ ನೀಡಿ ಗೌರವಿಸಿದೆ.

ಒಲಿಂಪಿಕ್ಸ್‌ನಲ್ಲಿ ನೀರಜ್ 87.58 ಮೀಟರ್ಸ್ ದೂರ ಜಾವೆಲಿನ್ ಎಸೆದು ಚಿನ್ನ ಗೆದ್ದಿದ್ದರು. ಅದರ ಸವಿನೆನಪಿಗಾಗಿ ವಿಶೇಷವಾಗಿ ಸಿದ್ಧಪಡಿಸಿದ ಮತ್ತು 8758 ಸಂಖ್ಯೆಯು ಅಚ್ಚಾಗಿರುವ ಜೆರ್ಸಿಯನ್ನು ಚೆನ್ನೈ ತಂಡವು ನೀರಜ್ ಅವರಿಗೆ ಕಾಣಿಕೆ ನೀಡಿದೆ.



ನೀರಜ್

‘ನೀರಜ್ ಸಾಧನೆಗೆ ಇಡೀ ದೇಶವೇ ಹೆಮ್ಮೆಪಟ್ಟಿದೆ. ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಚಿನ್ನದ ಪದಕ ಗಳಿಸಿದ ಮೊದಲ ಭಾರತೀಯ ಅಥ್ಲೀಟ್ ಅವರಾಗಿದ್ದಾರೆ. ಅವರು ಒಂದು ಮೈಲುಗಲ್ಲು ನಿರ್ಮಿಸಿದ್ದಾರೆ.

ಅವರ ಸಾಧನೆಯು ಅಭೂತಪೂರ್ವವಾದದ್ದು. ಅವರನ್ನು ಗೌರವಿಸುವ ಮೂಲಕ ನಮ್ಮನ್ನು ನಾವೇ ಸತ್ಕರಿಸಿಕೊಂಡಿದ್ದೇವೆ’ ಎಂದು ಸಿಎಸ್‌ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಸ್. ವಿಶ್ವನಾಥ್ ಹೇಳಿದ್ದಾರೆ.

‘ನನಗೆ ಸಿಗುತ್ತಿರುವ ಪ್ರೀತಿ, ಗೌರವಕ್ಕೆ ಪುಳಕಿತನಾಗಿದ್ದೇನೆ. ಚೆನ್ನೈ ತಂಡದ ಗೌರವಕ್ಕೆ ಕೃತಜ್ಞ’ ಎಂದಿದ್ದಾರೆ.

ಅರ್ಜುನ ಪ್ರಶಸ್ತಿಗೆ ಮನದೀಪ್, ಅಂಕಿತಾ ಹೆಸರು

ನವದೆಹಲಿ (ಪಿಟಿಐ): ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಉದ್ಯೋಗದಲ್ಲಿರುವ 10 ಕ್ರೀಡಾಪಟುಗಳನ್ನು ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳಿಗೆ ಶಿಫಾರಸು ಮಾಡಲಾಗಿದೆ.

ಹಾಕಿ ಕೋಚ್ ಸಂದೀಪ್ ಸಂಗ್ವಾನ್ ಮತ್ತು ಚೆಸ್ ಆಟಗಾರ ಅಭಿಜೀತ್ ಕುಂಟೆ ಅವರನ್ನು ದ್ರೋಣಾಚಾರ್ಯ ಪ್ರಶಸ್ತಿಗೆ, ಟೆನಿಸ್ ಆಟಗಾರ್ತಿ ಅಂಕಿತಾ ರೈನಾ, ಅಥ್ಲೀಟ್ ಅರ್ಪಿಂದರ್ ಸಿಂಗ್, ಹಾಕಿ ಆಟಗಾರರಾದ ಗುರ್ಜಂತ್ ಸಿಂಗ್, ಸುಮಿತ್, ಮನದೀಪ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಸಿಮ್ರನ್‌ಜೀತ್ ಸಿಂಗ್ ಹಾಗೂ ಹಾರ್ದಿಕ್ ಸಿಂಗ್ ಅವರನ್ನು ಅರ್ಜುನ ಪ್ರಶಸ್ತಿಗೆ ಹೆಸರಿಸಲಾಗಿದೆ.

ಎಐಪಿಎಸ್‌ಎಸ್‌ಪಿಬಿ ಕಾರ್ಯಕಾರಿ ಉಪಾಧ್ಯಕ್ಷ ಸುಭಾಶ್ ಕುಮಾರ್ ಈ ವಿಷಯ ತಿಳಿಸಿದ್ದಾರೆ.

ಹಾಕಿ ಕೋಚ್ ಸಂದೀಪ್ ಸಂಗ್ವಾನ್, ಆಟಗಾರರಾದ ಗುರ್ಜಂತ್, ಸುಮಿತ್, ಮನದೀಪ್, ಅಥ್ಲೀಟ್ ಅರ್ಪಿಂದರ್ ಹಾಗೂ ಅಂಕಿತಾ ರೈನಾ ಅವರು ತೈಲ ಹಾಗೂ ನೈಸರ್ಗಿಕ ಅನಿಲ ನಿಗಮದ (ಒಎನ್‌ಜಿಸಿ) ಉದ್ಯೋಗಿಗಳಾದರೆ, ದಿಲ್‌ಪ್ರೀತ್, ಸಿಮ್ರನ್‌ಜೀತ್, ಹಾರ್ದಿಕ್ ಸಿಂಗ್ ಹಾಗೂ ಅಭಿಜೀತ್ ಮತ್ತು ಭಾರತೀಯ ತೈಲ ನಿಗಮದಲ್ಲಿ (ಐಒಸಿ) ಕಾರ್ಯನಿರ್ವಹಿಸುತ್ತಾರೆ.

ಸೆಮಿ ಮೇಲೆ ಮಾರ್ಗನ್ ಕಣ್ಣು

ಇಂಗ್ಲೆಂಡ್ ಎದುರಾಳಿ: ಶ್ರೀಲಂಕಾಕ್ಕೆ ಜಯ ಅನಿವಾರ್ಯ

ಶಾರ್ಜಾ (ಪಿಟಿಐ): ಆಡಿದ ಮೂರೂ ಪಂದ್ಯಗಳಲ್ಲಿ ಗೆದ್ದು ಆತ್ಮವಿಶ್ವಾಸದ ಉತ್ತುಂಗದಲ್ಲಿರುವ ಇಂಗ್ಲೆಂಡ್ ತಂಡವು ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಸೋಮವಾರ ಶ್ರೀಲಂಕಾಕ್ಕೆ ಮುಖಾಮುಖಿಯಾಗಲಿದೆ. ಒಂದನೇ ಗುಂಪಿನ ಈ ಹಣಾಹಣಿಯಲ್ಲಿ ಗೆದ್ದರೆ ಮಾರ್ಗನ್ ಬಳಗವು ಸೆಮಿಫೈನಲ್ ಹಂತಕ್ಕೇರುವುದು ಬಹುತೇಕ ಖಚಿತವಾಗಲಿದೆ.

ವಿಶ್ವಕಪ್ ಜಯಿಸುವ ಫೇವರೀಟ್ ತಂಡಗಳಲ್ಲಿ ಒಂದೆನಿಸಿಕೊಂಡಿರುವ ಇಂಗ್ಲೆಂಡ್ ಇದುವರೆಗೆ ನಿರೀಕ್ಷೆಗೆ ತಕ್ಕಂತಹ ಆಟವಾಡಿದೆ. ಶನಿವಾರ ನಡೆದ ಹಣಾಹಣಿಯಲ್ಲಿ ಬದ್ಧ ಎದುರಾಳಿ ಆಸ್ಟ್ರೇಲಿಯಾ ತಂಡವನ್ನು ಎಂಟು ವಿಕೆಟ್‌ಗಳಿಂದ ಮಣಿಸಿತ್ತು. ಇದರೊಂದಿಗೆ ಯಾವುದೇ ತಂಡಗಳಿಗೆ ತಾನು ಬಲಿಷ್ಠ ಎದುರಾಳಿ ಎಂಬ ಸಂದೇಶ ರವಾನಿಸಿದೆ.

ಆ್ಯರನ್ ಫಿಂಚ್ ನಾಯಕತ್ವ ಆಸ್ಟ್ರೇಲಿಯಾ ಎದುರು ಜೋಸ್ ಬಟ್ಲರ್ ಅಕ್ಷರಶಃ ಅಬ್ಬರಿಸಿದ್ದರು. ಇದು ಇಂಗ್ಲೆಂಡ್‌ಗೆ ಸಕಾರಾತ್ಮಕ ಅಂಶವಾಗಿದೆ. ಆರಂಭಿಕ ಬ್ಯಾಟರ್‌ಗಳು ಉತ್ತಮ ಸಾಮರ್ಥ್ಯ ತೋರುತ್ತಿರುವುದರಿಂದ ತಂಡದ ಮಧ್ಯಮ ಕ್ರಮಾಂಕವು ಹೆಚ್ಚು ಪರೀಕ್ಷೆಗೆ ಒಳಗಾಗಿಲ್ಲ. ವೇಗಿಗಳಾದ ಕ್ರಿಸ್ ವೋಕ್ಸ್, ಕ್ರಿಸ್ ಜೋರ್ಡಾನ್ ಪರಿಣಾಮಕಾರಿಯಾಗಿದ್ದಾರೆ. ಇವರಿಗೆ ಟೈಮಲ್ ಮಿಲ್ಸ್ ಅವರಿಗೆ ಸಹಕಾರ ನೀಡುತ್ತಿದ್ದಾರೆ. ಸ್ಪಿನ್ನರ್‌ಗಳಾದ ಆದಿಲ್ ರಶೀದ್, ಮೋಯಿನ್ ಅಲಿ ಕೂಡ ಕೈಚಳಕ ತೋರುತ್ತಿದ್ದಾರೆ.



ಮಾರ್ಗನ್– ಎಎಫ್‌ಪಿ ಚಿತ್ರ

ನಾಗಾಲೋಟದಲ್ಲಿರುವ ಇಂಗ್ಲೆಂಡ್ ಅಶ್ವವನ್ನು ಕಟ್ಟಿಹಾಕಲು ದಸುನ್ ಶನಕ ನೇತೃತ್ವದ ಶ್ರೀಲಂಕಾ ತಂಡ, ಶಕ್ತಿ ಮೀರಿ ಪ್ರಯತ್ನಿಸಬೇಕು. ನಾಕೌಟ್ ಸ್ಪರ್ಧೆಯಲ್ಲಿ ಉಳಿಯಲು ಈ ಪಂದ್ಯದಲ್ಲಿ ಲಂಕಾಗೆ ಜಯ ಅನಿವಾರ್ಯ. ಅನನುಭವಿಗಳ ತಂಡವಾಗಿದ್ದರೂ ಲಂಕಾ ಇದುವರೆಗೆ ತೀರಾ ಕಳಪೆ ಆಟವನ್ನೇನೂ ಆಡಿಲ್ಲ.

ಚರಿತ ಅಸಲಂಕ ಹಾಗೂ ಪಥುಮ್ ನಿಸ್ಸಾಂಕ ಲಯದಲ್ಲಿರುವುದು ಶ್ರೀಲಂಕಾ ತಂಡಕ್ಕೆ ಶಕ್ತಿ ತುಂಬಿದೆ. ಜಯದ ನಿರೀಕ್ಷೆಯಲ್ಲಿ ತಂಡವಿದೆ.

ಟ್ವೆಂಟಿ–20 ರ‍್ಯಾಂಕಿಂಗ್

ಇಂಗ್ಲೆಂಡ್	ಶ್ರೀಲಂಕಾ
1	9

ಟಿ20 ವಿಶ್ವಕಪ್ ಮುಖಾಮುಖಿ ಪಂದ್ಯ 4

ಇಂಗ್ಲೆಂಡ್ ಗೆಲುವು	3
ಶ್ರೀಲಂಕಾ ಗೆಲುವು	1

ಅಂತರರಾಷ್ಟ್ರೀಯ ಟಿ20 ಮುಖಾಮುಖಿ ಪಂದ್ಯಗಳು 12

ಇಂಗ್ಲೆಂಡ್ ಜಯ	8
ಶ್ರೀಲಂಕಾ ಜಯ	4

ಆರಂಭ ಸಂಜೆ 7.30 (ಭಾರತೀಯ ಕಾಲಮಾನ)

ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ವಿಶ್ವ ಬಾಕ್ಸಿಂಗ್: ಸಚಿನ್‌ಗೆ ಸೋಲು

ಕ್ವಾರ್ಟರ್‌ಫೈನಲ್‌ಗೆ ಆಕಾಶ್

ಬೆಲ್‌ಗ್ರೇಡ್ (ಪಿಟಿಐ): ಮೊದಲ ಬಾರಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿದಿರುವ ಭಾರತದ ಬಾಕ್ಸರ್ ಆಕಾಶ್ ಕುಮಾರ್ ಅವರು ಭಾನುವಾರ ಎಂಟರಘಟ್ಟಕ್ಕೆ ಲಗ್ಗೆಯಿಟ್ಟಿದ್ದಾರೆ.

54 ಕೆಜಿ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಆಕಾಶ್ 5–0ಯಿಂದ ಪ್ಯುರ್ಟೊ ರಿಕೊದ ಕೆಲೆಬ್ ಟ್ರೈರಾಡೊ ಅವರನ್ನು ಮಣಿಸಿದರು.

ಬೌಟ್‌ನ ಮೊದಲ ಸುತ್ತಿನಲ್ಲಿ ಟೈರಾಡೊ ಭಾರೀ ಪೈಪೋಟಿ ನೀಡಿದರು. ಆದರೆ ನೇರ ಪಂಚ್‌ಗಳಿಂದ ಎದುರಾಳಿಯನ್ನು ಕಂಗೆಡಿಸಿದ ಆಕಾಶ್, ಮೇಲುಗೈ ಸಾಧಿಸಿದರು. ಎರಡೇ ಸುತ್ತಿನಲ್ಲಿ ರೆಫರಿಗಳು ನೀಡಿದ ಎಚ್ಚರಿಕೆ ಲೆಕ್ಕಿಸದ ಟೈರಾಡೊ ಪಾಯಿಂಟ್ಸ್ ಕಳೆದುಕೊಂಡರು.

ಆಕಾಶ್ ಪ್ರೀಕ್ವಾರ್ಟರ್‌ಗೆ ವಾಕ್ ಓವರ್ ಪಡೆದಿದ್ದರು. ಐದು ಬಾರಿಯ ಏಷ್ಯನ್ ಚಾಂಪಿಯನ್ ಶಿವ ಥಾಪಾ ಅವರು ಪ್ರೀಕ್ವಾರ್ಟರ್‌ಫೈನಲ್‌ಗೆ ಕಾಲಿಟ್ಟಿದ್ದಾರೆ.

ಶನಿವಾರ ರಾತ್ರಿ ನಡೆದ 63.5 ಕೆಜಿ ವಿಭಾಗದ ಎರಡನೇ ಸುತ್ತಿನ ಹಣಾಹಣಿಯಲ್ಲಿ ಶಿವ ಅವರು 5–0ಯಿಂದ ಸಿಯಾರ ಲಿಯೋನ್‌ನ ಜಾನ್ ಬ್ರೌನ್ ಅವರನ್ನು ಪರಾಭವಗೊಳಿಸಿದರು. ಭಾರತೀಯರ ಪೈಕಿ ದಿನದ ಕೊನೆಯ ಸ್ಪರ್ಧಿಯಾಗಿದ್ದ ಶಿವ, ಬ್ರೌನ್ ಎದುರು ಸಂಪೂರ್ಣ ಮೇಲುಗೈ ಸಾಧಿಸಿದರು. ಅತ್ಯುತ್ಸಾಹಿಯಾಗಿದ್ದ ಸಿಯಾರ ಲಿಯೋನ್‌ನ ಬಾಕ್ಸರ್ ತಂತ್ರಗಳನ್ನು ಕಾರ್ಯಗತಗೊಳಿಸುವಲ್ಲಿ ಎಡವಿದ್ದು, ಶಿವ ಗೆಲುವನ್ನು ಸುಲಭವಾಗಿಸಿತು. ಹುಕ್ ಸೇರಿದಂತೆ ಚಾಣಾಕ್ಷ ಕೌಶಲಗಳಿಂದ ಗಮನಸೆಳೆದ ಭಾರತದ ಬಾಕ್ಸರ್ ಮೂರೂ ಸುತ್ತುಗಳಲ್ಲಿ ಪಾರಮ್ಯ ಮೆರೆದರು.



ಆಕಾಶ್– ಪಿಟಿಐ ಚಿತ್ರ

ಈ ಹಿಂದೆ ವಿಶ್ವಕಪ್‌ನಲ್ಲಿ ಕಂಚು ಗೆದ್ದಿರುವ ಶಿವ ಅವರು, 16ರ ಘಟ್ಟದ ಬೌಟ್‌ನಲ್ಲಿ ಫ್ರಾನ್ಸ್‌ನ ಲೂನೆಸ್ ಹಮ್ರೊಯಿ ಎದುರು ಕಣಕ್ಕಿಳಿಯಲಿದ್ದಾರೆ.

ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದ ಸಚಿನ್ (80 ಕೆಜಿ ವಿಭಾಗ) ಅಭಿಯಾನ ಅಂತ್ಯವಾಯಿತು. ಎರಡನೇ ಸುತ್ತಿನ ಬೌಟ್‌ನಲ್ಲಿ ಅವರು 1–4ರಿಂದ ಅಮೆರಿಕದ ರಾಬಿ ಗೊನ್ಜಾಲೆಂಜ್ ಎದುರು ಎಡವಿದರು.

48 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಗೋವಿಂದ್ ಸಹಾನಿ ಕೂಡ 0–4ರಿಂದ ಜಾರ್ಜಿಯಾದ ಸಕೀಲ್ ಅಲಾಕ್ವೆರ್ದೊವಿ ವಿರುದ್ಧ ಮುಗ್ಗರಿಸಿದರು.

ಸುಮಿತ್ (75 ಕೆಜಿ) ಹಾಗೂ ನಿಶಾಂತ್ ದೇವ್ (71 ಕೆಜಿ) ಈಗಾಗಲೇ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ದೀಪ್ತಿ, ಹರ್ಮನ್‌ಪ್ರೀತ್ ಮಿಂಚು

ಪರ್ತ್ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ಮತ್ತು ದೀಪ್ತಿ ಶರ್ಮಾ ಅವರು ಮಹಿಳೆಯರ ಬಿಗ್ ಬ್ಯಾಷ್ ಲೀಗ್‌ನಲ್ಲಿ ಆಲ್‌ರೌಂಡ್ ಆಟದ ಮೂಲಕ ಭಾನುವಾರ ಮಿಂಚು ಹರಿಸಿದರು.

ಮೆಲ್ಬರ್ನ್ ರೆನೆಗೇಡ್ಸ್ ತಂಡದ ಪರವಾಗಿ ಆಡುತ್ತಿರುವ ಹರ್ಮನ್‌ಪ್ರೀತ್ ಕೌರ್ 46 ಎಸೆತಗಳಲ್ಲಿ 73 ರನ್ ಗಳಿಸಿ ಮಿಂಚಿದರು. ಇದಕ್ಕೂ ಮುನ್ನ ಆಫ್ ಸ್ಪಿನ್ ದಾಳಿ ಮೂಲಕ ಎರಡು ವಿಕೆಟ್ ಕೂಡ ಗಳಿಸಿದ್ದರು. ಅವರ ಅಮೋಘ ಆಟದ ಪರವಾಗಿ ಅಡಿಲೇಡ್ ಸ್ಟ್ರೈಕರ್ಸ್ ಎದುರಿನ ಪಂದ್ಯದಲ್ಲಿ ರೆನೆಗೇಡ್ಸ್ ಆರು ವಿಕೆಟ್‌ಗಳ ಜಯ ಸಾಧಿಸಿತು. ಜೆಮಿಮಾ ರಾಡ್ರಿಗಸ್ 16 ಎಸೆತಗಳಲ್ಲಿ 27 ರನ್ ಕಲೆ ಹಾಕಿದರು. ಸುಮಾರು ಒಂದು ವರ್ಷದಿಂದ ಕಳಪೆ ಫಾರ್ಮ್ ಮತ್ತು ಫಿಟ್‌ನೆಸ್ ಸಮಸ್ಯೆಯಿಂದ ಬಳಲುತ್ತಿರುವ ಹರ್ಮನ್‌ಪ್ರೀತ್ ಕೌರ್ ಅವರು ಬಿಗ್ ಬ್ಯಾಷ್ ಲೀಗ್‌ನಲ್ಲಿ ಉತ್ತಮ ಆಟ ಆಡುತ್ತಿದ್ದಾರೆ.

ಸಿಡ್ನಿ ಥಂಡರ್ಸ್ ತಂಡದಲ್ಲಿ ಆಡುತ್ತಿರುವ ದೀಪ್ತಿ ಶರ್ಮಾ 15 ಎಸೆತಗಳಲ್ಲಿ 20 ರನ್ ಗಳಿಸಿದ್ದರು. ನಂತರ ಹಾಬರ್ಟ್ ಹರಿಕೇನ್ಸ್ ತಂಡದ ಮೂರು ವಿಕೆಟ್ ಉರುಳಿಸಿದರು. ಇದು ಥಂಡರ್ಸ್‌ನ ಗೆಲುವಿಗೆ ಕಾರಣವಾಯಿತು. ಥಂಡರ್ಸ್ ಪರವಾಗಿ ಸ್ಮೃತಿ ಮಂದಾನ 50 ಎಸೆತಗಳಲ್ಲಿ 50 ರನ್ ಗಳಿಸಿದರು.

ಬೆಂಗಳೂರು ರೇಸ್


ಕಾಸ್ಮಿಕ್ ರೇ ಗೆಲ್ಲುವ ನಿರೀಕ್ಷೆ

ರಾಜ್ಯೋತ್ಸವ ಟ್ರೋಫಿ ಸೋಮವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಕಾಸ್ಮಿಕ್ ರೇ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಕಿಯಾಥೋಸ್ 9, ಅಮಾಲ್ಫಿ ಸನ್‌ರೈಸ್ 5, ಹ್ಯಾಪಿ ಡ್ಯಾನ್ಸಿಂಗ್ 6
2ನೇ ರೇಸ್: ಗ್ಯಾರಮಾಂಡ್ 10, ಓಷನ್ ಡ್ಯೂನ್ಸ್ 3, ಟ್ವಿಲೈಟ್ ಫೇಮ್ 6
3ನೇ ರೇಸ್: ಡಿವೈನ್ ಬ್ಲೆಸ್ಸಿಂಗ್ಸ್ 9, ಪಿಂಕ್ ಜಾಸ್ಮೈನ್ 10, ಕೇಪ್ರಿಗರ್ಲ್ 8
4ನೇ ರೇಸ್: ಬಾಲ್ಟಿಮೋರ್ 7, ಜೋಕ್ಷಾನ್ 8, ಡೈನಾಮಿಕಲ್ 10
5ನೇ ರೇಸ್: ಸ್ಟಾರ್ ಈಸ್ ಬಾರ್ನ್ 1, ಮ್ಯೂರ್‌ಫಿಲ್ಡ್ 11, ಪಿಇಟ್ಸ್ ಡ್ರ್ಯಾಗನ್ 6
6ನೇ ರೇಸ್: ಕಾಸ್ಮಿಕ್ ರೇ 3, ನಾರ್ದರನ್ ಅಲೈಯನ್ಸ್ 2, ಗೋಲ್ಡನ್ ಓಕ್ಸ್ 5
7ನೇ ರೇಸ್: ಪರ್ಫೆಕ್ಟ್ ರೆಂಡಿಷನ್ 4, ಸ್ಟೋನ್ ಹೌಸ್ 7, ಡ್ರುಸಿಲ್ಲಾ 5
8ನೇ ರೇಸ್: ಕೆನ್ಸಿಂಗ್ಟನ್ ಕೋರ್ಟ್ 4, ಲ್ಯಾಂಟಾನ 5, ಅರೇಬಿಯನ್ ಮಿಸ್ಟ್ 6

ಉತ್ತಮ ಬೆಟ್: ಬಾಲ್ಟಿಮೋರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8



ಫುಟ್‌ಬಾಲ್: ಭಾರತಕ್ಕೆ ಜಯ

ಫುಜೈರಾ, ಯುಎಇ (ಪಿಟಿಐ): ಗೋಲ್‌ಕೀಪರ್ ಧೀರಜ್ ಸಿಂಗ್ ಅವರ ಸಾಹಸದಿಂದಾಗಿ ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) 23 ವರ್ಷದೊಳಗಿನವರ ಏಷ್ಯಾಕಪ್ ಫುಟ್‌ಬಾಲ್ ಅರ್ಹತಾ ಟೂರ್ನಿಯಲ್ಲಿ ಭಾರತ ಕಿರ್ಗಿಸ್ತಾನ ವಿರುದ್ಧ ಜಯ ಗಳಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ಭಾರತವು ಪೆನಾಲ್ಟಿ ಶೂಟೌಟ್‌ನಲ್ಲಿ 4–2ರಿಂದ ಗೆಲುವು ಸಾಧಿಸಿತು. ಇದರೊಂದಿಗೆ ಟೂರ್ನಿಯ 'ಇ' ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಿತು. ಇದು ಭಾರತ ತಂಡದ ಶ್ರೇಷ್ಠ ಸಾಧನೆಯಾಗಿದೆ.



ಧೀರಜ್ ಸಿಂಗ್– ಟ್ವಿಟರ್ ಚಿತ್ರ

ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳಿಂದ ಯಾವುದೇ ಗೋಲು ದಾಖಲಾಗಲಿಲ್ಲ. ಹೀಗಾಗಿ ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಗಿತ್ತು. ಕಿರ್ಗಿಸ್ತಾನ ತಂಡದ ಗೋಲು ಗಳಿಕೆಯ ಹಲವು ಪ್ರಯತ್ನಗಳನ್ನು ವಿಫಲಗೊಳಿಸಿದ ಧೀರಜ್ ಮಿಂಚಿದರು.

ಶೂಟೌಟ್‌ನಲ್ಲಿ ಭಾರತದ ಪರ ರಾಹುಲ್ ಕೆ.ಪಿ, ರೋಹಿತ್ ದನು, ಸುರೇಶ್ ಸಿಂಗ್ ಹಾಗೂ ರಹೀಂ ಅಲಿ ಯಶಸ್ಸು ಸಾಧಿಸಿದರು.

ಇದಕ್ಕೂ ಮೊದಲು ಯುನೈಟೆಡ್ ಅರಬ್ ಎಮಿರೇಟ್ಸ್ ತಂಡವು ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಒಮನ್ ತಂಡವನ್ನು 2–0ಯಿಂದ ಮಣಿಸಿ ಅಗ್ರಸ್ಥಾನ ಗಳಿಸಿತು.

ಪ್ರತಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ತಂಡಗಳು ಹಾಗೂ ಉತ್ತಮ ಪಾಯಿಂಟ್ಸ್‌ನೊಂದಿಗೆ ಎರಡನೇ ಸ್ಥಾನ ಗಳಿಸಿದ ನಾಲ್ಕು ತಂಡಗಳು ಮುಂದಿನ ವರ್ಷ ನಡೆಯಲಿರುವ ಎಎಫ್‌ಸಿ ಏಷ್ಯಾಕಪ್ ಟೂರ್ನಿಗೆ ನೇರ ಅರ್ಹತೆ ಗಳಿಸಲಿವೆ.

ಭಾರತವು, ಅರ್ಹತೆ ಗಳಿಸಿದ ಕುರಿತು ತಿಳಿಯಲು ಇತರ ಗುಂಪಿನ ಪಂದ್ಯಗಳ ಮುಕ್ತಾಯದವರೆಗೆ ಕಾಯಬೇಕಾಗಿದೆ.

ಹರಿಕೃಷ್ಣಗೆ ಗೆಲುವು

ರಿಗಾ, ಲಾತ್ವಿಯಾ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಪಿ. ಹರಿಕೃಷ್ಣ ಅವರು ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಸತತ ಎರಡನೇ ಜಯ ದಾಖಲಿಸಿದರು. ಇದರೊಂದಿಗೆ ನಾಲ್ಕು ಸುತ್ತುಗಳ ಅಂತ್ಯಕ್ಕೆ 2.5 ಪಾಯಿಂಟ್ಸ್ ಕಲೆಹಾಕಿದರು.

ಹರಿಕೃಷ್ಣ ಅವರು ಶನಿವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಆರ್ಮೇನಿಯಾದ ಸೆರ್ಜೆಯ್ ಮೊಸೆಸಿಯನ್ ಅವರನ್ನು 56 ನಡೆಗಳಲ್ಲಿ ಮಣಿಸಿದರು. ಭಾರತದ ಡಿ.ಗುಕೇಶ್ ಹಾಗೂ ಕೆ.ಶಶಿಕಿರಣ್ ಅವರ ಬಳಿಯೂ 2.5 ಪಾಯಿಂಟ್ಸ್ ಇವೆ.


ದ್ರೋಣವಲ್ಲಿ ಹಾರಿಕ ಅವರು ಚೀನಾದ ಜು ಜಿನೆರ್ ಎದುರು ಡ್ರಾ ಸಾಧಿಸಿದರೆ, ಆರ್. ವೈಶಾಲಿ ಕಜಕಸ್ತಾನದ ಮೆರರ್ಟ್ ಕ್ಯಾಮಲಿದಿನೊವಾ ಎದುರು ಗೆದ್ದು ಬೀಗಿದರು.

ಸೋಮವಾರ, 1 ನವೆಂಬರ್ 2021
ಪ್ರಜಾವಾಣಿ
ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ



ದೀಪಾವಳಿ ಹಬ್ಬಕ್ಕೆ ಹಾಲಿನಪುಡಿ ಹೋಳಿಗೆ 4

ಅಂದದ ಕತ್ತಿಗೆ ಚೆಂದದ ಹಾರ





ದೀಪಾವಳಿ ಸಮೀಪಿಸಿದ್ದು, 'ಧನ ತ್ರಯೋದಶಿ' ಸಂದರ್ಭದಲ್ಲಿ ಚಿನ್ನದ ಒಡವೆ, ಚಿನ್ನದ ನಾಣ್ಯ ಖರೀದಿಸುವ ಸಂಪ್ರದಾಯ ಹಲವು ಕಡೆಗೆ ಇದೆ. ಕತ್ತಿನ ಹಾರಗಳು ಇತ್ತೀಚೆಗೆ ಟ್ರೆಂಡ್ ಆಗಿದ್ದು, ಯಾವ ವಿನ್ಯಾಸದ ಹಾರ ಖರೀದಿಸಬಹುದು?

ಪ್ರಜಾವಾಣಿ ಚಿತ್ರ : ಅನೂಪ್ ರಾಘ .ಟಿ.

ಮನಸ್ವಿ

ಒಡವೆ ಎಂದ ತಕ್ಷಣ ಹೆಣ್ಣುಮಕ್ಕಳ ಮೊಗ ಅರಳುತ್ತದೆ; ಕಣ್ಣುಗಳು ಮಿನುಗುತ್ತವೆ. ಚಿನ್ನಕ್ಕೆ ದರ ಹೆಚ್ಚಾದರೂ ಚಿನ್ನದ ಮೇಲಿನ ಪ್ರೀತಿ, ಒಲವು ಸ್ವಲ್ಪವೂ ಕಡಿಮೆಯಾಗಿಲ್ಲ. ಒಡವೆ ಖರೀದಿಸಿ ಮೈ ತುಂಬಾ ಒಡವೆ ಹಾಕಿಕೊಂಡು ಬೇರೆಯವರಲ್ಲಿ ಅಸೂಯೆ ಮೂಡಿಸಿದರೆ ಅದೇನೋ ಖುಷಿ. ಆ ಕಾರಣಕ್ಕೆ ವರ್ಷಕ್ಕೊಮ್ಮೆಯಾದರೂ ಒಡವೆಗಳನ್ನು ಖರೀದಿ ಮಾಡುತ್ತಲೇ ಇರುತ್ತಾರೆ. ಅಲ್ಲದೇ ಖರೀದಿಸಿದ ಒಡವೆಗಳನ್ನು ಪುನಃ ಪುನಃ ಬದಲಿಸುತ್ತಿರುತ್ತಾರೆ.

ದೀಪಗಳ ಹಬ್ಬ ಸಮೀಪಿಸಿದ್ದು, ಈ ಸಂದರ್ಭದಲ್ಲಿ ಚಿನ್ನ ಖರೀದಿಸುವುದು ಸಂಪ್ರದಾಯ. ಉತ್ತರ ಭಾರತೀಯರು ಮಾತ್ರವಲ್ಲ, ನಮ್ಮಲ್ಲಿಯೂ ಕೂಡ ನರಕ ಚತುರ್ದಶಿ ಹಿಂದಿನ ದಿನ 'ಧನ ತ್ರಯೋದಶಿ' (ಧನ್ ತೇರಾಸ್) ಯಂದು ಚಿನ್ನದ ಒಡವೆ, ಚಿನ್ನದ ನಾಣ್ಯ ಖರೀದಿಸುವ ರೂಢಿಯಿದೆ. ಖರೀದಿಸಿದ ಬಂಗಾರವನ್ನು ಮರುದಿನ ಅಮಾವಾಸ್ಯೆ- ಲಕ್ಷ್ಮಿ ಪೂಜೆಯಂದು ಪೂಜಿಸಿ ಧರಿಸುವ ಸಂಪ್ರದಾಯವಿದೆ.

ಸದ್ಯಕ್ಕಂತೂ ಫ್ಯಾಷನ್ ಕ್ಷೇತ್ರದಂತೆ ಆಭರಣ ಕ್ಷೇತ್ರದಲ್ಲೂ ದಿನಕ್ಕೊಂದು ಬಗೆಯ ಟ್ರೆಂಡ್ ಬದಲಾಗುತ್ತಲೇ ಇರುತ್ತದೆ. ಈ ಟ್ರೆಂಡ್‌ಗೆ ತಕ್ಕಂತೆ ಆಭರಣಗಳನ್ನು ಖರೀದಿ ಮಾಡುವವರೂ ಇದ್ದಾರೆ. ಇತ್ತೀಚೆಗೆ ಹೆಣ್ಣುಮಕ್ಕಳನ್ನು ಹೆಚ್ಚು ಸೆಳೆಯುತ್ತಿರುವುದು ಅಗಲವಾದ ಹಾಗೂ ಉದ್ದದ ಹಾರಗಳು. ದಪ್ಪವಾಗಿದ್ದು ವಿವಿಧ ವಿನ್ಯಾಸವನ್ನು ಒಳಗೊಂಡಿರುವ ಹಾರಗಳು ಸಾಂಪ್ರದಾಯಿಕ ಹಾಗೂ ಪಾಶ್ಚಾತ್ಯ ಎರಡೂ ಬಗೆಯ ಉಡುಪಿನೊಂದಿಗೂ ಧರಿಸಲು ಸೂಕ್ತ ಎನ್ನಿಸುತ್ತವೆ. ಆ್ಯಂಟಿಕ್, ಹಳದಿ ಚಿನ್ನ, ವಜ್ರ ಹೀಗೆ ಉದ್ದನೆಯ ಹಾರಗಳು ಟ್ರೆಂಡ್ ಆಗಿವೆ. ಇದು ಕೇವಲ ಸೀರೆ ಮಾತ್ರವಲ್ಲ ಚೂಡಿದಾರ್, ಲೆಹಂಗಾ, ಘಾಗ್ರಾ ಹಾಗೂ ಕುರ್ತಾ ಟಾಪ್‌ನೊಂದಿಗೂ ಹೊಂದುತ್ತದೆ.

ಅಂದ ಹೆಚ್ಚಿಸುತ್ತದೆ..

ಕತ್ತಿಗೆ ದಪ್ಪ ಹಾಗೂ ಉದ್ದನೆಯ ಹಾರವನ್ನು ಧರಿಸುವುದರಿಂದ ನಮ್ಮ ಕತ್ತಿನ ಅಂದವು ಹೆಚ್ಚುತ್ತದೆ. ಇದನ್ನು ಧರಿಸಿದಾಗ ನಮ್ಮ ನೋಟಕ್ಕೆ ಬೇರೊಂದು ಲುಕ್ ಬರುವುದರಲ್ಲಿ ಎರಡು ಮಾತಿಲ್ಲ. ಈ ಹಾರವನ್ನು ಧರಿಸಿದಾಗ ಕತ್ತಿಗೆ ಬೇರೆ ಆಭರಣವನ್ನು ಧರಿಸುವ ಅಗತ್ಯ ಬೀಳುವುದಿಲ್ಲ. ಇದು ಕತ್ತಿನಿಂದ ಎದೆಯ ಕೆಳಗಿನವರೆಗೂ ಇಳಿ ಬೀಳುತ್ತದೆ. ಸೆಲೆಬ್ರೆಟಿಗಳು ಇತ್ತೀಚೆಗೆ ಹಾರದ ಮೇಲೆ ಹೆಚ್ಚು ಒಲವು ತೋರುತ್ತಿದ್ದು ದೇವರ ವಿನ್ಯಾಸದ ಹಾರಕ್ಕೆ ಹೆಚ್ಚು ಬೇಡಿಕೆ ಇದೆ.

ಆ್ಯಂಟಿಕ್‌ಗೆ ಬೇಡಿಕೆ ಹೆಚ್ಚು

ದಪ್ಪನೆಯ ಆ್ಯಂಟಿಕ್ ಹಾರಗಳಿಗೆ ಇತ್ತೀಚೆಗೆ ಬೇಡಿಕೆ ಹೆಚ್ಚಿದೆ. ಆ್ಯಂಟಿಕ್ ಹಾರ ಧರಿಸಿದಾಗ ಅದೇ ರೀತಿಯದ್ದೇ ಬಳೆ ಹಾಗೂ ಕಿವಿಯೋಲೆಯನ್ನು ಧರಿಸಬಹುದು. ಆ್ಯಂಟಿಕ್‌ನಲ್ಲಿ ದೇವರ ಹಾಗೂ ಹೂವಿನ ಚಿತ್ತಾರವಿರುವ ಹಾರಗಳು ಆಭರಣ ಮಾರುಕಟ್ಟೆಯಲ್ಲಿ ಹೆಚ್ಚು ಖ್ಯಾತಿ ಪಡೆದಿವೆ. ಸಂಗ್ರಹದ ವಿಷಯಕ್ಕೆ ಬಂದರೂ ಕೂಡ ಆ್ಯಂಟಿಕ್ ಹಾರಗಳಲ್ಲೇ ಸಂಗ್ರಹ ಹೆಚ್ಚಿದೆ. ಲಕ್ಷ್ಮೀ, ಗಣೇಶ, ಸರಸ್ವತಿಯಂತಹ ದೇವರ ಚಿತ್ತಾರವಿರುವ ಆ್ಯಂಟಿಕ್ ಹಾರಗಳು ಹೆಣ್ಣುಮಕ್ಕಳ ಕತ್ತಿಗೆ ಭಿನ್ನ ನೋಟ ಸಿಗುವಂತೆ ಮಾಡುತ್ತಿರುವುದು ಸುಳ್ಳಲ್ಲ.

ಹಾರದೊಂದಿಗೆ ಚೋಕರ್

ಉದ್ದನೆಯ ಹಾರ ಧರಿಸಿದಾಗ ಅದೇ ವಿನ್ಯಾಸದ ಕತ್ತನ್ನು ಮಾತ್ರ ಅಲಂಕರಿಸುವಂತಿರುವ ಚೋಕರ್ ಧರಿಸಬಹುದು. ಚೋಕರ್‌ಗಳು ಇಡೀ ಕತ್ತನ್ನು ಅಲಂಕರಿಸುವಂತಿದ್ದು ಸೀರೆ ಅಥವಾ ಘಾಗ್ರಾದಂತಹ ಡ್ರೆಸ್ ತೊಟ್ಟಾಗ ಇದನ್ನು ಹಾರದೊಂದಿಗೆ ಧರಿಸಬಹುದು. ಸೀರೆಗೆ ಈ ಎರಡರ ಕಾಂಬಿನೇಷನ್ ಬಹಳ ಚೆನ್ನಾಗಿ ಹೊಂದಿಕೆಯಾಗುತ್ತದೆ. ಆ್ಯಂಟಿಕ್ ಹಾರ ಧರಿಸಿದಾಗ ಆ್ಯಂಟಿಕ್‌ದೇ ಚೋಕರ್ ಧರಿಸಬೇಕು. ಹಳದಿ ಚಿನ್ನದೊಂದಿಗೆ ಆ್ಯಂಟಿಕ್ ಅನ್ನು ಸೇರಿಸಿ ಧರಿಸುವುದು ಸೂಕ್ತವಲ್ಲ.

ಸೀರೆಗೆ ಬೆಸ್ಟ್ ಕಾಂಬಿನೇಷನ್


ರೇಷ್ಮೆ, ಬನಾರಸಿ, ಕಲಂಕರಿ, ಕಾಂಜಿವರಂ, ಬಂದಾನಿ ಹೀಗೆ ಯಾವುದೇ ಸೀರೆಯೊಂದಿಗೂ ಈ ಉದ್ದನೆಯ ಹಾರ ಹೆಚ್ಚು ಹೊಂದುತ್ತದೆ. ಸೀರೆಯೊಂದಿಗೆ ಇದನ್ನು ಧರಿಸಿದಾಗ ಅಂದಕ್ಕೆ ಹೊಸ ಆಯಾಮ ಬರುವುದರಲ್ಲಿ ಎರಡು ಮಾತಿಲ್ಲ. ಸೀರೆಯ ಅಂದವೂ ಇದರೊಂದಿಗೆ ಇಮ್ಮಡಿಗೊಳುತ್ತದೆ.

ಚೂಡಿದಾರ್, ಘಾಗ್ರಾ ಲೆಹೆಂಗಾಕ್ಕೂ ಕಾಂಬಿನೇಷನ್

ದಪ್ಪ, ಉದ್ದನೆಯ ಹಾರವನ್ನು ಲೆಹೆಂಗಾ, ಚೂಡಿದಾರ್, ಕುರ್ತಾ ಟಾಪ್‌ನೊಂದಿಗೂ ಧರಿಸಬಹುದು. ಅದನ್ನು ಸರಳ ಉಡುಪಿನೊಂದಿಗೆ ಧರಿಸಿದಾಗ ಅದ್ದೂರಿ ನೋಟ ಸಿಗುವಂತೆ ಮಾಡುತ್ತದೆ. ಸರಳವಾಗಿ ಉದ್ದನೆಯ ಹಾರ ಧರಿಸುವುದರಿಂದ ಸಾಂಪ್ರದಾಯಿಕ ನೋಟವು ಸಿಗುತ್ತದೆ.

ಹಾರದೊಂದಿಗೆ ಪೆಂಡೆಂಟ್

ದಪ್ಪನೆಯ ಹಾರದೊಂದಿಗೆ ಅದೇ ವಿನ್ಯಾಸ ಪೆಂಡೆಂಟ್ ಇದ್ದರೆ ಇನ್ನೂ ಚೆನ್ನಾಗಿರುತ್ತದೆ. ಇತ್ತೀಚೆಗೆ ಪೆಂಡೆಂಟ್ ಇಲ್ಲದ ಉದ್ದನೆಯ ಹಾರವೂ ಹೆಚ್ಚು ಸದ್ದು ಮಾಡುತ್ತಿದೆ. ಮಲ್ಲಿಗೆ ಚಿಗುರಿನ ವಿನ್ಯಾಸದ ಹಾರ ಹಾಗೂ ಚೋಕರ್ ಈಗ ಹೆಚ್ಚು ಸದ್ದು ಮಾಡುತ್ತಿವೆ.



ಲಕ್ಷ್ಮೀಶ ಲಕ್ಷ್ಮಣ್

'ಕಬ್ಜ' ಕೋಟೆಯಲ್ಲಿ ಕಲಾವಿದರ ದಂಡು

ಸಿನಿ ಮಾತು

ನಟ ಉಪೇಂದ್ರ ಅಭಿನಯದ ಪ್ಯಾನ್ ಇಂಡಿಯಾ ಸಿನಿಮಾ 'ಕಬ್ಜ'ದ ತಾರಾಬಳಗ ದಿನೇ ದಿನೇ ಹಿಗ್ಗುತ್ತಿದ್ದು, ಇದೀಗ 'ಕಬ್ಜ' ಕೋಟೆಗೆ ಕೆ.ಜಿ.ಎಫ್ ಸಿನಿಮಾದಲ್ಲಿ ರಾಜೇಂದ್ರ ದೇಸಾಯಿ ಪಾತ್ರ ನಿರ್ವಹಿಸಿದ್ದ ಲಕ್ಷ್ಮೀಶ ಲಕ್ಷ್ಮಣ್ (ಲಕ್ಕಿ ಲಕ್ಷ್ಮಣ್) ಪ್ರವೇಶಿಸಿದ್ದಾರೆ.

ಚಿತ್ರದ ಐದನೇ ಹಂತದ ಚಿತ್ರೀಕರಣವು ಬೆಂಗಳೂರಿನ ಮಿನರ್ವ ಮಿಲ್‌ನಲ್ಲಿ ನಿರ್ಮಿಸಲಾಗಿರುವ ಅದ್ದೂರಿ ಸೆಟ್‌ನಲ್ಲಿ ನಡೆಯುತ್ತಿದೆ. ಚಿತ್ರದ ನಿರ್ದೇಶಕ ಆರ್.ಚಂದ್ರು ಅವರು ಲಕ್ಕಿ ಲಕ್ಷ್ಮಣ್ ಅವರನ್ನು ಅಧಿಕೃತವಾಗಿ ಚಿತ್ರತಂಡಕ್ಕೆ ಸ್ವಾಗತಿಸಿ ಟ್ವೀಟ್ ಮಾಡಿದ್ದಾರೆ.

ಚಿತ್ರದಲ್ಲಿ 'ಭಾರ್ಗವ್ ಭಕ್ಷಿ' ಎಂಬ ವಿಶೇಷ ಪಾತ್ರದಲ್ಲಿ ಕಿಚ್ಚ ಸುದೀಪ್ ಕಾಣಿಸಿಕೊಳ್ಳಲಿದ್ದಾರೆ. ಚಿತ್ರತಂಡಕ್ಕೆ ಇತ್ತೀಚೆಗಷ್ಟೇ ಬಾಲಿವುಡ್‌ನ ಖ್ಯಾತ ನಟ ನವಾಬ್ ಶಾ ಪ್ರವೇಶಿಸಿದ್ದರು. ತಮಿಳಿನ 'ಐ' ಚಿತ್ರದ ಖ್ಯಾತಿಯ ಕಾಮರಾಜನ್, ಜಗಪತಿ ಬಾಬು, ರಾಹುಲ್ ದೇವ್, ಸುನಿಲ್ ಪುರಾಣಿಕ್, ಪ್ರಮೋದ್ ಶೆಟ್ಟಿ, ರಾಹುಲ್ ಜಗತಾಪ್, ಅನೂಪ್ ರೇವಣ್ಣ, ಜಾನ್ ಕೊಕ್ಕಿನ್, ನವೀನ್, ಕೋಟ ಶ್ರೀನಿವಾಸ್, ಜಯಪ್ರಕಾಶ್, ಕಾಟ್ ರಾಜು, ಸುಬ್ಬರಾಜು ಮುಂತಾದ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ. ಮಿನರ್ವ ಮಿಲ್‌ನಲ್ಲಿ ಸುಮಾರು 42 ದಿನಗಳ ಕಾಲ ಚಿತ್ರೀಕರಣ ಮುಗಿಸಿ, ಚಿತ್ರತಂಡವು ಹೈದರಾಬಾದ್ ಮತ್ತು ಮಂಗಳೂರಿನಲ್ಲಿ ಚಿತ್ರೀಕರಣ ನಡೆಸಲಿದೆ.

'ಚಿತ್ರದ ಎರಡನೇ ಭಾಗದ ಕಥೆ ಸಿದ್ಧವಾಗಿದ್ದು, ಮೊದಲನೇ ಭಾಗದ ಚಿತ್ರೀಕರಣ ಪೂರ್ಣಗೊಂಡ ಕೂಡಲೇ ಎರಡನೇ ಭಾಗದ ಚಿತ್ರೀಕರಣಕ್ಕೆ ಸಿದ್ಧತೆ ಆರಂಭಿಸಲಿದ್ದೇವೆ. ಬೆಂಗಳೂರಿನಲ್ಲಿ ಚಿತ್ರೀಕರಣ ಮುಗಿದರೆ ಶೇ 75 ಚಿತ್ರೀಕರಣ ಪೂರ್ಣಗೊಳ್ಳಲಿದೆ. ಜಾರ್ಖಂಡ್‌ನಲ್ಲೂ ಚಿತ್ರೀಕರಣ ನಡೆಸುವ ಚಿಂತನೆ ಇದೆ. ಇತರೆ ಅಂಡರ್‌ವಲ್ಡ್ ಸಿನಿಮಾಗಳಿಗೆ ಹೋಲಿಸಿದರೆ ಇದೊಂದು ವಿಭಿನ್ನ ಪ್ರಯತ್ನ. ಇದು ಪಕ್ಕಾ ಆ್ಯಕ್ಷನ್ ಸಿನಿಮಾ' ಎಂದು ಇತ್ತೀಚೆಗಷ್ಟೇ ಆರ್. ಚಂದ್ರು ತಿಳಿಸಿದ್ದರು.

ಹಬ್ಬದ ಉಡುಗೊರೆ ಕೊಡುವ ಮುನ್ನ..





ಉಡುಗೊರೆ ಕೊಡುವುದು ಸಂಪ್ರದಾಯ ಎಂಬಂತಾಗಿದೆ. ಗೃಹ ಪ್ರವೇಶ, ಮದುವೆ, ಹುಟ್ಟುಹಬ್ಬ ಹಾಗೆಯೇ ಹಬ್ಬಗಳಿಗೂ ನಮ್ಮ ಪ್ರೀತಿಪಾತ್ರರಿಗೆ, ಅವರಿಗೆ ಪ್ರಿಯವಾದುದ್ದನ್ನು ಉಡುಗೊರೆ ನೀಡುತ್ತೇವೆ. ಈ ದೀಪಾವಳಿ ಸಂದರ್ಭದಲ್ಲಿ ತಮ್ಮ ಪ್ರೀತಿಪಾತ್ರರಿಗೆ ಉಡುಗೊರೆ ನೀಡಲು ಚಿಂತನೆ ನಡೆಸುತ್ತಿರುವವರು ಖರೀದಿಗೂ ಮುನ್ನ ಕೆಲವು ಅಂಶಗಳ ಬಗ್ಗೆ ಗಮನಹರಿಸಬೇಕಾಗುತ್ತದೆ.

ಹಬ್ಬಗಳ ಸಮಯದಲ್ಲಿ ಕುಟುಂಬದ ಸದಸ್ಯರಿಗೆ, ಆಪ್ತರಿಗೆ ಉಡುಗೊರೆಗಳನ್ನು ಕೊಡುವ ರಿವಾಜನ್ನು ಹಲವರು ಈಗಲೂ ಪಾಲಿಸುತ್ತಿದ್ದಾರೆ. ಈ ವರ್ಷದ ಬೆಳಕಿನ ಹಬ್ಬಕ್ಕೆ ಉಡುಗೊರೆ ಕೊಡುವ ಮೂಲಕ ನಿಮ್ಮ ಆಪ್ತರನ್ನು ಖುಷಿಪಡಿಸಬಹುದು. ದೀಪಾವಳಿ ಸಮಯದಲ್ಲಿ ಪಟಾಕಿ, ದೀಪಗಳು, ಸ್ವೀಟ್ ಬಾಕ್ಸ್, ಒಣ ಹಣ್ಣುಗಳು ಹೀಗೆ ವಿವಿಧ ಬಗೆಯ ಉಡುಗೊರೆಯನ್ನು ನೀಡಬಹುದು. ಈ ಮೂಲಕ ಹಬ್ಬದ ಸಂಭ್ರಮವನ್ನು ಇನ್ನಷ್ಟು ಹೆಚ್ಚಿಸಬಹುದು. ಆದರೆ ಹಬ್ಬಕ್ಕೆ ಉಡುಗೊರೆ ಕೊಡುವ ಮುನ್ನ ಒಂದಿಷ್ಟು ವಿಷಯಗಳನ್ನು ತಿಳಿದುಕೊಂಡರೆ ಉತ್ತಮ.

ಮೊದಲೇ ಯೋಚಿಸಿ

ಹಬ್ಬಕ್ಕೆ ತಿಂಗಳು ಇರುವಾಗಲೇ ಯಾರು ಯಾರಿಗೆ ಉಡುಗೊರೆ ಕೊಡಬೇಕು, ಏನನ್ನು ಕೊಡಬೇಕು, ಎಲ್ಲರಿಗೂ ಒಂದೇ ರೀತಿಯ ಉಡುಗೊರೆ ಕೊಡಬೇಕೇ ಅಥವಾ ಭಿನ್ನವಾದದ್ದೇ ಎಂಬೆಲ್ಲಾ ವಿಷಯಗಳನ್ನು ಮೊದಲೇ ಯೋಚಿಸಿ ನಿರ್ಧರಿಸಿಕೊಳ್ಳಿ. ಹಬ್ಬದ ಸಮಯದಲ್ಲಿ ಖರೀದಿ ಮಾಡುವುದು ಕಷ್ಟ. ಮಾರುಕಟ್ಟೆಗಳು ಹಾಗೂ ಶಾಪಿಂಗ್ ತಾಣಗಳು ಗಿಜಿಗುಡುತ್ತಿರುತ್ತವೆ. ಹಾಗಾಗಿ ಮೊದಲೇ ಖರೀದಿಸಿ ಇಟ್ಟುಕೊಳ್ಳಿ. ಅಲ್ಲದೇ ಹಬ್ಬದ ಸಮಯದಲ್ಲಿ ದರ ಏರಿಕೆಯಾಗುವುದು ಸಾಮಾನ್ಯ. ಇದರಿಂದಲೂ ಮೊದಲೇ ಖರೀದಿಸಿಟ್ಟುಕೊಳ್ಳಬಹುದು.

ಆನ್‌ಲೈನ್ ಖರೀದಿ

ಈಗೀಗ ಆನ್‌ಲೈನ್ ಖರೀದಿ ಟ್ರೆಂಡ್ ಹೆಚ್ಚು ಪ್ರಚಲಿತದಲ್ಲಿದೆ. ಆನ್‌ಲೈನ್ ಖರೀದಿ ಉತ್ತಮ ಕೂಡ. ಮನೆಯಲ್ಲೇ ಕುಳಿತುಕೊಂಡು ಏನು ಉಡುಗೊರೆ ಕೊಡಬಹುದು ಎಂದು ಯೋಚಿಸಿ ಅವರ ವಿಳಾಸಕ್ಕೆ ಕಳುಹಿಸಬಹುದು. ಇದರಿಂದ ನಿಮ್ಮ ಶ್ರಮ ಹಾಗೂ ಖರ್ಚು ಎರಡನ್ನೂ ಉಳಿಸಬಹುದು. ಆನ್‌ಲೈನ್‌ನಲ್ಲಿ ಕೆಲವೊಮ್ಮೆ ಒಂದು ಕೊಂಡರೆ ಒಂದು ಉಚಿತ, ಎರಡು ಕೊಂಡರೆ ಒಂದು ಉಚಿತ ಇಂತಹ ಆಫರ್‌ಗಳು ಇರುತ್ತವೆ. ಅದನ್ನು ನೋಡಿ ಆಯ್ಕೆ ಮಾಡಿಕೊಳ್ಳಬಹುದು.

ಅಗ್ಗದ ಮಾರಾಟ

ದೀಪಾವಳಿ ಹಬ್ಬದ ಸಮಯದಲ್ಲಿ ಕೆಲವೊಂದು ಅಂಗಡಿ ಹಾಗೂ ಮಳಿಗೆಗಳಲ್ಲಿ ಅಗ್ಗದ ಮಾರಾಟ ಮಾಡುತ್ತಾರೆ. ರಿಟೇಲ್ ಮಾರಾಟ ಮಾಡುವ ಅಂಗಡಿಗಳಲ್ಲಿ ಹೆಚ್ಚು ಹೆಚ್ಚು ಖರೀದಿಸಿದಾಗ ಕಡಿಮೆ ದರದಲ್ಲಿ ನೀಡುತ್ತಾರೆ. ಅಂತಹ ಅಂಗಡಿಗಳಲ್ಲೇ ಖರೀದಿಸುವುದರಿಂದ ಹಣ ಉಳಿತಾಯ ಕೂಡ ಮಾಡಬಹುದು. ರಿಟೇಲ್ ಮಳಿಗೆಗಳಲ್ಲಿ ಗುಣಮಟ್ಟವೂ ಉತ್ತಮವಾಗಿರುವ ಕಾರಣ ಅಲ್ಲಿ ಖರೀದಿ ಮಾಡಬಹುದು.

ಆಫರ್ ಇದ್ದಾಗ ಖರೀದಿಸಿಟ್ಟುಕೊಳ್ಳಿ

ನೀವು ಉಡುಗೊರೆ ಕೊಡುವ ವಸ್ತುಗಳು ಕೆಡದೇ ಇರುವಂತಹದ್ದಾಗಿದ್ದರೆ ಮೊದಲೇ ಖರೀದಿಸಿಟ್ಟುಕೊಳ್ಳಿ. ಅದರಲ್ಲೂ ಮಾಲ್‌ಗಳಲ್ಲಿ, ಆನ್‌ಲೈನ್ ಶಾಪಿಂಗ್ ತಾಣಗಳಲ್ಲಿ, ದೊಡ್ಡ ದೊಡ್ಡ ಮಳಿಗೆಗಳಲ್ಲಿ ಆಗಾಗ ಆಫರ್‌ಗಳನ್ನು ಹಾಕುತ್ತಿರುತ್ತಾರೆ. ಅಂತಹ ಸಂದರ್ಭದಲ್ಲಿ ಖರೀದಿಸಿ ಇರಿಸಿಕೊಳ್ಳಿ. ಇದರಿಂದ ಹಣ ಉಳಿತಾಯ ಮಾಡಬಹುದು.

ಉಡುಗೊರೆ ಕೊಡುವ ಮುನ್ನ..

- ಉಡುಗೊರೆ ಕೊಡುವ ಮುನ್ನ ಗುಣಮಟ್ಟವನ್ನು ಪರಿಶೀಲಿಸಿ.
- ಉಡುಗೊರೆ ಕೊಡಲೇಬೇಕು ಎಂಬ ನೆಪ ಮಾತ್ರಕ್ಕೆ ಕೊಡಬೇಡಿ. ಉಡುಗೊರೆ ನಾವು ಕೊಡುವವರಿಗೆ ಮೆಚ್ಚುಗೆಯಾಗುವಂತಿರಲಿ.
- ನಿಮ್ಮ ಬಜೆಟ್ ಅನ್ನು ಮೊದಲೇ ನೋಡಿ ನಿರ್ಧರಿಸಿಕೊಂಡು ಅದರ ಆಧಾರದ ಮೇಲೆ ಎಷ್ಟು ಜನರಿಗೆ, ಏನು ಕೊಡಬಹುದು ಎಂದು ಯೋಚಿಸಿ.
- ದೀಪಾವಳಿ ಹಬ್ಬಕ್ಕೆ ಸ್ವೀಟ್ ಬಾಕ್ಸ್, ಒಣಹಣ್ಣು ಹಾಗೂ ದೀಪಗಳನ್ನು ಉಡುಗೊರೆಯಾಗಿ ನೀಡುವುದು ಉತ್ತಮ. ಭಿನ್ನ ವಿನ್ಯಾಸದ ಗೂಡುದೀಪಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು ಅದನ್ನೂ ನೀಡಬಹುದು.
- ಆನ್‌ಲೈನ್ ಮೂಲಕ ನೇರವಾಗಿ ನೀವು ಉಡುಗೊರೆ ಕೊಡುವವರಿಗೆ ಕಳುಹಿಸಿದರೆ ಬೆಲೆ ಪಟ್ಟಿ ಸಮೇತವಾಗಿ ಅವರಿಗೆ ಡೆಲಿವರಿ ಆಗುತ್ತದೆ. ಆ ಕಾರಣಕ್ಕೆ ನಿಮ್ಮ ವಿಳಾಸಕ್ಕೆ ತರಿಸಿಕೊಂಡು ಅದನ್ನು ಪುನಃ ಪ್ಯಾಕ್ ಮಾಡಿ ಕಳುಹಿಸುವುದು ಉತ್ತಮ.
- ಉಡುಗೊರೆ ಕೊಡುವ ಮುನ್ನ ಕೊನೆಯ ದಿನಾಂಕವನ್ನು ಸರಿಯಾಗಿ ಪರಿಶೀಲನೆ ಮಾಡಿಕೊಳ್ಳಿ.
- ಉಡುಗೊರೆ ಕೊಡುವಾಗ ಪ್ಯಾಕಿಂಗ್ ಮಾಡುವುದೂ ಅಷ್ಟೇ ಮುಖ್ಯ. ಅಂದದ, ಆಕರ್ಷಕ ಪ್ಯಾಕಿಂಗ್‌ಗೆ ಹೆಚ್ಚು ಪ್ರಾಮುಖ್ಯ ನೀಡಿ.

ಅನ್ನ ಮಾಡುವ ಮುನ್ನ...

ಅಮೃತ



ಅನ್ನ ಮಾಡುವುದಕ್ಕಿಂತ ಮುಂಚೆ ಅಕ್ಕಿಯನ್ನು ನೀರಿನಲ್ಲಿ ನೆನೆ ಹಾಕಬೇಕೆ ಅಥವಾ ಬೇಡವೆ ಎಂಬ ಬಗ್ಗೆ ಈಗಿನವರಲ್ಲಿ ಜಿಜ್ಞಾಸೆಯಿದೆ. ಹಿಂದೆ ನಮ್ಮ ಹಿರಿಯರು ಕೆಲವು ಗಂಟೆಗಳ ಕಾಲ ನೆನೆ ಹಾಕಿ ತೆರೆದ ಪಾತ್ರೆಯಲ್ಲಿ ಬೇಯಿಸಿ, ಹೆಚ್ಚುವರಿ ತಿಳಿಯನ್ನು ಬಸಿಯುತ್ತಿದ್ದರು. ಇದು ಪಿಷ್ಟವನ್ನು ತೆಗೆದು ಹಾಕುತ್ತದೆ, ಹೀಗಾಗಿ ಒಂದೆರಡು ಸಲ ಅಕ್ಕಿ ತೊಳೆದು ಕುಕರ್‌ನಲ್ಲಿ ಬೇಯಿಸಿ ಎಂಬ ಸಲಹೆಗಳು ಬಂದವು. ಆದರೆ ಅಕ್ಕಿಯನ್ನು ನೆನೆ ಹಾಕಿ ಬೇಯಿಸುವುದರಿಂದ ನಮ್ಮ ಜೀರ್ಣಾಂಗ ವ್ಯೂಹವು ಇದನ್ನು ಚೆನ್ನಾಗಿ ಪಚನ ಮಾಡಿ, ಪೌಷ್ಟಿಕಾಂಶಗಳನ್ನು ಹೀರಿಕೊಳ್ಳಲು ನೆರವಾಗುತ್ತದೆ ಎನ್ನುತ್ತಾರೆ ತಜ್ಞರು. ಹಾಗೆಯೇ ಅನ್ನ ಚೆನ್ನಾಗಿ ಅರಳಿ ಬೇಯುತ್ತದೆ. ಅದರ ಸುವಾಸನೆಯನ್ನು ಹಿಡಿದಿಟ್ಟುಕೊಳ್ಳುತ್ತದೆ ಎಂಬುದು ಅನುಭವಿಗಳ ಹೇಳಿಕೆ.

ಇದಕ್ಕೆ ಕಾರಣಗಳೂ ಇವೆ. ಕಾಳು, ಬೇಳೆಗಳಲ್ಲಿರುವ ಫೈಟಿಕ್ ಆ್ಯಸಿಡ್ ಎಂಬುದು ಖನಿಜಾಂಶವನ್ನು ನಮ್ಮ ದೇಹವು ಹೀರಿಕೊಳ್ಳದಂತೆ ತಡೆಯುತ್ತದೆ. ಆದರೆ ಅಕ್ಕಿಯಂತಹ ಧಾನ್ಯವನ್ನು ನೆನೆ ಹಾಕುವುದರಿಂದ ಫೈಟಿಕ್ ಆ್ಯಸಿಡ್ ಅನ್ನು ತೆಗೆದು ಹಾಕಬಹುದು ಎನ್ನುತ್ತಾರೆ ತಜ್ಞರು.

ಹೀಗಾಗಿ ಅಕ್ಕಿಯನ್ನು ನೆನೆ ಹಾಕಿ ನೀರನ್ನು ಚೆಲ್ಲಿದ ನಂತರ ಬೇಯಿಸುವುದು ಸೂಕ್ತ.


ಭಾರತದಲ್ಲಂತೂ ಬೇಕಾದಷ್ಟು ವಿಧದ ಅಕ್ಕಿ ಲಭ್ಯ. ಕುಕರ್‌ನಲ್ಲಿ ಬೇಯಿಸುವುದು, ಅಗಲವಾದ ಪಾತ್ರೆಯಲ್ಲಿ ಬೇಯಿಸಿ ನೀರನ್ನು ಬಸಿಯುವುದು, ಕೆಲವೊಮ್ಮೆ ನೀರನ್ನು ಕಡಿಮೆ ಹಾಕಿ ಅಕ್ಕಿ ಹೀರಿಕೊಂಡು ಅನ್ನ ಅರಳಿ ಬೇಯುವಂತೆ ಮಾಡುವುದು... ಹೀಗೆ ಬೇಯಿಸುವುದಕ್ಕೆ ಹಲವಾರು ವಿಧಗಳಿವೆ.

ಅನ್ನದಿಂದ ಬೇರೆ ಬೇರೆ ತಿನಿಸು ತಯಾರಿಸುವುದಾದರೆ ಬೇಯಿಸುವ ವಿಧಾನವನ್ನು ಬದಲಿಸಬೇಕಾಗುತ್ತದೆ. ಉದಾಹರಣೆಗೆ ಪುಲಾವ್. ಉದ್ದನೆಯ ಬಾಸ್ಮತಿ ಅಕ್ಕಿಯಿಂದ ಮಾಡುವುದಾದರೆ ಹೆಚ್ಚು ನೆನೆ ಹಾಕದೆ ಬೇಯಿಸಿ. ಇದರಿಂದ ಗಟ್ಟಿಯಾದ ಅನ್ನ ತಯಾರಾಗಿ ಪುಲಾವ್ ಉದುರು ಉದುರಾಗುತ್ತದೆ. ಸಾದಾ ಅನ್ನ ತಯಾರಿಸಲು ಅಕ್ಕಿಯನ್ನು ನೆನೆ ಹಾಕಿ ಬೇಯಿಸಿ, ಹೆಚ್ಚುವರಿ ಗಂಜಿಯನ್ನು ಬಸಿದು ತೆಗೆಯಿರಿ. ಸಾಮಾನ್ಯವಾಗಿ ಅಕ್ಕಿಯನ್ನು 4–6 ಗಂಟೆ ನೆನೆ ಹಾಕಿದರೆ ಸಾಕು. ಪಾಲಿಷ್ ಮಾಡದ ಕೆಂಪು, ಕಂದು ಅಕ್ಕಿಯನ್ನು 6–8 ಗಂಟೆ ಕಾಲ ನೀರಿನಲ್ಲಿ ನೆನೆಹಾಕಿ. ಪಾಲಿಷ್ ಮಾಡಿದ ಬಿಳಿ ಅಕ್ಕಿಯನ್ನು 10–15 ನಿಮಿಷ ನೆನೆಸಿದರೆ ಸಾಕು.

ಹಾಗೆಯೇ ನೆನೆ ಹಾಕಿದರೆ ಅಕ್ಕಿ ಬೆಂದು ಅನ್ನವಾಗುವ ಸಮಯವೂ ಕಡಿಮೆ. ಅಕ್ಕಿ ನೀರು ಹೀರಿಕೊಂಡು ಬೇಯುವಾಗ ಚೆನ್ನಾಗಿ ಅರಳಿ, ಮೃದುವಾದ ಅನ್ನ ತಯಾರಾಗುತ್ತದೆ. ಒಳ್ಳೆಯ ಪರಿಮಳವೂ ಹೊರಸೂಸುತ್ತದೆ.

ಗೋಡೆಗಳ ಬಣ್ಣಗಳೂ ನಿಮ್ಮ ಕತೆ ಹೇಳುತ್ತವೆ...!

ಸುಕೃತ ಎಸ್.





‘ಬಣ್ಣಗಳು ಸಂದೇಶಗಳನ್ನು ರವಾನಿಸುತ್ತವೆ’ ಎನ್ನುವ ಮಾತಿದೆ. ಅದು ಸತ್ಯ. ನಾವು ಹಾಕುವ ಬಟ್ಟೆಯ ಬಣ್ಣದಿಂದ ಹಿಡಿದು, ಮನೆಯ ಗೋಡೆಗಳಿಗೆ ಬಳಸುವ ಬಣ್ಣದ ಆಯ್ಕೆಯು ನಮ್ಮ ವ್ಯಕ್ತಿತ್ವವನ್ನು, ನಮ್ಮ ಮನಃಸ್ಥಿತಿಯನ್ನು ತೋರಿಸುತ್ತದೆ ಎನ್ನುತ್ತಾರೆ. ಮನೆಯ ಗೋಡೆಗಳ ಬಣ್ಣಗಳ ಪ್ರಭಾವ ಮನೆಯೊಳಗಿರುವವರ ಮನಸ್ಸಿನ ಆಗುತ್ತದೆ.

ಗೋಡೆಗಳಿಗೆ ಬಣ್ಣದ ಆಯ್ಕೆ ಕುರಿತ ಅಧ್ಯಯನಗಳು, ಅಲಂಕಾರದ ವ್ಯಾಖ್ಯಾನಗಳು ಎಲ್ಲವೂ ಇತ್ತೀಚಿನದು. ಹಿಂದಿನ ಕಾಲದಲ್ಲಿ ಮನೆ ಎಂದರೆ, ಮಣ್ಣಿನ ಗೋಡೆ ಮತ್ತು ನೆಲ. ಅದನ್ನು ಸೆಗಣಿ ಹಾಕಿ ಸಾರಿಸುವ ಅಭ್ಯಾಸ ನಮ್ಮ ಹಿರಿಯರಲ್ಲಿ ಇತ್ತು. ಇತ್ತೀಚೆಗೆ ಮನೆಯ ಒಳಾಂಗಣ ವಿನ್ಯಾಸದಲ್ಲಿ ಗೋಡೆಗಳಿಗೆ ಬಣ್ಣದ ಆಯ್ಕೆಯು ಹೆಚ್ಚು ಮಹತ್ವ ಪಡೆದಿದೆ. ಗೋಡೆಗಳಿಗೆ ಹಚ್ಚುವ ಬಣ್ಣವು ಮನೆಯೊಳಗೆ ಬದುಕುವವನ ಮನಃಸ್ಥಿತಿಯ ಕನ್ನಡಿ ಎನ್ನುತ್ತದೆ ಹಲವು ಅಧ್ಯಯನ.

ಮೊದಲೆಲ್ಲಾ ಗೋಡೆಗಳಿಗೆ ಬಣ್ಣಗಳನ್ನು ಆಯ್ಕೆ ಮಾಡುವಾಗ, ಮನೆಗೆ ಒಪ್ಪುತ್ತವೆಯೇ ಎಂದಷ್ಟೇ ನೋಡುತ್ತಿದ್ದೆವು ವಿನಃ ಆ ಬಣ್ಣಗಳು ಮನೆಯಲ್ಲಿ ವಾಸಿಸುವವರ ಮತ್ತು ಮನೆಗೆ ಬರುವವರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಬೀರುವ ಪರಿಣಾಮವನ್ನು ನೋಡುತ್ತಿರಲಿಲ್ಲ. ಹೀಗೆ, ಮಾನಸಿಕ ನೆಲೆಯಿಂದಲೂ ಬಣ್ಣಗಳನ್ನು ಆಯ್ಕೆ ಮಾಡುವ ಪರಿಪಾಠ ತೀರಾ ಇತ್ತೀಚಿನ ಬೆಳವಣಿಗೆ ಆಗಿದೆ.

ಗೋಡೆಯ ಬಣ್ಣಗಳು ನಮ್ಮ ಹೃದಯದ ಬಡಿತ, ಉತ್ಸಾಹದ ಮಟ್ಟ, ನಮ್ಮ ನಡವಳಿಕೆಗಳ ಮೇಲೂ ಪರಿಣಾಮ ಬೀರುತ್ತವೆ ಎನ್ನುತ್ತಾರೆ ಮನೆಯ ಒಳಾಂಗಣ ವಿನ್ಯಾಸಕಾರರು. ಕ್ರಿಯಾಶೀಲತೆಗೆ ಗುಲಾಬಿ ಬಣ್ಣ ಉತ್ತಮ. ನೀಲಿಯು ಮನಸ್ಸಿನ ಬಣ್ಣ ಎಂದೇ ಹೇಳಲಾಗುತ್ತದೆ. ಮನೆಯಿಂದಲೇ ಕೆಲಸ ಮಾಡುವವರು ನೀಲಿ ಬಣ್ಣವನ್ನು ತಮ್ಮ ಕೆಲಸದ ಜಾಗದ ಗೋಡೆಗಳಿಗೆ ಬಳಸಬಹುದು ಎನ್ನುತ್ತಾರೆ ವಿನ್ಯಾಸಕರು.

ಪರಿಸರದೊಂದಿಗೆ ಮನುಷ್ಯನ ಹೆಚ್ಚು ಒಡನಾಟದ ಕಾರಣ ಮನೆಗೆ ಹಸಿರು ಅಥವಾ ನೀಲಿ ಬಣ್ಣಗಳು ಹೆಚ್ಚು ಮುದ ನೀಡುತ್ತವೆ. ಹೊರಗಡೆಯಿಂದ ಮನೆಯೊಳಗೆ ಬಂದ ಕೂಡಲೇ ಈ ಬಣ್ಣಗಳು ಹೊಸತನವನ್ನು ತಂದುಕೊಡುತ್ತದೆ. ಜೊತೆಗೆ ಒತ್ತಡದಿಂದ ಕೂಡಿದ್ದ ದಿನವಾಗಿದ್ದರೆ ಒತ್ತಡವನ್ನು ದೂರ ಮಾಡುವ ಶಕ್ತಿ ಈ ಬಣ್ಣಗಳಿಗೆ ಇದೆ.

ಕೆಲವರಿಗೆ ಗಾಢ ಬಣ್ಣಗಳು ಇಷ್ಟವಾದರೆ, ಕೆಲವರಿಗೆ ತಿಳಿ ಬಣ್ಣಗಳು ಇಷ್ಟವಾಗುತ್ತವೆ. ಕೆಂಪು ಅಧಿಕಾರವನ್ನು ಸೂಚಿಸಿದರೆ, ನೇರಳೆ ಬಣ್ಣವು ಸರ್ವಾಧಿಕಾರವನ್ನು ಸೂಚಿಸುತ್ತದೆ. ಕಪ್ಪು ಕೂಡ ಐಷಾರಾಮಿ ಜೀವನವನ್ನು ಸೂಚಿಸುತ್ತದೆ.

ಹಾಗಂತ ಮೇಲೆ ಹೇಳಿರುವ ಬಣ್ಣಗಳು ಎಲ್ಲರಿಗೂ ಒಂದೇ ರೀತಿಯ ಅನುಭವ ನೀಡುತ್ತದೆ ಎಂದಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಬಣ್ಣಗಳು ನೀಡುವ ಅನುಭವ ಬದಲಾಗುತ್ತದೆ. ಆದ್ದರಿಂದ ಬಣ್ಣಗಳನ್ನು ಆಯ್ಕೆ ಮಾಡುವಾಗ ನಮ್ಮ ಆಸಕ್ತಿ, ಸಂಸ್ಕೃತಿಯ ಹಿನ್ನೆಲೆ, ನಮ್ಮ ಆರ್ಥಿಕ ಸ್ಥಿತಿ ಹೀಗೆ ಎಲ್ಲವನ್ನೂ ನೋಡಿಕೊಳ್ಳಬೇಕು. ಬೇರೆಯವರಿಂದ ಪ್ರಭಾವಕ್ಕೆ ಒಳಗಾಗುವುದು ಅಥವಾ ಬೇರೆಯವರ ಮನೆಯ ಗೋಡೆಯ ಬಣ್ಣಗಳನ್ನೇ ನಾವು ಬಳಸುವ ಬಗ್ಗೆ ಆಲೋಚನೆ ಮಾಡಬಾರದು. ಕೊನೆಗೂ ಬಣ್ಣಗಳು ನಿಮ್ಮ ವ್ಯಕ್ತಿತ್ವವನ್ನು ಹೇಳಬೇಕು, ಮನೆ ಒಳಗೆ ಬಂದ ಕೂಡಲೇ ನೀವು ಯಾವ ವಾತಾವರಣವನ್ನು ಬಯಸುತ್ತೀರೋ ಅದಕ್ಕೆ ತಕ್ಕ ಹಾಗೆ ನಿಮ್ಮ ಗೋಡೆಯ ಬಣ್ಣ ಇರಬೇಕು. ಕೆಲವರು ಟ್ರೆಂಡ್‌ನ ಮೊರೆ ಹೋಗುತ್ತಾರೆ; ಅದು ಬದಲಾಗುತ್ತಿರುತ್ತದೆ ಎನ್ನುತ್ತಾರೆ ವಿನ್ಯಾಸಕರು.

‘ಬನಾರಸ್’ ಹಾಡಿಗೆ ಮೂರೂವರೆ ಕೋಟಿ!



ಸೋನಲ್ ಮೊಂತೆರೋ ಹಾಗೂ ಝೈದ್ ಖಾನ್

ಲಹರಿ ಮತ್ತು ಟಿ–ಸೀರಿಸ್ ಆಡಿಯೊ ಸಂಸ್ಥೆಯು ನ್ಯಾಷನಲ್ ಖಾನ್ಸ್ ಪ್ರೊಡಕ್ಷನ್ಸ್‌ನ ‘ಬನಾರಸ್’ ಚಿತ್ರದ ಆಡಿಯೊ ಹಕ್ಕುಗಳನ್ನು ಮೂರೂವರೆ ಕೋಟಿ ರೂಪಾಯಿ ಕೊಟ್ಟು ಖರೀದಿಸಿದೆ.

ಶಾಸಕ ಜಮೀರ್ ಅಹಮ್ಮದ್ ಪುತ್ರ, ಝೈದ್ ಖಾನ್ ನಾಯಕನಾಗಿ ನಟಿಸಿರುವ ಈ ಚಿತ್ರ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ತೆರೆಕಾಣುತ್ತಿದ್ದು, ಜಯತೀರ್ಥ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಝೈದ್ ಖಾನ್ ಈ ಚಿತ್ರದ ಮೂಲಕ ಬೆಳ್ಳಿ ತೆರೆಗೆ ಪ್ರವೇಶಿಸುತ್ತಿದ್ದು, ಸೋನಲ್ ಮೊಂತೆರೋ ಜೋಡಿಯಾಗಿ ಹೆಜ್ಜೆಹಾಕಿದ್ದಾರೆ. ಅಜನೀಶ್ ಲೋಕನಾಥ್ ಚಿತ್ರಕ್ಕೆ ಸಂಗೀತ ನೀಡಿದ್ದು, ಐದು ಹಾಡುಗಳನ್ನು ಇದು ಒಳಗೊಂಡಿದೆ.

‘ಈ ಸಿನಿಮಾದ ಚಿತ್ರೀಕರಣದ ಶೇ 90 ಭಾಗ ಈಗಾಗಲೇ ಬನಾರಸ್‌ನಲ್ಲಿ ಚಿತ್ರೀಕರಿಸಿದ್ದು, ಅಲ್ಲಿನ ಎಲ್ಲಾ 84 ಘಾಟ್ ಅನ್ನು ಅದ್ಭುತವಾಗಿ ಸೆರೆಹಿಡಿದಿದ್ದೇವೆ’ ಎಂದಿದೆ ಚಿತ್ರತಂಡ. ಚೊಚ್ಚಲ ನಾಯಕ ನಟರೊಬ್ಬರ ಸಿನಿಮಾಗಳ ಇತಿಹಾಸದಲ್ಲಿಯೇ ಅತ್ಯಧಿಕ ಮೊತ್ತಕ್ಕೆ ಲಹರಿ ಸಂಸ್ಥೆ ಈ ಚಿತ್ರದ ಆಡಿಯೋ ಹಕ್ಕುಗಳನ್ನು ಖರೀದಿಸಿದ್ದಾಗಿ ಅಧಿಕೃತ ಮಾಹಿತಿ ಹೊರ ಬಿದ್ದಿದೆ.

ಸಿನಿ ಮಾತು



ಪ್ರಶಸ್ತಿ ಬಾಚಿತು ‘ಡೊಳ್ಳು’

‘ಡೊಳ್ಳು’ ಚಿತ್ರಕ್ಕೆ ಸರಸ್ವತಿ ಪಿಂಪ್ಳೆ ಫೌಂಡೇಶನ್ ವತಿಯಿಂದ ದಾದಾಸಾಹೇಬ್ ಫಾಲ್ಕೆ ಉತ್ತಮ ಕನ್ನಡ ಚಿತ್ರ ಪ್ರಶಸ್ತಿ ಲಭಿಸಿದೆ

ಒಡೆಯರ್ ಮೂವೀಸ್ ಲಾಂಛನದ ಅಡಿ ನಿರ್ಮಾಣವಾದ ಡೊಳ್ಳು ಚಿತ್ರಕ್ಕೆ ಇನ್ನೋವೇಟಿವ್ ಇಂಟರ್‌ನ್ಯಾಷನಲ್ ಚಿತ್ರೋತ್ಸವದಲ್ಲಿ ಸರಸ್ವತಿ ಪಿಂಪ್ಳೆ ಫೌಂಡೇಶನ್ ವತಿಯಿಂದ ನೀಡಲಾದ ದಾದಾಸಾಹೇಬ್ ಫಾಲ್ಕೆ ಉತ್ತಮ ಚಲನಚಿತ್ರ ಪ್ರಶಸ್ತಿ ದೊರಕಿದೆ.

ಪವನ್ ಒಡೆಯರ್ ಹಾಗೂ ಅವರ ಪತ್ನಿ ಅಪೇಕ್ಷಾ ಪುರೋಹಿತ್ ಚಿತ್ರದ ನಿರ್ಮಾಪಕರು. ಸಾಗರ್ ಪುರಾಣಿಕ್ ಈ ಚಿತ್ರದ ನಿರ್ದೇಶಕರು.

ಈ ಚಿತ್ರವು ಅಮೆರಿಕದ ಬೋಸ್ಟನ್‌ನಲ್ಲಿ ನಡೆದ ಕಲೈಡೊಸ್ಕೋಪ್ ಇಂಡಿಯನ್ ಫಿಲಂ ಫೆಸ್ಟಿವಲ್‌ನಲ್ಲಿ ಮೊದಲ ಪ್ರದರ್ಶನ ಕಂಡಿತ್ತು. ಢಾಕಾ ಇಂಟರ್‌ನ್ಯಾಷನಲ್ ಫಿಲಂ ಫೆಸ್ಟಿವಲ್ ಹಾಗೂ ಡಲ್ಲಾಸ್‌ನ ದಕ್ಷಿಣ ಏಷ್ಯಾ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ.

ಕಾರ್ತಿಕ್ ಮಹೇಶ್, ನಿಧಿ ಹೆಗಡೆ, ಚಂದ್ರ ಮಯೂರ, ಬಾಬು ಹಿರಣ್ಣಯ್ಯ, ಶರಣ್ಯ ಸುರೇಶ್, ಡಾ.ಪ್ರಭುದೇವ, ವರುಣ್ ಶ್ರೀನಿವಾಸ್, ಚಂದ್ರಮನು ನಟಿಸಿದ್ದಾರೆ.

ಅಭಿಲಾಷ್ ಕಳತ್ತಿ - ಛಾಯಾಗ್ರಹಣ, ಎಂ ಅನಂತ್ ಕಾಮತ್ - ಸಂಗೀತ ಸಂಯೋಜನೆ, ಬಿ.ಎಸ್.ಕೆಂಪರಾಜು - ಸಂಕಲನ, ಶ್ರೀನಿಧಿ ಡಿ.ಎಸ್ - ಚಿತ್ರಕಥೆ ಮತ್ತು ಸಂಭಾಷಣೆ, ದೇವಿ ಪ್ರಕಾಶ್-ಕಲೆ ನಿತಿನ್ ಲೂಕೋಸ್ - ಶಬ್ದ ವಿನ್ಯಾಸ ಮಾಡಿದ್ದಾರೆ.

ಜೀವನಕ್ಕೆ ಆಧಾರವಾಯ್ತು 'ಮೆಟ್ರೊರೈಡ್' ಇ–ಆಟೋರಿಕ್ಷಾ



ಮೆಟ್ರೊ ರೈಡ್‌ನ ಇ- ಆಟೋರಿಕ್ಷಾ

ಮಂಜುಶ್ರೀ ಎಂ. ಕಡಕೋಳ

ಹೆಸರು ಸರಸ್ವತಿ. ಹೆಸರಿಗೆ ತಕ್ಕಂತೆ ಹೆಚ್ಚು ಶಿಕ್ಷಣ ಪಡೆಯಲಾಗಲಿಲ್ಲ. ಆದರೆ, 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಲೇಸು' ಅನ್ನುವಂತೆ ಕಷ್ಟಕಾಲದಲ್ಲಿ ಡ್ರೈವಿಂಗ್ ಕೌಶಲ ಕೈಹಿಡಿಯಿತು... ಎಂದರು ಸರಸ್ವತಿ.

ಕೋವಿಡ್ ಕಾಲದಲ್ಲಿ ಪತಿಯನ್ನು ಕಳೆದುಕೊಂಡು ಅತಂತ್ರರಾಗಿದ್ದ ಅವರಿಗೆ 'ಮೆಟ್ರೊರೈಡ್' ನವೋದ್ಯಮ ಸಂಸ್ಥೆಯ ಎಲೆಕ್ಟ್ರಿಕಲ್ ಆಟೋರಿಕ್ಷಾವು ವರದಾನವಾಗಿದೆ. ವಾಹನ ಚಾಲನೆ ತರಬೇತಿ ಪಡೆದಿದ್ದ ಸರಸ್ವತಿ ಈಗ ಆಟೋರಿಕ್ಷಾ ಚಾಲನೆಯ ಮೂಲಕ ಬದುಕಿನ ಬಂಡಿ ಸಾಗಿಸುತ್ತಿದ್ದಾರೆ.

> ಕೋವಿಡ್ ಸಾಂಕ್ರಾಮಿಕ ಹಲವರ ಬದುಕನ್ನು ಕಸಿದುಕೊಂಡಿದೆ. ದುಡಿಯುವ ಕೈಗಳನ್ನು ಇಲ್ಲವಾಗಿಸಿದೆ. ಅಂಥವರ ಮನೆಯವರು ಬೀದಿಗೆ ಬಿದ್ದಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಪತಿಯನ್ನು ಕಳೆದುಕೊಂಡ ಮಹಿಳೆಯರಿಗೆ 'ಮೆಟ್ರೊರೈಡ್' ನವೋದ್ಯಮ ಸಂಸ್ಥೆಯ ಎಲೆಕ್ಟ್ರಿಕಲ್ ಆಟೋರಿಕ್ಷಾವು ವರವಾಗಿದೆ. ಅಂಥ ಕೆಲವು ಮಹಿಳೆಯರ ಕಥೆ ಇಲ್ಲಿದೆ..

ಸಗಾಯ ರಾಣಿ ಅವರು ಜಂಬೂ ಸವಾರಿ ದಿಣ್ಣೆಯಲ್ಲಿ ವಾಹನ ತರಬೇತಿ ನೀಡುತ್ತಿದ್ದನ್ನು ನೋಡಿದ್ದ ಸರಸ್ವತಿ ಅವರಿಗೆ ತಾವೂ ಆಟೋ ಏಕೆ ಓಡಿಸಬಾರದು ಎಂಬ ಆಲೋಚನೆ ಬಂದದ್ದೇ ತಡ 'ಮೆಟ್ರೊರೈಡ್'ನ ಮೊರೆ ಹೊಕ್ಕರು. ಕೋವಿಡ್‌ಗೂ ಮುನ್ನ ಶಾಲಾ ಮಕ್ಕಳಿಗಾಗಿ ಓಮ್ನಿ ವ್ಯಾನ್ ಓಡಿಸಿ ಅನುಭವ ಹೊಂದಿದ್ದ ಅವರಿಗೆ ಆಟೋ ಚಲಾಯಿಸಲು ಕಲಿಯುವುದು ಕಷ್ಟವೆನಿಸಲಿಲ್ಲ. ವಾರದಲ್ಲೇ ತರಬೇತಿ ಪಡೆದು ಆಟೋ ಓಡಿಸುತ್ತಿರುವ ಸರಸ್ವತಿ ಕೆಲಕಾಲ ನೋವು ಮರೆತು ಮಕ್ಕಳ ಭವಿಷ್ಯದ ಕನಸು ಕಾಣತೊಡಗಿದ್ದಾರೆ. ಇಬ್ಬರು ಹೆಣ್ಣುಮಕ್ಕಳಿರುವ ಅವರ ಕನಸಿಗೆ ಅತ್ತೆಯೂ ಕೈಜೋಡಿಸಿದ್ದಾರೆ.

'ಓದಿದ್ದು ಪಿಯುಸಿ ತನಕ ಮಾತ್ರ. ಗಂಡ ಪ್ರಾವಿಜನ್ ಸ್ಟೋರ್ ನಡೆಸುತ್ತಿದ್ದರು. ಅವರ ಅಕಾಲಿಕ ಮರಣ, ಕೋವಿಡ್‌ನಿಂದ ಕೆಲಸ ಕಳೆದುಕೊಂಡಿದ್ದ ನಮ್ಮ ಬದುಕಿಗೆ 'ಮೆಟ್ರೊರೈಡ್' ಆಶಾಕಿರಣವಾಯಿತು. ಮಕ್ಕಳ ವಿದ್ಯಾಭ್ಯಾಸ ಮುಗಿಯುವ ತನಕ ಮೂರು ಹೊತ್ತು ತಿನ್ನುವ ಬದಲು ಎರಡು ಹೊತ್ತು ತಿಂದು ಜೀವನ ಮಾಡ್ತೀವಿ' ಎಂದು ಭಾವುಕವಾಗಿ ನುಡಿಯುತ್ತಾರೆ ಸರಸ್ವತಿ.

ಸರಸ್ವತಿ ಅವರಂತೆಯೇ ಆರ್ಥಿಕ ಸಂಕಷ್ಟದ ಹಿನ್ನೆಲೆ ಇರುವ ಇತರ ಏಳು ಮಹಿಳೆಯರಿಗೆ 'ಮೆಟ್ರೊರೈಡ್' ಇ-ಆಟೋ ರಿಕ್ಷಾ ಚಾಲನೆಯ ತರಬೇತಿ ನೀಡಿ ಉದ್ಯೋಗಕ್ಕೆ ನೇಮಿಸಿಕೊಂಡಿದೆ. ಕೋವಿಡ್ ಎರಡನೇ ಅಲೆ ಸಮಯದಲ್ಲಿ ಕೆಲಸವಿಲ್ಲದಿದ್ದಾಗ ಎರಡು ತಿಂಗಳು ಕಾಲ ಸಂಬಳವನ್ನೂ ನೀಡಿ ಅವರ ಕುಟುಂಬಕ್ಕೆ ಆಸರೆ ನೀಡಿದೆ. ಮೆಟ್ರೊರೈಲು ನಿಲ್ದಾಣಗಳಲ್ಲಿ ಆಟೋರಿಕ್ಷಾ ಸೇವೆ ನೀಡುತ್ತಿರುವ 'ಮೆಟ್ರೊರೈಡ್' ಸದ್ಯಕ್ಕೆ ಆಯ್ದ ಮಾರ್ಗಗಳಲ್ಲಿ ಮಾತ್ರ ಸೇವೆ ನೀಡುತ್ತಿದೆ.

'ನಮ್ಮ ಆಟೋರಿಕ್ಷಾದಲ್ಲಿ ಬರುವ ಗ್ರಾಹಕರೂ ನಮಗೆ ಪ್ರೋತ್ಸಾಹದ ಮಾತುಗಳನ್ನಾಡಿ ಬೆಂಬಲಿಸುತ್ತಾರೆ. ಲಾಕ್‌ಡೌನ್‌ನಲ್ಲಿ ಸಮಯದಲ್ಲಿ ಆರ್ಥಿಕವಾಗಿ ಕಷ್ಟವಾಗಿದ್ದ ಸಮಯದಲ್ಲಿ 'ಮೆಟ್ರೊರೈಡ್' ಉದ್ಯೋಗ ನೀಡಿತು. ಸ್ಕೂಟಿಯಷ್ಟೆ ಕಲಿತಿದ್ದ ನಾನೀಗ ಯಾವುದೇ ಭಯವಿಲ್ಲದೆ ಬೆಂಗಳೂರಿನ ಟ್ರಾಫಿಕ್‌ನಲ್ಲಿ ಆಟೋರಿಕ್ಷಾ ಓಡಿಸುತ್ತೇನೆ' ಎನ್ನುತ್ತಾರೆ ಕೋಣನಕುಂಟೆ ಮೆಟ್ರೊ ರೈಲು ನಿಲ್ದಾಣದಲ್ಲಿ ಆಟೋ ಓಡಿಸುತ್ತಿರುವ ಸುನೀತಾ.

ಉತ್ತಮ ಸಂಬಳ, ರಜೆ ಸೌಲಭ್ಯ

'ಮೊದಲು ಉಬರ್ ಕಾರು ಓಡಿಸುತ್ತಿದ್ದೆ. ಕೋವಿಡ್ ಸಮಯದಲ್ಲಿ ಕನಿಷ್ಠ ಸಂಬಳಕ್ಕೂ ಕಷ್ಟವಾಗಿತ್ತು. ಪರಿಚಿತರೊಬ್ಬರು 'ಮೆಟ್ರೊರೈಡ್'ಗೆ ಪರಿಚಯಿಸಿದರು.

ಇಲ್ಲಿ ತಿಂಗಳಿಗೆ ₹ 18–20 ಸಾವಿರದ ತನಕ ಮೋಸವಿಲ್ಲ. ಉಬರ್‌ನಲ್ಲಿ ಗ್ರಾಹಕರು ಬುಕ್ ಮಾಡಿದ ಸ್ಥಳಗಳಿಗೇ ಹೋಗಬೇಕಿತ್ತು. ಆದರೆ, ಇಲ್ಲಿ ಹಾಗಿಲ್ಲ. ನಿರ್ದಿಷ್ಟ ಮಾರ್ಗವಿದೆ. ದಿನಕ್ಕೆ ಐದಾರು ಕಿ.ಮೀ. ಓಡಿಸಿದರೆ ಸಾಕು. ಪ್ರತಿ ಭಾನುವಾರ ರಜೆ ಇರುತ್ತದೆ. ತಿಂಗಳಿಗೆ ಎರಡು ಬಾರಿ ವೈದ್ಯಕೀಯ ರಜೆಯೂ ಇದೆ. ಮನೆ– ಉದ್ಯೋಗ ಎರಡನ್ನೂ ನಿಭಾಯಿಸುತ್ತಿರುವೆ' ಎನ್ನುತ್ತಾರೆ ಇ–ಆಟೋರಿಕ್ಷಾ ಚಾಲಕಿ ಕೋಕಿಲಾ.

ಸುರಕ್ಷತೆ ಇದೆ

'ಒಂದು ವರ್ಷದಿಂದ ಇಲ್ಲಿ ಆಟೋರಿಕ್ಷಾ ಓಡಿಸ್ತಾ ಇದ್ದೀನಿ. ಮುಂಚೆ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಕೋವಿಡ್‌ನಿಂದ ಶಾಲೆ ಮುಚ್ಚಿದಾಗ 'ಮೆಟ್ರೊರೈಡ್' ನೆರವಿಗೆ ಬಂತು. ಸದ್ಯಕ್ಕೆ ಇಂದಿರಾ ನಗರದ ಮೆಟ್ರೊ ನಿಲ್ದಾಣದಿಂದ ಡೆಲ್ ಕಚೇರಿಯ ತನಕ ಆಟೋಓಡಿಸ್ತಾ ಇದ್ದೀನಿ. ಕೆಲಸದ ಸ್ಥಳದಲ್ಲಿ ಸುರಕ್ಷತೆ ಇದೆ. ಸಂಬಳ ಸರಿಯಾಗಿ ಕೊಡ್ತಾರೆ' ಎನ್ನುತ್ತಾರೆ ಸಗಾಯ ರಾಣಿ.

ಏನಿದು ಮೆಟ್ರೊರೈಡ್?

ಭಾರತದ ಮೊದಲ ಎಐ- ಚಾಲಿತ ಎಲೆಕ್ಟ್ರಿಕ್ ಸಾರಿಗೆ ವೇದಿಕೆ ಮೆಟ್ರೊರೈಡ್ ನವೋದ್ಯಮ ಸಂಸ್ಥೆಯು ಬೆಂಗಳೂರು ಮೂಲದ್ದು. ಪ್ರಸ್ತುತ ನಗರದ ಇಂದಿರಾನಗರ, ಕೋಣನಕುಂಟೆಯ ಮೆಟ್ರೊ ರೈಲುನಿಲ್ದಾಣಗಳಲ್ಲಿ ಎಲೆಕ್ಟ್ರಿಕ್ ಆಟೋರಿಕ್ಷಾ ಸೇವೆ ನೀಡುತ್ತಿದೆ.

ಯಲಚೇನಹಳ್ಳಿಯಲ್ಲಿ ಮುಂದಿನ ತಿಂಗಳು ಸೇವೆ ಪುನರಾರಂಭವಾಗಲಿದೆ. ಆರಂಭಿಕ ಪ್ರಯಾಣ ದರ ₹ 10. 'ಮೆಟ್ರೊರೈಡ್' ಆ್ಯಪ್ ಮೂಲಕ ಗ್ರಾಹಕರು ಸೇವೆ ಪಡೆಯಬಹುದು.

ಹೆಚ್ಚಿನ ಮಾಹಿತಿಗೆ ಮೊಬೈಲ್: 93432 01515.




ಮತ್ತಷ್ಟು ಮಹಿಳೆಯರ ನೇಮಕ

ಒಬ್ಬ ಮಹಿಳೆ ಸಂಪಾದನೆ ಮಾಡಲು ಆರಂಭಿಸಿ ಸ್ವತಂತ್ರಳಾದಾಗ ಕೇವಲ ಒಂದು ಮನೆಯಲ್ಲ, ಇಡೀ ಸಮಾಜ ಮತ್ತು ಇಡೀ ದೇಶ ಪ್ರಗತಿ ಹೊಂದುತ್ತದೆ ಎಂಬುದನ್ನು ನಾನು ಯಾವಾಗಲೂ ನಂಬುತ್ತೇನೆ. ಸದ್ಯಕ್ಕೆ 8 ಮಹಿಳಾ ಚಾಲಕಿಯರಿದ್ದಾರೆ. ಇದೇ ತಿಂಗಳು ಮೂವರು ಮಹಿಳಾ ಚಾಲಕಿಯರ ನೇಮಕವಾಗಲಿದೆ. ಮತ್ತಷ್ಟು ಮಹಿಳೆಯರಿಗೆ ಉದ್ಯೋಗ ನೀಡುವ ಯೋಚನೆ ಇದೆ. ಕಾರ್ಬನ್ ರಹಿತ ಮತ್ತು ಕೈಗೆಟುಕುವ ದರದಲ್ಲಿ ಪ್ರಯಾಣಿಕರನ್ನು ತಲುಪುವುದು ನಮ್ಮ ಗುರಿ.

ಗಿರೀಶ್ ನಾಗಪಾಲ್,
ಸಿಇಒ ಮತ್ತು ಸಹ-ಸಂಸ್ಥಾಪಕ, ಮೆಟ್ರೊರೈಡ್

ಮಹಿಳೆಯರು ಶಿಸ್ತುಬದ್ಧರು



ಮಹಿಳಾ ಚಾಲಕರು ಸಾಮಾನ್ಯವಾಗಿ ಶಿಸ್ತುಬದ್ಧವಾಗಿರುತ್ತಾರೆ ಮತ್ತು ಗ್ರಾಹಕರೊಂದಿಗೆ ಸಂಯಮದಿಂದ ಇರುತ್ತಾರೆ. ಇದು ನಮ್ಮ ವ್ಯವಹಾರದ ಮೇಲೆ ನೇರ ಪರಿಣಾಮ ಬೀರುತ್ತದೆ ಮತ್ತು ನಮ್ಮ ಸೇವೆಗಳನ್ನು ಉತ್ತಮಗೊಳಿಸುತ್ತದೆ. ನಮ್ಮ ಎಐ ಎಂಜಿನ್ ಆಟೋರಿಕ್ಷಾಗಳಿಂದಾಗಿ ಗ್ರಾಹಕರ ಪ್ರಯಾಣ ಸುರಕ್ಷಿತವಾಗಿದೆ.

ಕಾಮನ್ ಅಗರ್‌ವಾಲ್,
ಸಿಟಿಒ, ಸಹ-ಸಂಸ್ಥಾಪಕ, ಮೆಟ್ರೊರೈಡ್

ದೀಪಾವಳಿ ಹಬ್ಬಕ್ಕೆ ಹಾಲಿನಪುಡಿ ಹೋಳಿಗೆ

ನಳಪಾಕ

ವೇದಾವತಿ ಎಚ್.ಎಸ್.



ಹಾಲಿನಪುಡಿ ಹೋಳಿಗೆ

ಬೇಕಾಗುವ ಸಾಮಗ್ರಿಗಳು:

ಹೂರಣ ತಯಾರಿಸಲು: ತೆಂಗಿನತುರಿ – 1 ಕಪ್, ಸಕ್ಕರೆ ಪುಡಿ – ಅರ್ಧ ಕಪ್, ಹಾಲಿನ ಪುಡಿ– ಅರ್ಧ ಕಪ್, ಏಲಕ್ಕಿ ಪುಡಿ – ಅರ್ಧ ಟೀ ಚಮಚ.

ಮಿಕ್ಸಿ ಜಾರಿಗೆ ಆಗಲೇ ತುರಿದ ತೆಂಗಿನಕಾಯಿಯ ಬಿಳಿ ಭಾಗ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ನಂತರ ಬೌಲಿಗೆ ತೆಂಗಿನತುರಿ, ಸಕ್ಕರೆಪುಡಿ, ಹಾಲಿನಪುಡಿ, ಏಲಕ್ಕಿ ಪುಡಿಯನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣ ಉಂಡೆ ಕಟ್ಟುವ ಹದವಿರಬೇಕು. ಗಟ್ಟಿ ಎನಿಸಿದರೆ ಸ್ವಲ್ಪ ಹಾಲನ್ನು ಹಾಕಿ ಕಲೆಸಿಕೊಳ್ಳಿ. ತಯಾರಿಸಿಕೊಂಡ ಹೂರಣದಿಂದ ನಿಮಗೆ ಬೇಕಾದ ಗಾತ್ರಕ್ಕೆ ಉಂಡೆ ಕಟ್ಟಿಕೊಳ್ಳಿ.

ಕಣಕ ತಯಾರಿಸಲು: ಮೈದಾಹಿಟ್ಟು – 1 ಕಪ್, ಅರಿಸಿನ ಪುಡಿ – ಅರ್ಧ ಟೀ ಚಮಚ, ತುಪ್ಪ– 1 ಟೀ ಚಮಚ, ಉಪ್ಪು – ಕಾಲು ಟೀ ಚಮಚ, ಎಣ್ಣೆ – 2 ಟೇಬಲ್ ಚಮಚ, ನೀರು.

ಬೌಲ್‌ಗೆ ಮೈದಾಹಿಟ್ಟು, ಅರಿಸಿನಪುಡಿ, ಉಪ್ಪು, ತುಪ್ಪ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ನಂತರ ಸ್ವಲ್ಪ ಸ್ವಲ್ಪವೇ ನೀರನ್ನು ಹಾಕಿ ಹಿಟ್ಟನ್ನು ಕಲೆಸಿ. ಐದು ನಿಮಿಷ ಹಿಟ್ಟನ್ನು ನಾದಿಕೊಳ್ಳಿ. ಹಿಟ್ಟು ಮೃದುವಾಗಿರಲಿ. ಕಲೆಸಿದ ಹಿಟ್ಟಿನ ಮೇಲೆ ಎಣ್ಣೆಯನ್ನು ಹಾಕಿ. ಪುನಃ ಹಿಟ್ಟನ್ನು ನಾದಿಕೊಳ್ಳಿ. 2 ಗಂಟೆ ಮುಚ್ಚಿಡಿ. ನಂತರ ಹತ್ತು ನಿಮಿಷ ಚೆನ್ನಾಗಿ ನಾದಿಕೊಳ್ಳಿ. ಹಿಟ್ಟಿನ ಮೇಲೆ 2 ಟೇಬಲ್ ಚಮಚ ಎಣ್ಣೆಯನ್ನು ಹಾಕಿ.

ತಯಾರಿಸುವ ವಿಧಾನ: ಹೂರಣದ ಗಾತ್ರದಷ್ಟೇ ಕಣಕವನ್ನು ತೆಗೆದುಕೊಳ್ಳಿ. ಕಣಕವನ್ನು ಬಟ್ಟಲಾಕಾರ ತಯಾರಿಸಿಕೊಂಡು ಹೂರಣವನ್ನು ಮಧ್ಯದಲ್ಲಿಡಿ. ಕಣಕವನ್ನು ಹೂರಣದಿಂದ ಗಟ್ಟಿಯಾಗಿ ಮುಚ್ಚಿ. ಹೆಚ್ಚಾಗಿರುವ ಕಣಕವನ್ನು ತೆಗೆಯಿರಿ.

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ನಂತರ ಬ್ಟೆಡಿಂಗ್ ಪೇಪರ್/ ಬಾಳೆಎಲೆಗೆ ಎಣ್ಣೆಯನ್ನು ಹಾಕಿಕೊಳ್ಳಿ. ತಯಾರಿಸಿದ ಹೋಳಿಗೆ ಉಂಡೆಯನ್ನು ಇಟ್ಟು ಕೈಯಲ್ಲಿ ಸ್ವಲ್ಪ ತಟ್ಟಿ ನಂತರ ಲಟ್ಟಣಿಗೆಯಿಂದ ನಿಧಾನವಾಗಿ ಲಟ್ಟಿಸಿಕೊಳ್ಳಿ. ತವಾ ಬಿಸಿ ಮಾಡಿ ತುಪ್ಪ/ಎಣ್ಣೆಯನ್ನು ಹಾಕಿ. ಲಟ್ಟಿಸಿಕೊಂಡ ಹೋಳಿಗೆಯನ್ನು ಅದರ ಮೇಲೆ ಹಾಕಿ. ಹೋಳಿಗೆ ಮೇಲೆ ಎರಡೂ ಬದಿಗೂ ತುಪ್ಪ/ಎಣ್ಣೆಯನ್ನು ಹಾಕಿ. ಮಧ್ಯಮ ಉರಿಯಲ್ಲಿ ಎರಡೂ ಬದಿಯನ್ನು ಬೇಯಿಸಿ, ಸವಿಯಿರಿ.



ವೀಳ್ಯದೆಲೆ ಉಂಡೆ

ಬೇಕಾಗುವ ಸಾಮಗ್ರಿಗಳು: ವೀಳ್ಯದೆಲೆ 10 ರಿಂದ 15, ಕಂಡೆನ್ಸ್ಡ್ ಮಿಲ್ಕ್ 300 ಗ್ರಾಂ, ಡೆಸಿಕೇಟೆಡ್ ಕೋಕೊನಟ್ ಪೌಡರ್– 200 ಗ್ರಾಂ, ಹಾಲು – 6 ಟೇಬಲ್ ಚಮಚ, ಏಲಕ್ಕಿ ಪುಡಿ – ಅರ್ಧ ಟೀ ಚಮಚ, ಟೂಟಿ ಫ್ರೂಟಿ – 2 ಟೇಬಲ್ ಚಮಚ, ಸೋಂಪು – 1 ಟೀ ಚಮಚ, ಚಿಕ್ಕದಾಗಿ ಕತ್ತರಿಸಿದ ಗೋಡಂಬಿ– 5, ಪಿಸ್ತಾ – 5 ಮತ್ತು ಬಾದಾಮಿ – 5, ಗುಲ್ಕನ್ – 2 ಟೇಬಲ್ ಚಮಚ

ತಯಾರಿಸುವ ವಿಧಾನ: ಮಿಕ್ಸಿ ಜಾರಿಗೆ ವೀಳ್ಯದೆಲೆಯನ್ನು ಕತ್ತರಿಸಿ ಹಾಕಿ. ಜೊತೆಗೆ ಕಂಡೆನ್ಸ್ಡ್ ಮಿಲ್ಕ್ ಹಾಕಿ ನುಣ್ಣಗೆ ಪೇಸ್ಟ್ ತಯಾರಿಸಿಕೊಳ್ಳಿ. ಬಾಣಲೆಗೆ ಡೆಸಿಕೇಟೆಡ್ ಕೋಕೊನಟ್, ರುಬ್ಬಿಕೊಂಡ ಮಿಶ್ರಣ, ಹಾಲನ್ನು ಹಾಕಿ ಬೆರೆಸಿಕೊಳ್ಳಿ. ಐದು ನಿಮಿಷ ಮಧ್ಯಮ ಉರಿಯಲ್ಲಿ ಮಗುಚಿ. ಗಟ್ಟಿಯಾಗುತ್ತಾ ಬಂದಾಗ ಏಲಕ್ಕಿ ಪುಡಿಯನ್ನು ಹಾಕಿ ಮಿಶ್ರಣ ಮಾಡಿ. ಉಂಡೆ ತಯಾರಿಸುವ ಹದ ಬಂದಾಗ ಒಲೆಯನ್ನು ಆರಿಸಿ. ಬೌಲಿನಲ್ಲಿ ಟೂಟಿ ಫ್ರೂಟಿ, ಸೋಂಪು, ಗೋಡಂಬಿ, ಪಿಸ್ತಾ, ಬಾದಾಮಿ ಚೂರುಗಳು ಮತ್ತು ಗುಲ್ಕನ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ನಂತರ ತಯಾರಿಸಿದ ಕೋಕೊನಟ್ ವೀಳ್ಯದೆಲೆ ಮಿಶ್ರಣವನ್ನು ನಿಂಬೆಗಾತ್ರದ ಉಂಡೆಯನ್ನು ತಯಾರಿಸಿಕೊಳ್ಳಿ. ಉಂಡೆಯನ್ನು ಕೈಯಲ್ಲಿ ತಟ್ಟಿ ಅದರ ಮಧ್ಯದಲ್ಲಿ ಸ್ವಲ್ಪ ಗುಲ್ಕನ್ ಮಿಶ್ರಣ ತೆಗೆದುಕೊಂಡು ಗಟ್ಟಿಯಾಗಿ ಮುಚ್ಚಿ ಉಂಡೆ ತಯಾರಿಸಿಕೊಳ್ಳಿ. ತಯಾರಿಸಿದ ಉಂಡೆಗಳನ್ನು ಡೆಸಿಕೇಟೆಡ್ ಕೋಕೊನಟ್‌ನಲ್ಲಿ ಉರುಳಿಸಿ. ಆರೋಗ್ಯಕರವಾದ ಮತ್ತು ರುಚಿಕರವಾದ ವೀಳ್ಯದೆಲೆ ಉಂಡೆ ಸವಿಯಲು ಸಿದ್ಧ.

ಅಕ್ಕಿಹಿಟ್ಟಿನ ನಿಪ್ಪಟ್ಟು



ಬೇಕಾಗುವ ಸಾಮಗ್ರಿಗಳು: ಉದ್ದಿನಬೇಳೆ – 2 ಟೀ ಚಮಚ, ಹುರಿಗಡಲೆ – 2 ಟೀ ಚಮಚ, ಅಕ್ಕಿಹಿಟ್ಟು– 2 ಕಪ್, ಅಚ್ಚಖಾರದ ಪುಡಿ – 1 ಟೀ ಚಮಚ, ಜೀರಿಗೆ – 1 ಟೀ ಚಮಚ, ಎಳ್ಳು– 1 ಟೀ ಚಮಚ, ಇಂಗು – ಅರ್ಧ ಟೀ ಚಮಚ, ರುಚಿಗೆ ತಕ್ಕಷ್ಟು ಉಪ್ಪು, 1 ಗಂಟೆ ನೀರಿನಲ್ಲಿ ನೆನೆಸಿಟ್ಟ ಕಡಲೆಬೇಳೆ – 2 ಟೇಬಲ್ ಚಮಚ, ಚಿಕ್ಕದಾಗಿ ಕತ್ತರಿಸಿದ ಕರಿಬೇವು – 10, ಬಿಸಿ ಎಣ್ಣೆ – 2 ಟೇಬಲ್ ಚಮಚ, ನೀರು, ಕರಿಯಲು ಎಣ್ಣೆ.

ತಯಾರಿಸುವ ವಿಧಾನ: ಉದ್ದಿನಬೇಳೆಯನ್ನು ಬಾಣಲೆಗೆ ಹಾಕಿ ಪರಿಮಳ ಬರುವವರೆಗೆ ಹುರಿಯಿರಿ. ಮಿಕ್ಸಿ ಜಾರಿಗೆ ಹುರಿದ ಉದ್ದಿನಬೇಳೆ, ಹುರಿಗಡಲೆ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಬೌಲಿಗೆ ಅಕ್ಕಿಹಿಟ್ಟು, ಅಚ್ಚಖಾರದ ಪುಡಿ, ಜೀರಿಗೆ, ಎಳ್ಳು, ಇಂಗು, ರುಚಿಗೆ ತಕ್ಕಷ್ಟು ಉಪ್ಪು, ಪುಡಿ ಮಾಡಿದ ಉದ್ದಿನಬೇಳ ಮತ್ತು ಹುರಿಗಡಲೆ, ನೆನೆಸಿಟ್ಟ ಕಡಲೆಬೇಳೆ, ಕರಿಬೇವು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ಬಿಸಿ ಮಾಡಿದ ಎಣ್ಣೆಯನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ನಂತರ ಸ್ವಲ್ಪ ಸ್ವಲ್ಪ ನೀರನ್ನು ಹಾಕಿಕೊಂಡು ಹಿಟ್ಟನ್ನು ಮೃದುವಾಗಿ ಕಲೆಸಿಕೊಳ್ಳಿ. ಹಿಟ್ಟಿನಿಂದ ಚಿಕ್ಕ ಚಿಕ್ಕ ಉಂಡೆಗಳನ್ನು ತಯಾರಿಸಿಕೊಳ್ಳಿ. ಬಟರ್ ಪೇಪರ್/ಪ್ಲಾಸ್ಟಿಕ್ ಪೇಪರಿಗೆ ಎಣ್ಣೆಯನ್ನು ಸವರಿಕೊಳ್ಳಿ. ಉಂಡೆಗಳನ್ನು ತೆಳುವಾಗಿ ತಟ್ಟಿಕೊಳ್ಳಿ. ಬೇಕಿದ್ದರೆ ಚಿಕ್ಕ ಬಟ್ಟಲಿನಲ್ಲಿ ವೃತ್ತಾಕಾರವಾಗಿ ಕತ್ತರಿಸಿಕೊಳ್ಳಿ. ಎಣ್ಣೆಯನ್ನು ಬಿಸಿ ಮಾಡಿಕೊಂಡು ಬಿಸಿ ಎಣ್ಣೆಗೆ ತಟ್ಟಿಕೊಂಡ ಅಕ್ಕಿ ಹಿಟ್ಟಿನ ಮಸಾಲೆ ನಿಪ್ಪಟ್ಟನ್ನು ಹಾಕಿ. ಮಧ್ಯಮ ಉರಿಯಲ್ಲಿ ಎರಡೂ ಬದಿಯನ್ನು ಕೆಂಬಣ್ಣ ಬರುವವರೆಗೆ ಬೇಯಿಸಿ. ನಂತರ ಎಣ್ಣೆಯಿಂದ ತೆಗೆಯಿರಿ.

(ಲೇಖಕಿ: 'ಮನೆ ಅಡುಗೆ ವಿಥ್ ವೇದಾ' ಯೂಟ್ಯೂಬ್ ಚಾನೆಲ್ ನಿರ್ವಾಹಕಿ)



'ದೀಪಾಂಬರ'ದಲ್ಲಿ ಬೆಳಗಿದ ಗೃಹಲಕ್ಷ್ಮಿಯರು

ಸಂಭ್ರಮ

'ರ‍್ಯಾಂಪ್ ಮೇಲೆ ಹೆಜ್ಜೆ ಹಾಕಬೇಕು ಎಂದು ಬಹಳ ದಿನಗಳ ಆಸೆ. ಆದರೆ, ಕುಟುಂಬದ ಜವಾಬ್ದಾರಿ ಹೊತ್ತ ಮೇಲೆ ನಮಗೆಲ್ಲಿಯ ಪುರುಸೊತ್ತು? ಕಾರ್ಯಕ್ರಮ ಆಯೋಜಿಸುವುದಾದರೂ ಯಾರು.. ಹೀಗೆ ಯೋಚಿಸುತ್ತಲೇ ಕಾಯುತ್ತಿದ್ದೆವು. ಆದರೆ ಯಾರನ್ನೋ ಕಾಯುವ ಬದಲು ನಮ್ಮ ಕನಸುಗಳನ್ನು ನಾವೇ ಸಾಕಾರಗೊಳಿಸಿಕೊಳ್ಳೋಣ ಎಂದು ಮುಂದಡಿಯಿಟ್ಟೆವು. ಹೀಗೆ ದೀಪಾವಳಿ ಸಮೀಪಿಸಿದಾಗ ಅರಳಿದ ಪರಿಕಲ್ಪನೆಯೇ ದೀಪಾಂಬರ...'

ಹೀಗೆ ಮತ್ತೆ ರೂಪದರ್ಶಿಯಾಗಿ ಕಾಣಿಸಿ ಫೋಟೋಶೂಟ್ ಮಾಡಿಕೊಂಡ ಖುಷಿ ಹಂಚಿಕೊಂಡರು ಮಿಸೆಸ್ ಇಂಡಿಯಾ ಗೆಲಾಕ್ಸಿಯ ರನ್ನರ್ ಅಪ್ ಪ್ರಿಯಾ ಪ್ರಶಾಂತ್.

'ಅಕ್ಕಪಕ್ಕದ ಗೆಳತಿಯರು, ಬಂಧುಗಳು, ಕಿಟ್ಟಿಪಾರ್ಟಿಗೆ ಬರುತ್ತಿದ್ದವರೆಲ್ಲಾ ನಮ್ಮ ಸಂಸ್ಥೆ ಜೆ.ಪಿ.ನಗರ 5ನೇ ಹಂತದ 'ಪ್ರಿಯಾಸ್ ಫ್ಯಾಷನ್' ವೇದಿಕೆ ಅಡಿ ಅಂದು ಸೇರಿದರು. ಒಂದಿಷ್ಟು ಆಭರಣಗಳನ್ನು ತರಿಸಿಕೊಂಡೆವು. ದೀಪಾಂಬರ ಪರಿಕಲ್ಪನೆಯನ್ನು ವಿವರಿಸುವಂತೆ ಸಾಂಪ್ರದಾಯಿಕ ಉಡುಪುಗಳನ್ನು ಆಯ್ಕೆ ಮಾಡಿಕೊಂಡೆವು. ಆದರೆ, ಬಟ್ಟೆಯ ವಿನ್ಯಾಸ, ಬಣ್ಣಗಳ ಆಯ್ಕೆ, ಸ್ಥಳೀಯತೆಗೆ ಆದ್ಯತೆ ಮತ್ತು ಸೌಂದರ್ಯಕ್ಕೆ ಸರಿಯಾದ ಪ್ರಾಮುಖ್ಯತೆ ನೀಡಿದೆವು'.

'ಇದಕ್ಕೆ ಯಾವುದೇ ಪ್ರಾಯೋಜಕರಿಲ್ಲ. ಬರಬರುತ್ತಾ ದುಬಾರಿಯೆನಿಸಿತಾದರೂ ಎಲ್ಲರೂ ಕೈಜೋಡಿಸಿದರು. ಕೊನೆಯಲ್ಲಿ ಕಂಡ ಖುಷಿಗೆ ಹೋಲಿಸಿದರೆ ಆ ಖರ್ಚು ಗೌಣವೆನಿಸಿತು' ಎಂದು ಖುಷಿಯ ನಿಟ್ಟುಸಿರುಬಿಟ್ಟರು ಪ್ರಿಯಾ.

ಏನಿದು ದೀಪಾಂಬರ?

'ದೀಪದಂತೆಯೇ ನಮ್ಮ ಮೈಮನ, ವಸ್ತ್ರ, ಬದುಕು ಬೆಳಗಬೇಕು. ದೀಪ ಎಂದರೆ ಬೆಳಕು. ಅಂಬರ ಎಂದರೆ ಬಟ್ಟೆ, ಅದೂ ನಮ್ಮ ಹಬ್ಬ ಹರಿದಿನ ಸಂಸ್ಕೃತಿಗೆ ತಕ್ಕಂತಿರಬೇಕು. ನಮ್ಮ ಮುಂದಿನ ತಲೆಮಾರಿಗೂ ಪರಿಚಯ ಆಗಬೇಕು ಎನ್ನುವ ರೀತಿಯ ಉಡುಪುಗಳನ್ನು ಇಲ್ಲಿ ಬಳಸಿದ್ದೇವೆ. ಸೀರೆ, ಲಂಗದಾವಣಿ, ಪುಟ್ಟಮಕ್ಕಳ ಉಡುಗೆ, ಸಲ್ವಾರ್ ಹೀಗೆ ಎಲ್ಲರಿಗೂ ಹೊಂದುವ ಉಡುಪುಗಳನ್ನು ಪ್ರದರ್ಶನದಲ್ಲಿ ಬಳಸಿದ್ದೇವೆ' ಎಂದರು ಪ್ರಿಯಾ.

ಬೆಂಗಳೂರಿನಲ್ಲಿ ಶಾಪಿಂಗ್ ಯಾವ ತಾಣ ಬೆಸ್ಟ್!


ರೇಷ್ಮಾ

ಹಬ್ಬ ಎಂದರೆ ಹೊಸ ಬಟ್ಟೆ, ಒಡವೆ, ಸಿಹಿ ತಿನಿಸುಗಳದ್ದೇ ಕಾರುಬಾರು. ಅದರಲ್ಲೂ ಮಹಾನಗರಗಳಲ್ಲಿ ವಾಸಿಸುವವರಿಗೆ ಹಬ್ಬ ಬಂತೆಂದರೆ ಶಾಪಿಂಗ್ ಖುಷಿ ಮುಂಚೂಣಿಯಲ್ಲಿರುತ್ತದೆ. ಮನೆಮಂದಿಗೆಲ್ಲಾ ಹೊಸ ಬಟ್ಟೆ–ಬರೆಗಳು, ಮನೆಗೆ ಅಲಂಕಾರಿಕ ವಸ್ತುಗಳನ್ನು ಖರೀದಿ ಮಾಡುವುದು, ಹಬ್ಬಕ್ಕೆ ಪೂಜೆ ಸಾಮಗ್ರಿ ಖರೀದಿಸುವುದು ಜೋರಿನಿಂದಲೇ ನಡೆಯುತ್ತದೆ. ಮಾರುಕಟ್ಟೆಯೂ ಈ ಹಬ್ಬಕ್ಕೆ ಸಜ್ಜಾಗಿರುತ್ತದೆ. ಹಬ್ಬಗಳ ಸಮಯದಲ್ಲಿ ತಿಂಗಳ ಮೊದಲೇ ಬೆಂಗಳೂರಿನ ಶಾಪಿಂಗ್ ಮಾರುಕಟ್ಟೆಗಳುತರಹೇವಾರಿವಸ್ತುಗಳಿಂದಕಂಗೊಳಿಸುತ್ತಿರುತ್ತವೆ. ಬಟ್ಟೆ, ಚಪ್ಪಲಿಗಳು, ಬ್ಯಾಗ್‌ಗಳು, ಮಕ್ಕಳ ಉಡುಪುಗಳು, ಹಬ್ಬಕ್ಕೆ ಬೇಕಾಗುವ ಸಾಮಗ್ರಿಗಳು, ಅಲಂಕಾರಿಕ ವಸ್ತುಗಳು ಮಾರುಕಟ್ಟೆಯನ್ನು ಅಲಂಕರಿಸುತ್ತವೆ. ನಗರದಲ್ಲಿ ಶಾಪಿಂಗ್ ಮಾಡಲು ಕೆಲವೊಂದು 'ದಿ ಬೆಸ್ಟ್' ಎನ್ನುವಂತಹ ಜಾಗಗಳಿವೆ. ಅಲ್ಲಿ ಬಡ, ಮಧ್ಯಮ, ಶ್ರೀಮಂತ.. ಹೀಗೆ ಎಲ್ಲಾ ವರ್ಗಗಳಿಗೂ ಸಲ್ಲುವ ಪರಿಕರಗಳು ಸಿಗುತ್ತವೆ. ಒಂದು ದಿನದ ಶಾಪಿಂಗ್‌ಗೆ ಬೆಂಗಳೂರಿನಲ್ಲಿ ಹೇಳಿ ಮಾಡಿಸಿದ ಕೆಲವು ಜಾಗಗಳು ಹೀಗಿವೆ.


ದೀಪಾವಳಿ ಹಬ್ಬಕ್ಕೆ ಮಹಿಳೆಯರು ಖರೀದಿಯಲ್ಲಿ ತೊಡಗಿರುವುದು ಪ್ರಜಾವಾಣಿ ಚಿತ್ರ: ಅನೂಪ್ ರಾಘ .ಟಿ.

ಮಲ್ಲೇಶ್ವರ ಮಾರುಕಟ್ಟೆ

ಬೆಂಗಳೂರಿಗೆ ನೆಚ್ಚಿನ ಶಾಪಿಂಗ್ ತಾಣವಿದು. ಮಲ್ಲೇಶ್ವರಂ 18ನೇ ಅಡ್ಡರಸ್ತೆಯಿಂದ ಶಾಪಿಂಗ್ ಬೀದಿ ಆರಂಭವಾಗುತ್ತದೆ. ಸದಾ ಜನ ಜಂಗುಳಿಯಿಂದ ಕೂಡಿರುವ ಮಲ್ಲೇಶ್ವರಂ ಮಾರುಕಟ್ಟೆಯಲ್ಲಿ ಬೇಕಾಗುವ ಎಲ್ಲಾ ವಸ್ತುಗಳು ಸಿಗುತ್ತವೆ. ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ವಸ್ತುಗಳು ಇಲ್ಲಿ ಸಿಗುತ್ತವೆ. ಬೆಳಿಗ್ಗೆ 11 ಗಂಟೆಯಿಂದ ರಾತ್ರಿ 10 ಗಂಟೆಯವರೆಗೂ ಇಲ್ಲಿ ಶಾಪಿಂಗ್ ಮಾಡಬಹುದು. ಆದರೂ ಸಂಜೆ ವೇಳೆ ಶಾಪಿಂಗ್‌ಗೆ ತೆರಳುವುದು ಉತ್ತಮ. ಚೂಡಿದಾರ್, ಸೀರೆ, ಕುರ್ತಾ, ಚಪ್ಪಲಿಗಳು, ಬ್ಯಾಗ್‌ಗಳನ್ನು ಮಲ್ಲೇಶ್ವರದಲ್ಲಿ ಖರೀದಿಸಬಹುದು. ಇದರೊಂದಿಗೆ ಹೂವು, ಹಣ್ಣು, ತರಕಾರಿಗೂ ಈ ಮಾರುಕಟ್ಟೆ ಬೆಸ್ಟ್ ಎನ್ನಬಹುದು. ಅಲ್ಲದೇ ಕರಾವಳಿ, ಉತ್ತರ ಕರ್ನಾಟಕ, ಉತ್ತರ ಕನ್ನಡದ ಸಾಂಪ್ರದಾಯಿಕ ಶೈಲಿಯ ತಿನಿಸುಗಳು ಈ ಮಾರುಕಟ್ಟೆಯಲ್ಲಿ ಲಭ್ಯ. ಅಷ್ಟೇ ಅಲ್ಲದೇ ಬ್ರ್ಯಾಂಡೆಡ್ ಉಡುಪುಗಳ ಖರೀದಿಗೂ ಈ ಮಾರುಕಟ್ಟೆ ಬೆಸ್ಟ್.



ಕರ್ಮಷಿಯಲ್ ಸ್ಟ್ರೀಟ್

ಬ್ರ್ಯಾಂಡೆಡ್ ಬಟ್ಟೆ, ಚಪ್ಪಲಿ, ಫ್ಯಾಷನ್ ಸಾಮಗ್ರಿಗಳು, ಅಲಂಕಾರಿಕ ವಸ್ತುಗಳು ಮುಂತಾದವುಗಳ ಖರೀದಿಗೆ ಕರ್ಮಷಿಯಲ್ ಸ್ಟ್ರೀಟ್ ಉತ್ತಮ ಆಯ್ಕೆ. ಸೆಲೆಬ್ರೆಟಿಗಳು, ಸಿನಿಮಾ ತಾರೆಯರು ಕೂಡ ಇಲ್ಲಿಯೇ ಶಾಪಿಂಗ್ ಮಾಡಲು ಇಷ್ಟಪಡುತ್ತಾರೆ. ಮಧ್ಯಮ ವರ್ಗದವರೂ ಶಾಪಿಂಗ್ ಮಾಡಲು ಕಮರ್ಷಿಯಲ್ ಸ್ಟ್ರೀಟ್ ಬೆಸ್ಟ್. ಚೌಕಾಸಿ ಮಾಡಿ ಖರೀದಿ ಮಾಡಲು ಕರ್ಮಷಿಯಲ್ ಸ್ಟ್ರೀಟ್ ಬೆಸ್ಟ್. ಪಕ್ಕದಲ್ಲೇ ಇರುವ ಶಿವಾಜಿನಗರ ಮಾರುಕಟ್ಟೆಯಲ್ಲೂ ನಿಮಗೆ ಬೇಕಾದ ವಸ್ತುಗಳನ್ನು ಕಡಿಮೆ ದರದಲ್ಲಿ ಖರೀದಿ ಮಾಡಬಹುದು.

ಜಯನಗರ 4ನೇ ಹಂತ

ಜಯನಗರ 4ನೇ ಹಂತ ಬೆಂಗಳೂರಿಗರ ನೆಚ್ಚಿನ ತಾಣ. ಜಯನಗರದ 4ನೇ ಹಂತದಲ್ಲಿರುವ ಶಾಪಿಂಗ್ ಕಾಂಪ್ಲೆಕ್ಸ್ ಶಾಪಿಂಗ್ ಮಾಡಲು ಹೇಳಿ ಮಾಡಿಸಿದ ಜಾಗ. ಈ ಒಂದು ಕಾಂಪ್ಲೆಕ್ಸ್ ಹಾಗೂ ಅದರ ಸುತ್ತಮುತ್ತ ನಿಮಗೆ ಬೇಕಾಗಿದ್ದೆಲ್ಲವೂ ಸಿಗುತ್ತವೆ. ಉಡುಪುಗಳು, ಚಪ್ಪಲಿಗಳು, ಅಲಂಕಾರಿಕ ವಸ್ತುಗಳು, ಬ್ಯಾಗ್‌ಗಳು ಸೇರಿದಂತೆ ಹಣ್ಣು, ತರಕಾರಿ ಖರೀದಿಗೂ ಜಯನಗರದ ಕಾಂಪ್ಲೆಕ್ಸ್ ಬೆಸ್ಟ್ ಅಂತಲೇ ಹೇಳಬಹುದು. ಬಗೆ ಬಗೆಯ ಸೀರೆ ಅಂಗಡಿಗಳು, ಸಾಂಪ್ರದಾಯಿಕ ಉಡುಪುಗಳು, ಬ್ರ್ಯಾಂಡೆಡ್ ಬಟ್ಟೆಗಳ ಖರೀದಿಗೂ ಜಯನಗರವನ್ನು ಆಯ್ಕೆ ಮಾಡಿಕೊಳ್ಳಬಹುದು. ಹಬ್ಬದ ಸಮಯದಲ್ಲಿ ಪೂಜಾ ಸಾಮಗ್ರಿಗಳ ಖರೀದಿಗೂ ಜಯನಗರವನ್ನೇ ಆಯ್ಕೆ ಮಾಡಿಕೊಳ್ಳಬಹುದು.

ಅಲಂಕಾರ್ ಪ್ಲಾಜಾ

ಅಲಂಕಾರ್ ಪ್ಲಾಜಾ ಸೀರೆ, ಡ್ರೆಸ್, ಚಪ್ಪಲಿಗಳ ಶಾಪಿಂಗ್‌ಗೆ ಹೇಳಿ ಮಾಡಿಸಿದ ಜಾಗ. ಒಂದೇ ಕಟ್ಟಡದಲ್ಲಿ ಇಲ್ಲಿ ಎಲ್ಲವೂ ಸಿಗುತ್ತವೆ. ಇಡೀ ಕಟ್ಟಡದಲ್ಲಿ ಒಂದು ಸುತ್ತು ಹಾಕಿ ಬಂದರೆ ನಿಮಗೆ ಬೇಕಾಗಿದ್ದೆಲ್ಲವೂ ಕಣ್ಣಿಗೆ ಕಾಣುವಂತೆ ಇರುತ್ತದೆ. ಇಲ್ಲಿ ಖರೀದಿಯೂ ಸುಲಭ. ಮೆಜೆಸ್ಟಿಕ್ ಬಸ್ ನಿಲ್ದಾಣ ಹಾಗೂ ಮೆಟ್ರೊ ನಿಲ್ದಾಣಕ್ಕೂ ಅತೀ ಸಮೀಪವಿರುವ ಅಲಂಕಾರ್ ಪ್ಲಾಜಾದಲ್ಲಿ ಬೆಳಿಗ್ಗೆ 11 ಗಂಟೆಯಿಂದ ರಾತ್ರಿಯವರೆಗೆ ಶಾಪಿಂಗ್ ಮಾಡಬಹುದು.

ಗಾಂಧಿ ಬಜಾರ್

ಬಹಳ ಹಿಂದಿನಿಂದಲೂ ಗಾಂಧಿಬಜಾರ್ ಶಾಪಿಂಗ್ ಪ್ರಿಯರಿಗೆ ನೆಚ್ಚಿನ ತಾಣ. ಗಾಂಧಿ ಬಜಾರ್‌ನಲ್ಲಿ ಏನುಂಟು, ಏನಿಲ್ಲ ಹೇಳಿ. ಮಧ್ಯಮವರ್ಗದ ಮಂದಿಗೆ ಖರೀದಿಗೆ ಹೇಳಿ ಮಾಡಿಸಿದ ಜಾಗವಿದು. ಹೆಣ್ಣುಮಕ್ಕಳು ಗಾಂಧಿ ಬಜಾರ್‌ನಲ್ಲಿ ಶಾಪಿಂಗ್ ಮಾಡಲು ಹೆಚ್ಚು ಇಷ್ಟಪಡುತ್ತಾರೆ. ವಸ್ತ್ರ, ಒಡವೆ, ಪೂಜೆ ಸಾಮಗ್ರಿಗಳು ಮುಂತಾದೆಲ್ಲವೂ ಇಲ್ಲಿ ಒಂದೇ ಕಡೆ ಸಿಗುವ ಕಾರಣ ಈ ಜಾಗ ಶಾಪಿಂಗ್ ಮಾಡಲು ಉತ್ತಮ. ದೀಪಾವಳಿ ಸಮಯದಲ್ಲಿ ಗೂಡುದೀಪ, ದೀಪಗಳು, ಹಣತೆ ಮುಂತಾದವು ಕೂಡ ಇಲ್ಲಿ ಸಿಗುತ್ತವೆ.

ಚಿಕ್ಕಪೇಟೆ

ಚಿಕ್ಕಪೇಟೆ, ಇದು ಕೇವಲ ಬೆಂಗಳೂರಿಗರಿಗೆ ಮಾತ್ರವಲ್ಲ ಕರ್ನಾಟಕದ ಬಹುತೇಕ ಭಾಗದ ಜನರು ಚಿಕ್ಕಪೇಟೆಗೆ ಶಾಪಿಂಗ್ ಮಾಡಲು ಬರುತ್ತಾರೆ. ಹಬ್ಬ ಹರಿದಿನಗಳು ಮಾತ್ರವಲ್ಲದೇ ಮದುವೆ, ಗೃಹಪ್ರವೇಶ, ನಿಶ್ಚಿತಾರ್ಥದಂತಹ ಕಾರ್ಯಕ್ರಮಗಳಿಗೂ ಚಿಕ್ಕಪೇಟೆಯಲ್ಲಿ ಶಾಪಿಂಗ್ ಮಾಡಲು ಬರುತ್ತಾರೆ. ಸೀರೆ ಅಂಗಡಿಗಳು ಸಾಲು ಸಾಲು ಇಲ್ಲಿದ್ದು ಇದನ್ನು ಮಿನಿ ಕಂಚಿ ಅಂತಲೂ ಕರೆಯಬಹುದು. ಚಿಕ್ಕಪೇಟೆಯಲ್ಲಿ ಸೂಜಿ, ದಾರದಿಂದ ಹಿಡಿದು ಒಡವೆ, ವಜ್ರಗಳವರೆಗೆ ಖರೀದಿ ಮಾಡಬಹುದು.

ಜಸ್, ಶರಣ್.. ಈಜುಕೊಳದ 'ಚಿನ್ನ'ದ ಮೀನುಗಳು



ಜಸ್ ಸಿಂಗ್– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಬಸವರಾಜ ದಳವಾಯಿ

ಕ್ರೀಡೆ

ಜಸ್ ಸಿಂಗ್, ಶರಣ್ ಶ್ರೀಧರ್... ಇತ್ತೀಚೆಗೆ ಮುಕ್ತಾಯಗೊಂಡ ರಾಷ್ಟ್ರೀಯ ಸಬ್‌ಜೂನಿಯರ್, ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಿನುಗಿದ ಚಿನ್ನದಂತಹ ಪ್ರತಿಭೆಗಳು.

ಬಾಲಕರ ಸಬ್‌ಜೂನಿಯರ್‌ನಲ್ಲಿ ಶರಣ್ ನಾಲ್ಕು ಚಿನ್ನ ಮತ್ತು ಎರಡು ಬೆಳ್ಳಿ ಪದಕಗಳನ್ನು ಮುಡಿಗೇರಿಸಿಕೊಂಡು 10 ವರ್ಷದೊಳಗಿನವರ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್‌ಷಿಪ್ ಪಟ್ಟ ಧರಿಸಿದರೆ, ಜಸ್ ಸಿಂಗ್‌ಗೆ ಆರು ಚಿನ್ನದ ಪದಕಗಳು ಒಲಿದವು. ಅಲ್ಲದೆ ಒಂಬತ್ತು ವರ್ಷದೊಳಗಿನವರ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್ ಪಟ್ಟವೂ ಈ ಹುಡುಗನ ಪಾಲಾಯಿತು.



ಕೋಚ್ ಶ್ರೀಶ್ ರೆಡ್ಡಿ (ಮಧ್ಯ) ಅವರೊಂದಿಗೆ ಶರಣ್ ಶ್ರೀಧರ್ (ಎಡ) ಮತ್ತು ಜಸ್ ಸಿಂಗ್

ಬೆಂಗಳೂರಿನ ಮತ್ಸ್ಯ ಈಜು ಅಕಾಡೆಮಿಯಲ್ಲಿ ಮೂರು ವರ್ಷಗಳಿಂದ ತರಬೇತಿ ಪಡೆಯುತ್ತಿರುವ ಉದ್ಯಾನನಗರಿಯ ಈ ಹುಡುಗರು, ಮುಖ್ಯ ಕೋಚ್ ಆಗಿರುವ ಶ್ರೀಶ್ ರೆಡ್ಡಿ ಅವರ ತರಬೇತಿಯಲ್ಲಿ ಪಳಗುತ್ತಿದ್ದಾರೆ. ಈಜು ಕ್ರೀಡೆಯಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದ ಶ್ರೀಶ್, ಏಕಲವ್ಯ ಪ್ರಶಸ್ತಿ ಪುರಸ್ಕೃತರೂ ಹೌದು.

ಪಂಚ ನದಿಗಳ ನಾಡು ಪಂಜಾಬ್‌ನಿಂದ ಬಂದು ಸಿಲಿಕಾನ್ ಸಿಟಿಯಲ್ಲಿ ನೆಲೆಸಿರುವ ಜಸ್ ಪೋಷಕರು ಮಗನ ಸಾಧನೆಯ ಹಿಂದಿನ ಪ್ರಮುಖ ಶಕ್ತಿಯಾಗಿದ್ದಾರೆ. ಎಂಜಿನಿಯರ್ ವೃತ್ತಿಯಲ್ಲಿರುವ ತಂದೆ ಭೂಪಿಂದರ್ ಸಿಂಗ್ ಹಾಗೂ ತಾಯಿ ಪ್ರೀತ್ ಅವರಿಗೆ ನಗರದ ಐಟಿ ಕಂಪೆನಿಯೊಂದರಲ್ಲಿ ಕೆಲಸವಿದೆ.

'2012ರಲ್ಲಿ ನಾವು ಈಜು ಕಲಿತು ಮಾಸ್ಟರ್ಸ್ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೆವು. ಜಸ್‌ಗೆ ಆಗ ಎರಡು ವರ್ಷದ ಪ್ರಾಯ. ಇದೇ ವೇಳೆ ಲಂಡನ್ ಒಲಿಂಪಿಕ್ಸ್ ನಡೆಯುತ್ತಿತ್ತು. ಅಲ್ಲಿ ನಡೆಯುತ್ತಿದ್ದ ಸ್ಪರ್ಧೆಗಳನ್ನು ಟಿವಿಯಲ್ಲಿ ವೀಕ್ಷಿಸುತ್ತಿದ್ದ ನಮಗೆ, ನಮ್ಮ ಮಗನಿಂದಲೂ ಆ ರೀತಿ ಸಾಧನೆ ಹೊರಹೊಮ್ಮಿಸಬೇಕೆಂಬ ಹಂಬಲ ಮೊಳಕೆಯೊಡೆಯಿತು. ಹಾಗಾಗಿ ಜಸ್‌ನನ್ನು ಈಜು ತರಬೇತಿಗೆ ಸೇರಿಸಿದೆವು' ಎನ್ನುತ್ತಾರೆ ಭೂಪಿಂದರ್ ಸಿಂಗ್.

'ತಂದೆ– ತಾಯಿಯಾಗಿ ನಾವು ನೀಡಬೇಕಾದ ಪ್ರೋತ್ಸಾಹ, ಎಲ್ಲ ಸೌಲಭ್ಯಗಳನ್ನು ಆತನಿಗೆ ಒದಗಿಸಿದ್ದೇವೆ. ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಜಸ್‌ನಿಂದ ಪದಕದ ನಿರೀಕ್ಷೆಯಿತ್ತು. ಆದರೆ ಈ ಮಟ್ಟದಲ್ಲಿ ಆತ ಸಾಧನೆ ಮಾಡುತ್ತಾನೆ ಅಂದುಕೊಂಡಿರಲಿಲ್ಲ. ಬಹುತೇಕ ಸ್ಪರ್ಧೆಗಳಲ್ಲಿ ಹೆಚ್ಚಿನ ಅಂತರದ ಗೆಲುವು ಅವನಿಗೆ ಒಲಿದಿದೆ; ಹೆಮ್ಮೆಯೆನಿಸುತ್ತಿದೆ' ಎಂದರು ಭೂಪಿಂದರ್.

'ಚಿನ್ನದ ಪದಕಗಳ ಸಾಧನೆಯಿಂದ ತುಂಬಾ ಖುಷಿಯಾಗಿದೆ. ಇನ್ನೂ ಕಠಿಣ ತರಬೇತಿ ಪಡೆದು ಎಲ್ಲ ವಿಭಾಗಗಳಲ್ಲೂ ರಾಷ್ಟ್ರೀಯ ದಾಖಲೆಗಳನ್ನು ನಿರ್ಮಿಸುವ ಆಸೆಯಿದೆ' ಎಂಬುದು ಜಸ್ ಮಾತು.

ಶರಣ್ ತಂದೆ ಶ್ರೀಧರ್ ಕೂಡ ಸಾಫ್ಟ್‌ವೇರ್ ಎಂಜಿನಿಯರ್. ತಾಯಿ ಲಕ್ಷ್ಮೀ ಅವರು ವೈದ್ಯೆಯಾಗಿದ್ದಾರೆ.

'ಸದ್ಯ ಆರನೇ ತರಗತಿಯಲ್ಲಿ ಓದುತ್ತಿರುವ ಶರಣ್‌ನ ದಿನಚರಿ (ಕೋವಿಡ್ ಲಾಕ್‌ಡೌನ್‌ಗಿಂತ ಮೊದಲು) ಬೆಳಿಗ್ಗೆ ಐದು ಗಂಟೆಯಿಂದಲೇ ಆರಂಭವಾಗುತ್ತಿತ್ತು. 5.45ರ ಹೊತ್ತಿಗೆ ಆತ ಈಜುಕೊಳಕ್ಕೆ ಅಭ್ಯಾಸಕ್ಕೆ ತೆರಳುತ್ತಿದ್ದ. ಬಳಿಕ ಶಾಲೆಗೆ ಹೋಗಿ ಬಂದ ನಂತರ ಒಂದು ತಾಸು ವಿಶ್ರಾಂತಿ ತೆಗೆದುಕೊಂಡು ಸಂಜೆ 4.30ಕ್ಕೆ ಮತ್ತೆ ತರಬೇತಿಗೆ ಮರಳುತ್ತಿದ್ದ. ಮೂರು ತಾಸು ಅಭ್ಯಾಸದ ಬಳಿಕ ಮನೆಗೆ ಬಂದು ಒಂದೆರಡು ತಾಸು ಶಾಲಾ ಪಠ್ಯದ ಓದು ನಿರ್ವಹಿಸುತ್ತಿದ್ದ' ಎಂದು ಮಗ ಪಟ್ಟ ಪರಿಶ್ರಮದ ಬಗ್ಗೆ ಶ್ರೀಧರ್ ಹೆಮ್ಮೆಪಡುತ್ತಾರೆ.

'ಲಾಕ್‌ಡೌನ್ ವೇಳೆಯಲ್ಲಿ ತುಂಬ ತೊಂದರೆಯಾಯಿತು. ಈಜುಕೊಳಗಳು ಮುಚ್ಚಿದ್ದರಿಂದ ಆನ್‌ಲೈನ್ ಮೂಲಕ ಕೋಚ್ ಹೇಳಿದ ತರಬೇತಿ ಪಾಠಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದ. ಕೋವಿಡ್ ಇಲ್ಲದಿದ್ದರೆ ಶರಣ್ ಇನ್ನೂ ಉತ್ತಮ ಸಾಧನೆ ಮಾಡಬಹುದಿತ್ತು ಎನಿಸುತ್ತದೆ. ಆತ ಇನ್ನೂ ಕಲಿಯುವುದು ಬಹಳಷ್ಟಿದೆಯಾದರೂ ಆತ ತೋರುತ್ತಿರುವ ಸಾಮರ್ಥ್ಯದ ಬಗ್ಗೆ ತುಂಬ ಖುಷಿಯಂತೂ ಇದೆ' ಎಂದು ಸಂತಸ ಹಂಚಿಕೊಂಡರು ಶ್ರೀಧರ್.

ಟ್ರೆಂಡ್‌ಗೂ ಬಾಳಿಕೆಗೂ ಕಾರ್ಗೋ ಸ್ಟೈಲ್

ಫ್ಯಾಷನ್

ಬದಲಾವಣೆ ಎನ್ನುವುದಕ್ಕೆ ಫ್ಯಾಷನ್ ಕ್ಷೇತ್ರ ಉತ್ತಮ ಉದಾಹರಣೆ. ಸದಾ ಬದಲಾಗುತ್ತಲೇ ಇರುವ ಕ್ಷೇತ್ರಗಳಲ್ಲಿ ಫ್ಯಾಷನ್ ಕ್ಷೇತ್ರ ಸದಾ ಮುಂದಿರುತ್ತದೆ. ಕಳೆದ ವರ್ಷದ ಫ್ಯಾಷನ್ ಈ ವರ್ಷ ಇರುವುದಿಲ್ಲ. ಮುಂದಿನ ವರ್ಷ ಆರಂಭವಾಗುವ ಮೊದಲೇ ಈ ವರ್ಷದ ಫ್ಯಾಷನ್ ಮೂಲೆಗುಂಪಾಗಿರುತ್ತದೆ. ಈ ನಡುವೆ ಹಳೆಯ ಫ್ಯಾಷನ್ ಹೊಸ ರೂಪದಲ್ಲಿ ಮತ್ತೆ ಮಾರುಕಟ್ಟೆಗೆ ಬರುವ ಟ್ರೆಂಡ್ ಆರಂಭವಾಗಿ ನಾಲ್ಕೈದು ವರ್ಷಗಳು ಕಳೆದಿವೆ. ಈಗ ಆ ಟ್ರೆಂಡ್‌ಗೆ ಕಾರ್ಗೋ ಸ್ಟೈಲ್ ಕೂಡ ಸೇರಿದೆ. ಒಂದು ಕಾಲದಲ್ಲಿ ಯುವಜನತೆ ಮೆಚ್ಚಿ ಧರಿಸುತ್ತಿದ್ದ ಕಾರ್ಗೋ ಪ್ಯಾಂಟ್ ಈಗ ಮಾರುಕಟ್ಟೆಯಲ್ಲಿ ಮತ್ತೆ ಸದ್ದು ಮಾಡುತ್ತಿದೆ.

ಕಾರ್ಗೋ ಪ್ಯಾಂಟ್

ಕಾರ್ಗೋ ಸ್ಟೈಲಿನ ಪ್ಯಾಂಟ್‌ನಲ್ಲಿ ಎಡ ಹಾಗೂ ಬಲ ಎರಡೂ ಭಾಗದಲ್ಲಿ ಜೇಬುಗಳಿರುತ್ತವೆ. ಇದರಲ್ಲಿ ಹೆಚ್ಚು ಜೇಬುಗಳಿರುವ ಕಾರಣಕ್ಕೆ ಜನ ಇದನ್ನು ಧರಿಸಲು ಇಷ್ಟಪಡುತ್ತಿದ್ದರು. ಇದರ ಜೊತೆ ಟೀ ಶರ್ಟ್, ಶರ್ಟ್ ಧರಿಸಿದರೆ ಹೆಚ್ಚು ಸೂಕ್ತ. ಸಿನಿಮಾಗಳಲ್ಲೂ ನಟ–ನಟಿಯರು ಕಾರ್ಗೋ ಪ್ಯಾಂಟ್ ಧರಿಸುತ್ತಿದ್ದರು. ಒಂದು ಕಾಲದಲ್ಲಿ ಸಿನಿಮಾಗಳಲ್ಲಿ ಕಾರ್ಗೋ ಪ್ಯಾಂಟ್ ಟ್ರೆಂಡ್ ಸೃಷ್ಟಿಸಿದ್ದು ಸುಳ್ಳಲ್ಲ. ಹೆಣ್ಣುಮಕ್ಕಳು ಹಾಗೂ ಗಂಡುಮಕ್ಕಳು ಇಬ್ಬರಿಗೂ ಈ ಪ್ಯಾಂಟ್ ಹೊಂದುತ್ತದೆ.

ಎಲ್ಲಾ ಋತುಮಾನಕ್ಕೂ ಸೈ

ಕಾರ್ಗೋ ಪ್ಯಾಂಟ್ ಚಳಿಗಾಲ, ಮಳೆಗಾಲ ಹಾಗೂ ಬೇಸಿಗೆಕಾಲ ಎಲ್ಲಾ ಕಾಲದಲ್ಲೂ ಧರಿಸಲು ಸೂಕ್ತ ಎನ್ನಿಸುತ್ತದೆ. ಮೊಣಕಾಲಿನ ಬಳಿ ಅಗಲವಾಗಿದ್ದು ಗಾಳಿಯಾಡುವಂತಿರುವ ಪ್ಯಾಂಟ್ ಬೇಸಿಗೆಕಾಲಕ್ಕೆ ಹೆಚ್ಚು ಸೂಕ್ತ ಎನ್ನಿಸುತ್ತದೆ. ಮೊಣಕಾಲಿನ ಬಳಿ ಜಿಪ್ ಇರುವ ಪ್ಯಾಂಟ್ ಟ್ರೆಂಡಿಯಾಗಿ ಕಾಣಿಸುತ್ತದೆ.



ಚಳಿಗಾಲದಲ್ಲಿ ಬೇಡಿಕೆ ಹೆಚ್ಚು

ಕಾರ್ಗೋ ಪ್ಯಾಂಟ್ ಅನ್ನು ಕಾಟನ್, ಸಿಂಥೆಟಿಕ್, ಜೀನ್ಸ್ ಬಟ್ಟೆಗಳಲ್ಲಿ ವಿನ್ಯಾಸ ಮಾಡಿರುತ್ತಾರೆ. ಇದು ದಪ್ಪಗಿರುವ ಕಾರಣ ಚಳಿಗಾಲದಲ್ಲಿ ಧರಿಸಲು ಹೆಚ್ಚು ಸೂಕ್ತ ಎನ್ನಿಸುತ್ತದೆ. ಚಳಿಗಾಲದಲ್ಲಿ ಸ್ವೆಟ್‌ಶರ್ಟ್, ಜಾಕೆಟ್, ಪುಲ್ಲೋವರ್ ಧರಿಸಿದಾಗ ಈ ಪ್ಯಾಂಟ್ ಧರಿಸಲು ಸೂಕ್ತ ಎನ್ನಿಸುತ್ತದೆ. ಚಳಿಗಾಲದಲ್ಲಿ ಇದು ನಮ್ಮನ್ನು ಬೆಚ್ಚಗಿರಿಸುತ್ತದೆ. ಆ ಕಾರಣಕ್ಕೆ ಚಳಿಗಾಲದಲ್ಲಿ ಇದಕ್ಕೆ ಕೊಂಚ ಬೇಡಿಕೆ ಹೆಚ್ಚು.

ಪೊಕೆಟ್‌ಗಳು ವಿಶೇಷತೆ

ಕಾರ್ಗೋ ಪ್ಯಾಂಟ್ ಕನಿಷ್ಠ 6 ರಿಂದ 8 ಪೊಕೆಟ್‌ಗಳನ್ನು ಹೊಂದಿರುತ್ತದೆ. ಈ ಪ್ಯಾಂಟ್ ಧರಿಸುವುದರಿಂದ ನಾವು ಬ್ಯಾಗ್ ಒಯ್ಯುವ ಅವಶ್ಯಕತೆ ಇರುವುದಿಲ್ಲ. ಫೋನ್, ವ್ಯಾಲೆಟ್, ಚಾರ್ಜರ್, ಇಯರ್ ಫೋನ್ ಎಲ್ಲವನ್ನೂ ಇದರ ಜೇಬಿನಲ್ಲೇ ತುರುಕಿಕೊಳ್ಳಬಹುದು. ಒಂದು ದಿನದ ಪಿಕ್‌ನಿಕ್ ಹೋಗಲು ಈ ಪ್ಯಾಂಟ್ ಹೆಚ್ಚು ಸೂಕ್ತ.

ಮಕ್ಕಳಿಂದ ವೃದ್ಧರವರೆಗೆ..

ಈ ಪ್ಯಾಂಟ್ ಮಕ್ಕಳಿಂದ ವಯಸ್ಸಾದವರವರೆಗೆ ಎಲ್ಲರೂ ಧರಿಸಬಹುದು. ಎಲ್ಲರಿಗೂ ಸಲ್ಲುವ ಪ್ಯಾಂಟ್ ಅಂತಲೇ ಇದನ್ನು ಕರೆಯಬಹುದು.

ಹೆಚ್ಚು ಬಾಳಿಕೆ

ಬಾಳಿಕೆ ವಿಷಯದಲ್ಲೂ ಕಾರ್ಗೋ ಪ್ಯಾಂಟ್ ಉತ್ತಮ. ಈ ಪ್ಯಾಂಟ್ ಉತ್ತಮ ಗುಣಮಟ್ಟದ್ದಾಗಿದ್ದು ಬಹಳ ದಿನಗಳವರೆಗೆ ಬಾಳಿಕೆ ಬರುತ್ತದೆ. ಇದರಲ್ಲಿ ವಿವಿಧ ಬಣ್ಣದ ಹಾಗೂ ಬಟ್ಟೆಯ ಪ್ಯಾಂಟ್‌ಗಳು ಲಭ್ಯವಿದ್ದು ಮಿಲಿಟರಿ ಬಣ್ಣದ ಪ್ಯಾಂಟ್ ಹೆಚ್ಚು ಚಾಲ್ತಿಯಲ್ಲಿದೆ.

ಕಾರ್ಗೋ ಸೆಟ್

ಅಡಿಯಿಂದ ಮುಡಿಯವರೆಗೆ ಒಂದೇ ಬಣ್ಣದ ಕಾರ್ಗೋ ಸೆಟ್ ಕೂಡ ಇಂದು ಫ್ಯಾಷನ್ ಮಾರುಕಟ್ಟೆಯಲ್ಲಿ ಹೆಚ್ಚು ಸದ್ದು ಮಾಡುತ್ತಿದೆ. ಒಂದು ಕಾಲಿಗೆ ಒಂದು ಬಣ್ಣ, ಇನ್ನೊಂದು ಕಾಲಿಗೆ ಇನ್ನೊಂದು ಬಣ್ಣದ ಕಾರ್ಗೋ ಪ್ಯಾಂಟ್ ಕೂಡ ಇತ್ತೀಚೆಗೆ ಮಾರುಕಟ್ಟೆಯಲ್ಲಿ ಟ್ರೆಂಡ್ ಸೃಷ್ಟಿಸುತ್ತಿದೆ.